"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೈದನೆಯ ಅಧಿವೇಶನ**

**ಮಂಗಳವಾರ, 10ನೇ ಮಾರ್ಚ್ 2025**

## ವಿಷಯಾನುಕ್ರಮಣಿಕೆ (INDEX)


**01. ಸಂತಾಪ ಸೂಚನೆ**

**ಪಿ.ಇ.ಎಸ್. ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ, ಶಿಕ್ಷಣ ತಜ್ಞ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಪ್ರೊ:ಎಂ.ಆರ್.ದೊರೆಸ್ವಾಮಿ ಅವರ ನಿಧನದ ಬಗ್ಗೆ.**

- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)
- ಶ್ರೀ ಸಿ.ಟಿ.ರವಿ

**02. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**421 – ಕರ್ನಾಟಕ ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳ ಕುರಿತು**

- ಶ್ರೀ ಮಂಜುನಾಥ್ ಭಂಡಾರಿ
- ಡಾ: ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು)

**328- ಶಿಕ್ಷಕರ ಕೊರತೆ ಬಗ್ಗೆ**

- ಶ್ರೀ ಬಸನಗೌಡ ಬಾದರ್ಲಿ
- ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**372 – ರಾಜ್ಯದಲ್ಲಿ ಉತ್ಪಾದನೆ ಹಾಗೂ ಬಳಕೆಯಾಗುವ ವಿದ್ಯುತ್ ಬಗ್ಗೆ**

- ಶ್ರೀ ದಿನೇಶ್ ಗೂಳಿಗೌಡ
- ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು)

**447 – ರಾಜ್ಯದಲ್ಲಿ ಮರದ ಮಿಲ್‌ಗಳ ಮಾಹಿತಿ ಕುರಿತು**

- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಈಶ್ವರ್ ಬಿ.ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

**351+335 – ಸರ್ಕಾರಿ ಆಸ್ಪತ್ರೆಗಳಲ್ಲಿ ಜೀವ ರಕ್ಷಕ ಔಷಧಿಗಳ ಕೊರತೆ ಇರುವ ಬಗ್ಗೆ**

- ಶ್ರೀ ಎಸ್.ರವಿ
- ಡಾ:ತಳವಾರ್ ಸಾಬಣ್ಣ
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**373 – ಬಿಸಿಯೂಟದ ಯೋಜನೆ ಬಗ್ಗೆ**

- ಶ್ರೀ ಎಂ.ಎಲ್.ಅನಿಲ್ ಕುಮಾರ್
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**350 – ಶಾಲೆಗಳಲ್ಲಿ ಗ್ರಂಥಾಲಯ ಸೌಲಭ್ಯ ಕಲ್ಪಿಸುವ ಕುರಿತು**

- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**396 – ಜಿಲ್ಲಾ ಆಸ್ಪತ್ರೆಗಳನ್ನು ವೈದ್ಯಕೀಯ ಕಾಲೇಜುಗಳಿಗೆ ಸಂಯೋಜಿಸಿರುವ ಕುರಿತು**

- ಶ್ರೀಮತಿ ಬಲ್ಕೀಸ್ ಬಾನು
- ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು)

**411 – ತುಮಕೂರು ಜಿಲ್ಲೆಯ ಅರಣ್ಯ ಭೂಮಿಯ ಬಗ್ಗೆ**

- ಶ್ರೀ ಚಿದಾನಂದ್ ಎಂ.ಗೌಡ
- ಶ್ರೀ ಈಶ್ವರ್ ಬಿ.ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

**380 – ಹೊಸ ಬಿಪಿಎಲ್ ಕಾರ್ಡ್ ವಿತರಿಸದ ಕಾರಣ ಅರ್ಹ ಫಲಾನುಭವಿಗಳಿಗೆ ತೊಂದರೆ ಆಗಿರುವ ಬಗ್ಗೆ**

- ಶ್ರೀ ಸಿ.ಟಿ.ರವಿ
- ಶ್ರೀ ಕೆ.ಹೆಚ್. ಮುನಿಯಪ್ಪ (ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು)

**486 – ಪ್ರೌಢಶಾಲಾ ಶಿಕ್ಷಕರನ್ನು ಪ್ರೌಢ ಶಾಲೆಯಿಂದ ಪದವಿಪೂರ್ವ ಕಾಲೇಜಿಗೆ ಬಡ್ತಿ ನೀಡಲು ಆಗುತ್ತಿರುವ ವಿಳಂಬದ ಕುರಿತು**

- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಮಧು ಬಂಗಾರಪ್ಪ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

**401 – ಮಕ್ಕಳ ಕ್ಯಾನ್ಸರ್ ಚಿಕಿತ್ಸೆ ಸೌಲಭ್ಯಗಳ ಬಗ್ಗೆ**

- ಡಾ: ಉಮಾಶ್ರೀ
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**458 – ಆಯುಷ್ ಇಲಾಖೆಯಲ್ಲಿ ಖಾಯಂ ತಜ್ಞ ವೈದ್ಯರುಗಳ ನೇಮಕ ಕುರಿತು**

- ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**464+473+419+476+453 – ರಾಜ್ಯದಲ್ಲಿ ಸ್ಥಾಪಿಸಿರುವ ವಿಶ್ವವಿದ್ಯಾಲಯಗಳ ಬಗ್ಗೆ**

- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಎಸ್.ಎಲ್. ಭೋಜೇಗೌಡ

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಶರವಣ ಟಿ.ಎ.
- ಶ್ರೀ ಡಿ.ಎಸ್.ಅರುಣ್

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**೦3. ನಿಯಮ 59ಎ ಮೇರೆಗೆ ಶೂನ್ಯವೇಳೆ ಸೂಚನೆಗಳು**

**ಅ) ಔಷಧಗಳು ಬೇರೆ ಕಡೆ ಕಡಿಮೆ ಬೆಲೆಯಲ್ಲಿ ಲಭ್ಯವಿದ್ದರೂ ಸಹ ಅಂತಹ ಔಷಧಗಳನ್ನು ತಮ್ಮ ಔಷಧಾಲಯಗಳಿಂದಲೇ ಖರೀದಿಸಲು ಒತ್ತಾಯಿಸುತ್ತಿರುವ ಖಾಸಗಿ ಆಸ್ಪತ್ರೆಗಳಿಗೆ ಸುಪ್ರಿಂ ಕೋರ್ಟ್ ಹೇಳಿದಂತೆ ಮಾರ್ಗಸೂಚಿ ರಚಿಸುವ ಕುರಿತು.**

- ಶ್ರೀಮತಿ ಬಲ್ಕೀಸ್ ಬಾನು
- ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು)

**ಆ) ಕಲುಬುರುಗಿ ಜಿಲ್ಲೆಯ ಸೇಡಂ ತಾಲೂಕಿನ ಮೆ: ಅಲ್ಟ್ರಾಟೇಕ್ ಸಿಮೆಂಟ್ ಲಿಮಿಟೆಡ್ ಮಳಖೇಡ ಕಂಪನಿಯು ತನ್ನ ನಾಲ್ಕನೆಯ ಸಿಮೆಂಟ್ ಉತ್ಪಾದನಾ ಘಟಕಕ್ಕೆ ರೈತರಿಂದ ಕೃಷಿ ಜಮೀನುಗಳನ್ನು ಖರೀದಿಸಿ ಯೋಗ್ಯ ಬೆಲೆ ನೀಡದಿರುವ ಕುರಿತು**

- ಡಾ: ತಳವಾರ ಸಾಬಣ್ಣ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಇ) ಬಾಗಲಕೋಟೆ ಜಿಲ್ಲೆಗೆ 4 ಹೊಸ ತಾಲ್ಲೂಕುಗಳು ಘೋಷಣೆಯಾಗಿದ್ದರೂ ಸರ್ಕಾರದಿಂದ ತಾಲ್ಲೂಕುಗಳ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಇರುವ ಬಗ್ಗೆ.**

- ಶ್ರೀ ಬಿ.ಕೆ. ಹರಿಪ್ರಸಾದ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಈ) ಮಾರುಕಟ್ಟೆಯಲ್ಲಿ ಮೆಣಸಿನಕಾಯಿ ಬೆಲೆ ಕುಸಿತ ಮತ್ತು ಬಳ್ಳಾರಿಯಲ್ಲಿ ಮೆಣಸಿನಕಾಯಿ ಮಾರುಕಟ್ಟೆ ಸ್ಥಾಪಿಸುವ ಕುರಿತು.**

- ಶ್ರೀ ವೈ.ಎಂ.ಸತೀಶ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಉ) ಚಾಮರಾಜನಗರ ಜಿಲ್ಲೆಯ ನಂಜನಗೂಡು ತಾಲ್ಲೂಕಿನ ವರುಣ ವಿಧಾನಸಭಾ ವ್ಯಾಪ್ತಿಯ ಕೆರೆ ಸಂರಕ್ಷಣೆ ಕುರಿತು.**

- ಶ್ರೀ ಸಿ.ಎನ್.ಮಂಜೇಗೌಡ
- ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

**ಊ) ತುಂಗಭದ್ರಾ ನದಿ ತೀರದಲ್ಲಿ ಪರವಾನಗಿ ಪಡೆಯದೇ ಹಲವಾರು ರೆಸಾರ್ಟ್‌ಗಳು ಅನಧಿಕೃತವಾಗಿ ತಲೆ ಎತ್ತಿರುವ ಕುರಿತು.**

- ಶ್ರೀ ಹೇಮಲತಾ ನಾಯಕ್

- ಶ್ರೀ ಕೆ.ಎಸ್.ನವೀನ್
- ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ವಿರೋಧಪಕ್ಷದ ನಾಯಕರು)

**(ನಿಯಮ 330ಕ್ಕೆ ಪರಿವರ್ತಿಸಲಾಯಿತು)**

**ಋ) ಕಬ್ಬನ್ ಪಾರ್ಕ್‌ನ ವೆಂಕಟಪ್ಪ ಆರ್ಟ್ ಗ್ಯಾಲರಿ ಮುಂಭಾಗದಲ್ಲಿ ಖಾಸಗಿ ಕಂಪನಿ ಮ್ಯಾಪ್ ಆರ್ಟ್ ಗ್ಯಾಲರಿ ನಿರ್ಮಿಸಲು 5 ಎಕರೆ ಜಮೀನು ನೀಡುತ್ತಿರುವುದನ್ನು ರದ್ದುಪಡಿಸುವ ಕುರಿತು.**

- ಶ್ರೀ ಟಿ.ಎನ್.ಜವರಾಯಿಗೌಡ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಎ) ವಿಜಯಪುರ ಜಿಲ್ಲೆಯ ನಿಡಗುಂದಿ ತಾಲೂಕಿನ ಆಲಮಟ್ಟಿಯ ಲಾಲ್ ಬಹದ್ದೂರ್ ಶಾಸ್ತ್ರಿ ಜಲಾಶಯದಿಂದ ತೆಲಂಗಾಣ ರಾಜ್ಯಕ್ಕೆ ಬಿಡುತ್ತಿರುವ 1.27 ಟಿ.ಎಂ.ಸಿ. ನೀರನ್ನು ಕೂಡಲೇ ನಿಲ್ಲಿಸಿ, ರೈತರಿಗೆ ಅನುಕೂಲ ಕಲ್ಪಿಸುವ ಕುರಿತು.**

- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಏ) ಬೆಂಗಳೂರು ವೈದ್ಯಕೀಯ ಆಸ್ಪತ್ರೆಯ ಮುಂಭಾಗದಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳುವ ಕುರಿತು.**

- ಶ್ರೀ ಕೆ.ಎಸ್.ನವೀನ್ ಕೆ.ಎಸ್.
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಐ) ಹಳೆ ಹುಬ್ಬಳ್ಳಿಯ ಅಂಗನವಾಡಿಯಲ್ಲಿ ಮಕ್ಕಳಿಗೆ ಮತ್ತು ಬಾಣಂತಿಯರಿಗೆ ವಿತರಿಸಬೇಕಾಗಿದ್ದ ಪೌಷ್ಠಿಕ ಆಹಾರವನ್ನು ಅಕ್ರಮವಾಗಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ.**

- ಶ್ರೀ ಪ್ರದೀಪ ಶೆಟ್ಟರ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**04. ನಿಯಮ 58ಎ ಅಡಿಯಲ್ಲಿ ಪ್ರಸ್ತಾಪಿಸಿದ ಶೂನ್ಯವೇಳೆ ಸೂಚನೆಗಳಿಗೆ ಸರ್ಕಾರದ ಲಿಖಿತ ಉತ್ತರಗಳು**

**ಅ) ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮಗಳ ಸೂಕ್ತ ಅನುಷ್ಠಾನದ ಕುರಿತು.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ)

**ಆ) ವಿಜಯಪುರ ತಾಲ್ಲೂಕಿನ ಹೆಗಡಿಹಾಳ ಗ್ರಾಮದ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಸಂಪೂರ್ಣ ಕಳಪೆ ಕಾಮಗಾರಿ ನಡೆದಿರುವ ಬಗ್ಗೆ.**

- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ)

**ಇ) ರಾಜ್ಯದ ಹೋಟೆಲ್‌ಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವ ಬಗ್ಗೆ.**

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

**ಈ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಮೊಗಟಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬ್ರಹ್ಮೂರು ಗ್ರಾಮದ ಮಾಸ್ತಿಬೆಣ, ಸೊಪ್ಪರತಿ ಮೂಲಕ ಸ.ಕಿ.ಪ್ರಾ ಶಾಲೆಗೆ ರಸ್ತೆಯನ್ನು ನಿರ್ಮಿಸುವ ಕುರಿತು.**

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ)

**ಉ) ಚಿಕ್ಕಮಗಳೂರು ತಾಲ್ಲೂಕು ಕಛೇರಿ ಮುಂಭಾಗದಲ್ಲಿರುವ ನಲ್ಲೂರು ಮಠದ ಜಾಗದಲ್ಲಿದ್ದ ಅಂಗಡಿಗಳನ್ನು ನೆಲಸಮ ಮಾಡಿದವರ ವಿರುದ್ಧ ಕ್ರಮ ಕೈಗೊಂಡು ವರ್ತಕರಿಗೆ ರಕ್ಷಣೆ ನೀಡುವ ಬಗ್ಗೆ**

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಪೌರಾಡಳಿತ ಮತ್ತು ಹಜ್ ಸಚಿವರ ಪರವಾಗಿ)

**ಊ) ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ಇಲ್ಲಿನ ನಿವೃತ್ತ ನೌಕರರಿಗೆ ಪಿಂಚಣಿ ನೀಡದಿರುವ ಬಗ್ಗೆ.**

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಉನ್ನತ ಶಿಕ್ಷಣ ಸಚಿವರ ಪರವಾಗಿ)

**ಋ) ಅಕ್ಷರ ದಾಸೋಹ ನೌಕರರಿಗೆ ಗೌರವ ಧನ ಹೆಚ್ಚಿಸುವುದರೊಂದಿಗೆ, ವಿವಿಧ ಬೇಡಿಕೆಗಳನ್ನು ಈಡೇರಿಸುವ ಕುರಿತು**

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಪರವಾಗಿ)

**ಎ) ಬೆಳಗಾವಿ ಜಿಲ್ಲೆಯ ಹಿಂಡಲಗಾ ಜೈಲಿನ ಖೈದಿಗಳು ಜೈಲಲ್ಲಿ ಮೊಬೈಲ್ ಫೋನ್ ಬಳಸದಂತೆ ತಡೆಯಲು ಅಳವಡಿಸಲಾದ 5ಜಿ ನೆಟ್ ವರ್ಕ್ ಜಾಮರ್‌ನಿಂದಾಗಿ ಸುತ್ತಮುತ್ತಲಿನ ನಾಗರಿಕರಿಗೆ/ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಕುರಿತು.**

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಗೃಹ ಸಚಿವರ ಪರವಾಗಿ

**ಏ) ಕೊಡಗು ಜಿಲ್ಲೆಯ ವಿಶ್ವವಿದ್ಯಾನಿಲಯವನ್ನು ವಿಲೀನಗೊಳಿಸದೇ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸೂಕ್ತ ಅನುದಾನ ಒದಗಿಸುವ ಕುರಿತು**

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಉನ್ನತ ಶಿಕ್ಷಣ ಸಚಿವರ ಪರವಾಗಿ)

**ಐ) ಯಾದಗಿರಿ ಜಿಲ್ಲೆಯಲ್ಲಿ ನೀರಿನ ಸಮಸ್ಯೆ ಬಗೆಹರಿಸಲು ಶಾಶ್ವತ ಪರಿಹಾರ ಒದಗಿಸುವ ಬಗ್ಗೆ.**

- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ)

**ಒ) ಹೊಸಕೋಟೆ ಹೆದ್ದಾರಿ ಬದಿಯಲ್ಲಿ ಕೆ.ಐ.ಎ.ಡಿ.ಬಿ ಕೈಗಾರಿಕಾ ಅಭಿವೃದ್ಧಿ ಮಂಡಳಿಗೆ ಸೇರಿದ ಜಾಗದಲ್ಲಿ ಸುರಿದಿರುವ ಕಸದ ರಾಶಿಯಿಂದ ಸುತ್ತಮುತ್ತಲಿನ ಜನರಿಗೆ ಅನಾರೋಗ್ಯ ಉಂಟಾಗುತ್ತಿರುವ ಕುರಿತು.**

- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಪರವಾಗಿ)

**ಓ) ರಾಜ್ಯ/ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳಲ್ಲಿ ಉಂಟಾದ ಶಿಕ್ಷಕರ ಕೊರತೆಯಿಂದ ನೇಮಕಗೊಂಡ ಅತಿಥಿ ಶಿಕ್ಷಕರಿಗೆ ಕಾಲಕಾಲಕ್ಕೆ ವೇತನ ಪಾವತಿಸದೇ ಇರುವ ಕುರಿತು.**

- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ)

**೦5. ಕಾರ್ಯದರ್ಶಿಯವರ ವರದಿ**

ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕ, 2025

**೦6. ಅಭಿನಂದನೆ**

ಚಾಂಪಿಯನ್ಸ್ ಟ್ರೋಫಿ-2025 ಅನ್ನು ಮೂರನೇ ಬಾರಿಗೆ ನಮ್ಮ ಭಾರತ ತಂಡ ಗೆದ್ದಿರುವ ಬಗ್ಗೆ.

- ಶ್ರೀ ಡಿ.ಎಸ್.ಅರುಣ್

**೦7. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾಪ.**

**ರಾಜ್ಯದಲ್ಲಿ ಹೆಚ್ಚುತ್ತಿರುವ ಕೊಲೆ, ಅತ್ಯಾಚಾರ, ಗಲಭೆಗಳಿಂದ ಜನಸಾಮಾನ್ಯದಲ್ಲಿ ಅಭದ್ರತೆಯ ವಾತಾವರಣ ನಿರ್ಮಾಣವಾಗಿರುವ ಕುರಿತು.**

- ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

**೦8. ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಬಗ್ಗೆ ವಿಶೇಷ ಚರ್ಚೆ**

- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು)
- ಡಾ: ಡಿ.ತಿಮ್ಮಯ್ಯ

**೦9. ಶಾಸನ ರಚನೆ**

**ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕ 2025**

- ಶ್ರೀ ಹೆಚ್.ಕೆ.ಪಾಟೀಲ್(ಕಾನೂನು ನ್ಯಾಯ, ಮಾನವ ಹಕ್ಕುಗಳು

- ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ)
- ಶ್ರೀ ಎಸ್.ಎಲ್.ಬೋಜೇಗೌಡ
- ಶ್ರೀ ಟಿ.ಎ.ಶರವಣ
- ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಐವನ್ ಡಿ'ಸೋಜಾ
- ಶ್ರೀ ಸಿ.ಟಿ.ರವಿ
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
- ಶ್ರೀ ಪ್ರತಾಪಸಿಂಹ ನಾಯಕ್.ಕೆ
- ಶ್ರೀ ಎಂ.ನಾಗರಾಜ
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷ ಮುಖ್ಯ ಸಚೇತಕರು)
- ಶ್ರೀ ಕೆ.ಎಸ್.ನವೀನ್
- ಶ್ರೀ ಹೆಚ್.ಎಸ್.ಗೋಪಿನಾಥ
- ಶ್ರೀ ಗೋವಿಂದ ರಾಜು
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಪ್ರಿಯಾಂಕ ಖರ್ಗೆ (ಗ್ರಾಮೀಣಾಭಿವೃದ್ಧಿ ಸಚಿವರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು)
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ನಿರಾಣಿ ಹಣಮಂತ ರುದ್ರಪ್ಪ
- ಶ್ರೀ ಅಡಗೂರು ಹೆಚ್.ವಿಶ್ವನಾಥ
- ಡಾ: ಯತೀಂದ್ರ ಎಸ್.
- ಶ್ರೀ ಎ.ವಸಂತ ಕುಮಾರ್
- ಶ್ರೀ ಕೇಶವ ಪ್ರಸಾದ್

- - -

(150) 10-03-2025/11.00/ಎಂವಿ-ಎಂ.ಡಿ

# ಕರ್ನಾಟಕ ವಿಧಾನ ಪರಿಷತ್ತು

**ಸೋಮವಾರ, 10ನೇ ಮಾರ್ಚ್ 2025**

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ**

**ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 06 ನಿಮಿಷಕ್ಕೆ ಸಮಾವೇಶಗೊಂಡಿತು**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ರವರು ಪೀಠದಲ್ಲಿ ಉಪಸ್ಥಿತರಿದ್ದರು**

## 01. ಸಂತಾಪ ಸೂಚನೆ

**ವಿಷಯ:- ಪಿ.ಇ.ಎಸ್. ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ, ಶಿಕ್ಷಣ ತಜ್ಞ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಪ್ರೊ:ಎಂ.ಆರ್.ದೊರೆಸ್ವಾಮಿ ಅವರು ನಿಧನದ ಬಗ್ಗೆ.**

---

**ಸಭಾಪತಿಯವರು:-** ಪಿ.ಇ.ಎಸ್. ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ, ಶಿಕ್ಷಣ ತಜ್ಞ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಪ್ರೊ:ಎಂ.ಆರ್.ದೊರೆಸ್ವಾಮಿ ಅವರು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

ಶಿಕ್ಷಣ ತಜ್ಞ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಮೇದರಪಟ್ಟ ರಾಮ ನಾಯ್ಡು ದೊರೆಸ್ವಾಮಿ ಅವರು ದಿನಾಂಕ 06.03.2025ರಂದು ನಿಧನ ಹೊಂದಿರುತ್ತಾರೆ.

1937ರ ನವೆಂಬರ್ 7 ರಂದು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ನರ್ರಾವೂರು ಎಂಬ ಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ಮೂಲತಃ ಕೃಷಿ ಕುಟುಂಬದವರಾಗಿದ್ದರು. ಎಂ.ಎ., ಬಿ.ಎಲ್., ಪದವೀಧರರಾಗಿದ್ದ ಬೆಂಗಳೂರಿನ ದಯಾನಂದಸಾಗರ ಸಂಜೆ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದ ಶ್ರೀಯುತರು ದೂರದೃಷ್ಟಿಯ ಚಿಂತನೆ ಹೊಂದಿದ್ದು, ಪಿ.ಇ.ಎಸ್. ಶಿಕ್ಷಣ ಸಂಸ್ಥೆಯನ್ನು ಶಾಲಾ ಹಂತದಿಂದ ವಿಶ್ವವಿದ್ಯಾಲಯದ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಯಶಸ್ವಿಯಾಗುವುದರ ಮೂಲಕ ಶಿಕ್ಷಣೋದ್ಯಮಿಯಾದರು. ಸರ್ಕಾರದ ಶೈಕ್ಷಣಿಕ ಸುಧಾರಣೆಗಳ ಸಲಹೆಗಾರರಾಗಿ ಎರಡು ಬಾರಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

2008 ರಿಂದ 2014ರವರೆಗೆ ಕರ್ನಾಟಕ ವಿಧಾನ ಪರಿಷತ್ತಿಗೆ ನಾಮನಿರ್ದೇಶನ ಹೊಂದಿದ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ರಾಜ್ಯದ ಶೈಕ್ಷಣಿಕ ಅಭಿವೃದ್ಧಿಗೆ ಅನನ್ಯ ಕೊಡುಗೆ ನೀಡಿರುತ್ತಾರೆ. ಕೆಜಿಯಿಂದ ಪಿಜಿವರೆಗೆ ಎಲ್ಲಾ ರೀತಿಯ ಶಿಕ್ಷಣ ನೀಡಲು ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಪಿ.ಇ.ಎಸ್. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ ಶ್ರೀಯುತರು ಜಾಗತಿಕ ಪ್ರವೃತ್ತಿಗಳ ಬಗ್ಗೆ ಅರಿವು ಮೂಡಿಸಿದ್ದರು. ಶಿಸ್ತು, ಸಂಯಮ, ಪರಿಶ್ರಮ ಮತ್ತು ದಣಿವರಿಯದ ಇವರ ದುಡಿಮೆಯಿಂದಾಗಿ ಶಿಕ್ಷಣ ಕ್ಷೇತ್ರದ ದೊರೆಯಾಗಿದ್ದರು.

ಶ್ರೀಯುತರು ಶಿಕ್ಷಣ ಕ್ಷೇತ್ರದ ಸುಧಾರಣೆಗಾಗಿ ನೀಡಿರುವ ಅಪಾರ ಕೊಡುಗೆಗೆ ರಾಜ್ಯ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ಯುಎಸ್ ಶಿಕ್ಷಣ ಸಂಸ್ಥೆಯಿಂದ ಫುಲ್‌ಬ್ರೈಟ್ ಫೆಲೋಶಿಪ್ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ ಹಾಗೂ ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿಗಳಲ್ಲದೆ ಇತರೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಅತ್ಯುತ್ತಮ ಶಿಕ್ಷಣ ತಜ್ಞ ಹಾಗೂ ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀಯುತ ದೊರೆಸ್ವಾಮಿ ನಾಯ್ಡುರವರ ಬಗ್ಗೆ ತಾವು ಪ್ರಸ್ತಾಪ ಮಾಡಿದಂತೆ, ಅವರು ಶೈಕ್ಷಣಿಕ ಕ್ಷೇತ್ರದಲ್ಲಿ ಸುಧಾರಣೆ ತರುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಿರತಕ್ಕಂತಹವರು. ಅವರು ಮೂಲತಃ ಕಾನೂನು ಪದವೀಧರರಾಗಿ, ಬೆಂಗಳೂರಿನ ಖಾಸಗಿ ಕಾಲೇಜ್‌ನಲ್ಲಿ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿರುವಂತಹವರು. ಅವರು 1972ರಲ್ಲಿ People's Education Society ಯನ್ನು ಪ್ರಾರಂಭ ಮಾಡಿ, ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಕೆಜಿಯಿಂದ ಪಿಜಿಯವರೆಗೆ ಪ್ರಾರಂಭ ಮಾಡಿದ್ದಾರೆ. ಅಂದರೆ ಅವರು ವಿಶ್ವವಿದ್ಯಾಲಯವನ್ನು ಸಹ ಪ್ರಾರಂಭ ಮಾಡಿದ್ದಾರೆ. ಅವರು ಶಿಕ್ಷಣದ ವಿಷಯಕ್ಕೆ ಸಂಬಂಧಿಸಿದಂತೆ ಅತ್ಯಂತ ಶಿಸ್ತುಬದ್ಧವಾಗಿ ನಡೆದುಕೊಂಡಿರುತ್ತಾರೆ. ನನಗೂ ಸಹ ಅವರ ಪರಿಚಯವಿತ್ತು. ನಮ್ಮ ಭಾಗದಿಂದ ಬರುವಂತಹ ವಿದ್ಯಾರ್ಥಿಗಳಿಗೆ ಯಾವಾಗಲಾದರೂ ಪ್ರವೇಶ ಕೊಡಬೇಕು ಎಂದಾಗ, ನೀವು ವಿದ್ಯಾರ್ಥಿಯನ್ನು ಕಳುಹಿಸಿಕೊಡಿ, ಆ ವಿದ್ಯಾರ್ಥಿ ಮೆರಿಟ್ ಪ್ರಕಾರ ಇದ್ದರೆ, ತಪ್ಪದೇ ಅವರಿಗೆ ಅವಕಾಶ ಕಲ್ಪಿಸಿಕೊಡುವುದಾಗಿ ಹೇಳುತ್ತಿದ್ದರು. ಶಿಕ್ಷಣ ಸಂಸ್ಥೆಯನ್ನು ಬಹಳ ಉತ್ತಮ ರೀತಿಯಲ್ಲಿ ಮುಂದುವರೆಸಿರತಕ್ಕಂತಹ ಅವರು ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಅವರು ಸರ್ಕಾರದ ಶಿಕ್ಷಣ ಸುಧಾರಣಾ ಸಲಹಾ ಸಮಿತಿಗೆ ಎರಡು ಬಾರಿಗೆ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ರಾಜ್ಯಾದ್ಯಂತ ಶಿಕ್ಷಣ ಸಂಸ್ಥೆಗಳಿಗೆ ಸರಿಯಾದ ರೀತಿಯಲ್ಲಿ ದಾರಿದೀಪ ತೋರಿಸುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಅವರ ಅಗಲಿಕೆಯಿಂದ ಇವತ್ತು ಒಬ್ಬ ಉತ್ತಮ ಶಿಕ್ಷಣ ತಜ್ಞರನ್ನು ಹಾಗೂ ದೂರದೃಷ್ಟಿ ಉಳ್ಳಂತಹ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರ ಕುಟುಂಬಕ್ಕೆ ಶಕ್ತಿಯನ್ನು ಕೊಡಲಿ ಎಂದು ಹೇಳುತ್ತಾ, ತಾವು ತಂದಿರುವಂತಹ ಪ್ರಸ್ತಾವನೆಯನ್ನು ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ) (ವಿರೋಧ ಪಕ್ಷದ ನಾಯಕರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದಂತಹ ಶ್ರೀ ಮೇದರಪಟ್ಟ ರಾಮ ನಾಯ್ಡು ದೊರೆಸ್ವಾಮಿ, ನಾವು ಅವರನ್ನು 'ದೊರೆಸ್ವಾಮಿ ನಾಯ್ಡು' ಎಂದೇ ಕರೆಯುತ್ತಿದ್ದೆವು. ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂ ಸೇವಕರಾಗಿದ್ದರು ಹಾಗೂ ಶಿಕ್ಷಣ ತಜ್ಞರು ಸಹ ಆಗಿದ್ದರು.

**(ಮುಂದು)**

(151) 10.03.2025 11.10 LL-MD (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ. ರವಿ (ಮುಂದು)**

ಶ್ರೀಯುತರು ದಯಾನಂದ ಸಾಗರ್ ಸಂಜೆ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕೆಲಸ ಮಾಡಿದ್ದರು. ತದನಂತರ, ಪಿಇಎಸ್ ಎನ್ನತಕ್ಕಂತಹ ತಮ್ಮದೇ ಆದಂತಹ ಒಂದು ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ, ಕೆ.ಜಿ.ಯಿಂದ ಪಿ.ಜಿ.ವರೆಗೂ ಶಿಕ್ಷಣ ನೀಡುವ ಮೂಲಕ ಇವೊತ್ತಿನ ದಿವಸ ಒಂದು ಖಾಸಗಿ ವಿಶ್ವವಿದ್ಯಾಲಯವಾಗಿ ಬದಲಾಗಿದೆ. ನಮ್ಮ ರಾಜ್ಯದವರು ಮಾತ್ರವಲ್ಲದೆ, ಬೇರೆ ರಾಜ್ಯದವರು ಮತ್ತು ವಿದೇಶಿ ವಿದ್ಯಾರ್ಥಿಗಳು ಕೂಡ ಈ ವಿದ್ಯಾಸಂಸ್ಥೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಅವರು ಶಿಕ್ಷಣ ತಜ್ಞರಾಗಿ ಶಿಕ್ಷಣ ಕ್ಷೇತ್ರದ ಸುಧಾರಣೆಗಾಗಿ ತಮ್ಮದೇ ಆದಂತಹ ಸಲಹೆಯನ್ನು ಸಹ ಕೊಟ್ಟಿದ್ದರು. ಈ ಹಿಂದೆ ಎರಡು ಬಾರಿ ಶೈಕ್ಷಣಿಕ ಸುಧಾರಣೆಗಾಗಿ ರಚಿಸಲಾಗಿದ್ದ ಸಮಿತಿಯಲ್ಲಿ ಶ್ರೀಯುತರು ಕಾರ್ಯನಿರ್ವಹಿಸಿದ್ದರು. ಅಷ್ಟೆ ಅಲ್ಲದೇ, ಶ್ರೀಯುತರು ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು, ಆ ಶಾಲೆಗಳನ್ನು ಸಹ ಮಾದರಿ ಶಾಲೆಗಳಾಗಿ ಅಭಿವೃದ್ಧಿಪಡಿಸಿದಂತಹ ಕೀರ್ತಿ ಅವರಿಗೆ ಸಲ್ಲುತ್ತದೆ. 2008 ರಿಂದ 2014ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಕೆಲಸ ಮಾಡಿದ್ದು, ವಯೋಸಹಜ ಕಾರಣದಿಂದ ಶ್ರೀಯುತರು ನಿಧನರಾಗಿರುತ್ತಾರೆ. ಆದರೆ, ಅವರು ತಮ್ಮ ಸಾಧನೆಯ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿರುತ್ತಾರೆ. ಇವೊತ್ತಿನ ದಿವಸ ಕೋಟ್ಯಂತರ ಜನರು ಹುಟ್ಟುತ್ತಾರೆ ಮತ್ತು ಸಾಯುತ್ತಾರೆ. ಎಲ್ಲರು ಬದುಕಿನಲ್ಲಿ ತಮ್ಮ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗುತ್ತಾರೆಂದು ಇಲ್ಲ. ಆದರೆ, ಪ್ರೊ: ಎಂ.ಆರ್. ದೊರೆಸ್ವಾಮಿಯವರು ತಮ್ಮ ಜೀವಮಾನದಲ್ಲಿ ಅನೇಕ ಸಾಧನೆಗಳನ್ನು ಮಾಡಿ, ಸಮಾಜಕ್ಕೆ ಕೊಡುಗೆ ಕೊಟ್ಟು ಆ ಮೂಲಕ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿದ್ದಾರೆ. ಅವರ ಆತ್ಮಕ್ಕೆ ಸದ್ಗತಿಯನ್ನು ಭಗವಂತನು ದಯಪಾಲಿಸಲಿ ಎಂದು ಹೇಳುತ್ತಾ, ತಾವು ತಂದಿರುವ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದೇ ಒಂದು ಘಟನೆ...

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ ಅವರ ಅಗಲಿಕೆಯನ್ನು ..

**ಶ್ರೀಮತಿ ಉಮಾಶ್ರೀ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಇಲ್ಲ ಆಗುವುದಿಲ್ಲ. ಸಂತಾಪ ಸೂಚನೆಯಲ್ಲಿ ಬೇರೆಯವರಿಗೆ ಮಾತನಾಡಲು ಅವಕಾಶವಿರುವುದಿಲ್ಲ.

**ಶ್ರೀಮತಿ ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಿಲ್ಲ. ಆದರೆ, ಶ್ರೀ ವಿಮಲಾ ರಂಗಾಚಾರ್‌ರವರು ರಂಗಭೂಮಿಗೆ ಬಹುದೊಡ್ಡ ಕೊಡುಗೆ ಕೊಟ್ಟಂತಹವರಾಗಿರುತ್ತಾರೆ. ಆದುದರಿಂದ, ದಯಮಾಡಿ ಅವರಿಗೂ ಸಹ ಈ ಸದನದಲ್ಲಿ ಸಂತಾಪ ಸೂಚಿಸಬೇಕೆಂದು ತಮ್ಮನ್ನು ಕೋರುತ್ತೇನೆ.

**ಸಭಾಪತಿಯವರು:-** ಆಯಿತು. ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:-** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಮಾನ್ಯ ಉಮಾಶ್ರೀಯವರೇ, ತಾವು ಏನಾದರೂ ಹೇಳುವುದಿದ್ದರೆ ಸಂತಾಪ ಸೂಚನೆ ಮುಗಿದ ತರುವಾಯ ಹೇಳಬೇಕು. ನಡು ನಡುವೆ ಎದ್ದು ನಿಂತು ಮಾತನಾಡಬಾರದು. ತಾವು ಹಿರಿಯ ಸದಸ್ಯರಾಗಿದ್ದು, ಈ ವಿಷಯವನ್ನು ತಾವು ತಿಳಿದುಕೊಳ್ಳಬೇಕು.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ವಿಶೇಷವಾಗಿ ಹಂಪಿಯಲ್ಲಿ ಆಗಿರುವಂತಹ ಗ್ಯಾಂಗ್‌ರೇಪ್ ಬಗ್ಗೆ...

**ಸಭಾಪತಿಯವರು:-** ಆಯಿತು ಆಮೇಲೆ ನೋಡೋಣ. ಮೊದಲು ಪ್ರಶ್ನೋತ್ತರ ಅವಧಿ ಮುಗಿಯಲಿ. ಮೊದಲನೆ ಪ್ರಶ್ನೆ ಶ್ರೀ ಮಂಜುನಾಥ್ ಭಂಡಾರಿಯವರದ್ದು.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ವಿಶೇಷ ಪ್ರಕರಣ.

**(ಗೊಂದಲ)**

**ಸಭಾಪತಿಯವರು:-** ಮೊದಲು ಪ್ರಶ್ನೋತ್ತರ ಅವಧಿ ಮುಗಿಯಲಿ. ಈಗ ನಾನು ಇದನ್ನು ಅಲೋ ಮಾಡುವುದಿಲ್ಲ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇದು ಇಡೀ ದೇಶವೇ ತಲೆ ತಗ್ಗಿಸುವಂತಾಗಿದೆ. ಇಡೀ ಪ್ರಪಂಚಾದ್ಯಂತ ಕರ್ನಾಟಕದ ಬಗ್ಗೆ ಮತ್ತು ನಮ್ಮ ರಾಜ್ಯದ ಬಗ್ಗೆ ಬಹಳ ಕೆಟ್ಟ ಹೆಸರು ಬರುತ್ತಿದೆ.

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಇದೊಂದು ವಿಶೇಷ ಪ್ರಕರಣವಾಗಿರುವುದರಿಂದ...

**(ಗೊಂದಲ)**

**ಸಭಾಪತಿಯವರು:-** ಮೊದಲು ಪ್ರಶ್ನೋತ್ತರ ಅವಧಿ ಮುಗಿಯಲಿ. ಈಗ ಏನೂ ಮಾತನಾಡುವುದು ಬೇಡ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, "ಹಂಪಿ ಯಲ್ಲಿ ಗ್ಯಾಂಗ್‌ರೇಪ್" ಎಂದು ಎಲ್ಲಾ ದಿನಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

**(ಗೊಂದಲ)**

**ಸಭಾಪತಿಯವರು:-** ತಾವೆಲ್ಲರೂ ಈ ಸದನದ ನಿಯಮಗಳನ್ನು ತಿಳಿದುಕೊಳ್ಳಬೇಕು. ನಾನು ಏನೂ ಹೇಳುವುದಿಲ್ಲ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ವಿದೇಶಿ ಮಹಿಳೆಯನ್ನ

**(ಗೊಂದಲ)**

**ಸಭಾಪತಿಯವರು:-** ಈ ವಿಷಯದ ಬಗ್ಗೆ ತಾವು ನೋಟಿಸ್ ನೀಡಿದ್ದೀರಾ?

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನೋಟಿಸ್ ಕೊಡುತ್ತೇವೆ.

**ಸಭಾಪತಿಯವರು:-** ಮೊದಲು ನೋಟಿಸ್ ಕೊಡಿ. ನಾನು ನಂತರ ವಿಚಾರ ಮಾಡುತ್ತೇನೆ. ಈಗ ತಾವು ದಯಮಾಡಿ ಕುಳಿತುಕೊಳ್ಳಿ. ಮೊದಲು ನೋಟಿಸ್ ಕೊಟ್ಟು, ನಂತರ ತಾವು ಮಾತನಾಡಿ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಪ್ರತಿ ಬಾರಿ ನೋಟಿಸ್ ನೀಡದೆ, ಇದೇ ರೀತಿ ವಿಷಯ ಪ್ರಸ್ತಾಪ ಮಾಡುತ್ತಾರೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನೋಟಿಸ್ ಕೊಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ದಯಮಾಡಿ ತಾವು ಕುಳಿತುಕೊಳ್ಳಿ. ತಾವು ಏತಕ್ಕೆ ಮಾತನಾಡುತ್ತಿದ್ದೀರಿ? ಮಾನ್ಯ ರವಿಕುಮಾರ್‌ರವರೇ, ತಾವು ಮೊದಲು ನೋಟಿಸ್ ಕೊಡಿ. ನಾನು ಅದನ್ನು ನೋಡುತ್ತೇನೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿ ಮುಗಿದ ತರುವಾಯ ವಿಷಯ ಪ್ರಸ್ತಾಪ ಮಾಡಲು ಅವಕಾಶ ನೀಡುತ್ತೀರಾ?

**ಸಭಾಪತಿಯವರು:-** ತಾವು ನೋಟಿಸ್ ಕೊಡಿ, ನಾನು ಅದನ್ನು ನೋಡುತ್ತೇನೆ.

## 2) ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 46 (421) |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10.03.2025 |
| ಉತ್ತರಿಸುವ ಸಚಿವರು | : | ಉನ್ನತ ಶಿಕ್ಷಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಸರ್ಕಾರಿ ಮತ್ತು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು ಇವೆ; ಸರ್ಕಾರಿ ಕಾಲೇಜುಗಳಲ್ಲಿ ಉನ್ನತ ಶಿಕ್ಷಣ ಇಲಾಖೆ ಎಷ್ಟು ಹಣವನ್ನು ಹೂಡಿಕೆ ಮಾಡಿದೆ; (ಕಾಲೇಜುವಾರು ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು 18 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಮಂಜೂರಾಗಿತ್ತವೆ. ವಿವರ ಕೆಳಕಂಡಂತಿದೆ:<br>i) 16 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಕಟ್ಟಡ ಕಾಮಗಾರಿ ಪೂರ್ಣಗೊಂಡು ಶೈಕ್ಷಣಿಕ ಚಟುವಟಿಕೆ ಪ್ರಾರಂಭಿಸಲಾಗಿದೆ.<br>ii) 02 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಾದ ಅರಸೀಕರೆ ಮತ್ತು ದೇವದುರ್ಗ ಕಾಲೇಜುಗಳ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ.<br>ಪ್ರಸ್ತುತ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ವಿವರ ಈ ಕೆಳಕಂಡಂತಿದೆ.<br>ಕ್ರ. ಸಂ \| ಕಾಲೇಜುಗಳು \| ಸಂಖ್ಯೆ<br>1 \| ಸರ್ಕಾರಿ \| 16<br>2 \| ಖಾಸಗಿ ಅನುದಾನಿತ \| 8<br>3 \| ಖಾಸಗಿ ಅನುದಾನರಹಿತ \| 138<br>4 \| ಖಾಸಗಿ ಅನುದಾನರಹಿತ (ಅಲ್ಪಸಂಖ್ಯಾತ) \| 16<br>18 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಕಳೆದ 5 ವರ್ಷಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ರೂ.33159.95 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ. ವಿವರಗಳನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ. |
| ಆ) | ಯಾವುದಾದರೂ ಸರ್ಕಾರಿ ಕಾಲೇಜಿನಲ್ಲಿ ವಿ.ಟಿ.ಯುನಿಂದ ಮತ್ತೆ ಕಟ್ಟಡವನ್ನು ಕಟ್ಟುವಂತಹ ಯೋಜನೆ ಇದೆಯಾ; ಇದ್ದರೆ ಯಾವ ಯೋಜನೆ; ಅದರಿಂದ | ಪ್ರಸ್ತುತ ಸರ್ಕಾರಿ ಕಾಲೇಜಿನಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವತಿಯಿಂದ ಯಾವುದೇ ಕಟ್ಟಡವನ್ನು ಕಟ್ಟುವಂತಹ |

| | | |
|---|---|---|
| | ಆಗುವ ಅನುಕೂಲಗಳೇನು; | ಯೋಜನೆ ಇರುವುದಿಲ್ಲ. |
| ಇ) | ಕಟ್ಟಡ ಈಗಾಗಲೇ ಕಟ್ಟಿದ್ದ ಸರ್ಕಾರಿ ಕಾಲೇಜುಗಳಲ್ಲಿ ಮತ್ತೆ ಯಾವುದಾದರೂ ಕಟ್ಟಡಗಳಿವೆಯೇ; ಮತ್ತು ಆ ಕಾಲೇಜುಗಳಿಗಿರುವಂತಹ ಇಂಟೇಕ್ ಸಾಮರ್ಥ್ಯ (ವಿದ್ಯಾರ್ಥಿಗಳ ಸಂಖ್ಯೆ) ಎಷ್ಟು; ಈ ಕಾಲೇಜುಗಳಲ್ಲಿ ಇರುವ ಸಾತ್ನಕೋತ್ತರ ಕೋರ್ಸುಗಳು ಯಾವುವು? ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 16 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸ್ನಾತಕ ಕೋರ್ಸುಗಳು ಮತ್ತು ಇಂಟೇಕ್ ಸಾಮರ್ಥ್ಯದ ವಿವರಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ.<br><br>SKSJIT, ಬೆಂಗಳೂರು ಕಾಲೇಜಿನಲ್ಲಿ ಮಾತ್ರ ಸ್ನಾತಕೋತ್ತರ (Textile Technology) ಕೋರ್ಸ್ ಇದ್ದು, ಇಂಟೇಕ್ ಸಾಮರ್ಥ್ಯ 18 ಆಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ 04 ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ. |
| ಈ) | ಸರ್ಕಾರ ವಾರ್ಷಿಕವಾಗಿ ಪ್ರತಿ ಕಾಲೇಜುಗಳಿಗೆ ವೇತನ, ಉಪಕರಣಗಳು, ನಿರ್ವಹಣೆ ಇತ್ಯಾದಿಗಳಿಗೆ ನೀಡಲಾಗುವ ಅನುದಾನವೆಷ್ಟು; | ಸರ್ಕಾರಿ ಇಂಜಿನಿಯರಿಂಗ್‌ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರಿಗೆ ವೇತನ ಹಾಗೂ ಇನ್ನಿತರೆ ಭತ್ಯೆಗಳನ್ನು ಖಜಾನೆ-2 ತಂತ್ರಾಂಶದ (ಹೆಚ್.ಆರ್.ಎಂ.ಎಸ್) ಮೂಲಕ ಪಾವತಿಸಲಾಗುತ್ತಿದೆ. ಸದರಿ ಕಾಲೇಜುಗಳ ಸಿಬ್ಬಂದಿ ವೇತನ, ಕಾಲೇಜುಗಳಿಗೆ ಸಾಮಾನ್ಯ ವೆಚ್ಚ, ಕಟ್ಟಡ ವೆಚ್ಚ, ಸಾರಿಗೆ ವೆಚ್ಚ, ನಿರ್ವಹಣಾ ವೆಚ್ಚ, ಸಾಮಾಗ್ರಿ ಹಾಗೂ ಅತಿಥಿ ಉಪನ್ಯಾಸಕರ ಗೌರವಧನ ಪಾವತಿಸಲು ಒಟ್ಟಾರೆ ಪ್ರಸಕ್ತ ಸಾಲಿನಲ್ಲಿ ರೂ. 8526.49 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ವಿವರಗಳನ್ನು **ಅನುಬಂಧ-3ರಲ್ಲಿ** ಒದಗಿಸಿದೆ. |
| ಉ) | ಇಂತಹ ಸರ್ಕಾರಿ ಕಾಲೇಜುಗಳಿಗೆ ವಿ.ಟಿ.ಯುನಿಂದ ಎಷ್ಟು ಹಣವನ್ನು ನೀಡಲಾಗುತ್ತಿದೆ: (ಕಾಲೇಜುವಾರು ವಿವರ ನೀಡುವುದು) | ಸರ್ಕಾರ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವತಿಯಿಂದ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಯಾವುದೇ ಅನುದಾನವನ್ನು ನೀಡಲಾಗುತ್ತಿಲ್ಲ. |
| ಊ) | ಸರ್ಕಾರ ಮತ್ತು ವಿಟಿಯು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಅನುದಾನ ನೀಡುತ್ತಿದೆಯೇ; ನೀಡಿದ್ದಲ್ಲಿ ಯಾವ ಯಾವ ಕಾಲೇಜುಗಳಿಗೆ ಎಷ್ಟು ಹಣ ನೀಡಿದೆ ? (ವಿವರ ನೀಡುವುದು) | |

**ಅನುಬಂಧ-1**

**ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸಂಸ್ಥೆಗಳಲ್ಲಿ ಕಳೆದ ೦೫ ವರ್ಷಗಳಲ್ಲಿ ವಿವಿಧ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನದ ವಿವರ**

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಸಂಸ್ಥೆ | ವರ್ಷವಾರು ಬಿಡುಗಡೆಯಾದ ಅನುದಾನ | | | | | ಒಟ್ಟು |
|---|---|---|---|---|---|---|---|
| | | 2019-20 | 2020-21 | 2021-22 | 2022-23 | 2023-24 | |
| 1 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕಾರವಾರ | 25.00 | 0.00 | 375.00 | 57.00 | 115.00 | 572.00 |
| 2 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ನರಗುಂದ | 1872.00 | 0.00 | 0.00 | 42.00 | 39.09 | 1953.09 |
| 3 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ | 200.00 | 0.00 | 738.21 | 186.61 | 40.00 | 1164.82 |
| 4 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಬೀದರ್ | 1800.00 | 922.50 | 0.00 | 0.00 | 0.00 | 2722.50 |
| 5 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹೂವಿನಹಡಗಲಿ | 25.00 | 0.00 | 100.00 | 80.00 | 10.00 | 215.00 |
| 6 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ದೇವದುರ್ಗ | 0.00 | 0.00 | 0.00 | 825.00 | 0.00 | 825.00 |
| 7 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಯಚೂರು | 25.00 | 155.00 | 516.00 | 75.00 | 40.00 | 811.00 |
| 8 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಗಂಗಾವತಿ | 241.23 | 0.00 | 375.00 | 75.00 | 40.00 | 731.23 |
| 9 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ತಳಕಲ್ | 1174.51 | 0.00 | 632.14 | 0.00 | 266.01 | 2072.66 |
| 10 | ಸರ್ಕಾರಿ ಎಸ್.ಕೆ.ಎಸ್.ಜೆ.ಟಿ., ಸಂಸ್ಥೆ, ಬೆಂಗಳೂರು | 197.26 | 30.00 | 376.41 | 1860.75 | 110.00 | 2574.42 |
| 11 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಚಳ್ಳಕೆರೆ | 231.00 | 0.00 | 0.00 | 0.00 | 0.00 | 231.00 |
| 12 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ | 0.00 | 0.00 | 2000.00 | 1299.60 | 1700.00 | 4999.60 |
| 13 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಚಾಮರಾಜನಗರ | 494.75 | 169.98 | 100.00 | 80.00 | 10.00 | 854.73 |
| 14 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನ | 1005.00 | 2370.00 | 300.00 | 255.00 | 0.00 | 3930.00 |
| 15 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಮೊಸಳೆಹೊಸಳ್ಳಿ | 1174.63 | 1290.00 | 950.00 | 0.00 | 0.00 | 3414.63 |
| 16 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು,ಅರಸೀಕೆರೆ | 0.00 | 1800.00 | 0.00 | 2000.00 | 749.90 | 4549.90 |
| 17 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕುಶಾಲನಗರ | 25.00 | 0.00 | 375.00 | 75.00 | 240.00 | 715.00 |
| 18 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೆ.ಆರ್.ಪೇಟೆ | 169.62 | 0.00 | 424.75 | 189.00 | 40.00 | 823.37 |
| | ಒಟ್ಟು | 8660.00 | 6737.48 | 7262.51 | 7099.96 | 3400.00 | 33159.95 |

## *Govt Engineering College Admission Details 2024-2025 (all semesters)*

| ಕ್ರ. ಸಂ. | ಸಂಸ್ಥೆಯ ಹೆಸರು | ಕೋರ್ಸ್ | ಇಂಟೇಕ್ | ಪ್ರಥಮ ವರ್ಷ | ದ್ವಿತೀಯ ವರ್ಷ | ತೃತೀಯ ವರ್ಷ | ನಾಲ್ಕನೇ ವರ್ಷ | ಒಟ್ಟು ವಿದ್ಯಾರ್ಥಿಗಳು |
|---|---|---|---|---|---|---|---|---|
| 1 | GEC, Haveri | CE | 60 | 43 | 61 | 58 | 51 | 213 |
| | GEC, Haveri | ME | 60 | 26 | 26 | 40 | 43 | 135 |
| | GEC, Haveri | EC | 60 | 63 | 59 | 66 | 70 | 258 |
| | GEC, Haveri | CS | 60 | 63 | 64 | 65 | 65 | 257 |
| | TOTAL | | 240 | 195 | 210 | 229 | 229 | 863 |
| 2 | GEC, KARWAR | CE | 60 | 16 | 23 | 34 | 51 | 124 |
| | GEC, KARWAR | EC | 60 | 58 | 69 | 64 | 56 | 247 |
| | GEC, KARWAR | ME | 60 | 9 | 32 | 40 | 18 | 99 |
| | GEC, KARWAR | CS | 60 | 63 | 70 | 67 | 69 | 269 |
| | | TOTAL | 240 | 146 | 194 | 205 | 194 | 739 |
| 3 | GEC, Ramanagara | CS | 60 | 62 | 61 | 67 | 64 | 254 |
| | GEC, Ramanagara | CE | 60 | 38 | 46 | 53 | 44 | 181 |
| | GEC, Ramanagara | EC | 60 | 60 | 66 | 69 | 64 | 259 |
| | GEC, Ramanagara | MM | 60 | 17 | 16 | 18 | 30 | 81 |
| | | TOTAL | 240 | 177 | 189 | 207 | 202 | 775 |
| 4 | GEC, RAICHUR | ME | 60 | 7 | 13 | 13 | 26 | 59 |
| | GEC, RAICHUR | EC | 60 | 55 | 64 | 55 | 56 | 230 |
| | GEC, RAICHUR | CE | 60 | 39 | 48 | 58 | 61 | 206 |
| | GEC, RAICHUR | CS | 60 | 62 | 69 | 67 | 62 | 260 |
| | | TOTAL | 240 | 163 | 194 | 193 | 205 | 755 |
| 5 | GEC,, Kushalnagara | CE | 60 | 34 | 42 | 57 | 46 | 179 |
| | GEC,, Kushalnagara | EC | 60 | 63 | 68 | 68 | 59 | 258 |
| | GEC,, Kushalnagara | CS | 60 | 63 | 66 | 68 | 63 | 260 |
| | GEC,, Kushalnagara | ME | 60 | 20 | 23 | 22 | 44 | 109 |
| | | TOTAL | 240 | 180 | 199 | 215 | 212 | 806 |
| 6 | GEC,, GANGAVATHI | CS | 60 | 58 | 61 | 60 | 46 | 225 |
| | GEC,, GANGAVATHI | CE | 60 | 20 | 18 | 25 | 23 | 86 |
| | GEC,, GANGAVATHI | EC | 60 | 39 | 63 | 47 | 39 | 188 |
| | GEC,, GANGAVATHI | EE | 60 | 31 | 59 | 53 | 41 | 184 |
| | GEC,, GANGAVATHI | ME | 60 | 2 | 6 | 3 | 14 | 25 |
| | | TOTAL | 300 | 150 | 207 | 188 | 163 | 708 |
| 7 | GEC,, Talakal | CE | 60 | 35 | 51 | 39 | 52 | 177 |
| | GEC,, Talakal | CS | 60 | 57 | 66 | 64 | 64 | 251 |
| | GEC,, Talakal | EE | 60 | 47 | 65 | 64 | 52 | 228 |
| | GEC,, Talakal | EC | 60 | 62 | 65 | 65 | 56 | 248 |
| | GEC,, Talakal | ME | 60 | 14 | 26 | 21 | 18 | 79 |
| | | TOTAL | 300 | 215 | 273 | 253 | 242 | 983 |
| 8 | GEC, CHALLAKERE | AIML | 60 | 59 | 63 | 62 | 60 | 244 |
| | GEC, CHALLAKERE | CS | 60 | 63 | 64 | 65 | 0 | 192 |
| | GEC, CHALLAKERE | AT | 60 | 16 | 22 | 10 | 20 | 68 |
| | | TOTAL | 180 | 138 | 149 | 137 | 80 | 504 |

| ಕ್ರ. ಸಂ | ಸಂಸ್ಥೆಯ ಹೆಸರು | ಕೋರ್ಸ್ | ಇಂಟೇಕ್ | ಪ್ರಥಮ ವರ್ಷ | ದ್ವಿತೀಯ ವರ್ಷ | ತೃತೀಯ ವರ್ಷ | ನಾಲ್ಕನೇ ವರ್ಷ | ಒಟ್ಟು ವಿದ್ಯಾರ್ಥಿಗಳು |
|---|---|---|---|---|---|---|---|---|
| 9 | GEC, MOSALE HOSAHALLI | CS | 60 | 62 | 67 | 69 | 71 | 269 |
| | GEC, MOSALE HOSAHALLI | CE | 60 | 23 | 46 | 54 | 63 | 186 |
| | GEC, MOSALE HOSAHALLI | EC | 60 | 62 | 69 | 69 | 72 | 272 |
| | GEC, MOSALE HOSAHALLI | EE | 60 | 52 | 70 | 69 | 67 | 258 |
| | GEC, MOSALE HOSAHALLI | ME | 60 | 23 | 15 | 22 | 55 | 115 |
| | | TOTAL | 300 | 222 | 267 | 283 | 328 | 1100 |
| 10 | GEC, Hassan | CS | 120 | 126 | 69 | 72 | 69 | 336 |
| | GEC, Hassan | EC | 60 | 63 | 70 | 70 | 69 | 272 |
| | GEC, Hassan | ME | 60 | 53 | 69 | 53 | 62 | 237 |
| | GEC, Hassan | CE | 60 | 54 | 67 | 68 | 53 | 242 |
| | GEC, Hassan | AIML | 60 | 62 | 0 | 0 | 0 | 62 |
| | | TOTAL | 360 | 358 | 275 | 263 | 253 | 1149 |
| 11 | GEC, K.R Pete | CS | 60 | 63 | 68 | 65 | 69 | 265 |
| | GEC, K.R Pete | CE | 60 | 35 | 61 | 57 | 59 | 212 |
| | GEC, K.R Pete | EC | 60 | 62 | 69 | 62 | 62 | 255 |
| | GEC, K.R Pete | ME | 60 | 24 | 26 | 25 | 46 | 121 |
| | | TOTAL | 240 | 184 | 224 | 209 | 236 | 853 |
| 12 | GEC, CHAMARAJNAGAR | CS | 60 | 55 | 66 | 68 | 58 | 247 |
| | GEC, CHAMARAJNAGAR | CE | 60 | 30 | 46 | 35 | 59 | 170 |
| | GEC, CHAMARAJNAGAR | EC | 60 | 57 | 66 | 64 | 60 | 247 |
| | GEC, CHAMARAJNAGAR | ME | 60 | 28 | 35 | 43 | 33 | 139 |
| | | TOTAL | 240 | 170 | 213 | 210 | 210 | 803 |
| 13 | GEC, HUVINAHADAGALI | CE | 60 | 22 | 15 | 30 | 38 | 105 |
| | GEC, HUVINAHADAGALI | CS | 60 | 61 | 65 | 61 | 60 | 247 |
| | GEC, HUVINAHADAGALI | EC | 60 | 54 | 68 | 59 | 51 | 232 |
| | GEC, HUVINAHADAGALI | ME | 60 | 7 | 13 | 8 | 14 | 42 |
| | | TOTAL | 240 | 144 | 161 | 158 | 163 | 626 |
| 14 | GOVT. SKSJTI, BANGALORE | CS | 60 | 58 | 66 | 66 | 64 | 254 |
| | GOVT. SKSJTI, BANGALORE | CE | 60 | 55 | 61 | 59 | 53 | 228 |
| | GOVT. SKSJTI, BANGALORE | EC | 60 | 62 | 68 | 64 | 62 | 256 |
| | GOVT. SKSJTI, BANGALORE | TX | 50 | 22 | 19 | 22 | 25 | 88 |
| | GOVT. SKSJTI, BANGALORE | ST | 20 | 8 | 13 | 8 | 5 | 34 |
| | | TOTAL | 250 | 205 | 227 | 219 | 209 | 860 |
| 15 | GEC, Bidar | CE | 30 | 27 | 0 | 0 | 0 | 27 |
| | GEC, Bidar | EC | 60 | 63 | 0 | 0 | 0 | 63 |
| | GEC, Bidar | AI&DS | 60 | 63 | 62 | 57 | 0 | 182 |
| | GEC, Bidar | CS&E | 60 | 63 | 61 | 65 | 0 | 189 |
| | | TOTAL | 210 | 216 | 123 | 122 | 0 | 461 |
| 16 | GEC, Nargund | AI&DS | 60 | 59 | 64 | 53 | 0 | 176 |
| | GEC, Nargund | CE | 30 | 14 | 0 | 0 | 0 | 14 |
| | GEC, Nargund | CS | 60 | 63 | 67 | 61 | 0 | 191 |
| | GEC, Nargund | EC | 60 | 61 | 0 | 0 | 0 | 61 |
| | | TOTAL | 210 | 197 | 131 | 114 | 0 | 442 |
| | | | 4030 | 3060 | 3236 | 3205 | 2926 | 12427 |

**ಅನುಬಂಧ-3**

ಪ್ರಸ್ತುತ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಗೌರವ ಧನ, ಕಟ್ಟಡ ವೆಚ್ಚ, ಸಾಮಾನ್ಯ ವೆಚ್ಚ, ಹಾಗೂ ಕಚೇರಿ ವೆಚ್ಚ ಸಿಬ್ಬಂದಿಗಳ ವಿವರಗಳು ಈ ಕೆಳಕಂಡಂತಿದೆ:

| ಕ್ರಸಂ | ಸಂಸ್ಥೆ | ಕಟ್ಟಡ ವೆಚ್ಚ ಭರಿಸಲು ಬಿಡುಗಡೆ ಮಾಡಲಾಗಿರುವ ಅನುದಾನ | ಅತಿಥಿ ಉಪನ್ಯಾಸಕರಗೌರವ ಧನ ಪಾವತಿಸಲು ಬಿಡುಗಡೆಗೊಳಿಸಲಾದ ಅನುದಾನ | ಸಾಮನ್ಯ ವೆಚ್ಚ |
|---|---|---|---|---|
| 1 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಚಾಮರಾಜನಗರ | 4.6 | 12.56 | 0.60 |
| 2 | ಎಸ್‌ಕೆಎಸ್‌ಜೆಟಿ ಸಂಸ್ಥೆ, ಬೆಂಗಳೂರು | 4.6 | 29.56 | 0.60 |
| 3 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ | 4.6 | 24.56 | 1.10 |
| 4 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೆ.ಆರ್. ಪೇಟೆ. | 4.6 | 28.56 | 0.60 |
| 5 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕುಶಾಲನಗರ | 4.6 | 48.56 | 0.60 |
| 6 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನ | 4.6 | 38.56 | 0.60 |
| 7 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ | 4.6 | 38.56 | 0.60 |
| 8 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕಾರವಾರ | 4.6 | 48.56 | 0.60 |
| 9 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹೂವಿನಹಡಗಲಿ | 4.6 | 48.56 | 0.60 |
| 10 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಯಚೂರು | 4.6 | 48.56 | 0.60 |
| 11 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಮೊಸಳೆಹೊಸಳ್ಳಿ | 4.6 | 42.56 | 1.10 |
| 12 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಗಂಗಾವತಿ | 4.6 | 64.56 | 0.60 |
| 13 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ತಳಕಲ್ | 7.6 | 64.56 | 0.60 |
| 14 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಚಳ್ಳಕೆರೆ. | 4.6 | 52.56 | 0.60 |
| 15 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಬೀದರ್. | 4.6 | 44.56 | 0.60 |
| 16 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ನರಗುಂದ. | 7.6 | 44.56 | 0.60 |
| | ಒಟ್ಟು | 79.6 | 679.96 | 10.6 |

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ, 16 ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸುಮಾರು 4,000 ಸೀಟುಗಳಿವೆ. ಆದರೆ, ಕೇವಲ 3,000 ಸೀಟುಗಳು ಭರ್ತಿಯಾಗಿರುತ್ತವೆ ಎಂದು ಹೇಳಿದರೆ, ಶೇಕಡ 75 ರಷ್ಟು ಸೀಟು ಭರ್ತಿಯಾಗಿ ಶೇಕಡ 25 ರಷ್ಟು ಸೀಟುಗಳು ಭರ್ತಿಯಾಗಿರುವುದಿಲ್ಲ. ಅದೇ ರೀತಿ, ಪೂರ್ಣ ನೀಡಿರುವುದನ್ನು ನೋಡಿದಾಗ, ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ಇವೊತ್ತಿನ ದಿವಸ ಸರ್ಕಾರಿ ಕಾಲೇಜುಗಳಲ್ಲಿ ಶುಲ್ಕ ಸುಮಾರು 19,000 ದಿಂದ 20,000 ರೂಪಾಯಿಗಳಷ್ಟು ಇದೆ. ಆದರೂ ಸಹ, ಶೇಕಡ 25 ರಷ್ಟು ಸೀಟುಗಳು ಖಾಲಿ ಇವೆಯೆಂದು ಹೇಳಿದರೆ ಅದಕ್ಕೆ ಕಾರಣ ಏನು? ಇವೊತ್ತಿನ ದಿವಸ ಸರ್ಕಾರಿ ಕಾಲೇಜುಗಳಲ್ಲಿ ಕೇವಲ 20,000 ರೂಪಾಯಿ ಶುಲ್ಕ ನಿಗದಿ ಮಾಡಿದರೂ ಸಹ, ಸೀಟುಗಳು ಭರ್ತಿಯಾಗುತ್ತಿಲ್ಲ. ಇನ್ನೊಂದು ಕಡೆ ಆ ಕಾಲೇಜುಗಳಿಗೆ, ಖಾಸಗಿ ಕಾಲೇಜುಗಳಲ್ಲಿ ಯಾರೆಲ್ಲಾ ವಿದ್ಯಾರ್ಥಿಗಳು ಹಣ ಕಟ್ಟುತ್ತಾರೆ, ಅಲ್ಲಿಂದ ವಿಟಿಯು ನಿಂದ ಶುಲ್ಕದ ರೂಪದಲ್ಲಿ ಹಣವನ್ನು ಸಂಗ್ರಹ ಮಾಡುತ್ತಾರೆ. ಆದರೆ ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ, ಖಾಸಗಿ ಕಾಲೇಜುಗಳಿಗೆ ಯೂನಿವರ್ಸಿಟಿಗಳಿಂದ ನಾವು ಯಾವುದೇ ರೀತಿಯ ಅನುದಾನವನ್ನು ಕೊಡುವುದಿಲ್ಲ ಎಂದು ಹೇಳುತ್ತಾರೆ. ಅದಕ್ಕೆ ಉತ್ತರ ನೀಡಬೇಕೆಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಡಾ: ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳುತ್ತಿರುವಂತಹ ವಿಚಾರ ಸರಿ ಇದೆ. ವೈದ್ಯಕೀಯ ಶಿಕ್ಷಣಕ್ಕೆ ಹೋಲಿಸಿದಾಗ, ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಇರತಕ್ಕಂತಹ ಒಂದು ಒತ್ತಡ ಏನೆಂದರೆ, ಕೌನ್ಸಿಲಿಂಗ್ ಮಾಡುವಂತಹ ಸಂದರ್ಭದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ವಿದ್ಯಾರ್ಥಿಗಳು ಮೊದಲ ಆದ್ಯತೆ ನೀಡುತ್ತಾರೆ. ಆದರೆ ಇಂಜಿನಿಯರಿಂಗ್ ವಿಚಾರ ಬಂದಾಗ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಆದ್ಯತೆಯಾಗಿ ಪರಿಗಣಿಸುವುದಿಲ್ಲ. ಅದಕ್ಕೆ, UVCE (University of Visvesvaraya College of Engineering) ಬಿಟ್ಟರೆ ಬೇರೆ ಕಾಲೇಜುಗಳನ್ನು ಆದ್ಯತೆಯಾಗಿ ಪರಿಗಣಿಸದೇ ಇರುವ ಬಗ್ಗೆ ನಾವು ಅಧ್ಯಯನ ಮಾಡಿರುತ್ತೇವೆ. ಸರ್ಕಾರಿ ಕಾಲೇಜುಗಳಲ್ಲಿ ಖಾಲಿ ಇರತಕ್ಕಂತಹ ಸೀಟುಗಳು ಭರ್ತಿಯಾಗುವುದಕ್ಕೆ ಏನು ಮಾಡಬೇಕು ಎನ್ನುವುದಕ್ಕೆ ಈಗಾಗಲೇ ನಾವು ಒಂದು ಹೊಸ ಪ್ರಯತ್ನವನ್ನು ಪ್ರಾರಂಭ ಮಾಡಿದ್ದೇವೆ. ಅದರಂತೆ, ಕೌಶಲ್ಯಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. Within the course duration ನಲ್ಲಿ ಕೌಶಲ್ಯಕ್ಕೆ ಆದ್ಯತೆ ಕೊಡಬೇಕೆಂದು ಚಿಂತನೆ ಮಾಡಿದ್ದೇವೆ. ಅದಕ್ಕಾಗಿ, ವರ್ಲ್ಡ್ ಬ್ಯಾಂಕ್ ಮುಖಾಂತರ ಸಾಲ ಪಡೆಯುವುದಕ್ಕೆ ಈಗಾಗಲೇ ಸರ್ಕಾರ ಅನುಮತಿ ನೀಡಿದ್ದು, ನಾವು ಈಗ ಅದನ್ನು ಪ್ರೋಸೆಸ್

ಮಾಡುತ್ತಿದ್ದೇವೆ. ಖಾಸಗಿ ಸಂಸ್ಥೆಗಳಲ್ಲಿ ಕೌಶಲ್ಯ ತರಬೇತಿಗೆ ಏನೇನು ವ್ಯವಸ್ಥೆಗಳನ್ನು ಮಾಡಿದ್ದಾರೆ, ಆ ವ್ಯವಸ್ಥೆಗಳನ್ನು ಸರ್ಕಾರಿ ಕಾಲೇಜುಗಳಲ್ಲಿಯೂ ಸಹ ಮಾಡುವ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದೆ. ಟೊಯೋಟಾ ಅವರ ಮುಖಾಂತರ 'Centre of Excellence' ಈಗ 11 ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಾರಂಭವಾಗುತ್ತದೆ. ಈಗಾಗಲೇ 5 ಕಾಲೇಜುಗಳಲ್ಲಿ establish ಆಗಿರುತ್ತದೆ. ಅದರಂತೆ, ಟೊಯೋಟಾ ಕಂಪನಿಯ ಇಂಜಿನ್ ಅನ್ನು ಸದರಿ ಕಾಲೇಜುಗಳಿಗೆ ಕೊಟ್ಟು, ತಂತ್ರಜ್ಞಾನವನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡತಕ್ಕಂತಹ ನಿಟ್ಟಿನಲ್ಲಿ ಪ್ರಾರಂಭಿಕವಾಗಿ ಕ್ರಮ ತೆಗೆದುಕೊಂಡಿದ್ದೇವೆ. ಆದರೆ, ಮುಂದಿನ ದಿನಗಳಲ್ಲಿ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿರುವಂತಹ ವ್ಯವಸ್ಥೆ ಅಂದರೆ, ಸ್ಯಾಮ್‌ಸಂಗ್ ಇರಬಹುದು ಅಥವಾ ಬೇರೆ ಬೇರೆ Schneider Company ಇರಬಹುದು, ಈ ರೀತಿ ಬೇರೆ ಬೇರೆ ಸಂಸ್ಥೆಗಳು ಅವರದ್ದೇ ಆದಂತಹ 'Centre of Excellence' ಆಗಿರಬಹುದು ಅಥವಾ 'Academic Exellence Centre' ಇರಬಹುದು, ಅದು ಬೇರೆ ಬೇರೆ ಹೆಸರಿನಲ್ಲಿದೆ. ಈಗಾಗಲೇ ನಾವು ಈ ವಿಷಯಕ್ಕೆ ಸಂಬಂಧಿಸಿದಂತೆ, ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಒಟ್ಟಾರೆಯಾಗಿ ರಾಜ್ಯದಲ್ಲಿ ವಿಸ್ತೃತವಾಗಿ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಿಗೆ course duration ನೊಳಗೆ ಅವರಿಗೆ ಟ್ರೈನಿಂಗ್ ಪ್ರೋಗ್ರಾಮ್ ಕೊಡಬೇಕು ಮತ್ತು ಅದಕ್ಕೆ ಕ್ರೆಡಿಟ್ಸ್ ಕೊಡಬೇಕೆಂದು ಒಂದು ಪ್ರಯತ್ನ ಮಾಡುತ್ತಿದ್ದೇವೆ. ಅದನ್ನು ಹಂತ ಹಂತವಾಗಿ ಇಡೀ ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅಷ್ಟೆ ಅಲ್ಲದೇ, ಖಾಸಗಿ ಕಾಲೇಜು ವ್ಯವಸ್ಥೆಯಲ್ಲಿ ಇಲ್ಲದೇ ಇರುವಂತಹ ತರಬೇತಿಯನ್ನು ಸರ್ಕಾರಿ ಕಾಲೇಜುಗಳಲ್ಲಿ ತರಬೇಕು ಎನ್ನುವಂಥ ಪ್ರಯತ್ನ ಮಾಡುತ್ತಿದ್ದೇವೆ. ಅದು ಒಂದು ಭಾಗ. ಆ ಪ್ರಯತ್ನವನ್ನು ಮಾಡುವಾಗ, ತಾನೆ ತಾನಾಗಿ ಸರ್ಕಾರಿ ಕಾಲೇಜುಗಳಲ್ಲಿ ಪ್ರವೇಶಾತಿ ಆಗುವಂಥದ್ದು ಇದೆ. ಮಾನ್ಯ ಸದಸ್ಯರು ಈಗಾಗಲೇ, ಖಾಸಗಿ ಕಾಲೇಜುಗಳವರು ಶುಲ್ಕದ ಮುಖಾಂತರ VTU (Visvesvaraya Technological University) ಗೆ ಹಣ ಕೊಡುತ್ತಾರೆ ಎಂದು ಹೇಳಿರುತ್ತಾರೆ. ಆದರೆ, ಖಾಸಗಿ ಸಂಸ್ಥೆಗಳಿಗೆ ಸರ್ಕಾರ ಸಹಾಯ ಮಾಡುವಂಥ ಸಂದರ್ಭ ಒದಗಿ ಬರುವುದಿಲ್ಲ. ಈಗಾಗಲೇ VTU ಗಿಂತಲೂ ಹಿಂದೆಯೇ ಸ್ಥಾಪನೆ ಮಾಡಿದಂತಹ ಕೆಲವು ಇಂಜಿನಿಯರಿಂಗ್ ಕಾಲೇಜುಗಳಿಗೆ ಅನುದಾನವನ್ನು ಸರ್ಕಾರದಿಂದ ಕೊಡಿಸುವಂತಹ ಕೆಲಸ ಆಗಿದೆ. ಈ ಸಾಲಿನ ಆಯವ್ಯಯದಲ್ಲಿ ಟೆಕ್ನಿಕಲ್ ಕೋರ್ಸ್ ಮತ್ತು ಮೆಡಿಕಲ್ ಕೋರ್ಸುಗಳು ಇರುವಂತಹ ಕಾಲೇಜುಗಳಲ್ಲಿ ವಸತಿ ನಿಲಯಗಳ ನಿರ್ಮಾಣಕ್ಕಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯವರ ಜೊತೆ ಸೇರಿಕೊಂಡು VTU ನಿಂದ ಅನುದಾನವನ್ನು ಕೊಡುವಂಥದ್ದನ್ನು ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿರುತ್ತಾರೆ. ಆದುದರಿಂದ,

ಒಟ್ಟಾರೆಯಾಗಿ ತಾಂತ್ರಿಕ ಶಿಕ್ಷಣದ ಗುಣಮಟ್ಟವನ್ನು ಜಾಸ್ತಿ ಮಾಡುವಂತಹ ಒಂದು ಪ್ರಯತ್ನವನ್ನು ನಮ್ಮ ಸರ್ಕಾರ ಮಾಡುತ್ತಿದೆ ಮತ್ತು ವಿಶೇಷವಾಗಿ ಕೌಶಲ್ಯ ತರಬೇತಿಗೆ ಹೆಚ್ಚಿನ ಆದ್ಯತೆ ಕೊಡುವಂಥದ್ದು, ಇಂಡಸ್ಟ್ರಿ ಅಕಾಡೆಮಿಯ ಜಂಟಿ ಸಹಭಾಗಿತ್ವದಲ್ಲಿ ಸಿಲಬಸ್ ಗಳನ್ನು ಡೈನಾಮಿಕ್ ಸಿಲಬಸ್‌ಗಳಾಗಿ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲದೇ, ಇವೊತ್ತಿನ ದಿವಸ ಕೈಗಾರಿಕೆಗಳು ಅಪೇಕ್ಷೆ ಪಡುವಂತಹ ತರಬೇತಿಯನ್ನು ವಿದ್ಯಾರ್ಥಿಗಳಿಗೆ ಕೊಟ್ಟಾಗ ಮಾತ್ರ, ನಮ್ಮ ಸರ್ಕಾರಿ ಕಾಲೇಜುಗಳಲ್ಲಿ ಹೆಚ್ಚಿನ ಪ್ರವೇಶಾತಿಗಳು ಆಗುತ್ತದೆ. ಈ ರೀತಿಯ ಎಲ್ಲಾ ಅಗತ್ಯ ಕ್ರಮಗಳನ್ನು ನಾವು ತೆಗೆದುಕೊಂಡಿರುತ್ತೇವೆ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡುವುದೇನೆಂದರೆ, ಖಾಸಗಿ ಕಾಲೇಜುಗಳಿಗೆ ಈ ರೀತಿಯ ಸ್ವಾಯತ್ತ ಸಂಸ್ಥೆಗಳಿಂದ affiliation fees ನ್ನು ಸಂಗ್ರಹ ಮಾಡಬಾರದೆಂದು UGC guidelines ಇರುವುದಿಲ್ಲ. ಆದರೂ ಸಹ, ಸರ್ಕಾರದವರು ಖಾಸಗಿ ಕಾಲೇಜುಗಳಿಂದ ಶುಲ್ಕವನ್ನು ಸಂಗ್ರಹ ಮಾಡುತ್ತಿದ್ದಾರೆ. ಆ ರೀತಿ ಸಂಗ್ರಹ ಮಾಡಿದಂತಹ ಹಣವನ್ನು ಯಾವುದೇ ಖಾಸಗಿ ಕಾಲೇಜುಗಳಿಗೆ ಕೊಡುವುದಿಲ್ಲ. ಆದಾಗ್ಯೂ, ಅನುದಾನವನ್ನು ಖಾಸಗಿ ಕಾಲೇಜಿನ ಕಟ್ಟಡ ನಿರ್ಮಾಣಕ್ಕೆ ಕೇಳುವುದಿಲ್ಲ. ಬದಲಾಗಿ, ಬೇರೆ ಉದ್ದೇಶಗಳಿಗೆ ಅನುದಾನ ಕೊಡುವುದಿಲ್ಲವೆಂದರೆ ಹೇಗೆ? ಇನ್ನೊಂದು ವಿಚಾರವೇನೆಂದರೆ, ಖಾಸಗಿ ಕಾಲೇಜುಗಳಿಗೆ ಒಂದು ಶುಲ್ಕ ಇದ್ದರೆ, ಸರ್ಕಾರಿ ಕಾಲೇಜುಗಳಿಗೆ ಹಣವನ್ನು ಕೊಟ್ಟು, ಅವರೇ ಆ ಹಣದಿಂದ ಯೂನಿವರ್ಸಿಟಿ ಕಾಲೇಜುಗಳೇ ಖಾಸಗಿ ಕಾಲೇಜುಗಳವರಿಗೆ ಪೈಪೋಟಿ ನೀಡುತ್ತಿದ್ದಾರೆ. ಹಾಗಾಗಿ ನನ್ನ ಮನವಿ ಏನೆಂದರೆ, ಖಾಸಗಿ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳಿಗೆ ಯಾವ ಶುಲ್ಕವನ್ನು ನಿಗದಿ ಮಾಡಿದ್ದಾರೆ, ಅದನ್ನು ಯೂನಿವರ್ಸಿಟಿ ಶುಲ್ಕಗಳಿಗೆ ಕನೆಕ್ಟ್ ಮಾಡಿ on par ಒಂದೇ ರೀತಿಯ ಶುಲ್ಕ ಇರಬೇಕು. ಇಲ್ಲದೇ ಇದ್ದರೆ, ಖಾಸಗಿ ಕಾಲೇಜುಗಳವರಿಂದ ಶುಲ್ಕದ ರೂಪದಲ್ಲಿ ಪಡೆದುಕೊಂಡಂತಹ ಹಣದಲ್ಲಿ ಯೂನಿವರ್ಸಿಟಿ ಕಾಲೇಜುಗಳನ್ನು ತೆರೆದು, ಅಲ್ಲಿ ಸರ್ಕಾರಿ ಸೀಟುಗಳಲ್ಲಿ subsidize ಮಾಡಿ ಖಾಸಗಿ ಕಾಲೇಜುಗಳವರಿಗೆ ಪೈಪೋಟಿ ನೀಡುತ್ತಿದ್ದಾರೆ. ಜೊತೆಗೆ, ಸರ್ಕಾರಿ ಕಾಲೇಜುಗಳಲ್ಲಿ ಗುಣಮಟ್ಟ ಕೂಡ ಸರಿಯಾಗಿಲ್ಲವೆನ್ನುವುದನ್ನು ನಾವೆಲ್ಲರೂ ಇವೊತ್ತಿನ ದಿವಸ ನೋಡುತ್ತಿದ್ದೇವೆ. ಯೂನಿವರ್ಸಿಟಿ ಕಾಲೇಜುಗಳನ್ನು ಇವೊತ್ತಿನ ದಿವಸ ಏನು ಓಪನ್ ಮಾಡುತ್ತಿದ್ದಾರೆ, ಅಲ್ಲಿ ಖಾಸಗಿ ಕಾಲೇಜುಗಳು ಮತ್ತು ಯೂನಿವರ್ಸಿಟಿ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳಿಗೆ ಒಂದೇ ರೀತಿಯ ಶುಲ್ಕವನ್ನು ನಿಗದಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಡಾ|| ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದೇನೆಂದರೆ, VTU ನಲ್ಲಿ ಪೋಸ್ಟ್ ಗ್ರಾಜುಯೇಟ್ ಸೆಂಟರ್ ಜೊತೆಗೆ ಅಂಡರ್ ಗ್ರಾಜುಯೇಟ್ ಪ್ರೋಗ್ರಾಮ್ ಪ್ರಾರಂಭ ಮಾಡಿರುತ್ತಾರೆ. ಅದರಂತೆ, ಎರಡು constituent colleges ನ್ನು ಪ್ರಾರಂಭ ಮಾಡಿದ್ದಾರೆ. ಉದಾಹರಣೆಗೆ, ದಾವಣಗೆರೆ ಕಾಲೇಜು ಇರಬಹುದು ಮತ್ತು ಹೊಸದಾಗಿ ನಮ್ಮ ಕ್ಷೇತ್ರದಲ್ಲಿ ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳುತ್ತಿರುವುದೇನೆಂದರೆ, ಸರ್ಕಾರ ಶೇಕಡ 40 ರಷ್ಟು ಸೀಟುಗಳನ್ನು ಖಾಸಗಿ ಕಾಲೇಜುಗಳಿಂದ ತೆಗೆದುಕೊಳ್ಳುತ್ತೇವೆ, ಆ fee structure ನ್ನು ಯೂನಿವರ್ಸಿಟಿ ಕಾಲೇಜುಗಳಲ್ಲಿ ಅಳವಡಿಸಿ ಎಂದು ಹೇಳುತ್ತಿದ್ದಾರೆ.

(ಮುಂದು)

(152) 10.03.2025 11.20 ವೈಎಲ್-ಎಕೆ (ಸಭಾಪತಿಯವರ ಉಪಸ್ಥಿತಿ)

**ಡಾ|| ಎಂ.ಸಿ.ಸುಧಾಕರ್ (ಮುಂದು):-**

ಅಲ್ಲಿ ಏನಾಗಿದೆ ಎಂದರೆ, ಆರ್ಥಿಕ ಮುಗ್ಗಟ್ಟನ್ನು ಗಮನದಲ್ಲಿಟ್ಟುಕೊಂಡು ಕಳೆದ ವರ್ಷ ಶೇಕಡ 50 ರಷ್ಟು ಸೀಟ್‌ಗಳಿಗೆ ರೂ.48,000 ವರೆಗೂ ಸರ್ಕಾರಿ ಕಾಲೇಜ್‌ನಲ್ಲಿ ಕೊಡುವಂಥ ಶುಲ್ಕ ಏನಿದೆ, ಅಷ್ಟನ್ನೇ ನಿಗದಿ ಮಾಡಲಾಗಿದೆ ಹಾಗೂ ಶೇಕಡ 50 ರಷ್ಟು ಸೀಟ್ ಏನಿದೆ, ಅದನ್ನು ಸಹ ಎರಡು ಪಟ್ಟು ಹೆಚ್ಚಿಸುವಂಥ ಕೆಲಸ ಮಾಡಿದ್ದೇವೆ. ಈ ಸಂಬಂಧ ದಾವಣಗೆರೆಯ ಬಿ.ಡಿ.ಟಿ. ಕಾಲೇಜಿಗೆ ಯಾವುದೇ ವಿದ್ಯಾರ್ಥಿ ಸೇರ್ಪಡೆಗೊಳ್ಳುತ್ತಿಲ್ಲ ಎಂದು ಕೆಲವು ಕಡೆ ವಿರೋಧ ಬಂತು. ಆದರೆ, ಯಾವುದೇ ವಿದ್ಯಾರ್ಥಿಯಿಂದ ವಿರೋಧ ಬಂದಿಲ್ಲ. ಅದಲ್ಲದೇ ಬಹಳಷ್ಟು ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸುಮಾರು 13 ವರ್ಷಗಳಿಂದ ಸಿ ಅಂಡ್ ಆರ್ ರೂಲ್ಸ್ ಸಹ ಆಗಿರಲಿಲ್ಲ. ಟೆಕ್ನಿಕಲ್ ಕೋರ್ಸ್‌ನಲ್ಲಿ ಸಿ ಅಂಡ್ ಆರ್ ರೂಲ್ಸ್ ಅನ್ನು ತಿದ್ದುಪಡಿ ಮಾಡುವಂಥ ಕೆಲಸ ಮಾಡಿದ್ದೇವೆ. ಈ ಸಾಲಿನ ಬಜೆಟ್‌ನಲ್ಲಿ technical education and collegiate education ಇಲಾಖೆಗಳಲ್ಲಿ 2,000 ಅತಿಥಿ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗಿದೆ. ಈ ರೀತಿ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಏಕೆಂದರೆ, ಬಹಳಷ್ಟು ವರ್ಷಗಳಿಂದ ಇವೆಲ್ಲವೂ ನೆನೆಗುದ್ದಿಗೆ ಬಿದ್ದಿದ್ದು, ಈ ಸಮಸ್ಯೆಯನ್ನು ಪರಿಹಾರ ಮಾಡಿ, ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಮಂಜುನಾಥ್ ಭಂಡಾರಿಯವರು ಸಹ 'ಟೈಯರ್-2, ಟೈಯರ್-3 ಸಿಟಿಗಳಲ್ಲಿರುವ ಇಂಜಿನಿಯರಿಂಗ್ ಕಾಲೇಜಿನ ಮೇಲೆ ಒತ್ತಡ ಬೀಳುತ್ತದೆ' ಎಂಬ ಸಲುವಾಗಿ ಹೇಳಿದ್ದಾರೆ. ಇವತ್ತು ಗುಣಮಟ್ಟದ ಶಿಕ್ಷಣ ಬೇಕು ಎಂಬ ಕಾರಣಕ್ಕೆ

ಕೆಲವು ವಿಭಾಗಗಳಲ್ಲಿ ಟೈಯರ್-1 ಸಿಟಿಗಳಲ್ಲಿರುವ ಕಾಲೇಜಿನಲ್ಲಿ ಸುಮಾರು 1,000 ಅಥವಾ 2,000 ಸೀಟುಗಳಿಗೆ ಎ.ಐ.ಸಿ.ಟಿ.ಇ. ನವರು ಅನುಮೋದನೆ ನೀಡಿದ್ದಾರೆ. ಇವೆಲ್ಲವೂ ದೊಡ್ಡ ಮಟ್ಟದಲ್ಲಿನ ಪರಿಣಾಮವಾಗಿದೆ. ಒಟ್ಟಾರೆಯಾಗಿ ಸರ್ಕಾರದ ಹಂತದಲ್ಲಿಯೇ ವಿ.ಟಿ.ಯು. constituent ಕಾಲೇಜು ಇರಬಹುದು ಮತ್ತು ಸರ್ಕಾರಿ ಕಾಲೇಜಿನ ಗುಣಮಟ್ಟವನ್ನು ಹೆಚ್ಚಿಸುವುದರೊಂದಿಗೆ ಹೆಚ್ಚು ಆಕರ್ಷಿಸಲು ಪ್ರಯತ್ನ ಮಾಡುತ್ತಿದ್ದೇವೆ.

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿಯ ಮೇಲೆ ಮಾತನಾಡಲು ಅವಕಾಶ ಕಲ್ಪಿಸಿದರೆ ಅನುಕೂಲವಾಗುತ್ತದೆ.

**ಸಭಾಪತಿಯವರು:-** ಹಾಗಾದರೆ, ಅರ್ಧ ಗಂಟೆ ಕಾಲಾವಧಿಯ ಚರ್ಚೆಯ ಮೇಲೆ ಚರ್ಚಿಸಲು ಬರೆದು ಕಳುಹಿಸಿಕೊಡಿ.

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 47 (328)
ಸದಸ್ಯರ ಹೆಸರು : ಶ್ರೀ ಬಸವನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 10.03.2025
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ.ಸಂ | ಪ್ರಶ್ನೆ | ವಿವರ |
|---|---|---|
| ಅ) | 2022-23 ಹಾಗೂ 2023-24ನೇ ಸಾಲಿನಲ್ಲಿ ಸಾರ್ವತ್ರಿಕವಾಗಿ ಶಿಕ್ಷಕರು ವರ್ಗಾವಣೆಯಾದ ಪ್ರಯುಕ್ತ ಕಲ್ಯಾಣ ಕರ್ನಾಟಕ ಪ್ರದೇಶದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಖಾಯಂ ಶಿಕ್ಷಕರ ಕೊರತೆಯಿಂದ ಅತಿಥಿ ಶಿಕ್ಷಕರಿಂದ ಶಾಲೆಗಳಲ್ಲಿ ಪ್ರವಚನ ತರಗತಿಗಳು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ: | ಬಂದಿದೆ. |
| ಆ) | ಬಂದಿದ್ದರೇ, ಖಾಯಂ ಶಿಕ್ಷಕರ ನೇಮಕಾತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ: | ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸಲು ಹಾಗೂ ಆರ್.ಟಿ.ಇ ನಿಯಮಗಳನ್ವಯ 2021-22ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇದ್ದ ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8ನೇ ತರಗತಿ) 15000 ಹುದ್ದೆಗಳ ಪೈಕಿ ಈಗಾಗಲೇ 12285 ಅಭ್ಯರ್ಥಿಗಳನ್ನು ಕೌನ್ಸಿಲಿಂಗ್‌ಮೂಲಕ ಶಾಲೆಗಳಿಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.<br><br>ಪ್ರಸ್ತುತ ರಾಜ್ಯದಲ್ಲಿ ಬೋಧನೆಗೆ ಅವಶ್ಯಕತೆ ಇರುವ ಪಿಎಸ್‌ಟಿ ಮತ್ತು ಜಿಪಿಟಿ ವೃಂದದ ಖಾಲಿಯಿರುವ ಶಿಕ್ಷಕರ ಹುದ್ದೆಗಳಿಗೆ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತ ದೃಷ್ಟಿಯಿಂದ ಖಾಯಂ ಹುದ್ದೆ ಭರ್ತಿ ಆಗುವವರೆಗೂ ಅಥವಾ ಶೈಕ್ಷಣಿಕ ಸಾಲಿನ ಅಂತ್ಯದವರೆಗೂ ತಾತ್ಕಾಲಿಕವಾಗಿ ಒಟ್ಟು 35000 ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಂಡು ಶಿಕ್ಷಕರ ಕೊರತೆಯನ್ನು ನೀಗಿಸಲಾಗಿದೆ.<br><br>ಸರ್ಕಾರದ ಆದೇಶ ಸಂಖ್ಯೆ:ಇಪಿ 230 ಪಿಬಿಎಸ್ 2024, ದಿನಾಂಕ:07.10.2024 ರಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ 07 ಜಿಲ್ಲೆಗಳಲ್ಲಿ ಖಾಲಿಯಿರುವ ಪ್ರೌಢ ಶಾಲಾ ಸಹ ಶಿಕ್ಷಕರ ಒಟ್ಟು ಹುದ್ದೆಗಳಲ್ಲಿ 385 ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿರುತ್ತದೆ. |

| | | |
|---|---|---|
| | | ಸರ್ಕಾರದ ಪತ್ರ ಸಂಖ್ಯೆ:ಇಪಿ 14 ಎಲ್‌ಬಿಪಿ 2022, ದಿನಾಂಕ:13/09/2022ರ ಪತ್ರದಲ್ಲಿ ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿಯಿರುವ ವಿವಿಧ ವೃಂದದ ದೈಹಿಕ ಶಿಕ್ಷಣ ಶಿಕ್ಷಕರ 200 ಹುದ್ದೆಗಳು ಸೇರಿ ಒಟ್ಟು 2500 ಶಿಕ್ಷಕರುಗಳ ಹುದ್ದೆಗಳನ್ನು 15000 ಪದವೀಧರ ಪ್ರಾಥಮಿಕ ಶಾಲಾ ನೇಮಕಾತಿಯಲ್ಲಿ ಭರ್ತಿಯಾಗದೇ ಖಾಲಿ ಉಳಿದ ಹುದ್ದೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರವು ಅನುಮತಿ ನೀಡಿರುತ್ತದೆ.<br><br>ಆದರೆ ಸದರಿ 15000 ಹುದ್ದೆಗಳಲ್ಲಿ ಪ್ರೌಢಶಾಲಾ ಶಿಕ್ಷಕರುಗಳ ನೇಮಕಾತಿಗೆ 1648 ಹುದ್ದೆಗಳು ಮಾತ್ರ ಉಳಿದಿರುವ ಪ್ರಯುಕ್ತ ಪ್ರಸ್ತುತ ಸಾಲಿನಲ್ಲಿ ಒಟ್ಟು 2500 ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವ ಪ್ರಸ್ತಾವನೆಯ ಬಗ್ಗೆ, ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಿ4(1) ಸ.ಪ್ರೌ.ಶಾ.ಶಿನೇ / 46 / 2021-22/ಇ-1407683, ದಿನಾಂಕ:22/05/2024ರ ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದ್ದು, ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ.<br><br>ಸುತ್ತೋಲೆ ಸಂಖ್ಯೆ:ಸಿಆಸುಇ 388 ಸನೆನಿ 2024 ದಿನಾಂಕ:25.11.2024 ರನ್ವಯ ದಿನಾಂಕ:28.10.2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ರಾಜ್ಯ ಸಿವಿಲ್‌ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ಹೊರಡಿಸಬಾರದೆಂದು ಸೂಚಿಸಲಾಗಿದೆ. |
| ಇ) | ಪ್ರೌಢ ಶಾಲೆಗಳಲ್ಲಿ TALP ಅಡಿಯಲ್ಲಿ 2010 ರಿಂದ ಕಂಪ್ಯೂಟರ್ ಆಧಾರಿತ ತರಗತಿಗಳನ್ನು ನಡೆಸಲಾಗುತ್ತಿದ್ದು ಇದುವರೆಗೂ ಕಂಪ್ಯೂಟರ್ ಶಿಕ್ಷಕರನ್ನು ನೇಮಕ ಮಾಡಿಕೊಂಡಿಲ್ಲದಿರವುದರಿಂದ ವಿದ್ಯಾರ್ಥಿಗಳು ಕಂಪ್ಯೂಟರ್ | ಸರ್ಕಾರಿ ಪ್ರೌಢಶಾಲೆಗಳಲ್ಲಿ ಗಣಕಯಂತ್ರ ಲ್ಯಾಬ್‌ಗಳನ್ನು ನಿರ್ವಹಿಸಲು ಪ್ರತ್ಯೇಕ ತರಬೇತುದಾರರ ಹುದ್ದೆಗಳಿರುವುದಿಲ್ಲ. ಗಣಕಯಂತ್ರ ಲ್ಯಾಬ್‌ಹೊಂದಿರುವ ಟ್ಯಾಲ್ಪ್ ಶಾಲೆಗಳ ಶಿಕ್ಷಕರಿಗೆ ಬುನಾದಿ ಮತ್ತು ಪುನಶ್ಚೇತನ ತರಬೇತಿಯನ್ನು ನೀಡಲಾಗಿದ್ದು, ತರಬೇತಿ ಪಡೆದ ಶಿಕ್ಷಕರು ಗಣಕಯಂತ್ರ ಲ್ಯಾಬ್‌ಗಳನ್ನು ಬೋಧನಾ ಕಲಿಕಾ ಪ್ರಕ್ರಿಯೆಗೆ ಬಳಸುತ್ತಿದ್ದಾರೆ. |

| | | |
|---|---|---|
| | ಶಿಕ್ಷಣದಿಂದ ವಂಚಿತರಾಗುತ್ತಿರುವುದರಿಂದ ಕಂಪ್ಯೂಟರ್ ಶಿಕ್ಷಕರನ್ನು ನೇಮಿಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | |
| ಈ) | 2006 ಇಲ್ಲಿಯವರೆಗೆ ಪ್ರೌಢಶಾಲಾ ಸಹ ಶಿಕ್ಷಕರಿಗೆ ಉಪಾಸಕರಾಗಿ ಇಲ್ಲಿ ನೀಡಿಲ್ಲದಿರುವುದರಿಂದ ಪ್ರೌಢಶಾಲಾ ಸಹ ಶಿಕ್ಷಕರಿಗೆ ಯಾವಾಗ ಬಡ್ತಿ ನೀಡಲಾಗುವುದು? | ಪ್ರಸ್ತುತ ಪ್ರೌಢಶಾಲಾ ಸಹ ಶಿಕ್ಷಕರುಗಳಿಗೆ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡುವ ಕುರಿತಂತೆ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರ ಹಂತದಲ್ಲಿ ನಾಲ್ಕು ವಿಭಾಗಗಳ ಪ್ರೌಢ ಶಾಲಾ ಶಿಕ್ಷಕರುಗಳ ಪಟ್ಟಿಯನ್ನು ಪಡೆದು ಕ್ರೋಢೀಕರಿಸಲಾಗುತ್ತಿದ್ದು, ಒಂದೇ ಸಾಮಾನ್ಯ ಅರ್ಹತಾ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ಕ್ರಮವಹಿಸಲಾಗುತ್ತಿದೆ. ಪ್ರೌಢ ಶಾಲಾ ಸಹ ಶಿಕ್ಷಕರಿಗೆ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡುವ ಪ್ರಕ್ರಿಯೆಯ ಬಗ್ಗೆ ತ್ವರಿತವಾಗಿ ನಿಯಮಾನುಸಾರ ಕ್ರಮವಹಿಸಲಾಗುವುದು. |

**ಶ್ರೀ ಬಸವನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಸುಮಾರು 6,584 ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ 526 ಹುದ್ದೆಗಳಿಗೆ ದಿನಾಂಕ: 07.10.2021 ರಂದು ಅಧಿಸೂಚನೆ ಹೊರಡಿಸಲಾಗಿದೆ. ಆದರೆ, 6,584 ರಲ್ಲಿ ಇನ್ನೂ ಉಳಿದಿರುವ ಖಾಲಿ ಹುದ್ದೆಗಳನ್ನು ಪೂರ್ಣ ಮಾಡಬೇಕು. ಆ ನಿಟ್ಟಿನಲ್ಲಿ ಆದಷ್ಟು ಬೇಗ ಅಧಿಸೂಚನೆ ಹೊರಡಿಸಿ, ಹಣಕಾಸು ಇಲಾಖೆಯಿಂದ ಅನುಮೋದನೆ ಪಡೆದುಕೊಳ್ಳಬೇಕೆಂದು ಮಾನ್ಯ ಸಚಿವರಿಗೆ ತಿಳಿಯಪಡಿಸುತ್ತೇನೆ.

**ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಸಾಲಿನ ಬಜೆಟ್‌ನಲ್ಲಿ ಸಹ ತಿಳಿಸಲಾಗಿದೆ. ಕಲ್ಯಾಣ ಕರ್ನಾಟಕದಲ್ಲಿ ಶೇಕಡ 80 ರಷ್ಟು ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಗುಲ್ಬರ್ಗಾದಲ್ಲಿ ನಡೆದಂಥ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆತ್ತಿತ್ತು. ಅದರಂತೆ ಕಲ್ಯಾಣ ಕರ್ನಾಟಕ ಭಾಗದಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಹಾಗೂ ಬಡ್ತಿ ನೀಡುವ ಕೆಲಸವನ್ನು ಆದಷ್ಟು ಬೇಗ ತೀರ್ಮಾನ ಮಾಡಿ ಮುಗಿಸುತ್ತೇವೆ.

**ಶ್ರೀ ಬಸವನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಶಾಲೆಗಳಲ್ಲಿ ನೀಡುತ್ತಿರುವ ಕಂಪ್ಯೂಟರ್ ತರಬೇತಿ ಏನಿದೆ, ಅಲ್ಲಿ ಸಹ ಶಿಕ್ಷಕರ ಕೊರತೆ ಇದೆ. ಸರ್ಕಾರವು ಉಚಿತವಾಗಿ ಗಣಕಯಂತ್ರವನ್ನು ಶಾಲೆಗಳಿಗೆ ನೀಡಿದ್ದು, ಅದು ಸರಿಯಾದ ರೀತಿ ಉಪಯೋಗಕ್ಕೆ ಬಾರದೇ ತುಕ್ಕು ಹಿಡಿಯುತ್ತಿದೆ. ಹಾಗಾಗಿ, ವಿದ್ಯಾರ್ಥಿಗಳಿಗೆ ಗಣಕಯಂತ್ರದ ತರಬೇತಿ ನೀಡಲು ಶಿಕ್ಷಕರನ್ನು ನೇಮಿಸಬೇಕೆಂದು ಮಾನ್ಯ ಸಚಿವರಿಗೆ ಹೇಳಬಯಸುತ್ತೇನೆ.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಗಣಕಯಂತ್ರ ತರಬೇತಿಗಾಗಿ ಪ್ರತ್ಯೇಕ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದಿಲ್ಲ. ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ತರಬೇತಿ ನೀಡುವ ಪ್ಯಾಕೇಜ್ ಇರುವುದರಿಂದ ಆ ಶಿಕ್ಷಕರಿಗೆ ಗಣಕಯಂತ್ರದ ತರಬೇತಿ ಕಲ್ಪಿಸಿ ನಂತರ ಮಕ್ಕಳಿಗೆ ತರಬೇತಿ ಕೊಡುವಂಥ ಕೆಲಸವನ್ನು ಮಾಡಲಾಗುವುದು. ಆದರೆ, ಅವಶ್ಯಕತೆ ಇರುವಂಥ equipment use ಮಾಡುವಂತಹ ವ್ಯವಸ್ಥೆಯಲ್ಲಿ ಎಲ್ಲಾದರೂ ತೊಂದರೆಯಾದ ಪಕ್ಷದಲ್ಲಿ ತರಬೇತಿ ಕೊಡುವಂಥ ಕೆಲಸ ಮಾಡಲಾಗುವುದು. ಆದರೆ, ಕಂಪ್ಯೂಟರ್ ಬಗ್ಗೆ ಹೇಳಿಕೊಡಲು ಪ್ರತ್ಯೇಕ ಹುದ್ದೆಯನ್ನು ಭರ್ತಿ ಮಾಡಿಕೊಳ್ಳುವುದಿಲ್ಲ. ಹಾಲಿ ಶಿಕ್ಷಕರಿಗೆ ತರಬೇತಿ ಕಲ್ಪಿಸಿ, ವಿದ್ಯಾರ್ಥಿಗಳಿಗೆ ಹೇಳಿಕೊಡುವಂಥ ಕೆಲಸ ಮಾಡುತ್ತೇವೆ.

**ಶ್ರೀ ಬಸವನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯಲ್ಲಿಯೇ ಗಣಿತಶಾಸ್ತ್ರದಂಥ ವಿಷಯವನ್ನು ಹೇಳಿಕೊಡುವಂಥ ಶಿಕ್ಷಕರಿಗೆ ಗಣಿತಶಾಸ್ತ್ರದ ವಿಷಯವನ್ನು ಹೇಳಿಕೊಡುವುದೇ ಹೊರೆಯಾಗುತ್ತಿದ್ದು, ವಿದ್ಯಾರ್ಥಿಗಳಿಗೆ ಗಣಕಯಂತ್ರದ ತರಬೇತಿ ನೀಡುವ ಕಡೆ ಗಮನಹರಿಸುತ್ತಿಲ್ಲ.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ನೋಡಿ ಮಾಡುತ್ತೇವೆ.

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **372**
ಸದಸ್ಯರ ಹೆಸರು : ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 10-03-2025
ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಎಷ್ಟು ಮೆಗಾವ್ಯಾಟ್ ವಿದ್ಯುತ್ ಬೇಡಿಕೆ ಇದೆ; | ರಾಜ್ಯದಲ್ಲಿ 2024-25 ರಲ್ಲಿ ಅಂದಾಜಿಸಲಾದ ಬಳಕೆಯ ಬೇಡಿಕೆಯ ಪ್ರಮಾಣ 92082 ಮಿ.ಯೂ ಇದ್ದು, ಏಪ್ರಿಲ್-24 ರಿಂದ ಡಿಸೆಂಬರ್-24 ರ ಅಂತ್ಯದವರೆಗೆ (ಸರಾಸರಿ ದಿನವಹಿ ಬಳಕೆ) 235 ಮಿ.ಯೂ.ಗಳಾಗಿರುತ್ತದೆ. ರಾಜ್ಯವು ಈಗಾಗಲೇ 18,365 ಮೆಗಾವ್ಯಾಟ್‌ನ ಗರಿಷ್ಠ ಬೇಡಿಕೆಯನ್ನು ಪೂರೈಸಿದ್ದು, ಈ ಪ್ರಮಾಣವು 19,000 ಮೆಗಾವ್ಯಾಟ್ ಗೆ ಏರಿಕೆಯಾಗುವ ನಿರೀಕ್ಷೆಯಿದೆ. |
| ಆ) | ಇದರಲ್ಲಿ ಗೃಹಬಳಕೆ, ಗೃಹ ಜ್ಯೋತಿ ಯೋಜನೆಗೆ, ವಾಣಿಜ್ಯ ಸಂಪರ್ಕಗಳಿಗೆ ಹಾಗೂ ಕೈಗಾರಿಕಾ ಸಂಪರ್ಕಗಳಿಗೆ ಎಷ್ಟೆಷ್ಟು ಮೆಗಾವ್ಯಾಟ್ ಪೂರೈಕೆ ಮಾಡಲಾಗುತ್ತಿದೆ; ಒಂದು ವರ್ಷಕ್ಕೆ ಸದರಿ ಸಂಪರ್ಕಗಳಿಗೆ ತಗಲುವ ವಿದ್ಯುತ್ತಿನ ಮೊತ್ತವೆಷ್ಟು; | ಆರ್ಥಿಕ ವರ್ಷ-2023-24 ಹಾಗು ಆರ್ಥಿಕ ವರ್ಷ-2024-25 (ಜನವರಿ 2025 ರವರೆಗೆ) ನೇ ಸಾಲಿನಲ್ಲಿ ಗೃಹಬಳಕೆ (ಗೃಹ ಜ್ಯೋತಿ ಯೋಜನೆಯನ್ನೂ ಒಳಗೊಂಡಂತೆ). ಗೃಹ ಜ್ಯೋತಿ ಯೋಜನೆ, ವಾಣಿಜ್ಯ ಸಂಪರ್ಕಗಳಿಗೆ ಹಾಗೂ ಕೈಗಾರಿಕಾ ಸಂಪರ್ಕಗಳಿಗೆ ಪೂರೈಕೆ ಮಾಡಲಾಗಿರುವ ವಿದ್ಯುತ್ ಹಾಗೂ ವಿದ್ಯುತ್ ಮೊತ್ತದ ಕಂಪನಿವಾರು ವಿವರಗಳನ್ನು **ಅನುಬಂಧ**-1ರಲ್ಲಿ ಒದಗಿಸಲಾಗಿದೆ. |
| ಇ) | ರಾಜ್ಯದಲ್ಲಿ ಯಾವ ಯಾವ ಮೂಲದಿಂದ ಎಷ್ಟೆಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ; (ವಿವರಗಳನ್ನು ಒದಗಿಸುವುದು) | ರಾಜ್ಯದಲ್ಲಿ 2024-25 ನೇ ಸಾಲಿನಲ್ಲಿ(ಏಪ್ರಿಲ್ -24 ರಿಂದ ಡಿಸೆಂಬರ್-24 ರವರೆಗೆ) ವಿವಿಧ ಮೂಲಗಳಿಂದ ಲಭ್ಯವಾದ ವಿದ್ಯುತ್ ಪ್ರಮಾಣ ಈ ಕೆಳಕಂಡಂತಿವೆ: |

| ಕ್ರ ಸಂ | ವಿದ್ಯುತ್ತಿನ ಮೂಲಗಳು | ವಿದ್ಯುತ್ ಲಭ್ಯತೆ 2024-25 (ಏಪ್ರಿಲ್ -24 ರಿಂದ ಡಿಸೆಂಬರ್-24 ರವರೆಗೆ) ಮಿ.ಯೂ ಗಳಲ್ಲಿ (ತಾತ್ಕಾಲಿಕ) |
|---|---|---|
| 1 | ಜಲ ವಿದ್ಯುತ್ | 9893.15 |
| 2 | ಶಾಖೋತ್ಪನ್ನ (ಉಷ್ಣ ವಿದ್ಯುತ್) | 14356.41 |
| 3 | ಪವನ ವಿದ್ಯುತ್ | 7914.85 |
| 4 | ಸೌರ ವಿದ್ಯುತ್ | 7741.39 |
| 5 | ಕೇಂದ್ರ ಸರ್ಕಾರ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಘಟಕಗಳಿಂದ ರಾಜ್ಯದ ಪಾಲು | 18941.23 |
| 6 | ಇತರೆ ಮೂಲಗಳಿಂದ | |
| | ಕ್ಯಾಪ್ಟಿವ್ | 782.04 |
| | ಹೈಡಲ್(ಕೆಪಿಸಿಎಲ್) | 29.69 |
| | ಮಿನಿ ಹೈಡಲ್ | 1990.99 |
| | ಕೋ- ಜನರೇಷನ್ | 1339.89 |
| | ಬಯೋಮಾಸ್ | 11.99 |
| | ಹೈಬ್ರಿಡ್(Wind+solar) | 1323.87 |
| 7 | ಬೃಹತ್ ಐ.ಪಿ.ಪಿ. | 3473.55 |
| 8 | ಜಿಂದಾಲ್ | 724.36 |
| **9** | **ಒಟ್ಟು** | **68523.41** |

ಈ) ರಾಜ್ಯಧಲ್ಲಿ ವಿದ್ಯುತ್ ಕೊರತೆ ಇದೆಯೇ; ಇದ್ದಲ್ಲಿ ಎಷ್ಟು ಮೆಗಾವ್ಯಾಟ್ ಕೊರತೆ ಇದೆ ಹಾಗೂ ಕೊರತೆ ನೀಗಿಸಲು ಯಾವ ಯಾವ ಮೂಲಗಳಿಂದ ಹಾಗೂ ರಾಜ್ಯಗಳಿಂದ ಖರೀದಿಸಲಾಗುತ್ತಿದೆ;
ಖರೀದಿಗಾಗಿ ಒಂದು ಯೂನಿಟ್ ಒಂದು ಮೆಗಾವ್ಯಾಟ್‌ಗೆ ಎಷ್ಟು ಮೊತ್ತವನ್ನು
ನಿಗದಿಪಡಿಸಲಾಗಿದೆ;

ರಾಜ್ಯದಲ್ಲಿ ಪ್ರಸ್ತುತ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಸಲಾಗುತ್ತಿದೆ. ರಾಜ್ಯದಲ್ಲಿ ಉತ್ಪಾದನೆಯು ಕಡಿಮೆಯಾದಲ್ಲಿ, ಬ್ಯಾಂಕಿಂಗ್ ಸಿಸ್ಟಮ್ ನಲ್ಲಿ / ಮುಕ್ತ ಮಾರುಕಟ್ಟೆಯಲ್ಲಿ ವಿದ್ಯುತ್‌ನ್ನು ಪಡೆದು ಬೇಡಿಕೆಯನ್ನು ಪೂರೈಸಲಾಗುತ್ತದೆ.

ಈ ವರ್ಷ ರಾಜ್ಯದಲ್ಲಿ ಉತ್ತಮ ಮಳೆಯಾಗಿದ್ದು, ರಾಜ್ಯದ ವಿದ್ಯುತ್ ಜಲಾಶಯಗಳಲ್ಲಿ ನೀರಿನ ಲಭ್ಯತೆಯು ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಉತ್ತಮವಾಗಿದೆ. ಬೇಸಿಗೆಯಲ್ಲಿ ಏರಿಕೆಯಾಗುವ ವಿದ್ಯುತ್ ಬೇಡಿಕೆಯನ್ನು ಗಣನೆಗೆ ತೆಗೆದುಕೊಂಡು ಕೊರತೆ ನೀಗಿಸಲು ವಿದ್ಯುತ್ ವಿನಿಮಯ ಕೇಂದ್ರಗಳಿಂದ (Energy Exchanges) ದಿನವಹಿ ಆಧಾರದ ಮೇಲೆ ಬೇಡಿಕೆಗನುಗುಣವಾಗಿ ವಿದ್ಯುತ್ ಖರೀದಿ ಮಾಡಲಾಗುತ್ತಿದೆ.

1. ವಿದ್ಯುತ್ ವಿನಿಮಯ (Banking Arrangement) ಅಡಿಯಲ್ಲಿ ಇತರೆ ರಾಜ್ಯಗಳಿಂದ ಈ ಕೆಳಕಂಡಂತೆ ವಿದ್ಯುತ್ ಪಡೆಯಲಾಗುತ್ತಿದೆ.
   - ಪಂಜಾಬ್ ರಾಜ್ಯದಿಂದ

| ಕ್ರ.ಸಂ | ಅವಧಿ | ಪಂಜಾಬ್ ರಾಜ್ಯದಿಂದ ಪಡೆಯಲಾಗುತ್ತಿರುವ ವಿದ್ಯುತ್ ಪ್ರಮಾಣ (RTC) |
|---|---|---|
| 1 | 1-11-2024 ರಿಂದ 31-12-2024 | 50 MW |
| 2 | 01-01-2025 ರಿಂದ 31-01-2025 | 350 MW |
| 3 | 01-02-2025 ರಿಂದ 10-04-2025 | 531 MW |
| 4 | 11-04-2025 ರಿಂದ 15-04-2025 | 431 MW |
| 5 | 16-04-2025 ರಿಂದ 30-04-2025 | 200 MW |

- ಉತ್ತರ ಪ್ರದೇಶದಿಂದ 100 ಮೆ.ವ್ಯಾ. ನಿಂದ 1200 ಮೆ.ವ್ಯಾ ವರೆಗೆ ಬೆಳಿಗ್ಗೆ ಮತ್ತು ಸಂಜೆಯ Peak ವಿದ್ಯುತ್ ಬೇಡಿಕೆಗಾಗಿ ಡಿಸೆಂಬರ್-2024 ರಿಂದ ಮೇ-2025ರ ಅಂತ್ಯದವರೆಗೆ ವಿದ್ಯುತ್ ಪಡೆಯಲಾಗುತ್ತಿದೆ.

ಮುಂದುವರೆದು, ವಿದ್ಯುತ್ ವಿನಿಮಯ ಕೇಂದ್ರಗಳಿಂದ ಮುಂಗಡವಾಗಿ ವಿದ್ಯುತ್ ಖರೀದಿಯ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.

ಉ) ಪ್ರಸಕ್ತ ಸಾಲಿನಲ್ಲಿ ಎಷ್ಟು ಮೊತ್ತದ ಹಾಗೂ ಎಷ್ಟು ಮೆಗಾವ್ಯಾಟ್ ವಿದ್ಯುತ್ ಖರೀದಿಸಲಾಗಿದೆ;

ಪ್ರಸಕ್ತ ಸಾಲಿನಲ್ಲಿ (ಫೆಬ್ರವರಿ-2025 ರ ಅಂತ್ಯದವರೆಗೆ) ಎಷ್ಟು ಮೊತ್ತದ ಹಾಗೂ ಎಷ್ಟು ಮೆಗಾವ್ಯಾಟ್ ವಿದ್ಯುತ್ ಖರೀದಿಸಲಾಗಿರುವ ವಿವರವನ್ನು ಈ ಕೆಳಕಂಡಂತೆ ಒದಗಿಸಲಾಗಿದೆ.

**ವಿವಿಧ ವಿದ್ಯುತ್ ವಿನಿಮಯ ಕೇಂದ್ರಗಳಿಂದ ವಿದ್ಯುತ್ ಖರೀದಿ ಮಾಡಿದ ವೆಚ್ಚದ ವಿವರ: 2024-25 (ಫೆಬ್ರವರಿ-2025 ರ ಅಂತ್ಯದವರೆಗೆ)**

| ವಿನಿಮಯ ಕೇಂದ್ರಗಳ ಹೆಸರು | ಖರೀದಿಸಿರುವ ವಿದ್ಯುತ್ ಪ್ರಮಾಣ (MU ಗಳಲ್ಲಿ) | ಖರೀದಿ ಮಾಡಿದ ವೆಚ್ಚ (ರೂ. ಕೋಟಿಗಳಲ್ಲಿ) |
|---|---|---|
| IEX | 1497.92 | 881.06 |
| PXIL | 454.85 | 446.09 |
| HPX | 655.15 | 594.94 |
| ಒಟ್ಟು | 2607.92 | 1922.09 |

| | | |
|---|---|---|
| ಊ) | ಪ್ರಸ್ತುತ ರಾಜ್ಯದ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಎಷ್ಟು ಗಂಟೆಗಳ ಕಾಲ ವಿದ್ಯುತ್ ಪೂರೈಸಲಾಗುತ್ತಿದೆ; ಬೇಸಿಗೆ ಪ್ರಾರಂಭವಾಗುತ್ತಿರುವುದರಿಂದ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸಲು ಸರ್ಕಾರ ತೆಗೆದುಕೊಂಡಿರುವ ಮುನ್ನೆಚ್ಚರಿಕೆ ಕ್ರಮಗಳೇನು? (ವಿವರ ಒದಗಿಸುವುದು) | ರಾಜ್ಯದ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ತಾಂತ್ರಿಕ ಸಾಧ್ಯತೆ ಇರುವ ವಿದ್ಯುತ್ ಉಪ ಕೇಂದ್ರಗಳಿಂದ ಹಗಲಿನ ವೇಳೆಯಲ್ಲಿಯೇ ನಿರಂತರ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ.<br>ತಾಂತ್ರಿಕ ಸಾಧ್ಯತೆ ಇಲ್ಲದಿರುವ ವಿದ್ಯುತ್ ಉಪ ಕೇಂದ್ರಗಳಿಂದ ಪಾಳಿಯಲ್ಲಿ ಹಗಲಿನ ವೇಳೆಯಲ್ಲಿ 4 ಗಂಟೆಗಳ ಕಾಲ ಹಾಗೂ ರಾತ್ರಿಯ ವೇಳೆಯಲ್ಲಿ 3 ಗಂಟೆಗಳ ಕಾಲ ಒಟ್ಟು 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ.<br>ಅರಣ್ಯ ಪ್ರದೇಶದ ಮೂಲಕ ಹಾದುಹೋಗುವ ಕೃಷಿ ಫೀಡರ್‌ಗಳಿಗೆ ಹಗಲಿನ ವೇಳೆಯಲ್ಲಿಯೇ 7 ಗಂಟೆಗಳ ಕಾಲ ನಿರಂತರವಾಗಿ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.<br>ಅನಿವಾರ್ಯ ಸಂದರ್ಭಗಳಲ್ಲಿ, ವಿದ್ಯುತ್ ಜಾಲದಲ್ಲಿ ಅಡಚಣೆಯಾದಾಗ ಮಾತ್ರ ಅಲ್ಪ ಪ್ರಮಾಣದಲ್ಲಿ ವಿದ್ಯುತ್ ಕಡಿತ ಮಾಡಲಾಗುತ್ತದೆ.<br>ಬೇಸಿಗೆ ಸಮಯದಲ್ಲಿ ಸಮರ್ಪಕವಾಗಿ ವಿದ್ಯುತ್ ಪೂರೈಸಲು ಸಭೆಗಳನ್ನು ನಡೆಸಲಾಗಿದ್ದು, ಕೆಳಕಂಡಂತೆ ಸೂಚಿಸಲಾಗಿರುತ್ತದೆ.<br>1. ಸರ್ಕಾರದ ಆದೇಶದಂತೆ, ನೀರಾವರಿ ಪಂಪ್ ಸೆಟ್ ಗಳಿಗೆ ನಿಗದಿ ಅವಧಿಯಂತೆ ವಿದ್ಯುತ್ ಪೂರೈಕೆಯನ್ನು ನಿಯಂತ್ರಿಸುವುದು ಮತ್ತು ಸೋಲಾರ್ ಯೋಜನೆಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವುದು.<br>2. ಪಿ.ಸಿ.ಕೆ.ಎಲ್. ಮತ್ತು ಎಸ್.ಎಲ್.ಡಿ.ಸಿ.ಯವರು ಸಮನ್ವಯ ಸಾಧಿಸಿ ಸರ್ಕಾರದ ಅನುಮೋದನೆಯಂತೆ ವಿದ್ಯುತ್ ಖರೀದಿಗೆ ಅಗತ್ಯ ಕ್ರಮ ವಹಿಸುವುದು.<br>3. ಓವರ್ ಲೋಡ್ ಆಗಿರುವ, ಪ್ರಸರಣಾ ಮಾರ್ಗ, ಎಲ್ಲಾ ವೋಲ್ಟೇಜ್ ವರ್ಗದ ಉಪಕೇಂದ್ರಗಳನ್ನು ಗುರುತಿಸಿ, ವಿದ್ಯುತ್ ಹೊರೆಯನ್ನು ಬೇರೆ ಉಪಕೇಂದ್ರಗಳಿಗೆ ಬದಲಾಯಿಸಲು ಅಗತ್ಯವಿರುವ ಕ್ರಮ, Reconductoring, ಹೊಸ ಉಪಕೇಂದ್ರಗಳ ಸ್ಥಾಪನೆ ಮತ್ತು ಹಾಲಿ ಇರುವ ಉಪಕೇಂದ್ರಗಳ ಉನ್ನತೀಕರಣ ಮುಂತಾದವುಗಳಿಗೆ Action Plan ಸಿದ್ಧಪಡಿಸಿ, ಅದರಂತೆ ಕ್ರಮ ವಹಿಸುವುದು.<br>4. ವಿದ್ಯುತ್ ಸರಬರಾಜು ಕಂಪನಿಗಳು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಳ್ಳುತ್ತಿರುವ Sub Station/Line ಗಳ ಅನುಷ್ಠಾನ ಹಾಗೂ ಹಾಲಿಯಿರುವ Sub Station/Line ಗಳ ನಿರ್ವಹಣೆಯ ಬಗ್ಗೆ ನಿರಂತರ ಮಾಹಿತಿಯನ್ನು ಹೊಂದಿ, ನಿಗದಿತ ಸಮಯದಲ್ಲಿ ಅನುಷ್ಠಾನ ಮತ್ತು ನಿರ್ವಹಣೆ ಆಗುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು. |

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ದಿನೇಶ್ ಗೂಳಿಗೌಡ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:372ಕ್ಕೆ ಅನುಬಂಧ-1

ಆರ್ಥಿಕ ವರ್ಷ-2023-24 ಹಾಗೂ ಆರ್ಥಿಕ ವರ್ಷ-2024-25 (ಜನವರಿ 2025 ರವರೆಗೆ) ನೇ ಸಾಲಿನಲ್ಲಿ ಗೃಹಬಳಕೆ (ಗೃಹ ಜ್ಯೋತಿ ಯೋಜನೆಯನ್ನೂ ಒಳಗೊಂಡಂತೆ). ಗೃಹ ಜ್ಯೋತಿ ಯೋಜನೆ, ವಾಣಿಜ್ಯ ಸಂಪರ್ಕಗಳಿಗೆ ಹಾಗೂ ಕೈಗಾರಿಕಾ ಸಂಪರ್ಕಗಳಿಗೆ ಪೂರೈಕೆ ಮಾಡಲಾಗಿರುವ ವಿದ್ಯುತ್ ಹಾಗು ಅದರ ಬೇಡಿಕೆಯ ಕಂಪನಿವಾರು ವಿವರಗಳು ಈ ಕೆಳಕಂಡಂತಿವೆ:

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ:**

| ಕ್ರ. ಸಂ | ಪ್ರವರ್ಗ | ಆರ್ಥಿಕ ವರ್ಷ-2023-24 | | ಆರ್ಥಿಕ ವರ್ಷ-2024-25 (ಎಪ್ರಿಲ್ -24 ರಿಂದ ಜನವರಿ 2025 ರವರೆಗೆ) | |
|---|---|---|---|---|---|
| | | ವಿದ್ಯುತ್ ಬಳಕೆ ಮಿ.ಯೂ ಗಳಲ್ಲಿ | ವಾರ್ಷಿಕ ವಿದ್ಯುತ್ತಿನ ಮೊತ್ತ (ರೂ.ಕೋಟಿಗಳಲ್ಲಿ) | ವಿದ್ಯುತ್ ಬಳಕೆ ಮಿ.ಯೂ ಗಳಲ್ಲಿ | ವಾರ್ಷಿಕ ವಿದ್ಯುತ್ತಿನ ಮೊತ್ತ (ರೂ.ಕೋಟಿಗಳಲ್ಲಿ) |
| 1 | (ಅ) ಗೃಹಬಳಕೆ (ಗೃಹ ಜ್ಯೋತಿ ಯೋಜನೆಯನ್ನೂ ಒಳಗೊಂಡಂತೆ) | 9514.45 | 9165.29 | 8615.36 | 7177.08 |
| 2 | (ಗ) ಗೃಹ ಜ್ಯೋತಿ ಯೋಜನೆ | 2718.25 | 2633.83 | 3759.27 | 3559.89 |
| 3 | (ಆ) ವಾಣಿಜ್ಯ | 5922.42 | 8279.62 | 5180.76 | 6391.81 |
| 4 | (ಇ) ಕೈಗಾರಿಕಾ | 6889.89 | 7755.90 | 6006.41 | 6050.57 |

**ಮಂಗಳೂರು ವಿದ್ಯುತ್ ಸರಬರಾಜು ಕಂಪನಿ:**

| ಕ್ರ. ಸಂ | ಪ್ರವರ್ಗ | ಆರ್ಥಿಕ ವರ್ಷ-2023-24 | | ಆರ್ಥಿಕ ವರ್ಷ-2024-25 (ಎಪ್ರಿಲ್ -24 ರಿಂದ ಜನವರಿ 2025 ರವರೆಗೆ) | |
|---|---|---|---|---|---|
| | | ವಿದ್ಯುತ್ ಬಳಕೆ ಮಿ.ಯೂ ಗಳಲ್ಲಿ | ವಾರ್ಷಿಕ ವಿದ್ಯುತ್ತಿನ ಮೊತ್ತ (ರೂ.ಕೋಟಿಗಳಲ್ಲಿ) | ವಿದ್ಯುತ್ ಬಳಕೆ ಮಿ.ಯೂ ಗಳಲ್ಲಿ | ವಾರ್ಷಿಕ ವಿದ್ಯುತ್ತಿನ ಮೊತ್ತ (ರೂ.ಕೋಟಿಗಳಲ್ಲಿ) |
| 1 | (ಅ) ಗೃಹಬಳಕೆ (ಗೃಹ ಜ್ಯೋತಿ ಯೋಜನೆಯನ್ನೂ ಒಳಗೊಂಡಂತೆ) | 1857.92 | 1753.10 | 1652.48 | 1387.05 |
| 2 | (ಗ) ಗೃಹ ಜ್ಯೋತಿ ಯೋಜನೆ | 854.95 | 631.90 | 1073.19 | 861.91 |
| 3 | (ಆ) ವಾಣಿಜ್ಯ | 737.94 | 934.91 | 647.25 | 773.76 |
| 4 | (ಇ) ಕೈಗಾರಿಕಾ | 1117.68 | 1190.18 | 859.83 | 915.57 |

**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ:**

| ಕ್ರ. ಸಂ | ಪ್ರವರ್ಗ | ಆರ್ಥಿಕ ವರ್ಷ-2023-24 | | ಆರ್ಥಿಕ ವರ್ಷ-2024-25 (ಎಪ್ರಿಲ್ -24 ರಿಂದ ಜನವರಿ 2025 ರವರೆಗೆ) | |
|---|---|---|---|---|---|
| | | ವಿದ್ಯುತ್ ಬಳಕೆ ಮಿ.ಯೂ ಗಳಲ್ಲಿ | ವಾರ್ಷಿಕ ವಿದ್ಯುತ್ತಿನ ಮೊತ್ತ (ರೂ.ಕೋಟಿಗಳಲ್ಲಿ) | ವಿದ್ಯುತ್ ಬಳಕೆ ಮಿ.ಯೂ ಗಳಲ್ಲಿ | ವಾರ್ಷಿಕ ವಿದ್ಯುತ್ತಿನ ಮೊತ್ತ (ರೂ.ಕೋಟಿಗಳಲ್ಲಿ) |
| 1 | (ಅ) ಗೃಹಬಳಕೆ (ಗೃಹ ಜ್ಯೋತಿ ಯೋಜನೆಯನ್ನೂ ಒಳಗೊಂಡಂತೆ) | 1366.68 | 1346.38 | 1293.44 | 1284.38 |
| 2 | (ಗ) ಗೃಹ ಜ್ಯೋತಿ ಯೋಜನೆ | 693.69 | 615.92 | 1011.36 | 906.64 |
| 3 | (ಆ) ವಾಣಿಜ್ಯ | 566.71 | 754.47 | 518.97 | 639.69 |
| 4 | (ಇ) ಕೈಗಾರಿಕಾ | 1182.03 | 1354.65 | 988.14 | 1069.12 |

## ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ:

| ಕ್ರ.ಸಂ | ಪ್ರವರ್ಗ | ಆರ್ಥಿಕ ವರ್ಷ-2023-24 | | ಆರ್ಥಿಕ ವರ್ಷ-2024-25 (ಏಪ್ರಿಲ್ -24 ರಿಂದ ಜನವರಿ 2025 ರವರೆಗೆ) | |
|---|---|---|---|---|---|
| | | ವಿದ್ಯುತ್ ಬಳಕೆ ಮಿ.ಯೂ ಗಳಲ್ಲಿ | ವಾರ್ಷಿಕ ವಿದ್ಯುತ್ತಿನ ಮೊತ್ತ (ರೂ.ಕೋಟಿಗಳಲ್ಲಿ) | ವಿದ್ಯುತ್ ಬಳಕೆ ಮಿ.ಯೂ ಗಳಲ್ಲಿ | ವಾರ್ಷಿಕ ವಿದ್ಯುತ್ತಿನ ಮೊತ್ತ (ರೂ.ಕೋಟಿಗಳಲ್ಲಿ) |
| 1 | (ಅ) ಗೃಹಬಳಕೆ (ಗೃಹ ಜ್ಯೋತಿ ಯೋಜನೆಯನ್ನೂ ಒಳಗೊಂಡಂತೆ) | 2145.00 | 2176.57 | 2007.26 | 1937.84 |
| 2 | 'ಗೃಹ ಜ್ಯೋತಿ' ಯೋಜನೆಗೆ | 973.00 | 994.37 | 1344.63 | 1374.19 |
| 3 | ವಾಣಿಜ್ಯ ಸಂಪರ್ಕಗಳು | 871.96 | 1093.48 | 751.36 | 893.51 |
| 4 | ಕೈಗಾರಿಕಾ ಸಂಪರ್ಕಗಳು | 1449.88 | 1689.99 | 1936.54 | 1294.46 |

## ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ:

| ಕ್ರ.ಸಂ | ಪ್ರವರ್ಗ | ಆರ್ಥಿಕ ವರ್ಷ-2023-24 | | ಆರ್ಥಿಕ ವರ್ಷ-2024-25 (ಏಪ್ರಿಲ್ -24 ರಿಂದ ಜನವರಿ 2025 ರವರೆಗೆ) | |
|---|---|---|---|---|---|
| | | ವಿದ್ಯುತ್ ಬಳಕೆ ಮಿ.ಯೂ ಗಳಲ್ಲಿ | ವಾರ್ಷಿಕ ವಿದ್ಯುತ್ತಿನ ಮೊತ್ತ (ರೂ.ಕೋಟಿಗಳಲ್ಲಿ) | ವಿದ್ಯುತ್ ಬಳಕೆ ಮಿ.ಯೂ ಗಳಲ್ಲಿ | ವಾರ್ಷಿಕ ವಿದ್ಯುತ್ತಿನ ಮೊತ್ತ (ರೂ.ಕೋಟಿಗಳಲ್ಲಿ) |
| 1 | (ಅ) ಗೃಹಬಳಕೆ (ಗೃಹ ಜ್ಯೋತಿ ಯೋಜನೆಯನ್ನೂ ಒಳಗೊಂಡಂತೆ) | 1047.69 | 1627.82 | 1756.78 | 1493.75 |
| 2 | 'ಗೃಹ ಜ್ಯೋತಿ' ಯೋಜನೆಗೆ | 724.84 | 678.74 | 1074.67 | 1015.00 |
| 3 | ವಾಣಿಜ್ಯ ಸಂಪರ್ಕಗಳು | 604.31 | 728.11 | 540.53 | 609.43 |
| 4 | ಕೈಗಾರಿಕಾ ಸಂಪರ್ಕಗಳು | 1541.36 | 1619.35 | 1129.44 | 1187.09 |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ದಿನೇಶ್ ಗೂಳಿಗೌಡ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:372ಕ್ಕೆ ಅನುಬಂಧ-2**

**ವಿದ್ಯುತ್ ಖರೀದಿಯನ್ನು ಈ ಕೆಳಕಂಡ ವರದಿಯಲ್ಲಿ ತಿಳಿಸಿರುವಂತೆ ಪಡೆಯಲಾಗುತ್ತದೆ.**

| ಕ್ರ. ಸಂ | ಅವಧಿ | ಖರೀದಿಸಿದ ವಿದ್ಯುತ್ ಪ್ರಮಾಣ (MW ಗಳಲ್ಲಿ) | ದರ ಪ್ರತಿ ಯೂನಿಟ್‌ಗೆ (ರೂ.ಗಳಲ್ಲಿ) |
|---|---|---|---|
| 1. | 24-01-2025 ರಿಂದ 31-01-2025 ರವರೆಗೆ | 100 | 6.75 |
| 2. | 01-02-2025 ರಿಂದ 28-02-2025 ರವರೆಗೆ | 300 ರಿಂದ 600 | 6.75 |
| 3. | 01-03-2025 ರಿಂದ 31-03-2025 ರವರೆಗೆ | 1000 | 6.75 |
| 4. | 01-04-2025 ರಿಂದ 30-04-2025 ರವರೆಗೆ | 1000 | 6.798 |
| 5. | 01-05-2025 ರಿಂದ 31-05-2025 ರವರೆಗೆ | 1000 | 6.87 |

**ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 'ರಾಜ್ಯದಲ್ಲಿ ಪ್ರಸ್ತುತ ಎಷ್ಟು ಮೆಗಾವ್ಯಾಟ್ ವಿದ್ಯುತ್ ಬೇಡಿಕೆ ಇದೆ' ಎಂಬ ಪ್ರಶ್ನೆಯನ್ನು ಕೇಳಿದ್ದು, ಮಾನ್ಯ ಸಚಿವರು 'ಈಗಾಗಲೇ 18,365 ಮೆಗಾವ್ಯಾಟ್‌ನ ಗರಿಷ್ಠ ಬೇಡಿಕೆಯನ್ನು ಪೂರೈಸಿದ್ದು, ಈ ಪ್ರಮಾಣವು 19,000 ಮೆಗಾವ್ಯಾಟ್‌ಗೆ ಏರಿಕೆಯಾಗುವ ನಿರೀಕ್ಷೆಯಿದೆ' ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಬಹಳ effective ಆಗಿ ಗ್ರಾಹಕರ ಬೇಡಿಕೆಯನ್ನು ಸಮರ್ಪಕವಾಗಿ ಸರಿದೂಗಿಸುತ್ತಿರುವುದಕ್ಕೆ ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ನನ್ನ 6 ಪ್ರಶ್ನೆಯಲ್ಲಿ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಎಷ್ಟು ಗಂಟೆಗಳ ಕಾಲ ವಿದ್ಯುತ್ ಪೂರೈಸಲಾಗುತ್ತಿದೆ; ಎಂದು ಕೇಳಿದ್ದು, '7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ' ಎಂದು ಹೇಳಿದ್ದಾರೆ. ಆದರೆ, ಈಗ ತಾನೇ ನನ್ನ ತಂದೆಯವರಿಗೆ ಕರೆ ಮಾಡಿದ್ದು, ನಮ್ಮ ಜಮೀನಿನಲ್ಲಿಯೂ ಎರಡು ಐ.ಪಿ. ಸೆಟ್‌ಗಳಿದ್ದು, 'ಹಗಲಿನ ವೇಳೆಯಲ್ಲಿ 4 ಗಂಟೆಗಳ ಕಾಲ ಹಾಗೂ ರಾತ್ರಿ 10.00 ಗಂಟೆಯಲ್ಲಿ 3 ಗಂಟೆಗಳ ಕಾಲ ವಿದ್ಯುತ್ ಇರುತ್ತದೆ' ಎಂದು ಹೇಳಿದರು. ಮಾನ್ಯ ಸಚಿವರು 7 ಗಂಟೆಗಳ ಕಾಲ ವಿದ್ಯುತ್ ಕಲ್ಪಿಸುತ್ತೇವೆ ಎಂದು ಹೇಳಿದ್ದಾರೆ. ಒಂದು ಎಕರೆ ಭತ್ತ ಬೆಳೆಯಬೇಕೆಂದರೆ 5 ರಿಂದ 7.5 ಹೆಚ್.ಪಿ. ಪಂಪ್‌ಸೆಟ್‌ನಲ್ಲಿ ಸುಮಾರು 10 ರಿಂದ 11 ಗಂಟೆಗಳ ಕಾಲ ನೀರನ್ನು

ಹಾಯಿಸಬೇಕು. ಹಾಗಾಗಿ, ಸುಮಾರು 3 ಎಕರೆ, 4 ಎಕರೆ ಜಮೀನುವುಳ್ಳವರಿಗೆ ಕೇವಲ 7 ಗಂಟೆಗಳ ಕಾಲ ವಿದ್ಯುತ್ ಕಲ್ಪಿಸಿದರೆ ಸಾಕಾಗುವುದಿಲ್ಲ. ರೈತರ ಪರವಾಗಿ ಇನ್ನು 2 ಗಂಟೆ ಹೆಚ್ಚಾಗಿ ಐ.ಪಿ. ಸೆಟ್‌ಗೆ ವಿದ್ಯುತ್ ಕಲ್ಪಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆಯೇ ಬೇಸಿಗೆ ಹಂಗಾಮಿನಲ್ಲಿ 15 ಲಕ್ಷ ಟನ್ ಆಹಾರ ಧಾನ್ಯಗಳನ್ನು ಉತ್ಪಾದನೆ ಮಾಡಬೇಕೆಂದು ಕೃಷಿ ಇಲಾಖೆ ಗುರಿಯನ್ನಿಟ್ಟುಕೊಂಡಿದೆ. ಸುಮಾರು ಐದೂವರೆ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ, ರಾಗಿ, ಕಬ್ಬು ಇತ್ಯಾದಿಗಳನ್ನು ರೈತರು ಬಿತ್ತನೆ ಮಾಡಿದ್ದಾರೆ. ಆ ಗುರಿಯನ್ನು ಮುಟ್ಟಲು ಸಮರ್ಪಕವಾದ ವಿದ್ಯುತ್ತನ್ನು ಮಾನ್ಯ ಸಚಿವರು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ 1901ನೇ ಇಸವಿಯಿಂದ ಇಲ್ಲಿಯವರೆಗೂ ಇದ್ದಂತಹ ಬಿಸಿಲಿನ ತಾಪಮಾನವನ್ನು ನೋಡಿದಾಗ ಈ ಬಾರಿ ಹೆಚ್ಚು ಬಿಸಿಲಿನ ತಾಪಮಾನ ಇರುತ್ತದೆ ಎಂದು ಭಾರತೀಯ ಅವಮಾನ ಇಲಾಖೆ ಹೇಳಿದ್ದೆ. ಹಾಗಾಗಿ, ರೈತರಿಗೆ ಈ ಸಲ ಯಾವುದೇ ತೊಂದರೆ ಇರದ ಹಾಗೆ ವಿದ್ಯುತ್ತನ್ನು ಸರಬರಾಜು ಮಾಡಿದರೆ, ಕೃಷಿ ಇಲಾಖೆ ಏನು ಗುರಿಯನ್ನು ಇಟ್ಟುಕೊಂಡಿದೆ ಅದನ್ನು ಪೂರೈಸಲು ಸಾಧ್ಯವಾಗುತ್ತದೆ. ಹಾಗಾಗಿ, ಇನ್ನೂ ಎರಡು ಗಂಟೆಗಳ ಕಾಲ ರೈತರಿಗೆ ಹೆಚ್ಚುವರಿ ವಿದ್ಯುತ್ತನ್ನು ಒದಗಿಸಬೇಕು. ರಾತ್ರಿ ವೇಳೆ ಒದಗಿಸುವ ವಿದ್ಯುತ್ತನ್ನು ಹಗಲಿನ ವೇಳೆ ಒದಗಿಸಬೇಕು. ಒಂದು ವೇಳೆ ರಾತ್ರಿ ವೇಳೆಯೇ ಕೊಡುವುದಾದರೆ 'ಆಧುನಿಕ ತಂತ್ರಜ್ಞಾನ' ಒದಗಿಸಬೇಕು. ಮಾನ್ಯ ಸಿ.ಟಿ.ರವಿ ಅಣ್ಣನವರು ಮಾತ್ರ ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸುತ್ತಿದ್ದಾರೆ. ಕೃಷಿ ಪಂಪ್‌ಸೆಟ್ ಉಪಯೋಗಿಸುತ್ತಿರುವಂಥವರು ಸುಮಾರು 30,00,000 ರೈತರಿದ್ದು, ಆ ಬಡ ರೈತರಿಗೆ 'ಸ್ಮಾರ್ಟ್ ಮೊಬೈಲ್' ನೀಡಿ, ಮನೆಯಲ್ಲಿಯೇ on and off ಮಾಡಿಕೊಳ್ಳುವ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಡಬೇಕು. ಮಾನ್ಯ ಕೆ.ಜೆ.ಜಾರ್ಜ್‌ರವರು ಬಹಳ ಉದಾರಿಯವರು ಮತ್ತು ಹೃದಯವಂಥವರು ರೈತರ ಪರವಾಗಿರುವವರಾಗಿದ್ದು, ರೈತರ ನೆರವಿಗೆ ಧಾವಿಸಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈಗ ಬಂದಿರುವ ಡಿಮ್ಯಾಂಡ್ ವಿಚಾರ ಹೇಳಿದ್ದು, ಈಗಾಗಲೇ 18,365 ಮೆಗಾವ್ಯಾಟ್‌ನ ಗರಿಷ್ಠ ಬೇಡಿಕೆಯನ್ನು ಪೂರೈಸಿದ್ದು, ಮುಂದಿನ ದಿನಗಳಲ್ಲಿ 19,000 ಮೆಗಾವ್ಯಾಟ್‌ಗೆ ಏರಿಕೆಯಾಗುವ ನಿರೀಕ್ಷೆಯಿದೆ. 7 ಗಂಟೆಗಳ ಕಾಲ ವಿದ್ಯುತ್ ಪೂರೈಸಲು ಯಾವುದೇ ಸಮಸ್ಯೆ ಇಲ್ಲ. ಅದಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದು, ಈಗಾಗಲೇ ಈ ಕುರಿತು ಒಪ್ಪಂದ ಮಾಡಿಕೊಂಡಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಒಂದು ನಿಮಿಷ. 7 ಗಂಟೆಗಳ ಕಾಲ ವಿದ್ಯುತ್ ಒದಗಿಸುತ್ತಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದ್ದು, ನಿನ್ನೆ ರಾತ್ರಿ 11 ಗಂಟೆಗೆ,...

**ಸಭಾಪತಿಯವರು:-** ಮಾನ್ಯ ಭೋಜೇಗೌಡರವರೇ, ಇದು ಪ್ರಶ್ನೋತ್ತರ ಅವಧಿಯಾಗಿದ್ದು, ಮಧ್ಯೆಯಲ್ಲಿ ಎದ್ದು ನಿಂತುಕೊಳ್ಳಬೇಡಿ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಉತ್ತರ ಪೂರ್ಣವಾಗಿ ನೀಡುವವರೆಗೂ ತಾವು ಸಮಾಧಾನದಿಂದ ಕುಳಿತುಕೊಂಡರೆ, ತಾವು ಕೇಳುವ ಪ್ರಶ್ನೆಗೂ ಉತ್ತರ ನೀಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಚಿವರೇ, ನಮ್ಮದು ಪ್ರಶ್ನೆ ಇಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ನನ್ನ ಕಡೆ ತಿರುಗಿಕೊಂಡು ಉತ್ತರ ಹೇಳಿ. ತಾವು ಆ ಕಡೆ ತಿರುಗಿಕೊಂಡರೆ, ಮತ್ತೆ ಮಾನ್ಯ ಭೋಜೇಗೌಡರವರು ಎದ್ದು ನಿಲ್ಲುತ್ತಾರೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಬೇಕಾದಷ್ಟು ವಿದ್ಯುತ್ availability ಇದೆ. ನಮಗೆ ಆಗುತ್ತಿರುವ ತೊಂದರೆ ಏನೆಂದರೆ, ಹಗಲಿನ ವೇಳೆಯೇ 7 ಗಂಟೆಗಳ ಕಾಲ ವಿದ್ಯುತ್ ನೀಡಬೇಕೆಂದು ಕೆಲವು ಕಡೆಯಿಂದ ಬೇಡಿಕೆ ಬರುತ್ತಿದೆ. ಮೊನ್ನೆ ದಿವಸ ವಿಧಾನಸಭೆಯಲ್ಲಿ ಸತತವಾಗಿ 7 ಗಂಟೆಗಳ ಕಾಲ ವಿದ್ಯುತ್ ಒದಗಿಸಬೇಡಿ, ಹಗಲು ವೇಳೆ 4 ಗಂಟೆಗಳ ಕಾಲ ವಿದ್ಯುತ್ ಕಲ್ಪಿಸಿ, ಸತತವಾದ ವಿದ್ಯುತ್ ಪೂರೈಕೆಯಿಂದ ಪಂಪ್‌ಸೆಟ್‌ಗಳು ಸುಟ್ಟು ಹೋಗುತ್ತವೆ ಎಂಬ ಕಾರಣಕ್ಕಾಗಿ ನಂತರ 3 ಗಂಟೆಗಳ ಕಾಲ ವಿದ್ಯುತ್ ಕಲ್ಪಿಸಿ ಮತ್ತು ನೀರು ಮೇಲಕ್ಕೆ ಬರಲು ಸ್ವಲ್ಪ ತಡವಾಗುತ್ತದೆ ಎಂದು ಕೇಳಿದರು. ಆದರೆ, ಇನ್ನು ಕೆಲವು ಕಡೆ ಸತತವಾಗಿ 7 ಗಂಟೆವರೆಗೂ ವಿದ್ಯುತ್ ಕಲ್ಪಿಸಿ, ಏತಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಮಂಡ್ಯ ಜಿಲ್ಲೆಯಲ್ಲಿ ಮಳೆ ಇಲ್ಲದ ಕಾರಣ ಮಂಡ್ಯದಲ್ಲಿ ಬೇಡಿಕೆ ಜಾಸ್ತಿಯಾಗಿದೆ. ಆದ್ದರಿಂದ ಒಂದೇ ಸಲ ವಿದ್ಯುತ್ ಕಲ್ಪಿಸಿದ್ದ ಪಕ್ಷದಲ್ಲಿ ಸಬ್-ಸ್ಟೇಷನ್‌ಗಳಿಗೆ ಸಾಮರ್ಥ್ಯ ಇಲ್ಲದ ಸಲುವಾಗಿ ಕೆಲವು ಸಮಯದ ನಂತರ ಸುಮಾರು 3 ಅಥವಾ 4 ಗಂಟೆಗಳ ಕಾಲ ವಿದ್ಯುತ್ ಒದಗಿಸುತ್ತಿದ್ದೇವೆ. ಅರಣ್ಯ ಪ್ರದೇಶಗಳಿಗೆ ಮಾತ್ರ ಆದಷ್ಟು ಹಗಲು ವೇಳೆಯೇ ಸತತವಾಗಿ 7 ಗಂಟೆಗಳ ಕಾಲ ವಿದ್ಯುತ್ ಕಲ್ಪಿಸಲು ಪ್ರಯತ್ನ ಮಾಡುತ್ತಿದ್ದೇವೆ. ಇವತ್ತು ನಾವು ಎಲ್ಲಾ ಕಡೆ ಸ್ಮಾರ್ಟ್ ಮೀಟರ್ ಏತಕ್ಕೆ ಹಾಕಲು ಹೋಗಲಿಲ್ಲವೆಂದರೆ, ಅದಕ್ಕೆ ಗ್ರಾಹಕರೇ ಹಣ ಭರಿಸಬೇಕಾಗುತ್ತದೆ. ಈಗಾಗಲೇ ಸರ್ಕಾರದಿಂದ

ಒಂದು ವರ್ಷಕ್ಕೆ ಐ.ಪಿ. ಸೆಟ್‌ಗಳಿಗೆ ಸುಮಾರು ರೂ. 19,000 ಕೋಟಿ, ರೂ.20,000 ಕೋಟಿ ಕೊಡಲಾಗುತ್ತಿದೆ. ಅದಲ್ಲದೇ 'ಗೃಹಜ್ಯೋತಿ' ಸಹ ನೀಡಲಾಗುತ್ತಿದೆ. ಆದ್ದರಿಂದ ಈಗಾಗಲೇ ರೈತರೊಂದಿಗೆ ಒಪ್ಪಂದ ಮಾಡಿಕೊಂಡು 7 ಗಂಟೆಗಳ ಕಾಲ ವಿದ್ಯುತ್ ಪೂರೈಸಲಾಗುತ್ತದೆ. (ಮುಂದು)

(153) 10.03.2025/11.30/ಎಸ್‌ಕೆ-ಎಕೆ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಜೆ. ಜಾರ್ಜ್ (ಮುಂದು):-**

ಮಂಡ್ಯದಲ್ಲಿ ಕಬ್ಬು ಬೆಳೆಯ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಕಳೆದ ಬಾರಿ ರಾಯಚೂರಿನಲ್ಲಿ ರೈತರು ಬೆಳೆ ಕಟಾವು ಮಾಡುವ ಸಂದರ್ಭದಲ್ಲಿ ಒಂದೂವರೆ ತಿಂಗಳು ಅಥವಾ ಎರಡು ತಿಂಗಳಿಗೆ ಸ್ವಲ್ಪ ಹೆಚ್ಚಿಗೆ ವಿದ್ಯುತ್ ಬೇಕು ಎಂದು ಕೇಳಿದ್ದರು. ಅದೇ ರೀತಿ ಮಂಡ್ಯ ಜಿಲ್ಲೆಯಲ್ಲಿ ಕೂಡ ಬೆಳೆಯನ್ನು ಕಟಾವು ಸಮಯದಲ್ಲಿ ಹೆಚ್ಚಿಗೆ ವಿದ್ಯುತ್ ಜಾಸ್ತಿ ಬೇಕೆಂದರೆ, ಇದಕ್ಕೆ extra ಕೊಡುವುದಕ್ಕೆ ಏನಾದರೂ ಬರುತ್ತದೆಯಾ ಎಂಬ ಬಗ್ಗೆ ನಾನು ನಮ್ಮ ಇಲಾಖಾಧಿಕಾರಿಗಳೊಂದಿಗೆ ಮಾತನಾಡಿ, ಪರಿಶೀಲನೆ ಮಾಡುತ್ತೇನೆ. ನಾನು ಪ್ರಮಾಣ ಮಾಡುವುದಕ್ಕೆ ಹೋಗುವುದಿಲ್ಲ. ಅದನ್ನು ಪರಿಶೀಲನೆ ಮಾಡಿದ ನಂತರ ಉತ್ತರ ಕೊಡುತ್ತೇನೆ.

**ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಚಿವರೇ, ಇದಕ್ಕೆ ಏನಾದರೂ ದಯಮಾಡಿ ಕೊಡಬೇಕು. ಗೃಹಜ್ಯೋತಿ ಯೋಜನೆಯಡಿಯಲ್ಲಿ ನಾಲ್ಕು ವಿದ್ಯುತ್ ಕಂಪನಿಗಳಿಗೆ ಮುಂಗಡವಾಗಿ ಹಣವನ್ನು ಪೂರ್ಣ ಪ್ರಮಾಣದಲ್ಲಿ ಕೊಟ್ಟುಬಿಟ್ಟಿದ್ದೀರಿ. ಇದು ಸಮರ್ಪಕವಾಗಿ ಆಗುತ್ತಿದೆ. ಸರ್ಕಾರ ದಿವಾಳಿಯಾಗಿದೆ. ಸರ್ಕಾರದಲ್ಲಿ ದುಡ್ಡಿಲ್ಲ ಎಂದು ಆಗಾಗ ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರು ಎಂದು ಹೇಳುತ್ತಿರುತ್ತಾರೆ. ನಾಲ್ಕು ಕಂಪನಿಗಳಿಗೆ ಸಂಪೂರ್ಣವಾಗಿ ಹಣವನ್ನು ಪಾವತಿ ಮಾಡಿರುವ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

**ಶ್ರೀ ಕೆ.ಜೆ. ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, ನನಗೆ ಅಭಿನಂದನೆ ಸಲ್ಲಿಸುವುದು ಬೇಡ. ಅದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಬೇಕು. ಏಕೆಂದರೆ, ಗೃಹಜ್ಯೋತಿ ಯೋಜನೆಗೆ ಬಜೆಟ್‌ನಲ್ಲಿ ಪ್ರಾವಿಷನ್ ಮಾಡುತ್ತಾರೆ. ಅದಕ್ಕೆ ಮುಂಗಡವಾಗಿ ಅವರೇ ನಮ್ಮ ಇಲಾಖೆಗೆ ಕೊಡುತ್ತಿದ್ದಾರೆ. ಅದೇ ರೀತಿ ಐ.ಪಿ. ಸೆಟ್ ವಿಚಾರಕ್ಕೆ ಸಂಬಂಧಪಟ್ಟಂತೆ ಎರಡ್ಮೂರು ಸಮಸ್ಯೆಗಳಿವೆ. ಅದರ ಬಗ್ಗೆ ಮತ್ತೊಮ್ಮೆ ಮಾನ್ಯ ಸದಸ್ಯರ ಜೊತೆ ಮಾತನಾಡುತ್ತೇನೆ. ಈಗಾಗಲೇ ಅಕ್ರಮ-ಸಕ್ರಮದ regularize ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇನ್ನೂ ಒಂದು ವರ್ಷದಲ್ಲಿ ಎಲ್ಲಾ ಅಕ್ರಮ-ಸಕ್ರಮ ಹತೋಟಿಗೆ ಬಂದ ಮೇಲೆ ಮಾನ್ಯ ಸದಸ್ಯರನ್ನು ಕರೆದು

ಮಾತನಾಡುತ್ತೇನೆ. ಬಿ.ಜೆ.ಪಿ. ಉಪ ನಾಯಕರಾದ ಮಾನ್ಯ ಸುರೇಶ್‌ಗೌಡರವರು ಮೊನ್ನೆ ತಾನೇ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ಹಣ ಇರುವವರಿಗೆಲ್ಲಾ free ಕೊಡಬೇಡಿ. ಯಾರು ನಿಜವಾಗಿಯೂ ಇದ್ದಾರೋ, ಅವರಿಗೆ ಕೊಡಿ ಎಂದು ಹೇಳಿದ್ದಾರೆ. ಅದರ ವಿಚಾರವನ್ನು ಈಗ ಮಾತನಾಡುವುದಕ್ಕಾಗುವುದಿಲ್ಲ. ಈ ಅಕ್ರಮ-ಸಕ್ರಮ ಒಂದು ಹತೋಟಿಗೆ ಬಂದ ಮೇಲೆ ಮಾನ್ಯ ಸದಸ್ಯರೆಲ್ಲರನ್ನು ಕರೆದು ಮಾತನಾಡುತ್ತೇನೆ. 19,000, 20,000 ಮೆಗಾವ್ಯಾಟ್ ಕೊಡಬೇಕಾದರೆ, ನಾವು ಈಗಾಗಲೇ KUSUM (*Kisan Urja Suraksha evam Utthaan Mahabhiyan*) – C ಮತ್ತು KUSUM – B ಅನ್ನು ಮಾಡಿದ್ದೇವೆ. KUSUM – C ನಲ್ಲಿ ಈಗಾಗಲೇ ಸುಮಾರು 3,000 ಮೆಗಾವ್ಯಾಟ್‌ಗೆ ಟೆಂಡರ್ ಕರೆದಿದ್ದೇವೆ. ಆ substation ಎಲ್ಲಿದೆ? ಅಲ್ಲಿ ಒಂದು ಮೆಗಾವ್ಯಾಟ್‌ಗೆ ಮೂರುವರೆ-ನಾಲ್ಕು ಎಕರೆ ಜಾಗ ಬೇಕಾಗುತ್ತದೆ. ಆ substation capacity ಗೆ ಅದರ ಪ್ರಕಾರ land ಕೊಟ್ಟರೆ, ಅಲ್ಲಿಯೇ ವಿದ್ಯುತ್‌ನ್ನು ಉತ್ಪಾದನೆ ಮಾಡುತ್ತೇವೆ. ಅಲ್ಲಿಗೆ ಹಗಲು ಹೊತ್ತು ವಿದ್ಯುತ್ ಕೊಡುವುದಕ್ಕೆ ಅದನ್ನು ಮಾಡುತ್ತಿದ್ದೇವೆ. ಅಲ್ಲಿಗೆ ನಾನು ಎಂ.ಎಲ್.ಎ., ಮತ್ತು ಎಂ.ಎಲ್.ಸಿ.ಗಳು ಹಾಗೂ ನಾನು ಕೂಡ ಹೋಗುತ್ತಿದ್ದೇವೆ. ತಾವು ಮುತುವರ್ಜಿ ವಹಿಸಿದರೆ, ಅದು ಬೇಗ ಆಗುತ್ತದೆ. ಅದೇ ರೀತಿಯಲ್ಲಿ KUSUM – B ನಲ್ಲಿ ಶೇಕಡಾ 80 ರಷ್ಟು subsidy ಕೊಡುವುದಕ್ಕೆ ಈಗಾಗಲೇ ತೀರ್ಮಾನ ಮಾಡಿದ್ದೇವೆ. 12 ಜನ vendors ನ್ನು ಈಗಾಗಲೇ panel ಗೆ ಹಾಕಿದ್ದೇವೆ. ಕೃಷಿಕರು ಯಾರು ಬೇಕಾದರೂ ಅವರನ್ನು ನೇರವಾಗಿ contact ಮಾಡಿ, ಅವರನ್ನು engage ಮಾಡಿಕೊಳ್ಳಬಹುದು. ಅದರಲ್ಲಿ ಶೇಕಡಾ 80 ರಷ್ಟು farmers ಗೆ ನೀರು ಇರಬೇಕು ಮತ್ತು Yield Certificate ಇರಬೇಕು. ಬಾಕಿ ಪಂಪು ಸಮೇತ ಈ ಶೇಕಡಾ 80 ರಷ್ಟರಲ್ಲಿ ಬರುತ್ತದೆ. ಅವರು ಶೇಕಡಾ 20 ರಷ್ಟು ಮಾತ್ರ ಕೊಡಬೇಕಾಗುತ್ತದೆ. ಪಂಪು ಸಮೇತ ಉಚಿತವಾಗಿ ಸಿಗುತ್ತದೆ. ಉಳಿದೆಲ್ಲಾ ವ್ಯವಸ್ಥೆಗಳನ್ನು ಮಾಡುತ್ತೇವೆ. ಇವೆರಡು ಆದರೆ ಬಹುಶಃ ಸರ್ಕಾರಕ್ಕೆ ಒಳ್ಳೆಯದಾಗುತ್ತದೆ ಮತ್ತು ರೈತರಿಗೆ ಒಳ್ಳೆಯದಾಗುತ್ತದೆ. ಆ ರೀತಿಯಾದ ಕೆಲಸವನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಇನ್ನೂ ಒಂದು ವರ್ಷದಲ್ಲಿ ಬಹುಶಃ ಸ್ವಲ್ಪ ಮಟ್ಟಿಗೆ ಸಮಸ್ಯೆಗಳು ಬಗೆಹರಿಯುತ್ತದೆ.

**ಕರ್ನಾಟಕ ವಿಧಾನ ಪರಿಷತ್ತು**

| ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | **49 (447)** |
| ಸದಸ್ಯರ ಹೆಸರು | **ಶ್ರೀಮತಿ ಭಾರತಿ ಶೆಟ್ಟಿ** |
| ಉತ್ತರಿಸಬೇಕಾದ ದಿನಾಂಕ | **10.03.2025** |
| ಉತ್ತರಿಸುವವರು | **ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಒಟ್ಟು ಮರದ ಮಿಲ್ಲುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು | ರಾಜ್ಯದಲ್ಲಿ ಒಟ್ಟು 3471 ಪರವಾನಗಿ ಹೊಂದಿರುವ ಮರದ ಮಿಲ್ಲುಗಳಿರುತ್ತದೆ.<br>ವಿಭಾಗವಾರು ಪರವಾನಗಿ ಹೊಂದಿರುವ ಮರದ ಮಿಲ್ಲುಗಳ ಸಂಖ್ಯೆಯ ವಿವರಗಳನ್ನು **ಅನುಬಂಧ-1ರಲ್ಲಿ ಒದಗಿಸಿದೆ.** |
| ಆ) | ಕಳೆದ 02 ವರ್ಷಗಳಲ್ಲಿ ಮರದ ಮಿಲ್ಲುಗಳು ಅರಣ್ಯ ಇಲಾಖೆಯಿಂದ ಎಷ್ಟು ಮರಗಳನ್ನು ಖರೀದಿ ಮಾಡಿವೆ; (ಜಿಲ್ಲಾವಾರು ಮತ್ತು ಮರದ ಮಿಲ್ ಹೆಸರುಗಳೊಂದಿಗೆ ಮಾಹಿತಿಯನ್ನು ಒದಗಿಸುವುದು) | ಕಳೆದ 02 ವರ್ಷಗಳಲ್ಲಿ ಮರದ ಮಿಲ್ಲುಗಳು ಅರಣ್ಯ ಇಲಾಖೆಯಿಂದ ಇ-ಹರಾಜಿನಲ್ಲಿ ಒಟ್ಟು 4,81,685 ಘನ ಮೀಟರ್ ನಾಟಾ ಮತ್ತು ಇತರೆ ಅರಣ್ಯ ಉತ್ಪನ್ನಗಳನ್ನು ಖರೀದಿ ಮಾಡಿರುತ್ತವೆ.<br>ಕಳೆದ 02 ವರ್ಷದ ಅವಧಿಯಲ್ಲಿ ಖರೀದಿ ಮಾಡಿರುವ ಮರದ ಮಿಲ್ಲುಗಳ ಹೆಸರು ಮತ್ತು ಪ್ರಮಾಣದ ವಿವರಗಳನ್ನು **ಅನುಬಂಧ-2ರಲ್ಲಿ ಒದಗಿಸಿದೆ.** |
| ಇ) | ಅರಣ್ಯ ಇಲಾಖೆಯಿಂದ ಮರವನ್ನು ಖರೀದಿ ಮಾಡದೇ ಇದ್ದಲ್ಲಿ ಯಾವ ರೀತಿಯಾಗಿ ಮರಗಳನ್ನು ಖರೀದಿಸುತ್ತಿವೆ; (ವಿವರ ಒದಗಿಸುವುದು) | ಅರಣ್ಯ ಇಲಾಖೆಯಿಂದ ಮರವನ್ನು ಖರೀದಿ ಮಾಡದೇ ಇದ್ದಲ್ಲಿ, ಈ ಕೆಳಗೆ ನಮೂದಿಸಿದ ರೀತಿಯಲ್ಲಿ ಮರಗಳನ್ನು ಖರೀದಿ ಮಾಡಲಾಗುತ್ತದೆ.<br>1. ನೇರವಾಗಿ ರೈತರು ಮತ್ತು ಖಾಸಗಿ ವ್ಯಕ್ತಿಗಳು ಬೆಳೆದ ಮರಗಳನ್ನು ಖರೀದಿ ಮಾಡಲಾಗುತ್ತದೆ;<br>2. ಮರದ ದಿಮ್ಮಿಗಳನ್ನು ನೇರವಾಗಿ ಇತರೆ ರಾಜ್ಯಗಳಿಂದ ಹಾಗೂ ಹೊರ ದೇಶಗಳಿಂದಲೂ ಆಮದು ಮಾಡಿಕೊಳ್ಳಲಾಗುತ್ತದೆ. |
| ಈ) | ಕಳೆದ 02 ವರ್ಷಗಳಲ್ಲಿ ಅರಣ್ಯ ಇಲಾಖೆಯು ಎಷ್ಟು ಮರಗಳನ್ನು ಕತ್ತರಿಸಲು ಅನುಮತಿ ನೀಡಲಾಗಿದೆ; (ಮರಗಳ ವಿಧದೊಂದಿಗೆ (ಹೆಸರುಗಳೊಂದಿಗೆ) ಮಾಹಿತಿ ಒದಗಿಸುವುದು) | ಕಳೆದ 02 ವರ್ಷಗಳಲ್ಲಿ ಅರಣ್ಯ ಇಲಾಖೆಯು ಮರಗಳನ್ನು ಕತ್ತರಿಸಲು ಅನುಮತಿ ನೀಡಿರುವ ವಿವರಗಳು ಈ ಕೆಳಕಂಡಂತಿದೆ.<br>**ಮರಗಳ ಸಂಖ್ಯೆ**: 189241<br>**ಮರಗಳ ವಿಧ (ಹೆಸರು)**: ಸಾಗುವಾನಿ, ಹುಣಸೆ, ಬೀಟೆ, ರೈನ್‌ಟ್ರೀ, ಪೆಲ್ಟೋಫಾರಂ, ಬೇವು, ಹುಣಸೆ, ಗುಲ್ಮೊಹರ್, ಕಾಡು ಬಾದಾಮಿ, ಸಿಲ್ವರ್ ಓಕ್, ಬಾಗೆ, ಅರಳಿ, ಸುಬಾಬುಲ್, ನೇರಳೆ, ಕಾಡು ಜಾತಿ, ತಪಸಿ, ಶ್ರೀಗಂಧ, ಹೊಂಗೆ, ಹತ್ತಿ, ಅಶೋಕ, ಮಾವು, ಬಿಲ್ವ, ಬಣ್ಣಿ, ಬಸವನಪಾದ, ಹಲಸು, ಮತ್ತಿ, ನಂದಿ, ಕರಿಮತ್ತಿ, ಕವಲು, ತಡಸಾಲು, ಮುತ್ತಲ, ಹೆಡ್ಡಿ, ಬೇವು, ಟರ್ಮೈಡ್ಸ್, ಸಿಸ್ಸಂ, ಸ್ಪೆತೋಡಿಯಾ, ಅಕೇಶಿಯಾ, ನೀಲಿ, ಭೋಗಿ, ಬಿಲ್ವಾರ, ತಾರೆ, ಧೂಪ, ಬಲ್ಲಾಳೆ, ಹಡಗ, ಹವಳಿಗೆ, ಗರಿಗೆ ಹಾಗೂ ಇತರೆ ಕಾಡು ಜಾತಿ. |

**ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮರದ ಮಿಲ್ಲುಗಳು ಎಷ್ಟಿವೆ? ಮರಗಳ ನಾಟ ಮತ್ತು ಇತರ ಉತ್ಪನ್ನಗಳನ್ನು ಹರಾಜಿನಲ್ಲಿ ಖರೀದಿ ಮಾಡಿದ್ದಾರೆ ಎನ್ನುವ ಬಗ್ಗೆ ಉತ್ತರದಲ್ಲಿ ಉಲ್ಲೇಖವನ್ನು ಮಾಡಿದ್ದಾರೆ. ಇವರು ಹೇಳಿರುವ ಘನ ಮೀಟರ್ ನಾಟ ನಮಗೆ ಬೇಕಾದಷ್ಟು ಸಿಗದ ಕಾರಣ ಖಾಸಗಿ ವ್ಯಕ್ತಿಯವರಿಂದ ಆಮೇಲೆ ಅಂತರ ರಾಜ್ಯ ಮತ್ತು ಅಂತರ ರಾಷ್ಟ್ರೀಯಗಳಿಂದ ಮಿಲ್‌ಗಳು ಆಮದು ಮಾಡುತ್ತದೆ ಎನ್ನುವುದನ್ನು ಕೂಡ ಉಲ್ಲೇಖ ಮಾಡಿದ್ದಾರೆ. ಇವತ್ತು ಖಾಸಗಿ ರೈತರ ಹತ್ತಿರ ಹೆಚ್ಚು ಮರ ಇರುವುದಕ್ಕೆ ಸಾಧ್ಯವಿಲ್ಲ.

ನನ್ನ ಮನೆಯವರು Timber Contractor ಆಗಿರುವುದರಿಂದ ಬಹುಶಃ ನನಗೆ ಗೊತ್ತಿದೆ. ಈ ಹಿಂದೆ ಅಂದರೆ ನಲವತ್ತು-ನಲವತ್ತೈದು ವರ್ಷಗಳ ಹಿಂದೆ ನಾಟ ಅಧಿಕ ಪ್ರಮಾಣದಲ್ಲಿ ಸಿಗುತ್ತಿತ್ತು. ಈಗ ಸಿಗುವುದಿಲ್ಲ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ನಾಟಗಳು ಮಿಲ್‌ಗಳಿಗೆ ಬರುವುದನ್ನು ನಾವು ನೋಡುತ್ತಿದ್ದೇವೆ. ಅದೇ ರೀತಿ ಯಾವ ಮರಗಳಿವೆ ಎಂಬುದನ್ನು ಕೂಡ ಉತ್ತರದಲ್ಲಿ ಉಲ್ಲೇಖ ಮಾಡಿದ್ದಾರೆ. ಇವತ್ತು ಬಹಳ ದೊಡ್ಡ ಪ್ರಮಾಣದಲ್ಲಿ ಅದರ ಬೇಡಿಕೆ ಇದೆ. ಅರಣ್ಯದಿಂದ ಹರಾಜು ಮಾಡುವುದಲ್ಲದೇ, ರೈತರು ಕೂಡ ಬೆಳೆದಿದ್ದಲ್ಲದೇ, ಅಂತರ ರಾಷ್ಟ್ರೀಯ ಮಟ್ಟದಿಂದಲೂ ಇವತ್ತಿನ ದೊಡ್ಡ ಪ್ರಮಾಣದಲ್ಲಿ ಖರೀದಿ ಮಾಡುವಂತಹ ವ್ಯವಸ್ಥೆಯಲ್ಲಿ ಇದ್ದೇವೆ. ಶ್ರೀಗಂಧ ಮರವನ್ನು ಕೂಡ ಉಲ್ಲೇಖ ಮಾಡಿದ್ದಾರೆ. ಶ್ರೀಗಂಧ ಮರ ಎಲ್ಲಿ ನೋಡುವುದಕ್ಕೆ ಸಿಗುತ್ತಿಲ್ಲ. ಶ್ರೀಗಂಧದ ನಾಡು ಎಂದು ಹೇಳಿದ ಸಾಗರ, ಸೊರಬ ಭಾಗದಿಂದ ನಾನು ಬಂದವಳು ಇದ್ದೇನೆ. ಅಲ್ಲಿ ವಾಸನೆಯೂ ಕೂಡ ಇಲ್ಲದೇ ಇರುವಂತಹ ಸ್ಥಿತಿಯಲ್ಲಿ ನಾವಿದ್ದೇವೆ. ನನ್ನ ಕಳಕಳಿ ಇರುವುದೇನೆಂದರೆ, ತಮ್ಮ ಸಹಕಾರದಿಂದ ನಾವೆಲ್ಲರೂ ಕೂಡ ಅರಣ್ಯ ಪ್ರದೇಶವನ್ನು ವೀಕ್ಷಣೆ ಮಾಡಿದಂತಹ ಸಂದರ್ಭದಲ್ಲಿ ಶ್ರೀಮತಿ ಉಮಾಶ್ರೀ, ಶ್ರೀ ಐವನ್ ಡಿ'ಸೋಜಾ ಕೂಡ ಇದ್ದರು. ಪಶ್ಚಿಮ ಘಟ್ಟ ಅರಣ್ಯದಲ್ಲಿ ಅತ್ಯಂತ ಹೆಚ್ಚು ಮರಗಳು ಇರುವುದನ್ನು ಅರಣ್ಯ ಪ್ರದೇಶದಲ್ಲಿ ಇರಬೇಕೆಂಬುದರ ಬಗ್ಗೆ ನಾವು ನಿರೀಕ್ಷೆ ಮಾಡುತ್ತೇವೆ. ಕಬಿನಿ, ನಾಗರಹೊಳೆ ಹಾಗೂ ತೀರ್ಥಹಳ್ಳಿ ಅತ್ಯಂತ ಮಳೆ ಬೀಳುವಂತಹ ಪ್ರದೇಶ ಆಗುಂಬೆಯನ್ನು ಎರಡನೇ ಚಿರಾಪುಂಜಿ ಎಂದು ಕರೆಯುತ್ತೇವೆ. ಆ ಭಾಗದ ಅರಣ್ಯದೊಳಗೆ ಹೋಗಿ ನೋಡಿದರೆ, ಮರಗಳು ಎಲ್ಲವೂ ಖಾಲಿ. ಬಹುಶಃ ಮರಗಳು ವಿರಳವಾಗಿ ಇರುವುದನ್ನು ಕಾಣುತ್ತಿದ್ದೇವೆ. ಎರಡನೇ ಶನಿವಾರದಂದು ನಾನು ಬಿಳಿಗಿರಿ ರಂಗನ ಬೆಟ್ಟಕ್ಕೆ ಹೋಗಬೇಕೆಂದುಕೊಂಡಾಗ, ನಾವು ಎಷ್ಟೇ ಪ್ರಯತ್ನ ಪಟ್ಟರೂ ಕೂಡ ಯಾವ ಅಧಿಕಾರಿಗಳು ಕೂಡ ದೂರವಾಣಿಯಲ್ಲಿ ಸಿಗಲಿಲ್ಲ ಮತ್ತು ಮನವಿ ಮಾಡಿದರೂ ಕೂಡ ಆಗಲಿಲ್ಲ. ನಾವು ತಮಗೆ ಒಂದು ದೂರವಾಣಿ ಮಾಡಿದ ಕೂಡಲೇ ತಕ್ಷಣವೇ ಒಂದು ವ್ಯವಸ್ಥೆ ಅರಣ್ಯ ವೀಕ್ಷಣೆ ಮಾಡಲು ನಮಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮ್ಮ ಮೂಲಕ ನಾನು ಮಾನ್ಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆ ಅರಣ್ಯದೊಳಗೆ ಹೋದಾಗ, ಅಲ್ಲಿ ದಟ್ಟವಾದ ಮರಗಳು ಇದ್ದಿದ್ದು, ತುಂಬಾ ಚೆನ್ನಾಗಿತ್ತು. ನಾವು ಹೋಗಿರುವಂತಹ ಅರಣ್ಯ ಪ್ರದೇಶಗಳು ಯಾವ್ಯಾವುದು ಇದೆಯೋ, ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಬಹಳಷ್ಟು ಮರಗಳು ದೊಡ್ಡ ಪ್ರಮಾಣದಲ್ಲಿ ಕಟಾವು ಆಗುತ್ತದೆ. ಅದಕ್ಕೋಸ್ಕರ ತಾವು ಅಕ್ರಮವಾಗಿ ಮರಗಳನ್ನು ಕಟಾವು ಮಾಡಿರುವುದರಲ್ಲಿ ಭಾಗಿಯಾದವರಿಗೆ ಗಂಭೀರ ಶಿಕ್ಷೆ ಮತ್ತು ದಂಡವನ್ನು ವಿಧಿಸುವಂತಹ ಒಂದು ಕೆಲಸವನ್ನು ಮಾಡಬೇಕು. ಅರಣ್ಯ ಪ್ರದೇಶವನ್ನು ನಿಗಾವಹಿಸುವ drone camera, GSD (Ground Sampling Distance) ತಂತ್ರಜ್ಞಾನ

ಉಪಕರಣಗಳನ್ನು ಅಳವಡಿಸಬೇಕು. ಮಾನ್ಯ ಸಚಿವರಿಗೆ ಇನ್ನೊಂದು ವಿನಂತಿ ಏನೆಂದರೆ, ಕಡಿದು ಬಿಟ್ಟ ಮರಗಳ ಜಾಗದಲ್ಲಿ ಹೊಸ ಗಿಡಗಳನ್ನು ಅಲ್ಲಿ ನೆಡುವಂತಹ ಒಂದು ವ್ಯವಸ್ಥೆಯಾಗಬೇಕು. ತಾವು ಕೂಡ ವೀಕ್ಷಣೆ ಎರಡು ಕಾಡುಗಳನ್ನು ಹೋಗಿ ನೋಡಿದರೆ, ತಮಗೂ ಕೂಡ ಗೊತ್ತಾಗುತ್ತದೆ. ನಾವು ಅರಣ್ಯವನ್ನು ರಕ್ಷಣೆ ಮಾಡಿದರೆ, ಅದು ನಮ್ಮನ್ನು ರಕ್ಷಣೆ ಮಾಡುತ್ತದೆ. ಕೊಡಗು ಜಿಲ್ಲೆಯಲ್ಲಿ highest land scamming ಆಗುತ್ತದೆ. ಏಕೆಂದರೆ, ಅಲ್ಲಿ ಎಲ್ಲವೂ ಅರಣ್ಯ ನಾಶವಾಗಿದೆ. ಅಲ್ಲಿ ಮರಗಳೇ ಇಲ್ಲ. ಅದರ ಬಗ್ಗೆ ಪರಿಸರ, ರಕ್ಷಣೆ ಇವರೆಡೂ ಕೂಡ ಆಗಬೇಕಾಗಿದೆ. ಏಕೆಂದರೆ, ಅತ್ಯಂತ ಹೆಚ್ಚಿನ ಮಿಲ್‌ಗಳನ್ನು ಹೊಂದಿರುವಂತಹ ಬೀದರ್ ಜಿಲ್ಲೆಯಿಂದ ತಾವು ಸಚಿವರಾಗಿ ಆಯ್ಕೆಯಾಗಿ ಬಂದಿದ್ದೀರಿ. ಅದರ ಬಗ್ಗೆ ಅನುಬಂಧದಲ್ಲಿ-1 ರಲ್ಲಿ ಬೀದರ್ ಜಿಲ್ಲೆಯನ್ನು ತೋರಿಸಿದ್ದೀರಿ. ತಾವು ಬೀದರ್ ಜಿಲ್ಲೆಯಿಂದ ಬಂದಿದ್ದೀರಿ. ಬೆಂಗಳೂರು ನಗರದಲ್ಲಿ ಮಿಲ್‌ಗಳ ಬಹಳ ದೊಡ್ಡ ಸಂಖ್ಯೆಯಲ್ಲಿರುತ್ತದೆ. ಅಲ್ಲಿ ಎಲ್ಲರೂ ಕೂಡ ಖರೀದಿ ಮಾಡುವುದಕ್ಕೆ ಬರುತ್ತಾರೆ. ಬೀದರ್‌ನಲ್ಲಿ 158 ಮಿಲ್‌ಗಳಿವೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ಅರಣ್ಯವನ್ನು ರಕ್ಷಣೆ ಮಾಡುವಂತಹ ಕೆಲಸಕ್ಕೆ ತಾವು ಕೈ ಹಾಕಬೇಕು. ಇನ್ನೊಂದು ಪ್ರಶ್ನೆ ಇದೆ. ಮಾನ್ಯ ಸಚಿವರು ಅಂಕಿ-ಅಂಶಗಳನ್ನು ಕೊಟ್ಟಿದ್ದಾರೆ. ಒಟ್ಟು 4,81,685 ಘನ ಮೀಟರ್ ನಾಟಾವನ್ನು ಇ-ಹರಾಜಿನಲ್ಲಿ ಹಾಕುತ್ತೀರಾ ಎಂದು ಉತ್ತರದಲ್ಲಿ ತಿಳಿಸಿದ್ದೀರಿ. ಇಷ್ಟು ನಾಟಾವನ್ನು ಬಿಟ್ಟು, ಅನುಬಂಧ-2ರಲ್ಲಿ ತೋರಿಸಿರುವಂತೆ, ಕಳೆದ 2 ವರ್ಷದ ಅವಧಿಯಲ್ಲಿ ಖರೀದಿ ಮಾಡಿರುವ ಮರದ ಮಿಲ್ಲುಗಳ ಸಂಖ್ಯೆಯನ್ನು ತೋರಿಸಿದ್ದೀರಿ. ಇದನ್ನು ರೈತರಿಂದ ಖರೀದಿ ಮಾಡಿದ್ದನ್ನು ಬಿಟ್ಟೋ ಅಥವಾ ಖಾಸಗಿ ವ್ಯಕ್ತಿಯಿಂದ ಖರೀದಿ ಮಾಡಿದ್ದನ್ನು ಸೇರಿದೆಯೋ ಎನ್ನುವುದು ಮಾನ್ಯ ಸಚಿವರಿಂದ ಉತ್ತರ ಬೇಕಾಗಿತ್ತು.

**ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಪರಿಸ್ಥಿತಿ ಮತ್ತು ಪರಿಸರ ಸಚಿವರು):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಒಟ್ಟು 3,471 ಪರವಾನಗಿ ಹೊಂದಿರುವ ಮರದ ಮಿಲ್ಲುಗಳು ಇರುತ್ತವೆ. ಮಾನ್ಯ ಸದಸ್ಯರು ಕೇಳಿರುವಂತಹ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿಕೊಟ್ಟಿದ್ದೇವೆ. ನಮ್ಮಲ್ಲಿ ಎರಡು ವರ್ಷಗಳ ಅವಧಿಯಲ್ಲಿ 4,81,685 ಘನ ಮೀಟರ್ ನಾಟಾ ಮತ್ತು ಇತರೆ ಅರಣ್ಯ ಉತ್ಪನ್ನಗಳನ್ನು ಈಗಾಗಲೇ ಮಾರಾಟ ಮಾಡಿದ್ದೇವೆ. ಇ-ಟೆಂಡರ್ ಮುಖಾಂತರ 39 ನಮ್ಮ ಡಿಪೋಗಳಿವೆ. ನಮ್ಮ ಡಿಪೋಗಳಿಂದ ಇವತ್ತು ಖಾಸಗಿಯಾಗಿ ಇದನ್ನು ಮಾರಾಟ ಮಾಡಲಾಗಿದೆ. ಯಾವ್ಯಾವ ಮಿಲ್ಲುಗಳು ರೈತರಿಂದಾಗಲಿ, ಹೊರ ರಾಜ್ಯದಿಂದಾಗಲಿ ನಾಟಗಳನ್ನು ತೆಗೆದುಕೊಂಡು ಬಂದಿದ್ದಾರೆ ಮತ್ತು ವಿದೇಶದಿಂದ ಆಮದು ಮಾಡಿಕೊಂಡಿದ್ದಾರೆ. ಅದ್ಯಾವುದೂ ಕೂಡ ಇದರಲ್ಲಿ ಸೇರಿಲ್ಲ. ಇದು ಬರೀ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂತಹದ್ದು. ನಾವು ಏನು ಮಾರಾಟ

ಮಾಡಿದ್ದೇವೆಯೋ, ಅದನ್ನು ತಾವು ಅದರ ಬಗ್ಗೆ ಪ್ರಶ್ನೆ ಕೇಳಿರುವ ಬಗ್ಗೆ ತಮಗೆ ಮಾಹಿತಿಯನ್ನು ಒದಗಿಸಿಕೊಡಲಾಗಿದೆ. ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅರಣ್ಯ ಪ್ರದೇಶದಲ್ಲಿ ಹೆಚ್ಚಿನದಾಗಿ ಮರಗಳನ್ನು ಬೆಳೆಸುವಂತಹದ್ದಕ್ಕೆ ಈಗಾಗಲೇ ಕ್ರಮಗಳನ್ನು ಕೈಗೊಂಡಿದ್ದೇವೆ. ಪ್ರತಿ ವರ್ಷ ಸುಮಾರು block plantation ಗೆ CAMPA (Compensatory Afforestation Fund Management and Planning Authority) ನಲ್ಲಿ ಈ ರೀತಿಯ ಒಂದು ಅನುದಾನದಲ್ಲಿ ಹೆಚ್ಚು ಹೆಚ್ಚು ಮರಗಳನ್ನು ಬೆಳೆಸುವುದಕ್ಕೆ ಹಾಗೂ ಮಾನವ ಪ್ರಾಣಿಗಳ ಸಂಘರ್ಷವನ್ನು ಕಡಿಮೆ ಮಾಡುವುದಕ್ಕೆ ಹಾಗೂ ಪ್ರಾಣಿಗಳಿಗೆ ಬೇಕಾಗಿರುವಂತಹ ಹಣ್ಣು ಹಂಪಲುಗಳು ಮರಗಳನ್ನು ಬೆಳೆಸಬೇಕು. ಈಗಾಗಲೇ ಅದಕ್ಕೆ ಸೂಚನೆಯನ್ನು ಕೊಟ್ಟು, ನಾವು ಇದಕ್ಕೆ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇದರಲ್ಲಿ ಯಾವುದೇ ಅಕ್ರಮವಾಗಿ ಕಳ್ಳತನ ಮಾಡುವಂತಹದ್ದು ಇರಬಹುದು ಅಥವಾ ಅರಣ್ಯ ವ್ಯಾಪ್ತಿಯಲ್ಲಿ ಬರುವಂತಹ ಮರಗಳೇನಿದ್ದಾವೆ. ಶ್ರೀಗಂಧ, ಸಾಗುವಾನಿ ಮರಗಳನ್ನು ಯಾರಾದರೂ ಅಕ್ರಮವಾಗಿ ಸಾಗಾಟ ಮಾಡಿದರೆ, ಅವರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇನೆ. ಈ ಹಿಂದೆ ಮಾಡಿದಂತಹ ಪ್ರಕರಣಗಳೇನಿವೆ. ಅದಕ್ಕೆ ಫಾಲೋ ಮಾಡುತ್ತಿದ್ದೇವೆ. ಅವರಿಗೆ ಶಿಕ್ಷೆ ಕೊಡಿಸುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿರುವ ಸಲಹೆಯನ್ನು ತೆಗೆದುಕೊಂಡು ಇನ್ನೂ ಉತ್ತಮ ರೀತಿಯಲ್ಲಿ ಮರಗಳನ್ನು ಬೆಳೆಸುವಂತಹದ್ದಕ್ಕೆ ಕ್ರಮಗಳನ್ನು ಜರುಗಿಸುತ್ತೇವೆ.

(ಮುಂದು)

(154) 10.03.2025 11.40 TCH-RN

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 351+335

ಸದಸ್ಯರ ಹೆಸರು : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) ಹಾಗೂ ಡಾ. ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು).

ಉತ್ತರಿಸಬೇಕಾದ ದಿನಾಂಕ : 10.03.2025

ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಪ್ರಶ್ನೆ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸರ್ಕಾರಿ ಔಷಧ ಉಗ್ರಾಣದಲ್ಲಿ ಸಾಮಾನ್ಯ ಮತ್ತು ಜೀವರಕ್ಷಕ ಔಷದಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಆಸ್ಪತ್ರೆಗಳಿಗೆ ಸರಬರಾಜು ಮಾಡಲು ಕೊರತೆ ಇರುವ ಔಷಧಿಗಳು ಯಾವುವು; | ಕೆಎಸ್‌ಎಂಎಸ್‌ಸಿಎಲ್ (KSMSCL) ಸಂಸ್ಥೆಗೆ ಆರೋಗ್ಯ ಇಲಾಖೆಯು ಸಲ್ಲಿಸಿರುವ ಹಿಂದಿನ ವಾರ್ಷಿಕ- Annual indent 2022-23 ಅನುಮೋದಿತವಾಗಿರುವ 732 ಔಷಧಿಗಳಲ್ಲಿ, 475 ಔಷಧಿಗಳಿಗೆ ಖರೀದಿ ಆದೇಶ ನೀಡಿ ಔಷಧಿಗಳನ್ನು ಎಲ್ಲಾ ಔಷಧ ಉಗ್ರಾಣಗಳಿಗೆ ಸರಬರಾಜು ಮಾಡಲಾಗಿದೆ. ವಿವರ ಕೆಳಕಂಡಂತಿದೆ:- |

ಕೋಷ್ಟಕ -1
ಅನುಮೋದನೆಗೊಂಡ 732 ಔಷಧಿಗಳ ವಿವರ

| ವಿವರಣೆ | Essential | Desirable | ಒಟ್ಟು |
|---|---|---|---|
| Approved Drugs | 408 | 324 | 732 |
| Procured Drugs | 262 | 213 | 475 |

I. ಪ್ರಸ್ತುತ ಖರೀದಿಗೊಂಡ ಹಾಗೂ ಉಗ್ರಾಣಗಳಲ್ಲಿ ಲಭ್ಯವಿರುವ ಔಷಧಗಳ ದಾಸ್ತಾನು ವಿವರ ಈ ಕೆಳಕಂಡಂತಿದೆ.

ಕೋಷ್ಟಕ -2
ಜಿಲ್ಲಾ ಔಷದ ಉಗ್ರಾಣಗಳಲ್ಲಿ ಲಭ್ಯವಿರುವ ದಾಸ್ತಾನಿನ ವಿವರ. (344 Out of 475)

| ವಿವರಣೆ | Essential | Desirable | ಒಟ್ಟು |
|---|---|---|---|
| 50% ಮತ್ತು ಅದಕ್ಕೆ ಹೆಚ್ಚು ದಾಸ್ತಾನು | 46 | 69 | 115 |
| ದಾಸ್ತಾನು 26% - 49% | 64 | 70 | 134 |
| ದಾಸ್ತಾನು 11% - 25% | 61 | 34 | 95 |
| ಒಟ್ಟು | 171 | 173 | 344 |

- ಮೇಲಿನ ಕೋಷ್ಟಕದಲ್ಲಿ ವಿವರಿಸಿರುವಂತೆ, ಔಷಧ ತಂತ್ರಾಂಶದ ದಾಸ್ತಾನು ಮಾಹಿತಿಯ ಪ್ರಕಾರ, ಈ ಅಗತ್ಯ ಔಷಧಿಗಳು ಜಿಲ್ಲಾ ಔಷಧ ಉಗ್ರಾಣಗಳಿಂದ ಆರೋಗ್ಯ ಸಂಸ್ಥೆಗಳಿಗೆ ಈಗಾಗಲೇ ಸರಬರಾಜು ಮಾಡಲಾಗಿ ಪ್ರಸ್ತುತ ದಾಸ್ತಾನು ಮುಂದಿನ 2 ರಿಂದ 3 ತಿಂಗಳುಗಳಿಗೆ ಸಾಕಾಗುವಷ್ಟು ಪ್ರಮಾಣದಲ್ಲಿ ಔಷಧಿಗಳು ಲಭ್ಯವಿರುವುದು ಕಂಡುಬಂದಿದೆ.

II. ಪ್ರಸ್ತುತ ಖರೀದಿಗೊಂಡ ಹಾಗೂ ಉಗ್ರಾಣಗಳಲ್ಲಿ ದಾಸ್ತಾನು ಕಡಿಮೆ ಇರುವ ಔಷಧಗಳ ವಿವರ ಈ ಕೆಳಕಂಡಂತಿದೆ(131 Out of 475):

ಕೋಷ್ಟಕ -3
ಜಿಲ್ಲಾ ಔಷದ ಉಗ್ರಾಣಗಳಲ್ಲಿ ಲಭ್ಯವಿರುವ ದಾಸ್ತಾನಿನ ವಿವರ

| ವಿವರಣೆ | Essential | Desirable | ಒಟ್ಟು |
|---|---|---|---|
| 0 ಮತ್ತು 10% ಅದಕ್ಕಿಂತ ಕಡಿಮೆ ದಾಸ್ತಾನು | 91 | 40 | 131 |

**(ಅನುಬಂಧ-1ರಲ್ಲಿ ನೀಡಲಾಗಿದೆ)**

- ಹಿಂದಿನ ವಾರ್ಷಿಕ- Annual indent 2022-23 ಔಷಧಿಗಳಲ್ಲಿ ಖರೀದಿಯಾಗದೆ ಇರುವ **257** ಔಷಧಿಗಳಲ್ಲಿ ಕೆಲವು ಔಷಧಿಗಳಿಗೆ ಟೆಂಡರ್ ಪ್ರಮಾಣ ಮತ್ತು ಮೌಲ್ಯ ಕಡಿಮೆ ಇರುವುದರಿಂದ ಹಲವು ಬಾರಿ ಟೆಂಡರ್ / Quotation ಗಳನ್ನು ಆಹ್ವಾನಿಸಿದ್ದರೂ ಸಹ ಶೂನ್ಯ ಬಿಡ್‌ದಾರರು/ "ಪ್ರತಿಕ್ರಿಯಾಹೀನ" ಅಥವಾ "ಸ್ಪಂದಿಸದ" (Non Responsive) ಆಗಿರುತ್ತಾರೆ ಹಾಗಾಗಿ ಈ ಔಷಧಿಗಳಿಗೆ ಆರೋಗ್ಯ ಸಂಸ್ಥೆಗಳಲ್ಲಿ ಅವಶ್ಯಕತೆ ಇದ್ದಲ್ಲಿ ಅಗತ್ಯ ಪ್ರಮಾಣದ ಔಷಧಗಳನ್ನು ತಮ್ಮ ಮಟ್ಟದಲ್ಲಿ ಸೂಕ್ತ ಪ್ರಾಧಿಕಾರದ ಅನುಮೋದನೆಯೊಂದಿಗೆ ಸ್ಥಳೀಯವಾಗಿ ರಾಷ್ಟ್ರೀಯ ಉಚಿತ ಸೇವೆಗಳ ಕಾರ್ಯಕ್ರಮದ ಅಡಿಯಲ್ಲಿ ಸಂಸ್ಥೆಗೆ ಬಿಡುಗಡೆಯಾಗುವ ಅನುದಾನದಲ್ಲಿ, Abark/ARS/NFDS/15 Finance ಅನುದಾನಗಳಲ್ಲಿ ನಿಯಮಾನುಸಾರ ಖರೀದಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಆರೋಗ್ಯ ಸಂಸ್ಥೆಗಳ ಹಂತದಲ್ಲಿ ಕ್ರಮವಹಿಸಲಾಗುತ್ತಿವೆ.

- ಮುಂದುವರೆದು, ಆಸ್ಪತ್ರೆಗಳಲ್ಲಿ ಒಪಿಡಿ ಮತ್ತು ತುರ್ತು ಚಿಕಿತ್ಸೆಗೆ ಸಾಮಾನ್ಯವಾಗಿ ಬಳಸುವ ಔಷಧಿಗಳ ಸಂಗ್ರಹಣೆ ಮತ್ತು ಪೂರೈಕೆಗೆ ಸಂಬಂಧಿಸಿದಂತೆ, ಔಷಧಿಗಳ ಪಟ್ಟಿ ಮಾಡಲಾಗಿದೆ. ಈ ಔಷಧಗಳು ಎಲ್ಲಾ ಜಿಲ್ಲಾ ಔಷಧ ಉಗ್ರಾಣಗಳಿಗೆ ಪೂರೈಕೆ ಮಾಡಿರುವುದು ಕಂಡು ಬಂದಿರುತ್ತದೆ. (ಔಷಧಗಳ ದಾಸ್ತಾನು ಮಾಹಿತಿಯನ್ನು **ಅನುಬಂಧ-02** ರಲ್ಲಿ ನೀಡಲಾಗಿದೆ).

| | | |
|---|---|---|
| | | ➢ ಔಷಧಿಗಳ ಪ್ರತಿ ವರ್ಗದಲ್ಲಿ ಚಿಕಿತ್ಸೆಗೆ ಬಹು ಆಯ್ಕೆಯ ಹಲವಾರು ಔಷಧಿಗಳಿದ್ದು, ನಿರ್ದಿಷ್ಟ ಔಷಧಿಗಳ ದಾಸ್ತಾನು ಇಲ್ಲದಿದ್ದಲ್ಲಿ ಅದೇ ವರ್ಗದಲ್ಲಿ ಸೂಕ್ತ ಪರ್ಯಾಯ ಔಷಧಿಗಳು ಲಭ್ಯವಿರುವುದು ಕಂಡು ಬಂದಿರುತ್ತದೆ. ಈ ಔಷಧಿಗಳ ಉಪಯೋಗದಿಂದ ರೋಗಿಗಳಿಗೆ ಚಿಕಿತ್ಸೆಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಲಾಗಿರುತ್ತದೆ. (ಉದಾ: Paracetamol 650mg ಲಭ್ಯವಿಲ್ಲದಿದ್ದರೂ Paracetamol 500mg ಸಾಕಷ್ಟು ದಾಸ್ತಾನು ಚಿಕಿತ್ಸೆಗಾಗಿ ಇರುತ್ತದೆ).<br><br>ಅಗತ್ಯ ಔಷಧಗಳಿಗೆ ಕೆಲವು ಸಂಸ್ಥೆಗಳಲ್ಲಿ ಅಥವಾ ಜಿಲ್ಲೆಗಳಿಂದ ಆರೋಗ್ಯ ಸಂಸ್ಥೆಯ ಹೆಚ್ಚಿನ ಬೇಡಿಕೆಯಿಂದಾಗಿ ಕೊರತೆಯ ವರದಿಯಾಗುವಾಗ, ಔಷಧಗಳ ಕೊರತೆಯನ್ನು ವರ್ಗಾವಣೆಯ ಮೂಲಕ (Inter-Institute ಮತ್ತು Inter-warehouse Transfer) ಔಷಧಿಗಳನ್ನು ಪೂರೈಸಲು ವ್ಯವಸ್ಥೆ ಮಾಡಲಾಗುತ್ತದೆ. Anti Rabies/ Anti Snake Venom ಔಷಧಿಗಳ ಕೊರತೆಯ ಸಂದರ್ಭದಲ್ಲಿ ಕೈಗೊಂಡ ಕ್ರಮದ ವಿವರವನ್ನು **ಅನುಬಂಧ-3 ರಲ್ಲಿ** ನೀಡಲಾಗಿದೆ. |
| ಆ) | ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಬೇಕಾದ ಜೀವರಕ್ಷಕ ಔಷಧಿಗಳ ಕೊರತೆ ಉಂಟಾಗಲು ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು) | ➢ ಟೆಂಡರ್ ಪ್ರಕ್ರಿಯೆಯಲ್ಲಿ ಬಿಡ್‌ದಾರರು ಕಡಿಮೆ ಸಂಖ್ಯೆಯಲ್ಲಿ ಪಾಲ್ಗೊಂಡಿರುತ್ತಾರೆ.<br><br>➢ Snake Venom ಕೊರತೆಗೆ ಸಂಬಂಧಿಸಿದಂತೆ, Raw Material ಪ್ಲಾಸ್ಮಾಸೀರಮ್ ಉತ್ಪನ್ನಗಳು, ಜಗತ್ತಿನ ಮಟ್ಟದಲ್ಲಿ ಸರ್ಪ ವಿಷ ಸಂಬಂಧಿತ ಉತ್ಪನ್ನಗಳ ತಯಾರಿಕೆಗಾಗಿ ಸೀಮಿತವಾಗಿ ಲಭ್ಯವಿವೆ. ("Raw materials, such as plasma serum products, are in limited availability for the production of snake venom-related products globally.")<br><br>ಕೆಲವು ಔಷಧಿಗಳಿಗೆ ಹಲವು ಬಾರಿ ಟೆಂಡರ್ /Quotation ಗಳನ್ನು ಆಹ್ವಾನಿಸಿದ್ದರೂ ಸಹ ಶೂನ್ಯ ಬಿಡ್ ದಾರರು/ "ಪ್ರತಿಕ್ರಿಯಾಹೀನ" ಅಥವಾ "ಸ್ಪಂದಿಸದ" (Non Responsive) ಆಗಿರುತ್ತಾರೆ |
| ಇ) | ಅಗತ್ಯ ಇರುವ ಸಾಮಾನ್ಯ ಮತ್ತು ಜೀವರಕ್ಷಕ ಔಷಧಿಗಳನ್ನು ಖರೀದಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಜೀವರಕ್ಷಕ ಔಷಧಗಳ ಕೊರತೆಯಿಂದಾಗಿ ರೋಗಿಗಳಿಗೆ ಉಂಟಾಗುತ್ತಿರುವ ತೊಂದರೆಗಳನ್ನು ನಿವಾರಿಸಲು ತೆಗೆದುಕೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | ➢ ಆರೋಗ್ಯ ಸಂಸ್ಥೆಗಳು, ತುರ್ತು ಸಂದರ್ಭದಲ್ಲಿ ಅಗತ್ಯ ಪ್ರಮಾಣದಲ್ಲಿ ಔಷಧಗಳನ್ನು ತಮ್ಮ ಮಟ್ಟದಲ್ಲಿ ಸೂಕ್ತ ಪ್ರಾಧೀಕಾರದ ಅನುಮೋದನೆಯೊಂದಿಗೆ ಸ್ಥಳೀಯವಾಗಿ ರಾಷ್ಟ್ರೀಯ ಉಚಿತ ಸೇವೆಗಳ ಕಾರ್ಯಕ್ರಮದ ಅಡಿಯಲ್ಲಿ ಸಂಸ್ಥೆಗೆ ಬಿಡುಗಡೆಯಾಗುವ ಅನುದಾನದಲ್ಲಿ, Abark/ARS/NFDS/15th Finance Commission ಅನುದಾನಗಳಲ್ಲಿ ನಿಯಮಾನುಸಾರ ಸೂಕ್ತ ಪ್ರಾಧಿಕಾರದ ಅನುಮೋದನೆಯೊಂದಿಗೆ ಆರೋಗ್ಯ ಸಂಸ್ಥೆಗಳು ಕೊರತೆ ಔಷಧಿಗಳನ್ನು ಅಗತ್ಯ ಪ್ರಮಾಣದಲ್ಲಿ ಖರೀದಿಸಿ ಸಾರ್ವಜನಿಕರಿಗೆ |

| | | |
|---|---|---|
| | | ತೊಂದರೆಯಾಗದಂತೆ ಆರೋಗ್ಯ ಸಂಸ್ಥೆಗಳ ಹಂತದಲ್ಲಿ ಕ್ರಮವಹಿಸಲಾಗುತ್ತಿವೆ.<br><br>➢ 2022-23 ವರ್ಷದ ವಾರ್ಷಿಕ ಬೇಡಿಕೆಯಲ್ಲಿನ ಕೆಲವು Essential drug list (EDL) ಮತ್ತು Desirable drug list (DDL) ಗಳಲ್ಲಿ ಔಷಧಿಗಳ ಕೊರತೆ ಇರುವುದರಿಂದ ಹಾಗೂ 2025-26 ಆರ್ಥಿಕ ವರ್ಷಕ್ಕಾಗಿ ವಾರ್ಷಿಕ ಇಂಡೆಂಟ್ Need assessment committee proceedings ಜನವರಿ 2025ರಲ್ಲಿ ಅನುಮೋದಿಸಲಾಗಿದೆ ಹಾಗು ಖರೀದಿ ಪ್ರಕ್ರಿಯೆಗೆ ಬಜೆಟ್ ಅನುಮೋದನೆ ಪ್ರಕ್ರಿಯೆಯಲ್ಲಿದೆ.<br><br>➢ ಮುಂದಿನ ಎರಡು ತಿಂಗಳ ಅವಧಿಯಲ್ಲಿ ದಾಸ್ತಾನು ಕಡಿಮೆ ಇರುವ EDL & Desirable ಔಷಧಿಗಳಲ್ಲಿ ತ್ವರಿತವಾಗಿ ಅವಶ್ಯವಿರುವ ಔಷಧಿಗಳನ್ನು ಖರೀದಿಸಲು ಈ ಕೆಳಕಂಡ ಕ್ರಮಗಳು ಕೈಗೊಳ್ಳಲಾಗಿರುತ್ತದೆ.<br><br>➢ 23 ಔಷಧಿಗಳನ್ನು 4G exemption ಮೂಲಕ KAPL (ಕರ್ನಾಟಕ ಆಂಟಿ ಬಯೋಟಿಕ್ಸ್ ಅಂಡ್ ಫಾರ್ಮಸ್ಯೂಟಿಕ್ಸ್ ಲಿಮಿಟೆಡ್) ನಿಂದ ಒಟ್ಟು ರೂ .9.5 ಕೋಟಿ ಮೌಲ್ಯದ ಔಷಧಿಗಳನ್ನು ಖರೀದಿಸಲು ಪ್ರಸ್ತಾವನೆ ಪ್ರಕ್ರಿಯೆಯಲ್ಲಿರುತ್ತದೆ.<br><br>ಉಳಿದ ಔಷಧಿಗಳನ್ನು ಸಹ ಕೆಎಸ್ಎಂಎಸ್‌ಸಿಎಲ್‌ನ ಹಿಂದಿನ ಸರಬರಾಜುದಾರ ರಿಂದ 25% ಹೆಚ್ಚುವರಿ ಪ್ರಮಾಣದಲ್ಲಿ ಖರೀದಿಸಲು ಕ್ರಮವಹಿಸಲಾಗುತ್ತಿದೆ |
| ಈ) | ತೀವ್ರ ಸೋಂಕಿಗೆ ಒಳಗಾಗುವ ರೋಗಿಗಳಿಗೆ ಅವಶ್ಯಕ ಔಷಧಿಗಳು ಮತ್ತು ಸೂಕ್ತ ತಪಾಸಣೆಗೆ ಬೇಕಾದ ಯಂತ್ರೋಪಕರಣಗಳ ಕೊರತೆಯಿಂದ ಬಡಜನರು ಅನಿವಾರ್ಯವಾಗಿ ಖಾಸಗಿ ಆಸ್ಪತ್ರೆಗಳಿಗೆ ಹೋಗುವಂತೆ ಮಾಡಿರುವುದಕ್ಕೆ, ಯಾರು ಜವಾಬ್ದಾರರು: (ವಿವರಿಸುವುದು) | ಈಗಾಗಲೇ ಆರ್ಥಿಕ ಸಾಲು 2016-17 ರಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಉಚಿತ ಔಷಧಿ ಮತ್ತು ರೋಗಪತ್ತೆ ಸೇವೆಗಳ ಕಾರ್ಯಕ್ರಮದ ಅಡಿಯಲ್ಲಿ ವರ್ಷಂ ಪ್ರತಿ ಉಪಕೇಂದ್ರಗಳಿಗೆ, ಪ್ರಾಥಮಿಕ ಮತ್ತುನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ, ಸಮುದಾಯ ಆರೋಗ್ಯ ಕೇಂದ್ರಗಳಿಗೆ, ತಾಲ್ಲೂಕು ಆರೋಗ್ಯ ಕೇಂದ್ರಗಳಿಗೆ, ಜಿಲ್ಲಾ ಮತ್ತು ರಾಜ್ಯ ಮಟ್ಟದ ಆಸ್ಪತ್ರೆಗಳಿಗೆ ಮಾರ್ಗಸೂಚಿ ಅನ್ವಯ ಅನುಮೋದಿತ ಅನುದಾನದಲ್ಲಿ **ಶೇ.20ರಷ್ಟು** ಅನುದಾನವನ್ನು ಸ್ಥಳೀಯವಾಗಿ ಜಿಲ್ಲಾಮಟ್ಟದಲ್ಲಿ ಅಗತ್ಯ ಔಷಧಿಗಳನ್ನು ಹಾಗೂ ಪ್ರಯೋಗ ಶಾಲಾ ಉಪಭೋಗ ವಸ್ತುಗಳನ್ನು ಖರೀದಿಸಿ ಸಾರ್ವಜನಿಕರಿಗೆ ಉಚಿತ ಸೇವೆಗಳನ್ನು ಒದಗಿಸಲು ಹಾಗೂ ಇನ್ನುಳಿದ **ಶೇ.80 ರಷ್ಟು** ಅನುದಾನದನ್ನು KSMSCL ಸಂಸ್ಥೆಯ ಮೂಲಕ ಖರೀದಿಸಿ ಜಿಲ್ಲಾ ಔಷಧಿ ಉಗ್ರಾಣಾಗಳಿಗೆ (District Ware House) ಗಳಿಗೆ ನಿರಂತರವಾಗಿ ಸರಬರಾಜು ಮಾಡಲಾಗುತ್ತಿದೆ.<br><br>ಮುಂದುವರೆದು ಅಗತ್ಯ ಔಷಧಿಗಳನ್ನು (EDL) ವಾರ್ಷಿಕ ಬೇಡಿಕೆಯಂತೆ ಔಷಧಿಗಳನ್ನು ಖರೀದಿಸಿ ಸರಬರಾಜು ಮಾಡಲು ಮತ್ತು ತುರ್ತು ಸಂದರ್ಭ ಹಾಗೂ ಅವಶ್ಯಕತೆಗೆ ತಕ್ಕಂತೆ ಆಸ್ಪತ್ರೆಗಳಲ್ಲಿ ಲಭ್ಯವಿರುವ ಅನುದಾನ (ARS, ABRK |

| | | |
|---|---|---|
| | | ಹಾಗೂ ಇತರೆ ಕಾರ್ಯಕ್ರಮಗಳ ಅನುದಾನದಿಂದ) ಅವಶ್ಯಕ ಔಷಧಿಗಳು ಮತ್ತು ಸಲಕರಣೆಗಳನ್ನು ಖರೀದಿಸಿ ರೋಗಿಗಳಿಗೆ ಯಾವುದೇ ತೊಂದರೆಯಾಗದಂತೆ ನಿರ್ವಹಣೆ ಮಾಡಲು ಸೂಚನೆ ನೀಡಲಾಗಿರುತ್ತದೆ.<br><br>ತೀವ್ರ ಸೋಂಕಿಗೆ ಒಳಗಾಗುವ ರೋಗಿಗಳಿಗೆ ಅವಶ್ಯಕತೆಗೆ ಅನುಸಾರ ಔಷಧಿಗಳು ಹಾಗೂ ರೋಗ ಪತ್ತೆ ಹಚ್ಚುವ ಸೇವೆಗಳ ಸೌಲಭ್ಯ ಒದಗಿಸಲು ಎಲ್ಲಾ ಕ್ರಮ ವಹಿಸಲಾಗಿರುತ್ತದೆ. |
| ಉ) | ಸರ್ಕಾರಿ ಆಸ್ಪತ್ರೆಗಳಿದ್ದರೂ ಬಡ ಜನರು ಅನಾವಶ್ಯಕವಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಆರೋಗ್ಯ ವೆಚ್ಚ ಭರಿಸುತ್ತಿರುವುದನ್ನು ತಡೆಯಲು ಸರ್ಕಾರದಿಂದ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ. | ರಾಜ್ಯದ ಜನತೆಗೆ ಆರೋಗ್ಯ ಭರವಸೆ ನೀಡುವ ನಿಟ್ಟಿನಲ್ಲಿ ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ್ ಆರೋಗ್ಯ ಮುಖ್ಯ ಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯನ್ನು 30.10.2018 ರಲ್ಲಿ ಪ್ರಾರಂಭಿಸಲಾಗಿದೆ. ಫಲಾನುಭವಿಗಳು ಅಧಿಕ ಹಣ ವ್ಯಯ ಮಾಡುವುದನ್ನು ತಡೆಯಲು 2965 ಸರ್ಕಾರಿ ಆಸ್ಪತ್ರೆಗಳು ಹಾಗೂ 592 ಖಾಸಗಿ ಆಸ್ಪತ್ರೆಗಳು, ಒಟ್ಟಾರೆ 3557 ಆಸ್ಪತ್ರೆಗಳನ್ನು ಸದರಿ ಯೋಜನೆಯಡಿ ನೋಂದಾವಣಿ ಮಾಡಲಾಗಿರುತ್ತದೆ.<br><br>ಸದರಿ ಯೋಜನೆಯಡಿ 1650 ಚಿಕಿತ್ಸಾ ವಿಧಾನಗಳು ಲಭ್ಯವಿದ್ದು, ಯೋಜನೆಯಡಿಯಲ್ಲಿ ದೊರೆಯುವ ಚಿಕಿತ್ಸಾ ವಿಧಾನಗಳು ಈ ಕೆಳಕಂಡಂತಿವೆ;<br><br>294 ಸಾಮಾನ್ಯ ಚಿಕಿತ್ಸಾ ವಿಧಾನಗಳು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ<br><br>251 ಕ್ಲಿಷ್ಟಕರ ದ್ವಿತೀಯ ಹಂತದ ಚಿಕಿತ್ಸಾ ವಿಧಾನಗಳು<br><br>934 ತೃತೀಯ ಹಂತದ ಚಿಕಿತ್ಸಾವಿಧಾನಗಳು<br><br>171 ತುರ್ತು ಚಿಕಿತ್ಸಾ ವಿಧಾನಗಳನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆ ಮತ್ತು ನೊಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ.<br><br>ಸದರಿ ಯೋಜನೆಯಡಿಯಲ್ಲಿ ಸರಳ ದ್ವಿತೀಯ ಹಂತದ ಚಿಕಿತ್ಸೆಗಳನ್ನು ಸರ್ಕಾರಿ ಆಸ್ಪತ್ರೆಗಳಿಗೆ ಮಾತ್ರ ಸೀಮಿತಗೊಳಿಸಲಾಗಿರುತ್ತದೆ. ಕ್ಲಿಷ್ಟಕರ ದ್ವಿತೀಯ ಹಾಗೂ ತೃತಿಯ ಹಂತದ ಚಿಕಿತ್ಸೆಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯಗಳು ಪಡೆಯಬಹುದಾಗಿರುತ್ತದೆ. ಒಂದು ವೇಳೆ ಲಭ್ಯವಿಲ್ಲದಿದ್ದ ಸಂದರ್ಭದಲ್ಲಿ ಆನ್‌ಲೈನ್ ರೆಫರಲ್ ಸಿಸ್ಟಮ್ (ORS) ಮುಖೇನ ರೆಫರಲ್ ಪತ್ರ ಪಡೆದು ಯೋಜನೆಯಡಿ ನೋಂದಾಯಿತ ಉನ್ನತ ಮಟ್ಟದ ಸರ್ಕಾರಿ ಆಸ್ಪತ್ರೆ ಅಥವಾ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿರುತ್ತದೆ. ತುರ್ತು ಸಂದರ್ಭಗಳಲ್ಲಿ |

| | | |
|---|---|---|
| | | ಯಾವುದೇ ರೆಫರಲ್‌ನ ಅವಶ್ಯಕತೆ ಇರುವುದಿಲ್ಲ.<br>1. ಪಿ.ಹೆಚ್.ಹೆಚ್ (PHH) ಹಾಗೂ ಆಧಾರ್ ಕಾರ್ಡ್ ಹೊಂದಿರುವ ಫಲಾನುಭವಿಯ ಕುಟುಂಬದವರನ್ನು ಅರ್ಹತಾರೋಗಿ ಎಂದು ಪರಿಗಣಿಸಲಾಗುತ್ತದೆ ಹಾಗೂ ಪ್ರತಿ ಕುಟುಂಬದ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳು ಸಂಪೂರ್ಣವಾಗಿ ರೂ.5.00 ಲಕ್ಷದ ಮಿತಿಯ ಸೇವೆಯನ್ನು ಪಡೆದುಕೊಳ್ಳಬಹುದು.<br>2. ಎನ್.ಪಿ.ಹೆಚ್.ಹೆಚ್ (NPHH) ಹಾಗೂ ಆಧಾರ್ ಕಾರ್ಡ್ ಹೊಂದಿರುವ ಫಲಾನುಭವಿಯ ಕುಟುಂಬದವರನ್ನು ಸಾಮಾನ್ಯರೋಗಿ ಎಂದು ಪರಿಗಣಿಸಲಾಗುತ್ತದೆ. ಒಂದು ವೇಳೆ ಎನ್.ಪಿ.ಹೆಚ್.ಹೆಚ್ ಇಲ್ಲದಿದ್ದಲ್ಲಿ, ಆಧಾರ್ ಕಾರ್ಡ್ ಬಳಸಿಕೊಂಡು ಸಾಮಾನ್ಯ ರೋಗಿಯಾಗಿ ಚಿಕಿತ್ಸೆ ಪಡೆಯಬಹುದಾಗಿರುತ್ತದೆ ಹಾಗೂ ಸಹ-ಪಾವತಿಯ ಆಧಾರದ ಮೇಲೆ ಒಟ್ಟಾರೆ ವಾರ್ಷಿಕ ಮಿತಿ ಪ್ರತಿ ಕುಟುಂಬಕ್ಕೆ ರೂ.1.50 ಲಕ್ಷ ಇರುತ್ತದೆ.<br>ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆ ಹಾಗೂ ಸೊಂಟದ ಮೂಳೆ ಬದಲಿ ಶಸ್ತ್ರ ಚಿಕಿತ್ಸಾ ಸೌಲಭ್ಯಗಳು ಲಭ್ಯವಿಲ್ಲದ ಸಂದರ್ಭದಲ್ಲಿ ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: 425 ಸಿಜಿಇ 2024, ದಿನಾಂಕ: 11.09.2024 ರಂದು ಹೊರಡಿಸಲಾಗಿದೆ. ಸದರಿ ಆದೇಶದಂತೆ ORS ಕಾರ್ಯ ವಿಧಾನವನ್ನು ಮಾರ್ಪಡಿಸಲಾಗಿದೆ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ರೆಫರ್ ಮಾಡುವ ಅಧಿಕಾರವನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನಡಿ ಇರುವ TKR THR ತಾಂತ್ರಿಕ ತಜ್ಞ ವೈದ್ಯರ ಸಮಿತಿಗೆ ಸೀಮಿತಗೊಳಿಸಲಾಗಿದೆ. ಸರ್ಕಾರಿ ಆಸ್ಪತ್ರೆಗಳಿಗೆ ಮೆಂಟರ್ ಸರ್ಜನ್ ಗಳನ್ನು ಕಳುಹಿಸಿ ಶಸ್ತ್ರ ಚಿಕಿತ್ಸೆಗಳನ್ನು ಕೈಗೊಳ್ಳಲು ಕ್ರಮವಹಿಸಲಾಗಿದೆ. ಸದರಿ ವ್ಯವಸ್ಥೆಯಿಂದ ಅನಗತ್ಯ ಶಸ್ತ್ರ ಚಿಕಿತ್ಸೆಗಳನ್ನು ತಡೆದಂತಾಗುತ್ತದೆ ಹಾಗೂ ರೋಗಿಯು ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗುವುದನ್ನು ಮತ್ತು ಅಧಿಕ ಹಣವ್ಯಯ ಮಾಡುವುದನ್ನು ತಡೆದಂತಾಗುತ್ತದೆ.<br>ಮುಂದುವರೆದು, ಇನ್ನಿತರೆ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲು ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದೆ. |
| ಊ) | ಬಡ ರೋಗಿಗಳನ್ನು ನಿರ್ಲಕ್ಷದಿಂದ ನೋಡುವುದು ಮತ್ತು ಹಲವಾರು ಹಗರಣಗಳಿಗೆ ಕಾರಣವಾಗಿರುವುದಕ್ಕೆ ಸರ್ಕಾರಿ ಆಸ್ಪತ್ರೆಗಳ ವೈದ್ಯರು /ಸಿಬ್ಬಂದಿಗಳ ವಿರುದ್ಧ ಯಾವ ಕಠಿಣ ಕ್ರಮಕೈಗೊಳ್ಳಲಾಗಿದೆ; | ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳನ್ನು ನಿರ್ಲಕ್ಷದಿಂದ ನೋಡುವುದರ ಬಗ್ಗೆ ವೈದ್ಯರುಗಳ ವಿರುದ್ಧ ಪ್ರಸ್ತುತ 185 ಪ್ರಕರಣಗಳು ಬಾಕಿ ಇರುತ್ತದೆ. ಸಂಭಂದಿಸಿದ ವೈದ್ಯರುಗಳ ವಿರುದ್ಧ ಕೆಸಿಎಸ್ (ಸಿಸಿಎ) ನಿಯಮಗಳು-1957ರ ಪ್ರಕಾರ ಇಲಾಖಾ ವಿಚಾರಣೆ ನಡೆಸಿ ಶಿಸ್ತು ಕ್ರಮ ಜರುಗಿಸಿ ದಂಡನೆ ವಿಧಿಸಲಾಗುವುದು. |

| | | |
|---|---|---|
| ಋ) | ಬಡವರಿಗೆ ಆರೋಗ್ಯ ಗ್ಯಾರಂಟಿ ಸೌಲಭ್ಯ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ರಾಜ್ಯದಲ್ಲಿ ಬಡ ಜನರಿಗೆ ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ್ ಆರೋಗ್ಯ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯು ಲಭ್ಯವಿದ್ದು, ಇದಲ್ಲದೇ ಈ ಕೆಳಕಂಡಂತೆ ಇನ್ನಿತರ ಯೋಜನೆಗಳೂ ಕೂಡ ಲಭ್ಯವಿರುತ್ತವೆ.<br>1. ಅಂಗಾಂಗ ಕಸಿ ಯೋಜನೆ:<br>2. ಕಾಕ್ಲಿಯರ್ ಇಂಪ್ಲಾಂಟ್ ಯೋಜನೆ<br>3. ವಿರಳ ಕಾಯಿಲೆಗಳು ಮತ್ತು ಹೆಚ್ಚು ಚಿಕಿತ್ಸಾ ವೆಚ್ಚ ತಗಲುವ ವಿಶಿಷ್ಟ ಕಾಯಿಲೆಗಳು<br>4. ಅಪಘಾತ ಸಂತ್ರಸ್ತರಿಗೆ ತುರ್ತು ವೈದ್ಯಕೀಯ ನೆರವು ನೀಡುವ ಯೋಜನೆ<br>5. ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ ಆಸಿಡ್ ದಾಳಿಯ ಸಂತ್ರಸ್ಥರ ಯೋಜನೆ |

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರಾದ ಶ್ರೀ ಎಂ.ಕೆ.ಪ್ರಾಣೇಶ್ ರವರು ಪೀಠಾಸೀನರಾದರು)**

**ಡಾ.ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ಪ್ರಶ್ನೆಗೆ ಮಾನ್ಯ ಸಚಿವರು ಬಹಳ ವಿವರವಾದಂತಹ ವಿವರಣೆಯನ್ನು ಕೊಟ್ಟಿದ್ದಾರೆ. ನಾನು ಅವರ ದಕ್ಷತೆ ಬಗ್ಗೆ ಇಲ್ಲಿ ಪ್ರಶ್ನೆ ಮಾಡುತ್ತಿಲ್ಲ. ಜಿಲ್ಲಾ ಮಟ್ಟ ಮತ್ತು ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಅಧಿಕಾರಿಗಳು ಮತ್ತು ಅಲ್ಲಿರತಕ್ಕಂಥ ಸಮಸ್ಯೆಗಳ ಕುರಿತು ನಾನು ಮಾನ್ಯ ಸಚಿವರ ಗಮನಕ್ಕೆ ತರಲು ಬಯಸುತ್ತೇನೆ. ಅದರಲ್ಲೂ ಕೂಡ ನಾವು 'ಜಲಕ್' ಎಂದು ಕರೆಯುತ್ತೇವೆ. ಕಳಪೆ ಔಷಧ ವಾಪಸ್ಸ್‌ಗೆ ಹೊಸ ನೀತಿ ಎಂದು ಅವರೇ statement ಕೊಟ್ಟಿದ್ದಾರೆ. ಉಗ್ರಾಣದಲ್ಲಿ ಔಷಧ ಅಲಭ್ಯ ಕುರಿತು ಒಂದು statement ಇದೆ. ೨ ಚುಚ್ಚುಮದ್ದುಗಳು ಕಳಪೆ ಗುಣಮಟ್ಟದ್ದಾಗಿವೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. 'ಔಷಧಕ್ಕೆ ಸಂಬಂಧಿಸಿದಂತೆ ಗುಣಮಟ್ಟ ವ್ಯವಸ್ಥೆಗೆ ಗ್ರಹಣ' ಎಂದು ಪತ್ರಿಕಾ ವರದಿ ಇದೆ. ಈ ರೀತಿಯಾಗಿ ದಿನಾಲು ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಹಲವಾರು ಪತ್ರಿಕೆಗಳಲ್ಲಿ ಬಂದಿರುವುದನ್ನು ಕಾಣುತ್ತಿದ್ದೇವೆ. ನನ್ನ ಮುಖ್ಯ ಉದ್ದೇಶ ಇಷ್ಟೇ, ನಾನು ಎರಡು ವಿಷಯಗಳನ್ನು ಮಾತ್ರ ಮಾನ್ಯ ಆರೋಗ್ಯ ಸಚಿವರ ಗಮನಕ್ಕೆ ತರಲು ಬಯಸುತ್ತೇನೆ. ಜಿಲ್ಲಾ ಮಟ್ಟ ಮತ್ತು ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಸರ್ಕಾರಿ ಆಸ್ಪತ್ರೆಗಳಲ್ಲಿ ತೀವ್ರ ಸೋಂಕಿಗೆ ಒಳಗಾಗುವ ರೋಗಿಗಳಿಗೆ ಬೇಕಾದಂತಹ anti-biotic ಔಷಧಗಳ ಕೊರತೆ ಇದೆ. ಎರಡನೆಯದಾಗಿ, ಇನ್ನಿತರೆ ಜೀವರಕ್ಷಕ ಔಷಧಗಳು ಕೂಡ ಅಲ್ಲಿ ಕೊರತೆ ಇದೆ. ಸರ್ಕಾರಿ ಆಸ್ಪತ್ರೆಗಳಿಗೆ ಹೋಗತಕ್ಕಂಥವರೆಲ್ಲಾ ಬಡವರೇ ಇರುತ್ತಾರೆ. ಇದರಿಂದ ಏನಾಗುತ್ತದೆಂದರೆ, ಡಾಕ್ಟರ್‌ಗಳು ಬಡ ರೋಗಿಗಳಿಗೆ ಹೊರಗಡೆ ಔಷಧಿ ಖರೀದಿ ಮಾಡಲು ಚೀಟಿ ಬರೆದು ಕೊಡುತ್ತಾರೆ. ಅವರು ಅದನ್ನು ಖರೀದಿ ಮಾಡಬೇಕಾದರೆ ಜೀವದ ಪ್ರಶ್ನೆ ಇರುತ್ತದೆ. ಅವರು ಖರೀದಿ ಮಾಡಬೇಕಾದರೆ ವೆಚ್ಚ ಹೆಚ್ಚಾಗುತ್ತದೆ. ಇಲ್ಲದಿದ್ದರೆ ಅವರು ಸಾವು-ನೋವುಗಳನ್ನು ಅನುಭವಿಸಬೇಕಾಗುತ್ತದೆ.

**ಉಪ ಸಭಾಪತಿಯವರು:-** ಡಾ.ತಳವಾರ್ ಸಾಬಣ್ಣನವರೇ, ಮೊದಲು ಪ್ರಶ್ನೆ ಕೇಳಿ. ನಂತರ ಉಪ ಪ್ರಶ್ನೆಯನ್ನು ಕೇಳಿ.

**ಡಾ.ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಅದೇ ಪ್ರಶ್ನೆಯನ್ನು ಕೇಳುತ್ತೇನೆ. ಇನ್ನು ಎರಡನೆಯದಾಗಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಗುಣಮಟ್ಟ ಬಹಳ ಕಡಿಮೆ ಇದೆಯೆಂದು ಲ್ಯಾಬ್‌ಗಳಲ್ಲಿಯೇ test ಮಾಡಿ ಅದನ್ನು recommend ಮಾಡಿದ್ದನ್ನು ನಾವು ಪತ್ರಿಕೆಗಳಲ್ಲಿ ವಿವರವಾಗಿ ನೋಡಿದ್ದೇವೆ. ಈ ದೃಷ್ಟಿಯಿಂದ ರಾಜ್ಯದ ಉಗ್ರಾಣಗಳಲ್ಲಿ ಇರತಕ್ಕಂಥ ಔಷಧಗಳ ಕೊರತೆ ಇದೆಯೇ? ತೀವ್ರ ಸೋಂಕಿಗೆ ಒಳಗಾಗುವ ರೋಗಿಗಳಿಗೆ ಬೇಕಾದಂತಹ ಔಷಧಗಳ ಕೊರತೆ ಇದೆಯೇ ಹಾಗೂ ಸರ್ಕಾರಿ ಆಸ್ಪತ್ರೆಗಳಿಗೆ ಗುಣಮಟ್ಟದ ಔಷಧಗಳ ಪೂರೈಕೆ ಆಗುತ್ತಿದೆಯೇ ಎಂದು ನಾನು ಮುಖ್ಯಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ.ತಳವಾರ್ ಸಾಬಣ್ಣನವರು ಬಹಳ ಪ್ರಮುಖವಾದ ಪ್ರಶ್ನೆಯನ್ನೇ ಕೇಳಿದ್ದಾರೆ. ಈಗ ಅವರು ಔಷಧಗಳ ಗುಣಮಟ್ಟದ ಬಗ್ಗೆ ಮೊದಲು ಮಾತನಾಡಿದರು. ಗುಣಮಟ್ಟ ಔಷಧಗಳ ಬಗ್ಗೆ ನಮ್ಮ ಇಲಾಖೆಯಿಂದ ಬಹಳಷ್ಟು ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದನ್ನು ತಾವು ಕೂಡ ಗಮನಿಸಿದ್ದೀರಿ. ಮಾನ್ಯ ಸದಸ್ಯರು ಏನು ಕೆಲವು ವರದಿಗಳನ್ನು ಮಾಡಿ ಹೇಳಿದರು ಹೇಳಿದರು, ಅದು ನಮ್ಮಿಂದಲೇ ಬಂದಿರತಕ್ಕಂಥ ವರದಿಗಳಾಗಿವೆ. ನಾವು ಅದನ್ನು ವಿಚಾರಣೆ ಮಾಡಿ ನಮ್ಮಲ್ಲಿ ಸರಬರಾಜು ಆಗುತ್ತಿರತಕ್ಕಂಥ ಔಷಧಿಗಳ ಗುಣಮಟ್ಟದ ಬಗ್ಗೆ ಎಲ್ಲಾ ಕಡೆ ಅದನ್ನು ತಪಾಸಣೆ ಮಾಡಿಸುತ್ತಿರತಕ್ಕಂಥದ್ದು. ನಮ್ಮಲ್ಲಿ ದೇಶದಲ್ಲೇ ಔಷಧಿಗಳ ಗುಣಮಟ್ಟದ ಬಗ್ಗೆ ಸಮಸ್ಯೆ ಇದೆ. ನಾವು ಈಗ ಏನು ಕೆಲವು ಸುಧಾರಣೆ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಬಹಳ ಮುಖ್ಯವಾಗಿ ಇದುವರೆಗೆ ನಮ್ಮ KSMSCL (Karnataka State Medical Suppliers Corporation Limited) ಮುಖಾಂತರ ಯಾವುದೇ ಔಷಧಿಯನ್ನು ಖರೀದಿ ಮಾಡಿ ಸರಬರಾಜು ಮಾಡಲಾಗುತ್ತಿದೆ. manufacture ಮಾಡುವರು ಗುಣಮಟ್ಟದ ಬಗ್ಗೆ report ಕೊಟ್ಟಿರುತ್ತಾರೆ. ಆದರೆ ಅವರು NABL( National Accreditation Board for Testing and Calibration Laboratories) Lab ರವರು ಕೂಡ ಗುಣಮಟ್ಟದ ಬಗ್ಗೆ ರಿಪೋರ್ಟ್ ಕೊಟ್ಟಿರುತ್ತಾರೆ. ನಾವು ಅದನ್ನು ಖರೀದಿ ಮಾಡಿ, suppliers ನಿಂದ ತೆಗೆದುಕೊಂಡು ಸರಬರಾಜು ಮಾಡಿದ ನಂತರ ಆ qualityಯನ್ನು NABL Lab ನಲ್ಲಿ check ಮಾಡಿಸುತ್ತೇವೆ. ಈಗ ನಾವೇನು ಹೊಸ ತೀರ್ಮಾನಕ್ಕೆ ಬಂದಿದ್ದೇವೆಂದರೆ, ಯಾರು ಬಿಡ್‌ದಾರರು ಬಿಡ್‌ನಲ್ಲಿ ಆಯ್ಕೆಯಾಗುತ್ತಾರೋ

ಅವರು ನಮಗೆ supply ಮಾಡುತ್ತಾರೆ. Supply ಮಾಡಿದ ನಂತರ ನಾವು entire stock ಅನ್ನು quarantine ಮಾಡಿಕೊಳ್ಳುತ್ತೇವೆ. ಈಗ ನಾವು ಹೊಸದಾಗಿ 10 NABL Labs ಅನ್ನು empanel ಮಾಡಿಕೊಂಡಿದ್ದೇವೆ. ಆ ಎಲ್ಲಾ batches ನ್ನು ನಾವು samples test ಮಾಡಿ, ಅದು certified ಆದ ನಂತರವೇ ನಾವು ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ ಮತ್ತು Primary Health Centres ಗಳಿಗೆ ಎಲ್ಲಾ ಕಡೆ ಸರಬರಾಜು ಮಾಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೇವೆ. ಅದು ಒಂದು ಹಂತದಲ್ಲಿ ಸಾಕಷ್ಟು check ಆಗುತ್ತದೆ. ಎರಡನೆಯದಾಗಿ, ಅದನ್ನು ಯಾರು supply ಮಾಡುತ್ತಾರೋ ಅವರು ಎರಡು ವರ್ಷಕ್ಕೊಮ್ಮೆ ಅಥವಾ ಮೂರು ವರ್ಷಕ್ಕೊಮ್ಮೆಯಾದರು ಭೇಟಿ ಕೊಟ್ಟು ಆ manufacturing facility ಉತ್ತಮ ಮಟ್ಟದಲ್ಲಿ ಇದೆಯೋ ಇಲ್ಲವೋ ಎಂಬುದನ್ನು ನಮ್ಮ ಅಧಿಕಾರಿಗಳು ಕೂಡ ತಪಾಸಣೆ ಮಾಡಬೇಕೆಂದು ಉದ್ದೇಶವನ್ನಿಟ್ಟುಕೊಂಡಿದ್ದೇವೆ. ನಮ್ಮ Tender Condition ನಲ್ಲಿ ಬರಬೇಕೆಂದು ಆ proposal ಅನ್ನು ಕೂಡ ನಾವು Finance Department ಗೆ ಕಳುಹಿಸಿದ್ದೇವೆ. ಅವರು ಅದಕ್ಕೆ ಇನ್ನೂ ಅಂತಿಮ ತೀರ್ಮಾನ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಅದನ್ನು ಕೂಡ ಮಾಡಿಕೊಂಡು ಈ ಒಂದು quality check ಅನ್ನು ಈ ರೀತಿ ತೆಗೆದುಕೊಂಡು ಬಂದರೆ, ಖಂಡಿತವಾಗಿಯು ಸ್ವಲ್ಪಮಟ್ಟಿಗೆ ಇದು ಸುಧಾರಣೆಯಾಗುತ್ತದೆ ಎಂದು ಅಂದುಕೊಂಡಿದ್ದೇನೆ.

ಎರಡನೆಯದಾಗಿ, ಮಾನ್ಯ ಸದಸ್ಯರು ಅಗತ್ಯವಿರತಕ್ಕಂಥ ಔಷಧಿಗಳು ಎಲ್ಲಾ ಇದೆಯೋ, ಇಲ್ಲವೋ ಎಂದು ಪ್ರಶ್ನೆ ಕೇಳಿದ್ದಾರೆ. ನಾನು ನಮ್ಮ ಉತ್ತರದಲ್ಲಿ ಸವಿಸ್ತಾರವಾಗಿ ಹೇಳಿದ್ದೇನೆ. ಕೆಲವು ಔಷಧಗಳಿಗೆ tender process ನಲ್ಲಿ ಬಿಡ್‌ದಾರರು ಬರುತ್ತಿಲ್ಲ. ಏಕೆಂದರೆ quantity ಕಡಿಮೆ ಇರುತ್ತದೆ. ಅವರು ಅದರಲ್ಲಿ ಭಾಗವಹಿಸುವುದಕ್ಕೆ ಇಷ್ಟಪಡುವುದಿಲ್ಲ. ಇನ್ನೂ ಕೆಲವರು ಅದಕ್ಕೆ respond ಕೂಡ ಮಾಡುವುದಿಲ್ಲ. ಅದಕ್ಕೋಸ್ಕರ ನಾವು ಅವರಿಗೆ ಹಲವಾರು ಬಾರಿ ಟೆಂಡರ್ ಕರೆದರೂ ಕೂಡ ಬರುವುದಿಲ್ಲ. ನಾವು ಅದಕ್ಕೆ ಏನು ಮಾಡಿದ್ದೇವೆಂದರೆ, ಸ್ಥಳೀಯ ಮಟ್ಟದಲ್ಲಿ ಅವರಿಗೆ NFDSI (National Free Drugs Service Initiative) ದುಡ್ಡು, ABArK (Ayushman Bharath Arogya Karnataka) ದುಡ್ಡು ಮತ್ತು ARS (Arogya Raksha Samithi) ದುಡ್ಡು ಇರುತ್ತದೆ. ಯಾವ್ಯಾವುದನ್ನು ನಾವು ಖರೀದಿ ಮಾಡಿ ಕೊಡುವುದಕ್ಕೆ ಆಗುವುದಿಲ್ಲವೋ ಅದನ್ನು ನಿಮ್ಮ ಮಟ್ಟದಲ್ಲೇ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಅವರ ಮಟ್ಟದಲ್ಲೇ ಬಹುತೇಕ ಎಲ್ಲಾ ತೆಗೆದುಕೊಳ್ಳುತ್ತಿದ್ದಾರೆ. ಮತ್ತೆ ನಾವೇನು supply ಮಾಡುತ್ತಿದ್ದೇವೋ ಅದನ್ನೂ ಕೂಡ ಕೊಟ್ಟಿದ್ದೇವೆ. ಇದರಲ್ಲಿ ಏನಾದರೂ ವ್ಯತ್ಯಾಸಗಳಿದ್ದರೆ, ಅವರ ದುಡ್ಡಿನಲ್ಲಿ ತೆಗೆದುಕೊಳ್ಳುವುದಕ್ಕೆ blanket ಆಗಿ ನಾವು ಅವರಿಗೆ permission ಕೊಟ್ಟಿದ್ದೇವೆ. ಮತ್ತೆ ನಾವು

ಹೊಸದಾಗಿ ಏನು ಮಾಡಿದ್ದೇವೆಂದರೆ, 4(g) exemption ಯಲ್ಲಿ ಯಾರ್ಯಾರು ಇಂತಿಂಥ ಕೆಲವು drugs ಗೆ ಬಿಡ್‌ದಾರರು ಮುಂದೆ ಬರುತ್ತಿಲ್ಲವೋ ಅದನ್ನು ನಮ್ಮ KAPL (Karnataka Antibiotics and Pharmaceuticals Limited) ಎಂದು ಒಂದು public sector ಇದೆ. 4(g) exemptions ಮುಖಾಂತರ ಅಂತಹ drugs ಅನ್ನು ಖರೀದಿ ಮಾಡುವುದಕ್ಕೆ ಇವತ್ತಿನ ದಿವಸ ನಮಗೆ permission ಸಿಕ್ಕಿದೆ. ಅದನ್ನೂ ಕೂಡ ನಾವು ಅವರ ಮುಖಾಂತರ ಖರೀದಿ ಮಾಡುವುದಕ್ಕೆ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಒಟ್ಟಾರೆಯಾಗಿ ಈ ಒಂದು ಸಮಸ್ಯೆ ನೂರಕ್ಕೆ ನೂರರಷ್ಟು ಸರಿಯಿದೆಯೆಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಸಾಕಷ್ಟು ಹಣವನ್ನು ನಾವು ಎಲ್ಲಾ ಆಸ್ಪತ್ರೆಗಳಿಗೂ ಕೊಟ್ಟಿದ್ದೇವೆ. ಆದರೆ ಕೆಲವು ಸಮಸ್ಯೆ ಏನಾಗುತ್ತಿದೆಯೆಂದರೆ, ನಮ್ಮಲ್ಲಿ ಇರುವಂತಹ ಒಟ್ಟು Essential Drugs ಮತ್ತು Desirable Drugs ಎಂದು ಇರುತ್ತದೆ. ಈ Essential Drugs ಮತ್ತು Desirable Drugs, 2022-23ನೆಯ indent ಪ್ರಕಾರ ಒಟ್ಟಾರೆ 732 ಡ್ರಗ್ಸ್ ನಮ್ಮಲ್ಲಿ approve ಆಗಿರುವಂಥದ್ದು. ಆದರೆ ಇದರಿಂದಾಗಿ ಈಗ ಹಲವಾರು ಬೇಡಿಕೆ ಇರುವಂತಹ ಡ್ರಗ್ಸ್ ಅನ್ನು ನಾವು supply ಮಾಡುತ್ತಿಲ್ಲ. ಈ ವರ್ಷ ನಾವು ಹೊಸ indent ಮಾಡಿ 732 drugs ಏನಿದೆಯೋ ಅದನ್ನು ಈಗ 1084 drugs ಗೆ ಹೆಚ್ಚಿಗೆ ಮಾಡಿಕೊಂಡಿದ್ದೇವೆ. ಈ ವರ್ಷ 1,084 drugs ಅನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಏಕೆಂದರೆ, ಅದಕ್ಕೆ ಬೇಡಿಕೆ ಇದೆ. ಆದರೆ ನಮ್ಮಲ್ಲಿ supply ಇಲ್ಲ. ನಮ್ಮ ಟೆಕ್ನಿಕಲ್ ಲಿಸ್ಟ್ ಪ್ರಕಾರ ಇರುವುದಿಲ್ಲ. ಹಾಗಾಗಿ, ಡಾಕ್ಟರ್‌ಗಳು ಅನಿವಾರ್ಯವಾಗಿ ಇದನ್ನು ಹೊರಗಡೆ ಖರೀದಿ ಮಾಡಿ ಎಂದು ಬರೆದುಕೊಡುತ್ತಾರೆ. Normal supply ಇರುವುದಿಲ್ಲ. ಏಕೆಂದರೆ ಅದು ಅವರಿಗೆ ಬೇಕಾಗಿರುತ್ತದೆ. ಕೆಲವು ಸಂದರ್ಭದಲ್ಲಿ ಜನ ಆಸ್ಪತ್ರೆಗಳಿಗೆ ಹೋದಾಗ, ನಮಗೆ branded drugs ಬರೆದುಕೊಡುವಂತೆ ಕೇಳುತ್ತಾರೆ. ಆಗ ಒಂದೊಂದು ಬಾರಿ ನಮ್ಮ Doctors ಬರೆದುಕೊಡುತ್ತಾರೆ. ಅದನ್ನು ಸರಿಪರಿಸುವುದಕ್ಕೆ ಈ ವರ್ಷ ನಾವು ಒಟ್ಟು 1,084 ಡ್ರಗ್ಸ್‌ಗೆ ಏರಿಸಿದ್ದೇವೆ. ಸುಮಾರು 1,250 ಕ್ಕೂ ಹೆಚ್ಚು ಡ್ರಗ್ಸ್‌ನ್ನು ನಮ್ಮ ಹೊಸ ಇಂಡೆಂಟ್‌ಗೆ ತೆಗೆದುಕೊಂಡಿದ್ದೇವೆ. ಇಂಡೆಂಟ್ ಹೇಗೆ ಮಾಡಿದ್ದೇವೆಂದರೆ, ಬೇಡಿಕೆ ಇರುವಂತಹ ಜನರಿಗೆ ಅಗತ್ಯವಿರುವಂಥ ಡ್ರಗ್ಸ್‌ನಲ್ಲಿ Essential Drugs ಮತ್ತು Desirable Drugs ಇದನ್ನು ನಾವು ತೆಗೆದುಕೊಂಡಿದ್ದೇವೆ. ಈ ರೀತಿ ಮಾಡಿ ಇದನ್ನು ನೀಗಿಸುವಂಥದ್ದನ್ನು ಮಾಡಬೇಕು.

ಮಾನ್ಯ ಸಭಾಪತಿಯವರೇ, ಇದು ನಮ್ಮ ಇಲಾಖೆಯ ಪ್ರಮುಖ ಜವಾಬ್ದಾರಿ ಆಗಬೇಕು. ಏಕೆಂದರೆ, ನಾವು ಹೊಸ ಆಸ್ಪತ್ರೆ, ಹೊಸ ಕಟ್ಟಡ ಮತ್ತು ಬೇರೆ ಬೇರೆ ಹೊಸ programmes ಎಲ್ಲವನ್ನೂ ಮಾಡುವುದಕ್ಕೆ ಹೋಗುತ್ತವೆ.

ಆದರೆ ಮುಖ್ಯವಾಗಿ ನಮ್ಮ ಇಲಾಖೆಯ ಜವಾಬ್ದಾರಿ ಏನೆಂದರೆ, ಔಷಧಿಗಳನ್ನು ಸರಿಯಾದ ರೀತಿಯಲ್ಲಿ ಸರಬರಾಜು ಮಾಡಬೇಕು. ಒಬ್ಬ ವ್ಯಕ್ತಿ ಸರ್ಕಾರಿ ಆಸ್ಪತ್ರೆಗೆ ಹೋದರೆ ಅವರಿಗೆ ನಾವೇನು ಕೊಡಬೇಕಾಗಿರತಕ್ಕಂಥ ಔಷಧಿಗಳು ಉಚಿತವಾಗಿ ಸಿಗಬೇಕು. ಆಸ್ಪತ್ರೆಗಳಿಗೆ ಹೋದಾಗ ಅವರಿಗೆ ನಮ್ಮ ವೈದ್ಯರು ಮತ್ತು ಸಿಬ್ಬಂದಿಯವರು ಅಲ್ಲಿ ಇರಬೇಕು. ಇವೆರಡೂ basic duty. ನಾವು ಒಂದೊಂದು ಬಾರಿ ಏನು ಮಾಡುತ್ತೇವೆಂದರೆ, ಇದನ್ನು ಮರೆತುಬಿಟ್ಟು ಬೇರೆಯೆಲ್ಲಾ ಮಾಡುತ್ತೇವೆ. ಆದರೆ ಇದರ ಮೇಲೆ ಗಮನ ಕಡಿಮೆಯಾಗುತ್ತದೆ. ಅದಕ್ಕೆ ಇದರ ಬಗ್ಗೆ ಆದ್ಯತೆಯನ್ನು ಕೊಡುತ್ತಿದ್ದೇವೆ. KSMSCL ನಲ್ಲಿ ಸಾಕಷ್ಟು ಸುಧಾರಣೆಗಳನ್ನು ಮಾಡುತ್ತಿದ್ದೇವೆ ಮತ್ತು tender process ಅನ್ನು ಸರಳೀಕರಣ ಮಾಡಿದ್ದೇವೆ. ಅದಕ್ಕೂ ಕೂಡ ತುಂಬಾ strict conditions ಇತ್ತು. ಅದಕ್ಕೆ ಬಿಡ್‌ದಾರರೇ ಬರುತ್ತಿರಲಿಲ್ಲ ಮತ್ತು ಕೆಲವೇ ಕೆಲವು ಬಿಡ್‌ದಾರರಿಗೆ ಅನುಕೂಲವಾಗುವುದು ಇತ್ತು. ಈಗ ನಾವು ಹೆಚ್ಚು ಬಿಡ್‌ದಾರರು ಬರಲು ವ್ಯವಸ್ಥೆ ಮಾಡಿದ್ದೇವೆ. ಈಗ ತಮಿಳುನಾಡಿನಲ್ಲಿ ವ್ಯವಸ್ಥೆ ಬಹಳ ಚೆನ್ನಾಗಿದೆ.

**(ಮುಂದು)**

(155)10.3.2025/11.50/ಎಂ.ಎಂ-ಆರ್.ಎನ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ದಿನೇಶ್ ಗುಂಡೂರಾವ್ (ಮುಂದು):-**

ಅದನ್ನು ಕೂಡ ನೋಡಿ ಪರಿಶೀಲನೆ ಮಾಡಲಾಗಿದೆ. ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಸಹ ಮಾಡಿದ್ದೇವೆ. ಈ ರೀತಿ ಹೆಚ್ಚು ಬಿಡ್ಡುದಾರರು ಭಾಗವಹಿಸವಹಿಸಬೇಕು ಎಂದು ಷರತ್ತುಗಳನ್ನು ಸಹ ಸರಳೀಕರಣ ಮಾಡಿದ್ದೇವೆ. ಕೆಲವು ಅಗತ್ಯವಿರುವ ಹಾಗೂ ಕಡಿಮೆ quantify ಇರುವುದಕ್ಕೆ 4(g) Exemption ತೆಗೆದುಕೊಂಡಿದ್ದೇವೆ. ಖಂಡಿತವಾಗಿಯೂ ಇದನ್ನು ನೀಗಿಸುವ ಕೆಲಸ ಮಾಡುತ್ತಿದ್ದೇವೆ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿವರವಾದ ಉತ್ತರ ಕೊಟ್ಟಿದ್ದಾರೆ. ಅವರು ತೆಗೆದುಕೊಂಡಿರುವ ಕ್ರಮಗಳಿಗೆ ಬೆಂಬಲ ಸೂಚಿಸುತ್ತೇನೆ. ಆದರೆ ಇದು ಲಕ್ಷಾಂತರ ಬಡವರ ಜೀವನದ ಸಮಸ್ಯೆಯಾಗಿರುವುದರಿಂದ ಮತ್ತು ಇತ್ತೀಚೆಗೆ ಪತ್ರಿಕೆಗಳಲ್ಲಿ ನಿರಂತರವಾಗಿ ಬರುತ್ತಿದೆ ಕಳಪೆ ಗುಣಮಟ್ಟದ ಔಷಧಿಗಳ ಕಾರಣಕ್ಕಾಗಿಯೇ ಬಾಣಂತಿಯರ ಸಾವು ಆಗುತ್ತಿರುವುದು ತಮ್ಮ ಗಮನಕ್ಕೂ ಸಹ ಬಂದಿದೆ. ಬೆಳಗಾವಿಯಲ್ಲಿ ಕಳೆದ ವಾರ ಸಹ ಒಬ್ಬ ಬಾಣಂತಿಯ ಜೀವ ಹೋಯಿತು. ಈ ರೀತಿ ನಿರಂತರವಾಗಿ ನಡೆಯುತ್ತಿರುವಂತಹ ಈ ಸಮಸ್ಯೆ ಬಹಳ ಗಂಭೀರವಾದಂತಹ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಸರ್ಕಾರವು ಬಹಳ ಗಂಭೀರವಾಗಿ ತೆಗೆದುಕೊಂಡರೆ ಔಷಧಿಗಳ ಪ್ರಮಾಣ ಮತ್ತು ಗುಣಮಟ್ಟಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಕಟ್ಟುನಿಟ್ಟಿನ ನೀತಿ ಮತ್ತು

ಕ್ರಮಗಳಿಗೆ ಸಂಬಂಧಪಟ್ಟಂತೆ ನೀತಿಯೊಂದನ್ನು ಹೊರಡಿಸಿದರೆ ನಮ್ಮ ಇಡೀ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂದು ಸಲಹೆ ಕೊಡುತ್ತೇನೆ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**:- ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಖಂಡಿತವಾಗಿಯೂ ನಾವು ಕೆಲಸ ಮಾಡಲೇಬೇಕಾಗುತ್ತದೆ. ನಾನೀಗ ಕೇಂದ್ರದ ಜೊತೆಯಲ್ಲಿಯೂ ಕೂಡ ಸಂಪರ್ಕದಲ್ಲಿದ್ದೇನೆ. ಡ್ರಗ್ಸ್ ವಿಚಾರವಾಗಿ ಅವರಿಗೆ ಪತ್ರಗಳನ್ನು ಬರೆದಿದ್ದೇನೆ. ಇಂತಹ ಅನೇಕ ಡ್ರಗ್ಸ್ ಕಂಪನಿಗಳಿರುವುದು ಬೇರೆ ಬೇರೆ ರಾಜ್ಯಗಳಲ್ಲಿ ಇದರ ಬಗ್ಗೆ ಹೆಚ್ಚು ಗಮನ ಕೊಡಬೇಕು. ರಾಷ್ಟ್ರಮಟ್ಟದಲ್ಲಿ ಎಲ್ಲಾ ರಾಜ್ಯಗಳೂ ಸೇರಿ ಒಟ್ಟಾರೆ ಕೆಲಸ ಮಾಡಬೇಕು ಎಂದು ಹೇಳಿದ್ದೇವೆ. ಇದನ್ನು ವಿಶ್ಲೇಷಣೆ ಮಾಡಿ ಪರೀಕ್ಷೆ ಮಾಡುವಲ್ಲಿ ನಮ್ಮ ಔಷಧ ನಿಯಂತ್ರಣ ಇಲಾಖೆಯು ಕಾರ್ಯಗತವಾಗಿದೆ. ನಾವು ಎಲ್ಲಾ ಕಡೆಯೂ ಟೆಸ್ಟ್ ಮಾಡಿಸುತ್ತಿದ್ದೇವೆ. ಟೆಸ್ಟ್ ರಿಪೋರ್ಟ್‌ಗಳು ಸಾರ್ವಜನಿಕರಿಗೆ ಗೊತ್ತಾಗಬೇಕೆಂದು ಮಾಡುತ್ತಿದ್ದೇವೆ. ಈಗ ನಾವು ಒಂದು Drug Recall Policy ಯನ್ನು ತೆಗೆದುಕೊಂಡು ಬರುತ್ತಿದ್ದೇವೆ. ಇಡೀ ದೇಶಕ್ಕೆ ಮಾದರಿಯಾಗುವಂತಹ ನೀತಿಯೊಂದನ್ನು ತೆಗೆದುಕೊಂಡು ಬರುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದ್ದೇವೆ. ಆದರೆ ಇದು ಕೇಂದ್ರದ ಔಷಧ ನಿಯಂತ್ರಣ ಇಲಾಖೆಯಿಂದಲೂ ಸಹ ನಮಗೆ ಸಹಕಾರ ಬೇಕಾಗುತ್ತದೆ. ನಾವು ನಮ್ಮ ಕಡೆಯಿಂದಲೂ ಮೂವ್ ಮಾಡಿದ್ದೇವೆ. ಖಂಡಿತವಾಗಿಯೂ ನಮಗೆ ಇದರ ಬಗ್ಗೆ ಆದ್ಯತೆ ಇದೆ. ಬಾಣಂತಿಯರ ಸಾವಿನ ಬಗ್ಗೆ ಹೇಳುವುದಾದರೆ, ನಾವು ಆಯವ್ಯಯವನ್ನು ಓದಿದರೆ ವಿಶೇಷವಾದಂತಹ ಆದ್ಯತೆಯನ್ನು ಅವರಿಗೆ ಈಗಾಗಲೇ ಕೊಟ್ಟುಬಿಟ್ಟಿದ್ದೇವೆ. ಕಳೆದ ಜನವರಿ ತಿಂಗಳಿನಿಂದ ಪ್ರತಿಯೊಂದು ಸಾವನ್ನು ಕೂಡ ನಾವು ಪರೀಕ್ಷೆ ಮಾಡುತ್ತಿದ್ದೇವೆ. ಅದು ಏತಕ್ಕಾಯಿತು, ಏನಾಯಿತು, ಎಲ್ಲಿ ಗ್ಯಾಪ್ ಇದೆ, ಅಲ್ಲಿ ಡಾಕ್ಟರ್ಸ್ ಇರಲಿಲ್ಲವೇ, ಔಷಧಿಗಳಿರಲಿಲ್ಲವೇ ಅಥವಾ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲವೇ ಎಂಬ ಬಗ್ಗೆ ನಾವೊಂದು ನೀತಿಯನ್ನು ತೆಗೆದುಕೊಂಡು ಬಂದಿದ್ದೇವೆ. ಅದರ ಮುಖಾಂತರವೇ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ 360 ಕೋಟಿ ರೂಪಾಯಿಗಳನ್ನು ಮೀಸಲಿಟ್ಟು ತಡೆಗಟ್ಟಬಹುದಾದಂತಹ ಬಾಣಂತಿಯರ ಸಾವನ್ನು ಶೂನ್ಯಕ್ಕೆ ಇಳಿಸಬೇಕೆಂಬ ಅಭಿಯಾನವನ್ನು ವಿಶೇಷವಾಗಿ ಮಂಡಿಸಿದ್ದೇವೆ. ನಾವು ಬಹಳಷ್ಟು ವ್ಯವಸ್ಥಿತವಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ನಿಮ್ಮ ಸಲಹೆ ಸಹಕಾರಗಳನ್ನು ನಾನು ಸ್ವೀಕಾರ ಮಾಡುತ್ತೇನೆ. ನಾವೆಲ್ಲರೂ ಸೇರಿ ಇದರಲ್ಲಿ ಗಮನ ಕೊಟ್ಟು ಕೆಲಸ ಮಾಡಬೇಕೆಂಬುದನ್ನು ಖಂಡಿತವಾಗಿಯೂ ನಾನು ಒಪ್ಪಿಕೊಳ್ಳುತ್ತೇನೆ.

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 373

ಸದಸ್ಯರ ಹೆಸರು : ಶ್ರೀ ಎಂ.ಎಲ್. ಅನಿಲ್‌ಕುಮಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 10.03.2025

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದ ಯೋಜನೆಯ ಉದ್ದೇಶವೇನು; ಇದನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು; (ಸಂಪೂರ್ಣ ಮಾಹಿತಿ ನೀಡುವುದು) | **ಮಧ್ಯಾಹ್ನ ಬಿಸಿಯೂಟ ಯೋಜನೆಯ ಉದ್ದೇಶಗಳು ಕೆಳಕಂಡಂತಿದೆ.**<br>1. ಶಾಲಾ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಹೆಚ್ಚಿಸುವುದು.<br>2. ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಮಕ್ಕಳು ಶಾಲೆಯನ್ನು ತೊರೆಯದಂತೆ ತಡೆಯುವುದು.<br>3. ಶಾಲಾ ಮಕ್ಕಳ ಪೌಷ್ಟಿಕಾಂಶ ಹೆಚ್ಚಿಸುವುದರ ಮೂಲಕ ಅವರ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ವೃದ್ಧಿಗೊಳಿಸುವುದು.<br>4. ರಾಜ್ಯದಲ್ಲಿ ಶಾಲಾ ಮಕ್ಕಳ ಅಪೌಷ್ಟಿಕತೆ, ಅನಿಮಿಯಾ ಮತ್ತು ಬಹುಪೋಷಕಾಂಶಗಳ ಕೊರತೆಯಿಂದಾಗುವ ಅನಾರೋಗ್ಯ ಪರಿಸ್ಥಿತಿಯನ್ನು ತಡೆಗಟ್ಟುವುದು.<br>5. ಶಾಲಾ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ವೃದ್ಧಿಸುವುದು.<br>6. ಸಾಮಾಜಿಕ ಸಮಾನತೆಯನ್ನು ಕಾಯ್ದುಕೊಂಡು ರಾಷ್ಟ್ರೀಯ ಭಾವೈಕ್ಯತೆಯನ್ನು ಮಕ್ಕಳ ಮನೋಧೋರಣೆಯಲ್ಲಿ ಬಲಪಡಿಸುವುದು.<br>ರಾಜ್ಯದಲ್ಲಿ ಮಧ್ಯಾಹ್ನ ಬಿಸಿಯೂಟ ಯೋಜನೆಯನ್ನು ದಿನಾಂಕ: 02.10.2001 ರಿಂದ ಪ್ರಾರಂಭಿಸಲಾಗಿದೆ. |
| ಆ) | ಈ ಯೋಜನೆಯಡಿಯಲ್ಲಿ ಪೌಷ್ಠಿಕ ಆಹಾರ ಮೊಟ್ಟೆ ಮತ್ತು ಇನ್ನಿತರ ಉತ್ಪನ್ನಗಳನ್ನು ಯಾವ ರೀತಿ ಖರೀದಿಸಲಾಗುವುದು; ಪ್ರತಿ ಉತ್ಪನ್ನಗಳಿಗೆ ಸರ್ಕಾರದಿಂದ ನಿಗಧಿಪಡಿಸಿರುವ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಸದರಿ ಯೋಜನೆಯಡಿ ನೀಡಲಾಗುತ್ತಿರುವ ಪೂರಕ ಪೌಷ್ಠಿಕ ಆಹಾರವಾಗಿ ಬೇಯಿಸಿದ ಮೊಟ್ಟೆ ಅಥವಾ ಮೊಟ್ಟೆಯನ್ನು ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣನ್ನು ಪ್ರತಿ ಶಾಲಾ ಹಂತದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು, ಶಾಲಾ ಮುಖ್ಯ ಶಿಕ್ಷಕರು ಹಾಗೂ ಇತರರನ್ನೊಳಗೊಂಡ ಖರೀದಿ ಸಮಿತಿಯನ್ನು ರಚಿಸಿಕೊಂಡು ಖರೀದಿಸಲಾಗುತ್ತದೆ. ಪೂರಕ ಪೌಷ್ಠಿಕ ಆಹಾರಗಳಾದ ಮೊಟ್ಟೆ/ ಬಾಳೆಹಣ್ಣಿಗೆ ಪ್ರತಿ ವಿದ್ಯಾರ್ಥಿಗೆ ಒಂದು ದಿನಕ್ಕೆ ರೂ 6/-ಗಳ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ.<br>ಶ್ರೀ ಸತ್ಯ ಸಾಯಿ ಅನ್ನಪೂರ್ಣ ಟ್ರಸ್ಟ್ (ರಿ) ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ, ಈ ಸಂಸ್ಥೆಯ ವತಿಯಿಂದ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಸಾಯಿ ಶ್ಯೂರ್ ರಾಗಿ ಹೆಲ್ತ್ ಮಿಕ್ಸ್ ಪುಡಿಯನ್ನು ಉಚಿತವಾಗಿ ನೀಡಲಾಗುತ್ತಿದೆ. |

| | | |
|---|---|---|
| | | ಸದರಿ ಹೆಲ್ತ್ ಮಿಕ್ಸ್ ಪುಡಿಯನ್ನು ಕ್ಷೀರಭಾಗ್ಯ ಯೋಜನೆಯಡಿ ನೀಡಲಾಗುತ್ತಿರುವ ಬಿಸಿಹಾಲಿನೊಂದಿಗೆ ಮಿಶ್ರಣ ಮಾಡಿ ವಿದ್ಯಾರ್ಥಿಗಳಿಗೆ ವಾರದಲ್ಲಿ ಮೂರು ದಿನ ನೀಡಲಾಗುತ್ತಿದೆ.<br><br>ಸಾಯಿ ಶ್ಯೂರ್ ರಾಗಿ ಹೆಲ್ತ್ ಮಿಕ್ಸ್ ಪುಡಿಯನ್ನು ಸಾಗಾಣಿಕೆ ವೆಚ್ಚದ ದರವನ್ನು ಪ್ರತಿ ಕೆ.ಜಿಗೆ ರೂ 12.42 ರಂತೆ ನಿಗದಿಪಡಿಸಲಾಗಿದೆ. |
| ಇ) | ಈ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ತಯಾರಕರು, ನಿರ್ವಾಹಕರು ಎಷ್ಟು; ಸದರಿಯವರಿಗೆ ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ನೀಡುವ ವೇತನ ಹಾಗೂ ಇನ್ನಿತರ ಸೌಲಭ್ಯಗಳ ಸಂಪೂರ್ಣ ಮಾಹಿತಿ ನೀಡುವುದು; | 2024-25ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ 44,812 ಮುಖ್ಯ ಅಡುಗೆ ಸಿಬ್ಬಂದಿಗಳು 68,387 ಸಹಾಯಕ ಅಡುಗೆ ಸಿಬ್ಬಂದಿಗಳನ್ನು ಒಳಗೊಂಡಂತೆ ಒಟ್ಟಾರೆ 1,13,199 ಅಡುಗೆ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.<br><br>ಮಧ್ಯಾಹ್ನದ ಬಿಸಿಯೂಟ ಪ್ರಾರಂಭವಾದಾಗಿನಿಂದ ಇಲ್ಲಿಯವರೆವಿಗೂ ನೀಡಿರುವ ಅಡುಗೆ ಸಿಬ್ಬಂದಿಗಳಿಗೆ ನೀಡಲಾಗಿರುವ ತಲಾ ಮಾಸಿಕ ಗೌರವ ಸಂಭಾವನೆ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.<br><br>ಅಡುಗೆ ಸಿಬ್ಬಂದಿಗಳಿಗೆ ನೀಡಲಾಗಿರುವ ಇತರೆ ಸೌಲಭ್ಯಗಳ ವಿವರ ಕೆಳಕಂಡಂತಿದೆ.<br><br>1)ಅಡುಗೆ ಸಿಬ್ಬಂದಿಯವರು ಅಡುಗೆ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಸುಟ್ಟಗಾಯಗಳಾದಲ್ಲಿ ರೂ.30,000/-, ಶಾಶ್ವತ ಅಂಗವಿಕಲತೆ ಉಂಟಾದಲ್ಲಿ ಗರಿಷ್ಠ ರೂ.75,000/- ಮತ್ತು ಸುಟ್ಟಗಾಯಗಳಾಗಿ ಮರಣ ಹೊಂದಿದ ಸಂದರ್ಭದಲ್ಲಿ ರೂ.1,00,000/-ಗಳ ಪರಿಹಾರವನ್ನು ನೀಡಲಾಗುತ್ತದೆ.<br><br>2) ಮಧ್ಯಾಹ್ನ ಉಪಹಾರ ಯೋಜನೆಯಡಿ ಆಯ್ಕೆಗೊಂಡು 60 ವರ್ಷಗಳ ವಯೋಮಾನವನ್ನು ಪೂರ್ಣಗೊಳಿಸಿ ದಿನಾಂಕ: 31.03.2022ಕ್ಕೆ ಅಥವಾ ನಂತರ ಕರ್ತವ್ಯದಿಂದ ಬಿಡುಗಡೆ ಹೊಂದಿದ ಅಡುಗೆ ಸಿಬ್ಬಂದಿಗೆ ಅಂತಿಮವಾಗಿ ಒಂದು ಬಾರಿಯ ಇಡಿಗಂಟು ಸೌಲಭ್ಯವನ್ನು ಕೆಳಕಂಡಂತೆ ನೀಡಲು ಅನುಮತಿ ನೀಡಲಾಗಿದೆ. |

| ಅಡುಗೆ ಸಿಬ್ಬಂದಿಯವರು ಸಲ್ಲಿಸಿದ ಸೇವೆಯ ಅವಧಿ | ಅಡುಗೆ ಸಿಬ್ಬಂದಿಗಳು ಸಲ್ಲಿಸಿದ ಸೇವೆಯನ್ನು ಆಧರಿಸಿ ಒಂದು ಬಾರಿಗೆ ನೀಡಲು ಆದೇಶಿಸಲಾಗಿರುವ ಅಂತಿಮ ಇಡಿಗಂಟಿನ ಮೊತ್ತ |
|---|---|
| 5 ವರ್ಷಕ್ಕೂ ಮೇಲ್ಪಟ್ಟು ಹಾಗೂ 15 ವರ್ಷಕ್ಕಿಂತ ಕಡಿಮೆ | ರೂ 30,000/- (ಮೂವತ್ತು ಸಾವಿರ ಮಾತ್ರ) |
| 15 ವರ್ಷ ಹಾಗೂ ಅದಕ್ಕೂ ಹೆಚ್ಚು | ರೂ 40,000/- (ನಲವತ್ತು ಸಾವಿರ ಮಾತ್ರ) |

| | | |
|---|---|---|
| ಈ) | ಸದರಿ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಬೇಸಿಗೆ ರಜಾ, ದಸರಾ ರಜಾ ಹಾಗೂ ಬರಗಾಲದ ರಜೆಗಳಲ್ಲಿ ವೇತನ ಹಾಗೂ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆಯೇ; ಇಲ್ಲದಿದ್ದಲ್ಲಿ ಯಾವ ಕಾಲಮಿತಿಯೊಳಗೆ ಈ ಸೌಲಭ್ಯವನ್ನು ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದು? (ಸಂಪೂರ್ಣ ಮಾಹಿತಿ ನೀಡುವುದು) | ಮಧ್ಯಾಹ್ನ ಉಪಹಾರ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುವುದರಿಂದ, ಸದರಿ ಯೋಜನೆಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅನುಷ್ಠಾನ ಮಾಡಲಾಗುತ್ತದೆ.<br><br>ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಮಧ್ಯಾಹ್ನ ಉಪಹಾರ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳಿಗೆ ವರ್ಷದಲ್ಲಿ 10 ತಿಂಗಳ ಅವಧಿಗೆ ಮಾತ್ರ ಗೌರವ ಸಂಭಾವನೆಯನ್ನು ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.<br>ಪ್ರತಿ ಆರ್ಥಿಕ ವರ್ಷದಲ್ಲಿ 10 ತಿಂಗಳ ಅವಧಿಗೆ ಮಾತ್ರ ಶಾಲೆಗಳು ನಡೆಯುತ್ತದೆ. ಬೇಸಿಗೆ ರಜೆ ಅವಧಿಯಲ್ಲಿ ಶಾಲೆಗಳು ನಡೆಯುವುದಿಲ್ಲ.<br><br>ಆದಕಾರಣ ಪ್ರತಿ ಆರ್ಥಿಕ ವರ್ಷದಲ್ಲಿ ಜೂನ್ ಮಾಹೆಯಿಂದ ಆರ್ಥಿಕ ವರ್ಷದ ಅಂತ್ಯದ ಮಾರ್ಚ್ ಮಾಹೆಯವರೆಗೆ 10 ತಿಂಗಳ ಅವಧಿಗೆ ಮಾತ್ರ ಮಧ್ಯಾಹ್ನ ಬಿಸಿಯೂಟ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳಿಗೆ ಗೌರವ ಸಂಭಾವನೆಯನ್ನು ಪಾವತಿಸಲಾಗುತ್ತದೆ. ಬೇಸಿಗೆ ರಜೆ ಅವಧಿಯಲ್ಲಿ ಶಾಲೆಗಳು ನಡೆಯದ ಕಾರಣ ಅಡುಗೆ ಸಿಬ್ಬಂದಿಗಳಿಗೆ ಗೌರವ ಸಂಭಾವನೆಯನ್ನು ನೀಡಲು ಅವಕಾಶವಿರುವುದಿಲ್ಲ.<br><br>ಆದರೆ ಬೇಸಿಗೆ ರಜೆ ಅವಧಿಯಲ್ಲಿ ಬರಪೀಡಿತ ಪ್ರದೇಶಗಳಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ನೀಡುವುದರಿಂದ, ಈ ಅವಧಿಯಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ಸಿದ್ಧಪಡಿಸಲು ಕಾರ್ಯನಿರ್ವಹಿಸುವ ಅಡುಗೆ ಸಿಬ್ಬಂದಿಗಳಿಗೆ ಗೌರವ ಸಂಭಾವನೆಯನ್ನು ನೀಡಲಾಗುತ್ತದೆ. |

## ಅನುಬಂಧ-1

**ಅಡುಗೆ ಸಿಬ್ಬಂದಿಗಳಿಗೆ 2001 ರಿಂದ ಇಲ್ಲಿಯವರೆಗೆ ನೀಡಿರುವ ಮತ್ತು ಪ್ರಸ್ತುತ ನೀಡಲಾಗುತ್ತಿರುವ ಮಾಸಿಕ ಗೌರವ ಸಂಭಾವನೆಯ ವಿವರ**

| ಕ್ರ.ಸಂ | ಗೌರವ ಸಂಭಾವನೆ ಜಾರಿ ಮಾಡಿದ ವರ್ಷ ಮತ್ತು ದಿನಾಂಕ | ಹೆಚ್ಚಿಸಲಾದ ಗೌರವ ಸಂಭಾವನೆ ಮೊತ್ತ | ಮುಖ್ಯ ಅಡುಗೆ ಸಿಬ್ಬಂದಿಗಳಿಗೆ | | | | ಸಹಾಯಕ ಅಡುಗೆ ಸಿಬ್ಬಂದಿಗಳಿಗೆ | | | |
|---|---|---|---|---|---|---|---|---|---|---|
| | | | ಕೇಂದ್ರದ ಪಾಲು | ರಾಜ್ಯದ ಪಾಲು | ಹೆಚ್ಚುವರಿ ರಾಜ್ಯದ ಪಾಲು | ಒಟ್ಟು ಸಂಭಾವನೆ ಮೊತ್ತ | ಕೇಂದ್ರದ ಪಾಲು | ರಾಜ್ಯದ ಪಾಲು | ಹೆಚ್ಚುವರಿ ರಾಜ್ಯದ ಪಾಲು | ಒಟ್ಟು ಸಂಭಾವನೆ ಮೊತ್ತ |
| 1 | 2001 ದಿನಾಂಕ: 02.10.2001 ರಿಂದ | | 0.00 | 650.00 | 0.00 | **650.00** | 0.00 | 450.00 | 0.00 | **450.00** |
| 2 | 2008 ದಿನಾಂಕ: 30.08.2008 ರಿಂದ | | 0.00 | 800.00 | 0.00 | **800.00** | 0.00 | 550.00 | 0.00 | **550.00** |
| 3 | 2009 ದಿನಾಂಕ: 01.12.2009 ರಿಂದ | ಮುಖ್ಯ ಅಡುಗೆಯವರಿಗೆ ಮಾಸಿಕ ರೂ 100/- | 750.00 | 250.00 | 100.00 | **1100.00** | 750.00 | 250.00 | 0.00 | **1000.00** |
| 4 | 2013 ದಿನಾಂಕ: 01.08.2013 ರಿಂದ | 100/- | 750.00 | 250.00 | 200.00 | **1200.00** | 750.00 | 250.00 | 100.00 | **1100.00** |
| 5 | 2014 ದಿನಾಂಕ: 01.04.2014 ರಿಂದ | 500/- | 750.00 | 250.00 | 700.00 | **1700.00** | 750.00 | 250.00 | 600.00 | **1600.00** |
| 6 | 2015 ದಿನಾಂಕ: 01.04.2015 ರಿಂದ | ಕೇಂದ್ರ ಹಾಗೂ ರಾಜ್ಯದ ಪಾಲಿನ ಅನುದಾನದ ಹಂಚಿಕೆ ಅನುಪಾತವನ್ನು ದಿನಾಂಕ: 01.04.2015 ರಿಂದ 60:40ಗೆ ನಿಗದಿಪಡಿಸಲಾಗಿರುತ್ತದೆ. | 600.00 | 400.00 | 700.00 | **1700.00** | 600.00 | 400.00 | 600.00 | **1600.00** |
| 7 | 2016 ದಿನಾಂಕ: 01.04.2016 ರಿಂದ | 300/- | 600.00 | 400.00 | 1000.00 | **2000.00** | 600.00 | 400.00 | 900.00 | **1900.00** |
| 8 | 2017 ದಿನಾಂಕ: 01.07.2017 ರಿಂದ | 200/- | 600.00 | 400.00 | 1200.00 | **2200.00** | 600.00 | 400.00 | 1100.00 | **2100.00** |
| 9 | 2018 ದಿನಾಂಕ: 01.01.2018 ರಿಂದ | 500/- | 600.00 | 400.00 | 1700.00 | **2700.00** | 600.00 | 400.00 | 1600.00 | **2600.00** |
| 10 | 2022 ದಿನಾಂಕ: 01.06.2022 ರಿಂದ ಇಲ್ಲಿಯ ವರೆಗೆ | 1000/- | 600.00 | 400.00 | 2700.00 | **3700.00** | 600.00 | 400.00 | 2600.00 | **3600.00** |

**ಶ್ರೀ ಎಂ.ಎಲ್. ಅನಿಲ್‌ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರಿ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದ ಯೋಜನೆಯ ಬಗ್ಗೆ ನಾನು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಮಾನ್ಯ ಸಚಿವರು ಸುದೀರ್ಘವಾದ ಉತ್ತರವನ್ನು ಒದಗಿಸಿದ್ದಾರೆ. ನನ್ನ ಕೆಲವು ಪ್ರಶ್ನೆಯೇನೆಂದರೆ, 2021ರಲ್ಲಿ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಪ್ರಾರಂಭಿಸಿದ ಸರ್ಕಾರವು, ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳ ಹಾಜರಾತಿ ಸಂಖ್ಯೆಯನ್ನು ಹೆಚ್ಚು ಮಾಡಬೇಕು ಮತ್ತು ಅವರ ಕಲಿಕಾ ಸಾಮರ್ಥ್ಯವನ್ನು ಹೆಚ್ಚು ಮಾಡಬೇಕು, ಅವರಿಗೆ ಪೌಷ್ಠಿಕ ಆಹಾರ ದೊರಕಿಸುವುದಕ್ಕೆ ಈ ಯೋಜನೆಯನ್ನು ತಂದರು. ಆದರೆ ಇವತ್ತು ಸರ್ಕಾರಿ ಶಾಲೆಗಳಲ್ಲಿ ಬಿಸಿಯೂಟ

ಯೋಜನೆಯಲ್ಲಿ ಅಡಿಗೆ ಎಣ್ಣೆ ಮತ್ತು ಬೇಳೆ ಕಾಳು; ನಾವು ಯಾವುದೇ ಅಡಿಗೆಯನ್ನು ಮಾಡಬೇಕಾದರೆ ಎಣ್ಣೆ ಇಲ್ಲದೇ ಮಾಡುವುದಕ್ಕೆ ಸಾಧ್ಯವೇ? ಎಣ್ಣೆ ಮತ್ತು ಬೇಳೆ ಕಾಳುಗಳನ್ನು ಇವರು ಮುಂಗಡವಾಗಿ ಕೊಡಬೇಕು. ಆದರೆ ಇಲ್ಲಿ 2-3 ತಿಂಗಳು ತಡವಾಗಿ ಕೊಡುತ್ತಿದ್ದಾರೆ. ಇವತ್ತು ಡಿಸೆಂಬರ್ ತಿಂಗಳಿನಿಂದ ಎಣ್ಣೆ ಬರುತ್ತಿಲ್ಲ. ಈಗ ನಾವು ಮಾರ್ಚ್ ತಿಂಗಳನಲ್ಲಿದ್ದೇವೆ.

**ಉಪ ಸಭಾಪತಿಯವರು:-** ಮಾನ್ಯ ಅನಿಲ್ ಕುಮಾರ್‌ರವರೇ, ಮೊದಲು ಪ್ರಶ್ನೆಯನ್ನು ಕೇಳಿ. ಉಪಪ್ರಶ್ನೆಯನ್ನು ಆಮೇಲೆ ಕೇಳಿ.

**ಶ್ರೀ ಅನಿಲ್ ಕುಮಾರ್:-** ಅಡಿಗೆ ಎಣ್ಣೆ ಮತ್ತು ಬೇಳೆಕಾಳುಗಳು ಬಿಸಿಯೂಟ ಯೋಜನೆಗೆ ಸರಿಯಾಗಿ ಸರಬರಾಜಾಗುತ್ತಿಲ್ಲ. ಇನ್ನೊಂದು ವಿಚಾರವೆಂದರೆ, ಮಕ್ಕಳಿಗೆ ಮೊಟ್ಟೆ ಕೊಡಲು ರೂ.6/- ಕೊಡುತ್ತಾರೆ. ಮಾನ್ಯ ಅಜೀಂ ಪ್ರೇಮ್‌ಜಿ ಫೌಂಡೇಷನ್‌ರನವರಿಗೆ ನಾನು ಅಭಿನಂದನೆಗಳನ್ನು ತಿಳಿಸುತ್ತೇನೆ. ಅವರು ಬಹಳ ದೊಡ್ಡ ಯೋಜನೆಯೊಂದಕ್ಕೆ ಸರ್ಕಾರದ ಜೊತೆ ಕೈ ಜೋಡಿಸಿದ್ದಾರೆ. ಆದರೆ ಮೊಟ್ಟೆಗೆ ಒಂದು ದಿನಕ್ಕೆ ರೂ. 6/- ಏನು ಕೊಡುತ್ತಿದ್ದಾರೆ ಅದನ್ನು ಯಾವ ರೀತಿ ಖರ್ಚು ಮಾಡಬೇಕೆಂದು ಏನು ಮಾರ್ಗಸೂಚಿ ಹೇಳುತ್ತಾರೆಂದರೆ, ಮೊಟ್ಟೆಗೆ ಐದು ರೂಪಾಯಿಗಳು, ಅದನ್ನು ಬೇಯಿಸುವುದಕ್ಕೆ ಐವತ್ತು ಪೈಸೆ, ಅದನ್ನು ಸುಲಿಯುವುದಕ್ಕೆ 30 ಪೈಸೆ, ಅದರ ಸಾಗಾಣಿಕೆ ವೆಚ್ಚ 20 ಪೈಸೆ ಎಂದು ಮಾಡಿದ್ದಾರೆ. ಆದರೆ ಐದು ರೂಪಾಯಿಗೆ ಮೊಟ್ಟೆ ಎಲ್ಲಿ ಸಿಗುತ್ತದೆ? ಇವತ್ತು ಎಲ್ಲಾದರೂ ಐದು ರೂಪಾಯಿಗೆ ಮೊಟ್ಟೆ ಸಿಗುವುದಕ್ಕೆ ಸಾಧ್ಯವೇ? ಅಡುಗೆ ಮಾಡುವವರು ಮತ್ತು ಶಿಕ್ಷಕರು ಇವರು ಕೊಡುವಂತಹ ಆರು ರೂಪಾಯಿಯಲ್ಲಿಯೇ ಮೊಟ್ಟೆ ತಂದು ಅವರೇ ಸ್ವಂತವಾಗಿ ಖರ್ಚು ಮಾಡುವಂತಹ ಪರಿಸ್ಥಿತಿ ಬಂದಿದೆ. ಶಿಕ್ಷಕರು ಅವರ ಕೈನಿಂದ ಹಣವನ್ನು ಹಾಕಿ ಮಾಡುತ್ತಿದ್ದಾರೆ. ನಾವೆಲ್ಲರೂ ಸ್ವಲ್ಪ ಯೋಚನೆ ಮಾಡಬೇಕು. ಯಾವುದಾದರೂ ಯೋಜನೆಯನ್ನು ರೂಪಿಸುವ ಸಂದರ್ಭದಲ್ಲಿ 5-10 ವರ್ಷಗಳ ಹಿಂದೆ ಯೋಜನೆಯೊಂದನ್ನು ರೂಪಿಸಿ ದರ ನಿಗದಿ ಮಾಡಿದರೆ ಅದನ್ನೇ ಮುಂದುವರೆಸಿಕೊಂಡು ಹೋಗುತ್ತಿದ್ದರೆ ಮಾರುಕಟ್ಟೆಯಲ್ಲಿ ಒಂದೇ ದರ ಇರುವುದಿಲ್ಲ. ಇವತ್ತು ರೂ. 6/- ಕೊಟ್ಟರೂ ಮೊಟ್ಟೆ ಸಿಗುವುದಿಲ್ಲ. ಐದು ರೂಪಾಯಿಗೆ ಮೊಟ್ಟೆ ತೆಗೆದುಕೊಳ್ಳಬೇಕು, ಬೇಯಿಸುವುದಕ್ಕೆ 50 ಪೈಸೆ, ಮೊಟ್ಟೆ ಸುಲಿಯುವುದಕ್ಕೆ 30 ಪೈಸೆ, ಸಾಗಾಣಿಕೆ ವೆಚ್ಚ 20 ಪೈಸೆ ಎಂದರೆ ಇದನ್ನು ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಅಡುಗೆ ಮಾಡುವುದಕ್ಕೆ ಎಣ್ಣೆ ಇಲ್ಲ, ಬೇಳೆ ಇಲ್ಲ, ಮೊಟ್ಟೆಗೆ ಸರಿಯಾಗಿ ಹಣ ಕೊಡುತ್ತಿಲ್ಲ ಇಷ್ಟೆಲ್ಲಾ ನ್ಯೂನತೆಗಳಿವೆ. ಯಾವ ರೀತಿ ಇದನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ? ಮಕ್ಕಳಿಗೆ ಹೇಗೆ ಊಟ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ? ಇದರ ಬಗ್ಗೆ ಮಾನ್ಯ ಸಚಿವರು

ಸ್ಪಷ್ಟಪಡಿಸಬೇಕು. ನಮ್ಮ Labour Law ಪ್ರಕಾರ minimum wages ಕೊಡಬೇಕು ಎಂದು ಸರ್ಕಾರದ ಸುತ್ತೋಲೆ ಇದೆ, ಅದರ ಪ್ರಕಾರ ಸುಮಾರು ರೂ. 14,000/- minimum wages ಇದೆ. ಅಡುಗೆ ಮಾಡುವವರಿಗೆ ಮತ್ತು ಅಡುಗೆ ಸಹಾಯಕರಿಗೆ ಕೊಡುತ್ತಿರುವುದು ರೂ. 3,700/- ಮತ್ತು ರೂ. 3,600/-. ಮೂರು ದಿವಸಗಳ ಹಿಂದೆ. ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಬಜೆಟ್ ಮಂಡನೆ ಮಾಡಿದಂತಹ ಸಂದರ್ಭದಲ್ಲಿ ರೂ. 1,000/- ಗಳನ್ನು ಹೆಚ್ಚಿಗೆ ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ minimum wages ಎಂದು ಸರ್ಕಾರ ಅನುಷ್ಠಾನ ಮಾಡಿದಂತಹ ಯೋಜನೆಯಲ್ಲಿ minimum salary ಕೊಡದಿದ್ದರೆ minimum wages ಕೊಡುವುದಿಲ್ಲ ಎಂದು ಬೇರೆಯವರಿಗೆ ಹೇಗೆ ಹೇಳುವುದಕ್ಕಾಗುತ್ತದೆ? ನಾವು ಯಾವ ರೀತಿ ಅವರನ್ನು ದಂಡಿಸುವುದಕ್ಕೆ, ಪ್ರಶ್ನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಇವತ್ತು ಬಹಳಷ್ಟು ನ್ಯೂನತೆಗಳಿವೆ. ಯೋಜನೆಯನ್ನು ಹೇಗೆ ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ?

**ಉಪ ಸಭಾಪತಿಯವರು:-** ಮಾನ್ಯ ಅನಿಲ್ ಕುಮಾರ್‌ರವರೆ, ಇದು ಪ್ರಶ್ನೋತ್ತರ ವೇಳೆ. ಮಾನ್ಯ ಸಚಿವರು ಉತ್ತರ ಕೊಡಲಿ. ಉತ್ತರ ಕೊಟ್ಟ ನಂತರ ಉಪ ಪ್ರಶ್ನೆ ಕೇಳಿ.

**ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳುತ್ತಿರುವ ಪ್ರಶ್ನೆ ನ್ಯಾಯಬದ್ಧವಾಗಿದೆ. ಇಲ್ಲವೆಂದು ಹೇಳುವುದಿಲ್ಲ. ಅಡುಗೆ ಎಣ್ಣೆ ಮತ್ತು ಇನ್ನಿತರ ಪದಾರ್ಥಗಳಿಗೆ Central Government Norms ಏನು ಹೇಳುತ್ತದೆ ಆ ನಿಟ್ಟಿನಲ್ಲಿ ನಾವು ಕೊಡುತ್ತಿದ್ದೇವೆ. ಕೇಂದ್ರ ಸರ್ಕಾರ ಏನಾದರೂ ಜಾಸ್ತಿ ಮಾಡಿದರೆ ಅದನ್ನು ಸೇರಿಸಿಕೊಂಡು ನಾವು ಕೊಡುವ ವ್ಯವಸ್ಥೆಯನ್ನು ಮಾಡಬಹುದು. ಈಗ ರೂ. 1,000/- ಗಳನ್ನು ಜಾಸ್ತಿ ಮಾಡಿದರೂ ಕೂಡ ಅವರ ಬೇಡಿಕೆಗಳನ್ನು ತುಂಬಾ ದಿವಸಗಳಿಂದ ಇಟ್ಟುಕೊಂಡಿದ್ದರು. ಬೇರೆಯವರು ಕೂಡ ನಮಗೆ ಸಾಕಷ್ಟು ಒತ್ತಡವನ್ನು ಕೊಡುತ್ತಿದ್ದರು. ಸದ್ಯಕ್ಕೆ ರೂ. 1,000/- ಇದೆ. In fact, ಕೇಂದ್ರ ಸರ್ಕಾರಕ್ಕಿಂತ ರಾಜ್ಯ ಸರ್ಕಾರವೇ ಜಾಸ್ತಿ ಹಣ ಕೊಡುತ್ತದೆ. ಯಾವುದಾದರೂ delayed payment ಇದ್ದರೆ ಕೇಂದ್ರ ಸರ್ಕಾರದಿಂದ ಬಂದಾಗ ಅದನ್ನು ಸೇರಿಸಿ ಕೊಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ನಮ್ಮ portion ಏನು ಕೊಡಬೇಕು ಅದನ್ನು ಸಹ ಕೊಡಲಾಗುವುದು. ಕೆಲವು ಸಲ ಮೊಟ್ಟೆ ರೂ. 4½ ಗೂ ಕೆಲವು ಸಲ 5 ½ ರೂಪಾಯಿಗೂ ಸಿಕ್ಕಿದೆ. ಇಲ್ಲವೆಂದು ಹೇಳುವುದಿಲ್ಲ. Standard ಆಗಿ ನಾವು ಕೂಡ ಯೋಚನೆ ಮಾಡುತ್ತಿದ್ದೇವೆ. ಆರ್ಥಿಕ ಇಲಾಖೆ ಜೊತೆ ಮಾತನಾಡಿ ಏನಾದರೂ ಸ್ವಲ್ಪ ಜಾಸ್ತಿ ಮಾಡಬಹುದಾ ಎಂದು ಯೋಚನೆ ಮಾಡುತ್ತಿದ್ದೇವೆ. ಅದನ್ನು ನೋಡಿ ತೀರ್ಮಾನ

ತೆಗೆದುಕೊಳ್ಳಬೇಕಾಗುತ್ತದೆ. ಆರ್ಥಿಕ ಇಲಾಖೆಯವರ clearance ಬೇಕಾಗುತ್ತದೆ. ಮೊಟ್ಟೆಗೆ ರೂ. 6/- ಎಂದು ಮುಂಚೆಯೇ ಸರ್ಕಾರದಿಂದ ನಿಗದಿಯಾಗಿತ್ತು. ಮುಂಚೆ ಒಂದು ರೂಪಾಯಿ ಕೊಡುತ್ತಿದ್ದರು, ನಮ್ಮ ಸರ್ಕಾರ ಬಂದ ಮೇಲೆ ಎರಡು ರೂಪಾಯಿಯಾಯಿತು. ಶ್ರೀ ಅಜೀಂ ಪ್ರೇಮ್‌ಜಿಯವರ ಜೊತೆ ಮಾತನಾಡಿದ ಮೇಲೆ ಈಗ ಆರು ರೂಪಾಯಿಯಾಗಿದೆ. ಅದರ ಜೊತೆಗೆ ವಿದ್ಯಾರ್ಥಿಗಳಿಗೆ ಪೌಷ್ಠಿಕತೆಗೆ 'ಸಾಯಿ ಶ್ಯೂರ್ ರಾಗಿ ಹೆಲ್ತ್ ಮಿಕ್ಸ್' ಪುಡಿಯನ್ನು ಉಚಿತವಾಗಿ ನೀಡಲಾಗುತ್ತಿದೆ. ನಮ್ಮ ಬಜೆಟ್‌ನಲ್ಲಿ ಶೇ.25ರಷ್ಟು ಅನುದಾನವನ್ನು ಜಾಸ್ತಿ ಮಾಡಿ ಮೂರು ದಿವಸ ಕೊಡುವುದನ್ನು ಐದು ದಿವಸ ಕೊಡುವುದಕ್ಕೆ ಮಾಡುತ್ತಿದ್ದೇವೆ. ಇದರಿಂದ ಶಾಲಾ ಮಕ್ಕಳ ಪೌಷ್ಠಿಕಾಂಶ ಹೆಚ್ಚಿಸುವುದಕ್ಕೆ, ಕಲಿಕಾ ಸಾಮರ್ಥ್ಯವನ್ನು ವೃದ್ಧಿಗೊಳಿಸುವುದು ಹಾಗೂ ಮಕ್ಕಳ ಹಾಜರಾತಿ ಹೆಚ್ಚಿಸುವುದಕ್ಕೆ ಎಲ್ಲದಕ್ಕೂ ಅನುಕೂಲವಾಗುತ್ತದೆ. ಮೊಟ್ಟೆ ಕೊಡುವುದನ್ನು ನಿಲ್ಲಿಸಲು ಮತ್ತೆ ಏನಾದರೂ ಒತ್ತಡ ಏನಾದರೂ ಬಂದಾಗ ಆರ್ಥಿಕ ಇಲಾಖೆಯವರ ಜೊತೆ ಮಾತನಾಡಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಎಂ.ಎಲ್. ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದನ್ನು ಒಪ್ಪುತ್ತೇನೆ. ಮೊಟ್ಟೆ 4½ ರೂಪಾಯಿ ಗೆ ಸಿಕ್ಕಿರುವ ಉದಾಹರಣೆಯನ್ನು ಹೇಳಿದರು. ಬಹುಶಃ 4-5 ವರ್ಷಗಳ ಹಿಂದೆ ಮೊಟ್ಟೆ 4½ ರೂಪಾಯಿ ಗೆ ಸಿಕ್ಕಿದೆ. ಇವತ್ತು 7 ರೂಪಾಯಿಗೆ ಮೊಟ್ಟೆ ಸಿಗುವುದು ಕೂಡ ಕಷ್ಟವಾಗಿದೆ. ಮೊಟ್ಟೆಗಳನ್ನು ಸಾಗಾಣಿಕೆ ಮಾಡುವಾಗ damage ಸಹ ಆಗುತ್ತದೆ. ಇವೆಲ್ಲವನ್ನೂ ಆ ಶಿಕ್ಷಕರು ಮತ್ತು ಶಾಲಾಭಿವೃದ್ಧಿ ಸಮಿತಿಯವರೇ ಹೊಣೆ ಹೊರಿಸಿಕೊಂಡು ಈ ಯೋಜನೆಯನ್ನು ಅನುಷ್ಠಾನ ಮಾಡುತ್ತಿದ್ದಾರೆ. ಇಷ್ಟೆಲ್ಲಾ ನ್ಯೂನತೆಗಳಿವೆ. 1-8ನೇ ತರಗತಿವರೆವಿಗೂ ಈ ಯೋಜನೆಯನ್ನು ಅನುಷ್ಠಾನ ಮಾಡುವುದಕ್ಕೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಹಣ ಒದಗಿಸುತ್ತದೆ.

(ಮುಂದು)

(156) 10.03.2025 (12.00)ಹೆಚ್‌ವಿ.ವಿಕೆ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಅನಿಲ್‌ಕುಮಾರ್(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಆದರೇ, 9 ಮತ್ತು 10ನೇ ತರಗತಿಗಳಿಗೆ ರಾಜ್ಯ ಸರ್ಕಾರವೇ ನೂರಕ್ಕೆ ನೂರರಷ್ಟು ಜವಾಬ್ದಾರಿಯನ್ನು ತೆಗೆದುಕೊಂಡು, ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ. ಮಾನ್ಯ ಸಚಿವರಲ್ಲಿ ನನ್ನ ಮನವಿಯೇನೆಂದರೆ, ಕೆಲವು ಕಡೆಗಳಲ್ಲಿ ಪ್ರೌಢಶಾಲಾ ಆವರಣದಲ್ಲಿಯೇ ಜೂನಿಯರ್ ಕಾಲೇಜುಗಳು ನಡೆಯುತ್ತಿರುತ್ತವೆ. ಪ್ರೌಢಶಾಲಾ ಮಕ್ಕಳಿಗೆ ಮಧ್ಯಾಹ್ನದ

ಬಿಸಿಯೂಟವನ್ನು ನೀಡಲಾಗುತ್ತದೆ. ಆದರೇ, ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ., ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ಕೊಡುವುದಿಲ್ಲ. ಬಿಸಿಯೂಟ ಯೋಜನೆಯನ್ನು ಅವರಿಗೂ ಸಹ ವಿಸ್ತರಿಸಿದರೆ ಉತ್ತಮ ಎನ್ನುವುದು ನನ್ನ ಅನಿಸಿಕೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಅಡುಗೆ ಎಣ್ಣೆ ಮತ್ತು ಬೇಳೆ ಕಾಳುಗಳ ವಿತರಣೆಯಲ್ಲಿ ಆಗುತ್ತಿರುವ ವ್ಯತ್ಯಯದ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ನೀಡಲಿಲ್ಲ. ಮಾನ್ಯ ಸಚಿವರು ಅವರ ಅಧಿಕಾರಿಗಳನ್ನು ಕೇಳಲ್ಲಿ; ಡಿಸೆಂಬರ್ ತಿಂಗಳಿನಿಂದ ಇಲ್ಲಿಯವರೆಗೆ ಅಡುಗೆ ಎಣ್ಣೆಯನ್ನು ಸರಬರಾಜು ಮಾಡಿಲ್ಲ. ಅಡುಗೆ ಎಣ್ಣೆಯೇ ಇಲ್ಲವೆಂದರೆ, ಹೇಗೆ ಅಡುಗೆ ಮಾಡುವುದು? ಮಾನ್ಯ ಭೋಜೇಗೌಡರು ಹೇಳಿದಂತೆ ಅಡುಗೆ ಎಣ್ಣೆಯನ್ನು ಮುಂಚಿತವಾಗಿಯೇ ಕೊಡಬೇಕಾಗುತ್ತದೆ. ಮೂರು ತಿಂಗಳಾದರೂ ಸರಬರಾಜು ಮಾಡದಿದ್ದರೆ ಯಾವ ರೀತಿ ಅಡುಗೆ ಮಾಡುವುದು?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಬಿಸಿಯೂಟದಲ್ಲಿ ಮೊಟ್ಟೆ ವಿತರಣೆ ಬಗ್ಗೆ ಬಹಳ ದೊಡ್ಡ ಚರ್ಚೆಯಾಗಿದೆ. ಮಾನ್ಯ ಸಚಿವರು "ನೋಡುತ್ತೇನೆ" ಎಂದು ಹೇಳುವುದಕ್ಕೆ ಬದಲಾಗಿ "ಮಾಡುತ್ತೇನೆ" ಎಂದು ಹೇಳಬೇಕಾಗುತ್ತದೆ. ಮೊಟ್ಟೆ 5-6 ರೂಪಾಯಿಗಳಿಗೆ ಸಿಗುವುದಿಲ್ಲ. ಈಗ ಅದರ ಬೆಲೆ 7 ರೂಪಾಯಿಗಳಾಗಿದೆ. ಆದ್ದರಿಂದ ಸರ್ಕಾರ ಕೊಡುತ್ತಿರುವ ಬೆಲೆಗೆ ಶಿಕ್ಷಕರು ಮೊಟ್ಟೆಯನ್ನು ಖರೀದಿ ಮಾಡಿ ಮಕ್ಕಳಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸಚಿವರು ಈ ವಿಚಾರದ ಬಗ್ಗೆ ಯಾರ ಜೊತೆಗೆ ಚರ್ಚೆ ಮಾಡಬೇಕು ಅವರ ಜೊತೆಗೆ ಚರ್ಚೆ ಮಾಡಿ, ಮೊಟ್ಟೆಗೆ ನೀಡುತ್ತಿರುವ ದರವನ್ನು ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ರಾಷ್ಟ್ರೀಯ ಮಟ್ಟದಲ್ಲಿ ಇರುವಂತಹ ಮೊಟ್ಟೆಯ ಬೆಲೆಯನ್ನು ನೋಡಿಕೊಂಡು ಮೊಟ್ಟೆಯ ದರವನ್ನು ನಿಗದಿ ಮಾಡಲಾಗುತ್ತದೆ. ಕಳೆದ ಹತ್ತು ದಿನಗಳಿಂದ ಒಂದು ಮೊಟ್ಟೆಯ ಬೆಲೆ ರಾಷ್ಟ್ರೀಯ ಮಟ್ಟದಲ್ಲಿ ನಾಲ್ಕು ರೂಪಾಯಿ ಎಪ್ಪತ್ತೈದು ಪೈಸೆಗಳಾಗಿದೆ. ಕೆಲವು ಬಾರಿ ಇದರ ಬೆಲೆಯಲ್ಲಿ ಹೆಚ್ಚು ಕಡಿಮೆಯಾಗುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ನಾಲ್ಕು ರೂಪಾಯಿ ಎಪ್ಪತ್ತೈದು ಪೈಸೆಗಳಿಗೆ ಒಂದು ಮೊಟ್ಟೆ ಸಿಗುತ್ತದೆ ಎಂದು ತಾವು ಹೇಳಿದರೆ ಯಾರೂ ನಂಬುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಮೊಟ್ಟೆ ಬೆಲೆ ಅಷ್ಟು ಕಡಿಮೆ ಇಲ್ಲ.

**ಶ್ರೀ ಎಸ್.ಮಧು ಬಂಗಾರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಚರ್ಚೆ ಮಾಡಲಾಗುತ್ತದೆ. ಅಡುಗೆ ಎಣ್ಣೆ ಮತ್ತು ಬೇಳೆಕಾಳುಗಳನ್ನು ವಿತರಣೆ ಮಾಡುವುದಕ್ಕೆ ನಮ್ಮಲ್ಲಿ ಹಣದ ಕೊರತೆ ಇಲ್ಲ. ಕೇಂದ್ರ ಸರ್ಕಾರದಿಂದ

ಅನುದಾನ ಬರುವುದರಲ್ಲಿ ತಡವಾದಾಗ, ಸ್ವಲ್ಪ ತೊಂದರೆ ಆಗಿರಬಹುದು. ಅದನ್ನು ನಾನು ನೋಡಿ ಹೇಳುತ್ತೇನೆ. ನಮ್ಮ ಇಲಾಖೆಯಲ್ಲಿ ಯಾವುದೇ ಕಾರಣಕ್ಕೂ ಅಡುಗೆ ಎಣ್ಣೆ ಮತ್ತು ಬೇಳೆಕಾಳುಗಳನ್ನು ಸರಬರಾಜು ಮಾಡುವುದಕ್ಕೆ ಅನುದಾನವನ್ನು ನೀಡದೇ ಇರುವುದಕ್ಕೆ ಸಾಧ್ಯವೇ ಇಲ್ಲ. ಒಂದು ವೇಳೆ ಆ ರೀತಿಯಾಗಿದ್ದರೆ ಅದನ್ನು ಸರಿಪಡಿಸಲಾಗುವುದು.

ಸನ್ಮಾನ್ಯ ಸಭಾಪತಿಯವರೇ, ಮೊಟ್ಟೆಗಳು ಒಡೆದು ಹೋಗುತ್ತವೆ ಎಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ. ಕಾರಣವೇನೆಂದರೆ, SDMC (School Development and Monitoring Committee) ಯವರು ಅದರ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. It will be a local procurement and not from the State. ಎಲ್ಲ ಅಧಿಕಾರವನ್ನು ಎಸ್.ಡಿ.ಎಂ.ಸಿ.,ಯವರಿಗೆ ಕೊಟ್ಟಿರುವುದರಿಂದ ಮೊಟ್ಟೆಗಳ ಗುಣಮಟ್ಟ ಚೆನ್ನಾಗಿರುತ್ತದೆ. ಹಳ್ಳಿಗಳಲ್ಲಿ ಬಹಳ ದೂರ ಸಾಗಾಣಿಕೆ ಮಾಡುವಂತೆ ಇರುವುದಿಲ್ಲ. ಡ್ಯಾಮೇಜ್‌ಗಳಾಗಿರುವ ಮೊಟ್ಟೆಗಳನ್ನು ಸರಬರಾಜು ಮಾಡಿರುವಂತಹ ಉದಾಹರಣೆಗಳಿದ್ದರೇ ನಾನು ಅದರ ಬಗ್ಗೆ ಪರಿಶೀಲಿಸುತ್ತೇನೆ. ಈ ಬಗ್ಗೆ ಯಾವುದೇ ದೂರುಗಳು ನಮಗೆ ಬಂದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಮೊಟ್ಟೆ ನೀಡುವಿಕೆಯಲ್ಲಿ ನಮ್ಮ ಜೊತೆಗೆ ಅಜೀಂ ಪ್ರೇಮ್‌ಜೀಯವರು ಸಹ ಕೈ ಜೋಡಿಸಿದ್ದಾರೆ. ವಾರದಲ್ಲಿ ನಾಲ್ಕು ದಿನ ಅವರು ಮೊಟ್ಟೆ ನೀಡುತ್ತಿದ್ದಾರೆ. ನಾನು ಆರ್ಥಿಕ ಇಲಾಖೆ ಮತ್ತು ಅವರ ಜೊತೆಗೆ ಈ ಬಗ್ಗೆ ಚರ್ಚಿಸುತ್ತೇನೆ. ನಮ್ಮ ಸರ್ಕಾರಿ ಶಾಲೆಯ ಮಕ್ಕಳಿಗೆ ಪೌಷ್ಠಿಕತೆಯನ್ನು ನೀಡುವ ನಿಟ್ಟಿನಲ್ಲಿ ಮತ್ತು ನಮ್ಮ ಮೇಲೆ ವಿಶ್ವಾಸವನ್ನು ಇಟ್ಟುಕೊಂಡು ಮೊಟ್ಟೆ ನೀಡುವುದಕ್ಕಾಗಿ ಸುಮಾರು 1,591 ಕೋಟಿ ರೂಪಾಯಿಗಳನ್ನು ನೀಡುತ್ತಿದ್ದಾರೆ. ರೈತರಿಗೂ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಮತ್ತು ಬಾಳೆಹಣ್ಣು ಎಲ್ಲ ಕಡೆಗಳಲ್ಲಿ ದೊರೆಯುವುದರಿಂದ ಮೊಟ್ಟೆಯ ಜೊತೆಗೆ ಬಾಳೆಹಣ್ಣನ್ನು ಸಹ ನೀಡಲಾಗುತ್ತಿದೆ. ಚಿಕ್ಕಿ ವಿತರಿಸುವುದನ್ನು ಈಗ ನಿಲ್ಲಿಸಿದ್ದೇವೆ. ಚಿಕ್ಕಿಯಲ್ಲಿ ಗುಣಮಟ್ಟ ಇಲ್ಲದೇ ಇರುವುದರಿಂದ ಮತ್ತು ಅದು ಮಕ್ಕಳ ಆರೋಗ್ಯಕ್ಕೆ ಒಳ್ಳೆಯದಲ್ಲ ಎಂದು ತೀರ್ಮಾನವಾದ ಮೇಲೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಚಿಕ್ಕಿ ಬದಲಿಗೆ ಬಾಳೆಹಣ್ಣನ್ನು ನೀಡಲಾಗುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮೊಟ್ಟೆ ವಿಚಾರದಲ್ಲಿ ಮತ್ತು ಅಡಿಗೆ ಎಣ್ಣೆ ಹಾಗೂ ಬೇಳೆಕಾಳುಗಳ ಬಗ್ಗೆ ಉಲ್ಲೇಖ ಮಾಡಿರುವ ಅಂಶಗಳನ್ನು ನಾನು ಆರ್ಥಿಕ ಇಲಾಖೆಯವರೊಂದಿಗೆ ಚರ್ಚೆ ಮಾಡಿ ಸೂಕ್ತವಾಗಿರುವ ನಿರ್ಧಾರವನ್ನು ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಅನಿಲ್‌ಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕಳೆದ ಎರಡು ಮೂರು ತಿಂಗಳುಗಳಿಂದ ಅಂದರೇ, December ತಿಂಗಳಿನಿಂದ ಯಾರಿಗೆ ಟೆಂಡರ್ ಕೊಡಲಾಗಿದೆ ಅವರು ಅಡುಗೆ ಎಣ್ಣೆಯನ್ನು ಸರಿಯಾಗಿ ಸರಬರಾಜು ಮಾಡಿಲ್ಲ.

**ಶ್ರೀ ಎಸ್.ಮಧು ಬಂಗಾರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಆ ರೀತಿ ಆಗುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಈ ದಿನವೇ ವಿಚಾರಿಸುತ್ತೇನೆ. ಪ್ರಥಮ ಮತ್ತು ದ್ವಿತೀಯ ಪಿ.ಯು., ಮಕ್ಕಳಿಗೆ ಮಧ್ಯಾಹ್ನದ ಉಪಹಾರವನ್ನು ನೀಡುವ ಬಗ್ಗೆ ನಾವೆಲ್ಲರೂ ಸೇರಿ ಮಾನ್ಯ ಮುಖ್ಯಮಂತ್ರಿಗಳ ಬಳಿ ಹೋಗಿ ಕೇಳೋಣ. ಆ ಪ್ರಸ್ತಾವನೆ ಸಧ್ಯಕ್ಕಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 350 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ರವಿಕುಮಾರ್ ಎನ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 10.03.2025 |

| | | |
|---|---|---|
| (ಅ) | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯು ರಾಜ್ಯದ ಎಷ್ಟು ಶಾಲೆಗಳಲ್ಲಿ ಗ್ರಂಥಾಲಯದ ವ್ಯವಸ್ಥೆ ಕಲ್ಪಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | 2023-24ನೇ ಸಾಲಿನ ರಾಜ್ಯವಲಯ ಯೋಜನೆಗಳಡಿ ರಾಜ್ಯದ ಮಹತ್ವಕಾಂಕ್ಷಿ ಬ್ಲಾಕ್‌ಗಳ 24347 ಶಾಲೆಗಳಲ್ಲಿ ಗ್ರಂಥಾಲಯ ವ್ಯವಸ್ಥೆ ಕಲ್ಪಿಸುವ ಸಲುವಾಗಿ ಒಟ್ಟು ರೂ.**2000** ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br><br>2023-24ನೇ ಸಾಲಿನ ಪಿ.ಎ.ಬಿ ಅನುಮೋದಿತ ಗ್ರಂಥಾಲಯ ಅನುದಾನದ ವತಿಯಿಂದ ರಾಜ್ಯದ ಹಿರಿಯ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ ಮತ್ತು ಸೀನಿಯರ್ ಸೆಕೆಂಡರಿ ಶಾಲೆಗಳಿಗೆ ಒಟ್ಟು ರೂ. 1199.92 ಲಕ್ಷ ಅನುದಾನವನ್ನು ಗ್ರಂಥಾಲಯ ಪುಸ್ತಕ ಖರೀದಿಸಲು ಬಿಡುಗಡೆ ಮಾಡಲಾಗಿದೆ. |

**ವಿವರ ಈ ಕೆಳಕಂಡಂತಿದೆ.** (ರೂ.ಲಕ್ಷಗಳಲ್ಲಿ)

| ವರ್ಷ | ಶಾಲಾ ವಿಧ | ಒಟ್ಟು ಶಾಲೆಗಳ ಸಂಖ್ಯೆ | ಘಟಕ ವೆಚ್ಚ | ಅನುದಾನದ ಮೊತ್ತ |
|---|---|---|---|---|
| 2023-24 (ರಾಜ್ಯ ಬಜೆಟ್) | ಸ.ಕಿ.ಪ್ರಾ ಶಾಲೆಗಳು | 14049 | 0.05 | 702.5 |
| | ಸ.ಹಿ.ಪ್ರಾ ಶಾಲೆಗಳು | 8344 | 0.12 | 1001.28 |
| | ಸ.ಪ್ರೌ.ಶಾಲೆಗಳು | 1830 | 0.15 | 274.5 |
| | ಆದರ್ಶ ವಿದ್ಯಾಲಯ | 48 | 0.17 | 8.16 |
| | ಕೆ.ಪಿ.ಎಸ್ ಶಾಲೆಗಳು | 76 | 0.18 | 13.68 |
| **ಒಟ್ಟು** | | **24347** | | **2000.00** |
| 2023-24 (PAB) | ಸ.ಹಿ.ಪ್ರಾ ಶಾಲೆಗಳು | 13548 | 0.065 | 880.62 |
| | ಸ.ಪ್ರೌಢ.ಶಾಲೆಗಳು | 1178 | 0.15 | 176.70 |
| | ಸೀನಿಯರ್ ಸೆಕೆಂಡರಿ ಶಾಲೆಗಳು | 713 | 0.20 | 142.60 |
| **ಒಟ್ಟು** | | **15439** | | **1199.92** |

ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

..2

ಪ್ರಶ್ನೆ

-2-

| | | |
|---|---|---|
| | | 2024-25ನೇ ಸಾಲಿನ ಪಿ.ಎ.ಬಿ ಅನುಮೋದಿತ ಗ್ರಂಥಾಲಯ ಅನುದಾನದ ವತಿಯಿಂದ ಈ ಕೆಳಕಂಡಂತೆ ಗ್ರಂಥಾಲಯ ಪುಸ್ತಕಗಳ ಖರೀದಿಗಾಗಿ ಅನುದಾನ ಬಿಡುಗಡೆಮಾಡಲಾಗುವುದು. |

| ಕ್ರ ಸಂ | ಶಾಲಾ ವಿಧ | ಭೌತಿಕ | ಘಟಕ ವೆಚ್ಚ | ಆರ್ಥಿಕ ವೆಚ್ಚ |
|---|---|---|---|---|
| 1 | ಸ.ಕಿ.ಪ್ರಾ ಶಾಲೆಗಳು | 528 | 0.05 | 26.40 |
| 2 | ಸ.ಹಿ.ಪ್ರಾ ಶಾಲೆಗಳು | 5308 | 0.13 | 690.04 |
| 3 | ಸ.ಪ್ರೌಢ.ಶಾಲೆಗಳು | 1833 | 0.15 | 274.95 |
| 4 | ಸೀನಿಯರ್ ಸೆಕೆಂಡರಿ ಶಾಲೆಗಳು | 1234 | 0.15 | 185.10 |
| ಒಟ್ಟು | | **8903** | | **1176.49** |

| | | |
|---|---|---|
| (ಆ) | ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಇಲಾಖಾ ಮೂಲಕ ಗ್ರಂಥಾಲಯದ ವ್ಯವಸ್ಥೆ ಕಲ್ಪಿಸಿದ್ದಲ್ಲಿ ಮಕ್ಕಳಿಗೆ ಸಣ್ಣ ಪ್ರಾಯದಲ್ಲೇ ಓದುವ ಅಭ್ಯಾಸ ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸುವುದರೊಂದಿಗೆ ಭಾಷಾ ಕೌಶಲ್ಯವನ್ನು ಅಭಿವೃದ್ಧಿಗೊಳಿಸಲು 100 ದಿನಗಳ ಓದುವ ಆಂದೋಲನವನ್ನು ರಾಜ್ಯವ್ಯಾಪಿ ಎಲ್ಲಾ ಬಾಲವಾಟಿಕೆ/ ಪೂರ್ವ ಪ್ರಾಥಮಿಕ, ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿನ 01 ರಿಂದ 08ನೇ ತರಗತಿಯ ವಿದ್ಯಾರ್ಥಿಗಳಿಗೆ ಅನ್ವಯಿಸುವಂತೆ 3 ಗುಂಪುಗಳಲ್ಲಿ ಅನುಷ್ಠಾನಗೊಳಿಸಲು 2022-23 ನೇ ಸಾಲಿನಿಂದ ಪ್ರಸ್ತುತ 2024-25ನೇ ಸಾಲಿನವರೆಗೂ ವಿವಿಧ ಪೂರಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಕೈಗೊಳ್ಳಬೇಕಾಗಿರುವ ಕಾರ್ಯ ಚಟುವಟಿಕೆಗಳ ವಿವರಗಳನ್ನೊಳಗೊಂಡ ವೇಳಾಪಟ್ಟಿಯನ್ನು ಮತ್ತು ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಸಂಬಂಧ ಸವಿವರ ಮಾರ್ಗಸೂಚಿಯನ್ನು ಎಲ್ಲಾ ಶಾಲೆಗಳಿಗೂ ಸಂಬಂಧಿತ ಜಿಲ್ಲೆಗಳ ಮುಖೇನ ಸುತ್ತೋಲೆಯೊಂದಿಗೆ ನೀಡಲಾಗಿದೆ.<br><br>2022-23 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಗ್ರಂಥಾಲಯ ಸ್ಥಾಪನೆ ಮತ್ತು ಅನುಷ್ಠಾನಗೊಳಿಸಲು ಜಿಲ್ಲಾ ಹಂತ, ಬ್ಲಾಕ್ ಹಂತ ಮತ್ತು ಕ್ಲಸ್ಟರ್ ಹಂತ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡಲಾಗಿರುತ್ತದೆ. ಕ್ಲಸ್ಟರ್ ಹಂತದಲ್ಲಿ ಸಿ.ಆರ್.ಪಿಗಳು ಆಯಾ ಕ್ಲಸ್ಟರ್ ಗೆ ಒಳಪಡುವ ಎಲ್ಲಾ ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರುಗಳಿಗೆ ತರಬೇತಿ ನೀಡಿರುತ್ತಾರೆ. |
| (ಇ) | ಮಕ್ಕಳ ಸ್ವ ಅಧ್ಯಯನದಲ್ಲಿ ಗ್ರಂಥಾಲಯದ ಪಾತ್ರ ಮಹತ್ವದಾಗಿರುವ ಬಗ್ಗೆ ಸರ್ಕಾರದ ನಿಲುವೇನು? | ಮಕ್ಕಳ ಸ್ವ ಅಧ್ಯಯನದಲ್ಲಿ ಗ್ರಂಥಾಲಯದ ಪಾತ್ರ ಅತ್ಯಂತ ಮಹತ್ವದ್ದಾಗಿರುತ್ತದೆ.<br><br>ಮಕ್ಕಳ ಸ್ವ ಅಧ್ಯಯನಕ್ಕೆ ಪೂರಕವಾಗಿ ವಿದ್ಯಾರ್ಥಿಗಳ ವಯೋಮಾನಕ್ಕನುಗುಣವಾಗಿ ಸೂಕ್ತ ಪುಸ್ತಕಗಳ ಪಟ್ಟಿಯನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ವತಿಯಿಂದ ಶಾಲಾ ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿರುತ್ತದೆ. ಸದರಿ ಪುಸ್ತಕಗಳ ಪಟ್ಟಿಯಿಂದ ಅಗತ್ಯವಿರುವ ಪುಸ್ತಕಗಳನ್ನು ಅನುದಾನ ಪಡೆದ ಶಾಲೆಗಳು ಖರೀದಿಸಲು ಸೂಚಿಸಲಾಗಿದೆ. |

..3

| | | |
|---|---|---|
| | | ರಾಜ್ಯದ ಶಾಲೆಗಳ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಖರೀದಿಸಲು ಸಮಗ್ರ ಶಿಕ್ಷಣ ಕರ್ನಾಟಕದಿಂದ ಕೇಂದ್ರ ಮತ್ತು ರಾಜ್ಯ ವಲಯಗಳ ವತಿಯಿಂದ ಗ್ರಂಥಾಲಯ ಪುಸ್ತಕಗಳ ಖರೀದಿಗಾಗಿ ಪ್ರತಿ ವರ್ಷ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.<br><br>ವಿದ್ಯಾರ್ಥಿಗಳ ಸ್ವ ಅಧ್ಯಯನವನ್ನು ಪ್ರೋತ್ಸಾಹಿಸಲು ಎಲ್ಲಾ ಶಾಲೆಗಳಲ್ಲಿ ಓದುವ ಮೂಲೆಗಳನ್ನು ಸ್ಥಾಪಿಸಲಾಗಿದೆ.<br><br>ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಾರಕ್ಕೆ ಕನಿಷ್ಠ ಒಂದು ಗ್ರಂಥಾಲಯ ಅವಧಿಯನ್ನು ಕಡ್ಡಾಯವಾಗಿ ನಿಗದಿಗೊಳಿಸಲು ಆಯುಕ್ತರಿಂದ ಸುತ್ತೋಲೆಯನ್ನು ಹೊರಡಿಸಲಾಗಿದೆ. |
| (ಈ) | ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು ಹುಚ್ಚಂಗಿಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಇಲಾಖೆಯ ವತಿಯಿಂದ ಗ್ರಂಥಾಲಯ ಸೌಲಭ್ಯ ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಸದರಿ ಶಾಲೆಗೆ ಗ್ರಂಥಾಲಯ ಪುಸ್ತಕಗಳನ್ನು ಖರೀದಿಸಲು ಸಮಗ್ರ ಶಿಕ್ಷಣ ಕರ್ನಾಟಕದಿಂದ 2021-22ನೇ ಸಾಲಿನ ಪಿ.ಎ.ಬಿ ಅನುಮೋದಿತ ಗ್ರಂಥಾಲಯ ಅನುದಾನದ ವತಿಯಿಂದ ರೂ.13000/-ಗಳನ್ನು ಮತ್ತು 2023-24ನೇ ಸಾಲಿನ ಪಿ.ಎ.ಬಿ ಅನುಮೋದಿತ ಗ್ರಂಥಾಲಯ ಅನುದಾನದ ವತಿಯಿಂದ ರೂ.6500/-ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br><br>2024-25ನೇ ಸಾಲಿನ ಪಿ.ಎ.ಬಿ ಅನುಮೋದಿತ ಗ್ರಂಥಾಲಯ ಅನುದಾನದ ವತಿಯಿಂದ ರೂ.13000/- ಗಳ ಅನುದಾನವನ್ನು ಬಿಡುಗಡೆ ಮಾಡಲಾಗುವುದು. |

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2023-24 ನೇ ಸಾಲಿನ PAB ಅನುಮೋದಿತ ಅನುದಾನದಡಿ 2024-25ನೇ ಸಾಲಿನಲ್ಲಿ ಗ್ರಂಥಾಲಯ ಅನುದಾನ ಬಿಡುಗಡೆಯಾಗಿರುವ ಜಿಲ್ಲಾವಾರು ಪಟ್ಟಿ

(Rs.in Lakh)

| Sl.no | District name | HPS Numbers | unit cost | Finance | HS Numbers | unit cost | Finance | SS Numbers | unit cost | Finance | Grand Total |
|---|---|---|---|---|---|---|---|---|---|---|---|
| 1 | BAGALKOT | 460 | 0.065 | 29.9 | 45 | 0.15 | 6.75 | 31 | 0.2 | 6.2 | 42.85 |
| 2 | Ballari | 0 | 0 | 0 | 0 | 0 | 0 | 27 | 0.2 | 5.4 | 5.4 |
| 3 | BELAGAVI | 424 | 0.065 | 27.56 | 54 | 0.15 | 8.1 | 21 | 0.2 | 4.2 | 39.86 |
| 4 | BELAGAVI CHIKKODI | 1000 | 0.065 | 65.00 | 120 | 0.15 | 18.00 | 24 | 0.2 | 4.8 | 87.8 |
| 5 | BENGALURU RURAL | 406 | 0.065 | 26.39 | 33 | 0.15 | 4.95 | 12 | 0.2 | 2.4 | 33.74 |
| 6 | BENGALURU U NORTH | 249 | 0.065 | 16.185 | 36 | 0.15 | 5.40 | 14 | 0.2 | 2.8 | 24.385 |
| 7 | BENGALURU U SOUTH | 433 | 0.065 | 28.145 | 50 | 0.15 | 7.50 | 17 | 0.2 | 3.4 | 39.045 |
| 8 | BIDAR | 161 | 0.065 | 10.465 | 21 | 0.15 | 3.15 | 12 | 0.2 | 2.4 | 16.015 |
| 9 | CHAMARAJANAGARA | 126 | 0.065 | 8.19 | 20 | 0.15 | 3.00 | 15 | 0.2 | 3 | 14.19 |
| 10 | CHIKKABALLAPURA | 312 | 0.065 | 20.28 | 42 | 0.15 | 6.30 | 11 | 0.2 | 2.2 | 28.78 |
| 11 | CHIKKAMANGALURU | 587 | 0.065 | 38.155 | 29 | 0.15 | 4.35 | 19 | 0.2 | 3.8 | 46.305 |
| 12 | CHITRADURGA | 821 | 0.065 | 53.365 | 56 | 0.15 | 8.40 | 18 | 0.2 | 3.6 | 65.365 |
| 13 | DAKSHINA KANNADA | 637 | 0.065 | 41.405 | 54 | 0.15 | 8.10 | 33 | 0.2 | 6.6 | 56.105 |
| 14 | DAVANAGERE | 574 | 0.065 | 37.31 | 55 | 0.15 | 8.25 | 22 | 0.2 | 4.4 | 49.96 |
| 15 | DHARWAD | 296 | 0.065 | 19.24 | 33 | 0.15 | 4.95 | 16 | 0.2 | 3.2 | 27.39 |
| 16 | Gadag | 0 | 0 | 0 | 0 | 0 | 0 | 14 | 0.2 | 2.8 | 2.8 |
| 17 | HASSAN | 880 | 0.065 | 57.2 | 36 | 0.15 | 5.40 | 32 | 0.2 | 6.4 | 69 |
| 18 | HAVERI | 305 | 0.065 | 19.825 | 42 | 0.15 | 6.30 | 22 | 0.2 | 4.4 | 30.525 |
| 19 | KALBURGI | 188 | 0.065 | 12.22 | 37 | 0.15 | 5.55 | 32 | 0.2 | 6.4 | 24.17 |
| 20 | KODAGU | 223 | 0.065 | 14.495 | 6 | 0.15 | 0.90 | 11 | 0.2 | 2.2 | 17.595 |
| 21 | KOLAR | 578 | 0.065 | 37.57 | 47 | 0.15 | 7.05 | 20 | 0.2 | 4 | 48.62 |
| 22 | KOPPALA | 0 | 0 | 0 | 0 | 0 | 0 | 28 | 0.2 | 5.6 | 5.6 |
| 23 | MANDYA | 754 | 0.065 | 49.01 | 48 | 0.15 | 7.20 | 25 | 0.2 | 5 | 61.21 |
| 24 | MYSURU | 631 | 0.065 | 41.015 | 87 | 0.15 | 13.05 | 44 | 0.2 | 8.8 | 62.865 |
| 25 | RAICHUR | 0 | 0 | 0 | 0 | 0 | 0 | 28 | 0.2 | 5.6 | 5.6 |
| 26 | RAMANAGARA | 423 | 0.065 | 27.495 | 32 | 0.15 | 4.80 | 12 | 0.2 | 2.4 | 34.695 |
| 27 | SHIVAMOGGA | 616 | 0.065 | 40.04 | 47 | 0.15 | 7.05 | 31 | 0.2 | 6.2 | 53.29 |
| 28 | TUMAKURU | 718 | 0.065 | 46.67 | 32 | 0.15 | 4.80 | 31 | 0.2 | 6.2 | 57.67 |
| 29 | TUMAKURU MADHUGIRI | 508 | 0.065 | 33.02 | 30 | 0.15 | 4.50 | 3 | 0.2 | 0.6 | 38.12 |
| 30 | UDUPI | 344 | 0.065 | 22.36 | 23 | 0.15 | 3.45 | 21 | 0.2 | 4.2 | 30.01 |
| 31 | UTTARA KANNADA | 429 | 0.065 | 27.885 | 22 | 0.15 | 3.30 | 23 | 0.2 | 4.6 | 35.785 |
| 32 | UTTARA KANNADA SIRSI | 465 | 0.065 | 30.225 | 41 | 0.15 | 6.15 | 5 | 0.2 | 1 | 37.375 |
| 33 | VIJAYAPURA | 0 | 0 | 0 | 0 | 0 | 0 | 20 | 0.2 | 4 | 4 |
| 34 | YADGIRI | 0 | 0 | 0 | 0 | 0 | 0 | 19 | 0.2 | 3.8 | 3.8 |
| 35 | Total | 13548 | | 880.62 | 1178 | | 176.70 | 713 | | 142.60 | 1199.92 |

ನಿರ್ದೇಶಕರು (ಗುಣಮಟ್ಟ)
ಸಮಗ್ರ ಶಿಕ್ಷಣ ಕರ್ನಾಟಕ,
ಬೆಂಗಳೂರು.
04/03/25

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಕೇಳಿರುವ ಪ್ರಶ್ನೆಗಳಿಗೆ ವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ, ಅದಕ್ಕಾಗಿ ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನಾನು ಕೇಳಿರುವ ಒಟ್ಟು ನಾಲ್ಕು ಪ್ರಶ್ನೆಗಳಲ್ಲಿ ಮೊದಲನೆಯ ಪ್ರಶ್ನೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯು ರಾಜ್ಯದ ಎಷ್ಟು ಶಾಲೆಗಳಲ್ಲಿ ಗ್ರಂಥಾಲಯದ ವ್ಯವಸ್ಥೆ ಕಲ್ಪಿಸಲಾಗಿದೆ ಎನ್ನುವುದಕ್ಕೆ "24,347 ಶಾಲೆಗಳಲ್ಲಿ ಗ್ರಂಥಾಲಯದ ವ್ಯವಸ್ಥೆ ಕಲ್ಪಿಸುವ ಸಲುವಾಗಿ ಒಟ್ಟು 2,000 ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ" ಎಂದು ಹೇಳಿದ್ದಾರೆ. 24,347 ಶಾಲೆಗಳಿಗೆ 2,000 ಲಕ್ಷ ರೂಪಾಯಿಗಳ ಅನುದಾನವನ್ನು ಹಂಚಿಕೆ ಮಾಡಿದರೆ ಒಂದು ಶಾಲೆಗೆ ಸುಮಾರು 6,500 ರೂಪಾಯಿಗಳು ಬರುತ್ತವೆ. ಈಗ ಪುಸ್ತಕಗಳ ಬೆಲೆ ಹೆಚ್ಚಾಗಿರುವುದರಿಂದ ಅನುದಾನವನ್ನು ಸ್ವಲ್ಪ ಹೆಚ್ಚು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತಿದ್ದೇನೆ. ಇದರ ವೆಚ್ಚ ಸೆಕೆಂಡರಿ ಮತ್ತು ಹೈಯರ್ ಸೆಕೆಂಡರಿ ಶಾಲೆಗಳಲ್ಲಿ ಹೆಚ್ಚಾಗಿದೆ. ಪ್ರೌಢಶಾಲೆಗೆ ಗ್ರಂಥಾಲಯ ವೆಚ್ಚವೆಂದು 13,500 ರೂಪಾಯಿಗಳನ್ನು ನೀಡಲಾಗುತ್ತದೆಂದು ಹೇಳಿದ್ದಾರೆ. ಇದು ಸಹ ಕಡಿಮೆಯಾಗಿದೆ. ಹೈಸ್ಕೂಲ್ ಜೊತೆಗೆ ಇರುವಂತಹ secondary school or plus two ಕಾಲೇಜುಗಳಿಗೆ 22,000 ರೂಪಾಯಿಗಳನ್ನು ನೀಡಲಾಗುತ್ತದೆಂದು ಮಾನ್ಯ ಸಚಿವರು ನೀಡಿರುವ ಲಿಖಿತ ರೂಪದ ಉತ್ತರದಲ್ಲಿ ಹೇಳಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಜೂನಿಯರ್ ಕಾಲೇಜುಗಳಿಗೆ ಅಥವಾ plus two ಕಾಲೇಜುಗಳಿಗೆ ಗ್ರಂಥಾಲಯ ಪುಸ್ತಕಗಳನ್ನು ಖರೀದಿ ಮಾಡುವುದಕ್ಕೆ ನೀಡಲಾಗುತ್ತಿರುವ 22,000 ರೂಪಾಯಿಗಳು, ಹೈಸ್ಕೂಲ್‌ಗೆ ನೀಡುತ್ತಿರುವ 13,500 ರೂಪಾಯಿಗಳು ಮತ್ತು ಪ್ರಾಥಮಿಕ ಶಾಲೆಗಳಿಗೆ ನೀಡಲಾಗುತ್ತಿರುವ 6,500 ರೂಪಾಯಿಗಳು ಬಹಳ ಕಡಿಮೆ ಮೊತ್ತವಾಗಿದೆ. ಮಾನ್ಯ ಸಚಿವರು ಈ ಮೊತ್ತವನ್ನು ಹೆಚ್ಚು ಮಾಡುವ ಬಗ್ಗೆ ಉತ್ತರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಮಧು ಬಂಗಾರಪ್ಪ(ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಇದು ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಬರುತ್ತದೆ. ಬಹಳ ವರ್ಷಗಳಿಂದ ಈ ಮೊತ್ತ ಅಷ್ಟೇ ಇದೆ. ಈ ಬಗ್ಗೆ ಆರ್ಥಿಕ ಇಲಾಖೆಯವರೊಂದಿಗೆ ಚರ್ಚೆ ಮಾಡಲಾಗುತ್ತದೆ. ಸರ್ಕಾರಿ ಶಾಲೆಯ ಮಕ್ಕಳಲ್ಲಿ ಓದುವ ಅಭ್ಯಾಸ ಕಡಿಮೆಯಾಗಿದೆ ಎನ್ನುವ ಭಾವನೆಯ ಹಿನ್ನೆಲೆಯಲ್ಲಿ ಈ ಬಾರಿ ಆಯವ್ಯಯದಲ್ಲಿ "ಓದು ಕರ್ನಾಟಕ" ಎನ್ನುವ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಇದರಲ್ಲಿ ಕಡ್ಡಾಯವಾಗಿ ಓದುವುದು ಮತ್ತು

ಕಡ್ಡಾಯವಾಗಿ ಕೈ ಬರಹವನ್ನು ಅಭ್ಯಾಸ ಮಾಡಬೇಕಾಗುತ್ತದೆ. ಗ್ರಂಥಾಲಯಗಳಿಗೆ ನೀಡಲಾಗುತ್ತಿರುವ ಅನುದಾನವನ್ನು ಹೆಚ್ಚಿಸುವ ಬಗ್ಗೆ ಆರ್ಥಿಕ ಇಲಾಖೆಯವರೊಂದಿಗೆ ಮಾತನಾಡಿ, ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, "ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸುವುದರೊಂದಿಗೆ ಭಾಷಾ ಕೌಶಲ್ಯವನ್ನು ಅಭಿವೃದ್ಧಿಗೊಳಿಸಲು 100 ದಿನಗಳ ಓದುವ ಆಂದೋಲನವನ್ನು ರಾಜ್ಯವ್ಯಾಪಿ ಎಲ್ಲಾ ಬಾಲಾ ವಾಟಿಕ ಮತ್ತು ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ 01 ರಿಂದ 08ನೇ ತರಗತಿಯ ವಿದ್ಯಾರ್ಥಿಗಳಿಗೆ ಅನ್ವಯಿಸುವಂತೆ ಮೂರು ಗುಂಪುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತದೆ" ಎಂದು ಮಾನ್ಯ ಸಚಿವರು ನೀಡಿರುವ ಲಿಖಿತ ರೂಪದ ಉತ್ತರದಲ್ಲಿ ತಿಳಿಸಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಓದುವ ಅಭಿಯಾನ ನಡೆಯಬೇಕಾದರೆ ಅಲ್ಲಿ ಪುಸ್ತಕಗಳು ಇರಬೇಕಾಗುತ್ತದೆ. ಎರಡನೆಯದಾಗಿ, ಮಕ್ಕಳು ಎಂತಹ ಪುಸ್ತಕಗಳನ್ನು ಓದುತ್ತಾರೆ ಎನ್ನುವುದು ಸಹ ಮುಖ್ಯವಾಗಿರುತ್ತದೆ. ತಮ್ಮ ಪಠ್ಯ ಪುಸ್ತಕವನ್ನೇ ಓದುತ್ತಾರೆಯೇ ಅಥವಾ ಮಹನೀಯರ ಪುಸ್ತಕಗಳನ್ನು ಓದುತ್ತಾರೆಯೇ ಎನ್ನುವುದು ಮುಖ್ಯವಾಗಿರುವ ಪ್ರಶ್ನೆಯಾಗಿದೆ. ಉದಾಹರಣೆಗೆ ಹೇಳಬೇಕಾದರೆ, ನಾಲ್ವಡಿ ಕೃಷ್ಣ ರಾಜ ಒಡೆಯರ್‌ರವರು ತಮ್ಮ ಬಂಗಾರವನ್ನು ಒತ್ತೆ ಇಟ್ಟು ಅಣೆಕಟ್ಟನ್ನು ಕಟ್ಟಿಸಿದ್ದಾರೆ. ಈ ವಿಚಾರ ಎಷ್ಟು ಜನ ಮಕ್ಕಳಿಗೆ ಗೊತ್ತಿದೆ? ಇಂತಹ ಮಹನೀಯರ ಆತ್ಮ ಚರಿತ್ರೆಯನ್ನು ಓದಿದರೆ, ಮುಂದೆ ನಮ್ಮ ರಾಜ್ಯಕ್ಕೆ ಮತ್ತು ಸಮಾಜಕ್ಕೆ ಅವರು ಸ್ವಲ್ಪ ಮಟ್ಟಿಗೆ ಉಪಯುಕ್ತರಾಗುತ್ತಾರೆ. ಇಲ್ಲದಿದ್ದರೆ ಹಾಳಾಗುತ್ತಾರೆ. ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಕೊನೆಯ ಪಕ್ಷ ಶೇಕಡಾ 50ರಷ್ಟು ವಿದ್ಯಾರ್ಥಿಗಳು ಈ ರಾಜ್ಯದ ಮತ್ತು ದೇಶದ ಮಹನೀಯರ ಜೀವನ ಚರಿತ್ರೆಯನ್ನು ಓದುವಂತಾಗಬೇಕು. ಇಲ್ಲದಿದ್ದರೆ ದೇಶ ಮತ್ತು ಸಮಾಜ ಬರ್ಬಾದ್ ಆಗುತ್ತದೆ. ಮಕ್ಕಳಲ್ಲಿ ಪ್ರೇರಣೆಯನ್ನುಂಟು ಮಾಡುವಂತಹ ಪುಸ್ತಕಗಳನ್ನು ಗ್ರಂಥಾಲಯಕ್ಕೆ ಕೊಡುವಂತಹ ಯೋಜನೆ ಸರ್ಕಾರಕ್ಕಿದೆಯೇ ಎನ್ನುವುದು ನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ನಮ್ಮ ಊರಿಗೆ ಬಂದಿದ್ದರು. ಸುಮಾರು ಎರಡು ಎರಡೂವರೆ ಗಂಟೆಗಳ ಕಾಲ ಊರಿನಲ್ಲಿದ್ದರು. ನಮ್ಮ ಊರಿನಲ್ಲಿರುವ ಶಾಲೆ ಮೊದಲು ಹೇಗಿತ್ತು; ಈಗ ಹೇಗಿದೆ ಎನ್ನುವುದನ್ನು ಅವರೇ ನೋಡಿದ್ದಾರೆ. ನನಗೆ ಲಭ್ಯವಿರುವ ಅನುದಾನವನ್ನು ಬಳಕೆ ಮಾಡಿಕೊಂಡು

ನಮ್ಮ ಊರಿನಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಮಾಡಿದ್ದೇವೆ. "ಆ ಶಾಲೆಗೆ ಗ್ರಂಥಾಲಯ ಸೌಲಭ್ಯವನ್ನು ಕಲ್ಪಿಸಲು ಸರ್ಕಾರ ಎಷ್ಟು ಅನುದಾನವನ್ನು ನೀಡಲಾಗಿದೆ" ಎನ್ನುವ ನನ್ನ ಪ್ರಶ್ನೆಗೆ. "6,500 ರೂಪಾಯಿಗಳನ್ನು ನೀಡಲಾಗಿದೆ" ಎನ್ನುವ ಉತ್ತರವನ್ನು ನೀಡಿದ್ದಾರೆ. ಸದರಿ ಶಾಲೆಗೆ ಈ ಮೊತ್ತ ಸಾಕಾಗುವುದಿಲ್ಲವೆಂದು ನಾನು ಹೇಳುತ್ತಿದ್ದೇನೆ. ಕೊನೆಯ ಪಕ್ಷ ಪ್ರಾಥಮಿಕ ಶಾಲೆಗಳಿಗೆ 25,000 ಮತ್ತು ಪ್ರೌಢಶಾಲೆಗಳಿಗೆ 50,000 ಮತ್ತು ಜೂನಿಯರ್ ಕಾಲೇಜುಗಳಿಗೆ 1,00,000 ರೂಪಾಯಿಗಳವರೆಗೆ ಅನುದಾನ ಬಿಡುಗಡೆ ಮಾಡಬೇಕೆಂದು ನಾನು ಮಾನ್ಯ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಮಹನೀಯರ ಜೀವನ ಚರಿತ್ರೆಗೆ ಸಂಬಂಧಪಟ್ಟಂತೆ ಸಣ್ಣಸಣ್ಣ ಪುಸ್ತಕಗಳನ್ನು ಇಡಬೇಕಾಗುತ್ತದೆ. ದೊಡ್ಡ ಗ್ರಂಥಗಳನ್ನು ಇಟ್ಟರೇ, ಯಾರೂ ಓದುವುದಿಲ್ಲ; ಪುಸ್ತಕವನ್ನು ಮುಚ್ಚಿಟ್ಟು ತಲೆ ದಿಬ್ಬನ್ನಾಗಿಸಿಕೊಂಡು ಮಲಗಿಕೊಳ್ಳುತ್ತೇವೆ. ಸಣ್ಣಸಣ್ಣ ಪುಸ್ತಕಗಳನ್ನು ಇಡಬೇಕಾಗುತ್ತದೆ. ಉದಾಹರಣೆಗೆ ಹೇಳಬೇಕಾದರೆ, "ಭಾರತ-ಭಾರತಿ" ಎನ್ನುವ ಪುಸ್ತಕವಿದೆ. ಒಂದು ದಿನಕ್ಕೆ ನಾಲ್ಕೈದು ಪುಸ್ತಕಗಳನ್ನು ಓದಬಹುದಾಗಿದೆ. ಈ ಪುಸ್ತಕ ಸುಮಾರು 15-16 ಪುಟಗಳನ್ನು ಒಳಗೊಂಡಿರುತ್ತದೆ. ಈ ರೀತಿಯ ಕಿರು ಪುಸ್ತಕಗಳನ್ನು ಶಾಲೆಗಳ ಗ್ರಂಥಾಲಯಕ್ಕೆ ಕೊಡುವುದಕ್ಕೆ ಪ್ರಯತ್ನಿಸುವುದರ ಜೊತೆಗೆ ಶಾಲೆಗಳಲ್ಲಿರುವ ಗ್ರಂಥಾಲಯಗಳಿಗೆ ಸಂಬಂಧಪಟ್ಟಂತೆ ಒಂದು ಐತಿಹಾಸಿಕ ತೀರ್ಮಾನವನ್ನು ಸರ್ಕಾರ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. (ಮುಂದು)

(157)10.03.2025/12.10/ ಪಿಕೆ-ವಿಕೆ

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಹೇಳಿರುವಂಥದ್ದು ಬಹಳ ಅರ್ಥಪೂರ್ಣವಾಗಿದೆ. ವಿದ್ಯಾರ್ಥಿಗಳು ಓದುತ್ತಿರುವ ತರಗತಿಗೆ ಮತ್ತು ವಯಸ್ಸಿಗೆ ಅನುಗುಣವಾಗಿ, ನಮ್ಮ ಪರಂಪರೆ ಮತ್ತು ಸಾಧಕರ ಬಗ್ಗೆ ತಿಳಿದುಕೊಳ್ಳುವಂತಹ ಪುಸ್ತಕಗಳನ್ನು ಕೊಡಬೇಕಾಗುತ್ತದೆ. ಅವು, ಸಾಧಕರ ಭಾವನೆಗಳನ್ನು ವಿದ್ಯಾರ್ಥಿಗಳಿಗೆ ತುಂಬುವಂತಹ, ಅವರಿಗೆ ಸ್ಫೂರ್ತಿ ತುಂಬುವಂತಹ ಉದಾಹರಣೆಗಳನ್ನು ಒಳಗೊಂಡಂಥ ಪುಸ್ತಕಗಳಾಗಿರಬೇಕು. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನನ್ನ ಇಲಾಖೆಯೊಡನೆ ಚರ್ಚೆ ಮಾಡುತ್ತೇನೆ. ಅಂತಹ ಪುಸ್ತಕಗಳನ್ನು ನಮ್ಮ ಇಲಾಖೆಯ ವತಿಯಿಂದ ಮುದ್ರಿಸಿ ಎಲ್ಲಾ ಶಾಲೆಗಳಿಗೆ ಕೊಡುವ ವ್ಯವಸ್ಥೆ ಮಾಡಬೇಕಾಗುತ್ತದೆ . ಇದರಲ್ಲಿ ಆರ್ಥಿಕ ಹೊರೆಯ ವಿಚಾರವೂ ಇದೆ. ನಮ್ಮ ಸರ್ಕಾರಿ ಶಾಲೆಗಳಿಗೆ ಇಂತಹ ವ್ಯವಸ್ಥೆ ಮಾಡುವುದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾನು ಅದನ್ನು ಗ್ಯಾರಂಟಿ ಮಾಡುತ್ತೇನೆ. ಮಾನ್ಯ ಸದಸ್ಯರು, ಲೈಬ್ರರಿಗೆಂದು ನೀಡಿರುವ ರೂ. 20 ಕೋಟಿ ಮೊತ್ತವನ್ನು ಇನ್ನೂ ಜಾಸ್ತಿ ಮಾಡಬೇಕೆಂದು

ಕೇಳಿದರು. ಮತ್ತೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ಶಾಲೆಗೆ ನಾನು ಭೇಟಿ ಕೊಟ್ಟಿದ್ದೆ. ಅಲ್ಲಿ ಅಕ್ಕಪಕ್ಕದವರೆಲ್ಲಾ ಬರುವುದರಿಂದ ಹೆಚ್ಚು ಅಡ್ಮೀಷನ್‌ಗಳಾಗುತ್ತವೆ. ಅಂತಹ ಕಡೆ ಪುಸ್ತಕಗಳನ್ನು ಕಡಿಮೆ ವಿತರಿಸುವುದಕ್ಕೆ ಆಗುವುದಿಲ್ಲ. ಶಾಲೆಯ ಮಕ್ಕಳ strength ಎಷ್ಟಿದೆ, ಅದರ ವಿಸ್ತರಣೆಯನ್ನು ಹೇಗೆ ಮಾಡಬಹುದು ಎಂದು we will work out in some modality. ಆರ್ಥಿಕವಾಗಿ ಜಾಸ್ತಿ ಹೊರೆ ಬಂದರೂ ಕೂಡ ಮಕ್ಕಳ ಕಲಿಕೆಗೆ ಅನುಕೂಲವಾಗಬೇಕು. ಅನೇಕ ಸಲ, ಮಧು ಬಂಗಾರಪ್ಪ ಅವರಿಗೆ ಕನ್ನಡ ಬರುವುದಿಲ್ಲ ಎಂದು ಮಾಧ್ಯಮದಲ್ಲಿ ಬಂದಿದೆ. ನಾನು ಶಿವಮೊಗ್ಗದಲ್ಲೇ ಓದಿದ್ದೇನೆ. ಇಂಗ್ಲಿಷ್ ಮಿಡಿಯಂನಲ್ಲಿ ಓದುತ್ತಿದ್ದುದರಿಂದ ಅಲ್ಲಿ ಕನ್ನಡವನ್ನೂ ಸಹ ಇಂಗ್ಲಿಷ್‌ನಲ್ಲೇ ಹೇಳಿಕೊಡುತ್ತಿದ್ದರು. ನಂತರ ನಾನು ಇಲ್ಲಿಗೆ ಬಂದೆ. ಕನ್ನಡ ಓದುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ ನಿಜ; ಆದರೆ ನಿರಂತರವಾಗಿ ನಾನು 2 ಗಂಟೆಗಳ ಕಾಲ ಕನ್ನಡದಲ್ಲಿ ಭಾಷಣ ಮಾಡಬಲ್ಲೆ. ನನಗೆ ಕನ್ನಡ ಬರುವುದಿಲ್ಲ ಎಂದು ಮಾಧ್ಯಮದಲ್ಲಿ ಬಂದ ತಕ್ಷಣ ಅದರ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಮಕ್ಕಳಿಗೆ ಶಾಲೆಯಲ್ಲಿ ಓದುವ ಅಭ್ಯಾಸ ಕಡಿಮೆಯಾಗಿದೆ. ಶಾಲೆಯಲ್ಲಿ ಒಂದು ಒಳ್ಳೆಯ ಗ್ರಂಥಾಲಯ ಇದ್ದರೆ, ಅಲ್ಲಿರುವ ಪುಸ್ತಕಗಳನ್ನು ಓದುವ ಸ್ವಭಾವವನ್ನು ಮಕ್ಕಳಲ್ಲಿ ಬೆಳೆಸಿದರೆ ಆಗ ಪಠ್ಯ ಪುಸ್ತಕಗಳನ್ನೂ ಸಹ ಓದುತ್ತಾರೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೇ, 24347 ಶಾಲಾ-ಕಾಲೇಜುಗಳ ಗ್ರಂಥಾಲಯಗಳಿಗೆ ರೂ. 20 ಕೋಟಿ ಅನುದಾನ ಕೊಟ್ಟಿರುವುದು ಬಹಳ ಕಡಿಮೆಯಾಯಿತು. ಕನಿಷ್ಠ ರೂ. 50 ಕೋಟಿಯಷ್ಟಾದರೂ ಜಾಸ್ತಿ ಆಗಬೇಕು.

**ಉಪ ಸಭಾಪತಿಯವರು:-** ನನ್ನದೊಂದು ಸಲಹೆ ಇದೆ. ಗ್ರಂಥಾಲಯಗಳ ಅಭಿವೃದ್ಧಿಗೆ ಸಾರ್ವಜನಿಕರಿಂದ ವಂತಿಗೆಯನ್ನೂ ತೆಗೆದುಕೊಳ್ಳಬಹುದಾಗಿದೆ. ಎಂಎಲ್‌ಎ, ಎಂಎಲ್‌ಸಿಗಳಾದ ನಾವು ಈ ಕುರಿತು ಪ್ರಸ್ತಾಪ ಮಾಡಿದಾಗ ಯಾರೂ ಇಲ್ಲ ಎಂದು ಹೇಳುವುದಿಲ್ಲ. ಸರ್ಕಾರವೇ ಎಲ್ಲವನ್ನೂ ಮಾಡಬೇಕು ಎನ್ನುವುದಕ್ಕಿಂತ ನಾವುಗಳೂ ಕೂಡ ಇಂಥದ್ದಕ್ಕೆ ಕೈಜೋಡಿಸಬೇಕು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೇ, ಸರ್ಕಾರದ್ದು "ನಮ್ಮೂರ ಶಾಲೆ" ಎನ್ನುವ ಒಂದು ಯೋಜನೆ ಇದೆ. ಅಂತಹ ಶಾಲೆಗಳಿಗೆ ಊರಿನವರ ಯೋಗದಾನ ಕೂಡ ಸ್ವಲ್ಪ ಇರಬೇಕಾಗುತ್ತದೆ. ಗ್ರಂಥಾಲಯ ಅಭಿವೃದ್ಧಿಗೋಸ್ಕರ ರೂ. 50,000 ಅಥವಾ ರೂ. 1,00,000 ಕೊಡಿ ಎಂದು ಕೇಳಿದರೆ ಬಹಳಷ್ಟು ಜನ ಮುಂದೆ ಬರುವವರಿದ್ದಾರೆ. ಆಯಾ ಊರಿನ ಹಳೆಯ ವಿದ್ಯಾರ್ಥಿಗಳ ಗಮನಕ್ಕೆ ತಂದರೂ ಈ ಕೆಲಸ ಆಗುತ್ತದೆ. ಇಂಥದ್ದು

ಆಗಿದೆ ಕೂಡ; ವೆಬ್‌ಸೈಟ್‌ಗಳಲ್ಲೂ ನೋಡಬಹುದು. ಈ ರೀತಿ PPP (Public-Private Partnership) model ನಲ್ಲಿ ಮಾಡಬಹುದೇ ಎಂಬುದರ ಬಗ್ಗೆ ಗಮನ ಕೊಡಬೇಕೆಂದು ಸಲಹೆ ಕೊಡಬಯಸುತ್ತೇನೆ.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಗಳೇ, ಮೊದಲು "ನಮ್ಮ ಶಾಲೆ ನನ್ನ ಕೊಡುಗೆ" ಎನ್ನುವ ಯೋಜನೆ ಇತ್ತು; ಈಗ "ನನ್ನ ಶಾಲೆ ನನ್ನ ಜವಾಬ್ದಾರಿ" ಎನ್ನುವ ಯೋಜನೆ ಇದೆ. ಮಾನ್ಯ ಮುಖ್ಯಮಂತ್ರಿಗಳು ತಾವು ಓದಿದ ಶಾಲೆಗೆ ರೂ. 10,00,000ಗಳನ್ನು ಕೊಟ್ಟರು. ನಮ್ಮ ತಂದೆಯವರು ಓದಿದ್ದಂತಹ ಶಾಲೆಗೆ ನಾನು ನನ್ನ ಸಂಬಳದಿಂದ ರೂ. 10,00,000ಗಳನ್ನು ಕೊಟ್ಟೆ. ಇಂತಹ ಉದಾಹರಣೆಗಳು ನಮ್ಮಿಂದ ಪ್ರಾರಂಭವಾಗಬೇಕು ಎನ್ನುವುದು ಇದರ ಉದ್ದೇಶವಾಗಿದೆ. ಒಂದೊಂದು ಶಾಲೆಯಿಂದ ಒಬ್ಬೊಬ್ಬರು ಸಾಧಕರು ಇದ್ದೇ ಇರುತ್ತಾರೆ. SDMC (School Development and Monitoring Committee), ಶಿಕ್ಷಕರು ಮತ್ತು ಜನ ಪ್ರತಿನಿಧಿಗಳು ದೇಣಿಗೆ ನೀಡಬೇಕೆಂದು ನಾನು ಮನವಿಯನ್ನು ಮಾಡುತ್ತೇನೆ. ಮಾನ್ಯ ಸಿದ್ದರಾಮಯ್ಯನವರು ಮತ್ತು ಮಾನ್ಯ ಬಂಗಾರಪ್ಪನವರು ಸರ್ಕಾರಿ ಶಾಲೆಯಲ್ಲಿ ಓದಿಯೇ ಮುಖ್ಯಮಂತ್ರಿಗಳಾಗಿದ್ದಾರೆ. ತಾವು ಓದಿರುವಂತಹ ಶಾಲೆಯಲ್ಲಿ ಗ್ರಂಥಾಲಯವನ್ನು ತೆರೆಯಲು ಯಾವುದಾದರೂ ಒಂದು ರೀತಿಯಲ್ಲಿ ಕೊಡುಗೆ ಕೊಟ್ಟರೆ, ಗ್ರಂಥಾಲಯದಲ್ಲಿ ಅಂಥವರ ಹೆಸರನ್ನು ಹಾಕಿಸುವುದಕ್ಕೆ ಅವಕಾಶ ಇದೆಯೇ ಎನ್ನುವುದರ ಬಗ್ಗೆ ಇಲಾಖೆಯೊಡನೆ ಚರ್ಚೆ ಮಾಡಿ ಮುಂದುವರೆಯುವ ಕೆಲಸ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು, ಪೌಷ್ಟಿಕ ಆಹಾರವನ್ನು ಹೇಗೆ ಕೊಡಲಾಗುತ್ತಿದೆಯೋ ಅದೇರೀತಿ ವಿದ್ಯಾರ್ಥಿಗಳ ಕಲಿಕೆಗೆ ಸಂಬಂಧಪಟ್ಟಂತೆಯೂ ಗಮನ ಕೊಡಿ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಸಲ ನಾವು ಅದಕ್ಕೆ ಆದ್ಯತೆ ಕೊಡುವ ಕೆಲಸ ಮಾಡುತ್ತೇವೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೋ ಅದನ್ನು consider ಮಾಡಿ.

**ಶ್ರೀ ಎನ್.ರವಿಕುಮಾರ್:-** ಹೊಟ್ಟೆಗೆ ಹೇಗೆ ಆಹಾರ ಮುಖ್ಯವೋ ಅದೇರೀತಿ ತಲೆಗೂ ಆಹಾರ ಕೊಡುವುದು ಮುಖ್ಯವಾಗಿರುತ್ತದೆ.

**ಪ್ರಶ್ನೆ ಸಂಖ್ಯೆ: 362**

**ಉಪ ಸಭಾಪತಿಯವರು:-** ಮಾನ್ಯ ಕೆ.ವಿವೇಕಾನಂದರವರೇ ತಮ್ಮ ಪ್ರಶ್ನೆಗೆ 15 ದಿವಸ ಕಾಲಾವಕಾಶ ಕೇಳಿದ್ದಾರೆ.

| ಕರ್ನಾಟಕ ವಿಧಾನ ಪರಿಷತ್ತು | | |
|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 54(396)* |
| 2 | ಮಾನ್ಯ ಸದಸ್ಯರ ಹೆಸರು | ಶ್ರೀಮತಿ ಬಲ್ಕೀಸ್ ಬಾನು |
| 3 | ವಿಷಯ | ಜಿಲ್ಲಾ ಆಸ್ಪತ್ರೆಗಳನ್ನು ವೈದ್ಯಕೀಯ ಕಾಲೇಜುಗಳಿಗೆ ಸಂಯೋಜಿಸಿರುವ ಕುರಿತು |
| 4 | ಉತ್ತರಿಸ ಬೇಕಾದ ದಿನಾಂಕ | 10.03.2025 |
| 5 | ಉತ್ತರಿಸಬೇಕಾದ ಸಚಿವರು | ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಿವೆ: ಸದರಿ ಆಸ್ಪತ್ರೆಗಳನ್ನು ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಸಂಯೋಜನೆಗೊಳಿಸಿರುವುದು ನಿಜವೆ; | ರಾಜ್ಯದಲ್ಲಿರುವ ಒಟ್ಟು 28 ಜಿಲ್ಲಾಸ್ಪತ್ರೆಗಳಿವೆ 16 ಜಿಲ್ಲಾಸ್ಪತ್ರೆಗಳನ್ನು ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಸಂಯೋಜಿಸಿದೆ. ( ಅನುಬಂದ-1 ಮತ್ತು 2 ನ್ನು ಲಗತ್ತಿಸಿದೆ) |
| ಆ) | ಈ ರೀತಿ ಸಂಯೋಜನೆಗೊಳಿಸಿರುವುದಿರಿಂದ ಸದರಿ ಜಿಲ್ಲಾ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ವೈದ್ಯಕೀಯ ವ್ಯಾಸಂಗ ಮಾಡುತ್ತಿರುವ ಕಿರಿಯ ವಿದ್ಯಾರ್ಥಿಗಳಿಂದ ಚಿಕಿತ್ಸೆ ನೀಡುತ್ತಿದ್ದು ಇದರಿಂದ ರೋಗಿಗಳಿಗೆ ಸರಿಯಾದ ಕ್ರಮದಲ್ಲಿ ವೈದ್ಯಕೀಯ ಚಿಕಿತ್ಸೆ ದೊರೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ.<br><br>ವೈದ್ಯಕೀಯ ಶಿಕ್ಷಣ ಇಲಾಖೆಗೆ ಸಂಯೋಜನೆಗೊಂಡಿರುವ ಜಿಲ್ಲಾ ಆಸ್ಪತ್ರೆಗಳಲ್ಲಿ ಲಭ್ಯವಿರುವ ಎಲ್ಲಾ ಚಿಕಿತ್ಸೆಗಳನ್ನು ಹಿರಿಯ ವೈದ್ಯರುಗಳ ಮಾರ್ಗದರ್ಶನ ಮತ್ತು ಸಮ್ಮುಖದಲ್ಲಿ ರೋಗಿಗಳಿಗೆ ಚಿಕಿತ್ಸೆಯನ್ನು ಯಾವುದೇ ನ್ಯೂನ್ಯತೆಗಳಾಗದಂತೆ ಸರಿಯಾದ ಕ್ರಮದಲ್ಲೇ ಸಕಾಲದಲ್ಲಿ ಒದಗಿಸಲಾಗುತ್ತಿದೆ.<br><br>ಕಿರಿಯ ವೈದ್ಯರುಗಳು (ಸ್ನಾತಕೋತ್ತರ ವಿದ್ಯಾರ್ಥಿಗಳು, UG, Allied Health Science, Paramedical etc....) NMC ಹಾಗೂ University ಮಾರ್ಗಸೂಚಿಯಾನುಸಾರ ಚಿಕಿತ್ಸಾ ತರಬೇತಿಯನ್ನು ಮತ್ತು ಕಲಿಕೆಯನ್ನು ಎಲ್ಲಾ ವೈದ್ಯಕೀಯ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ತೊಂದರೆಯಾಗದಂತೆ ಪಡೆದುಕೊಳ್ಳುತ್ತಿರುತ್ತಾರೆ. |
| ಇ) | ಹೌದಾದಲ್ಲಿ ಸದರಿ ಸರ್ಕಾರಿ ಜಿಲ್ಲಾ ಆಸ್ಪತ್ರೆಗಳನ್ನು ಸಂಯೋಜಿಸುವ ಬದಲು ಆಯಾ ಕಾಲೇಜುಗಳ ಆಸ್ಪತ್ರೆಗಳನ್ನು ಪ್ರಾರಂಭಿಸುವಂತೆ ನಿರ್ದೇಶನ ನೀಡಲು ಸರ್ಕಾರವು ಕ್ರಮ ವಹಿಸುವುದೆ? | ಅನ್ವಯಿಸುವುದಿಲ್ಲ. |

ಅನುಬಂಧ-1

## ಬೋಧಕ ಆಸ್ಪತ್ರೆಯಾಗಿ ಜಿಲ್ಲಾ ಆಸ್ಪತ್ರೆಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಿರುವ ವಿವರ

| ಕ್ರ.ಸಂ | ಜಿಲ್ಲೆಗಳು | ಜಿಲ್ಲಾ ಆಸ್ಪತ್ರೆಗಳು | ಬೋಧಕ ಆಸ್ಪತ್ರೆಯಾಗಿ ಜಿಲ್ಲಾ ಆಸ್ಪತ್ರೆಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಿರುವ ವಿವರ | ಹಸ್ತಾಂತರಿಸಿರುವ ಆದೇಶ ಗಳ ವಿವರ |
|---|---|---|---|---|
| 1 | ಮಂಡ್ಯ | ಜಿಲ್ಲಾ ಆಸ್ಪತ್ರೆ. ,ಮಂಡ್ಯ | ಮಂಡ್ಯ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ,ಮಂಡ್ಯ | ಸರ್ಕಾರಿ ಆದೇಶ ಸಂಖ್ಯೆ: ಆಕುಕ 672 ಸಿಜಿಎಂ 2006 ಬೆಂಗಳೂರು ದಿನಾಂಕ 29-12-2006 ರಲ್ಲಿ ಸೂಚಿಸಿರುವಂತೆ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದೆ. |
| 2 | ಹಾಸನ | ಶ್ರೀ ಚಾಮರಾಜೇಂದ್ರ ಜಿಲ್ಲಾ ಆ | ಹಾಸನ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ, ಹಾಸನ | |
| 3 | ಶಿವಮೊಗ್ಗ | ಮೆಗ್ಗಾನ್ ಜಿಲ್ಲಾ ಆಸ್ಪತ್ರೆ, ಶಿವಮ | ಶಿವಮೊಗ್ಗ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ, ಶಿವಮೊಗ್ಗ | |
| 4 | ರಾಯಚೂರು | ಜಿಲ್ಲಾ ಆಸ್ಪತ್ರೆ, ರಾಯಚೂರು | ರಾಯಚೂರುವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ, ರಾಯಚೂರು | |
| 5 | ಬೀದರ್ | ಜಿಲ್ಲಾ ಆಸ್ಪತ್ರೆ, ಬೀದರ್ | ಬೀದರ್ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ ಬೀದರ್ | |
| 6 | ಬೆಳಗಾವಿ | ಜಿಲ್ಲಾ ಆಸ್ಪತ್ರೆ, ಬೆಳಗಾವಿ | ಬೆಳಗಾವಿ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ, ಬೆಳಗಾವಿ | |
| 7 | ಉತ್ತರ ಕನ್ನಡ | ಜಿಲ್ಲಾ ಆಸ್ಪತ್ರೆ, ಕಾರವಾರ | ಕಾರವಾರ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ, ಕಾರವಾರ | ಸರ್ಕಾರಿ ಆದೇಶ ಶಂಖ್ಯೆ ಆಕುಕ 28 ಸಿಜಿಎಂ 2016 ಬೆಂಗಳೂರು ದಿನಾಂಕ 12-02-2016 ರಲ್ಲಿ ಸೂಚಿಸಿರುವಂತೆ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದೆ. |
| 8 | ಕೊಡಗು | ಜಿಲ್ಲಾ ಆಸ್ಪತ್ರೆ, ಮಡಿಕೇರಿ | ಕೊಡಗು ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ,ಮಡಿಕೇರಿ | |
| 9 | ಕೊಪ್ಪಳ | ಜಿಲ್ಲಾ ಆಸ್ಪತ್ರೆ, ಕೊಪ್ಪಳ | ಕೊಪ್ಪಳ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ,ಕೊಪ್ಪಳ | |
| 10 | ಕಲ್ಬುರ್ಗಿ | ಜಿಲ್ಲಾ ಆಸ್ಪತ್ರೆ, ಕಲಬುರಗಿ | ಕಲಬುರಗಿ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ,ಕಲಬುರಗಿ | |
| 11 | ಗದಗ | ಜಿಲ್ಲಾ ಆಸ್ಪತ್ರೆ, ಗದಗ | ಗದಗ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ, ಗದಗ | |
| 12 | ಚಾಮರಾಜನಗರ | ಜಿಲ್ಲಾ ಆಸ್ಪತ್ರೆ, ಚಾಮರಾಜನಗರ | ಚಾಮರಾಜನಗರ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ, ಚಾಮರಾಜನಗರ | |
| 13 | ಹಾವೇರಿ | ಜಿಲ್ಲಾ ಆಸ್ಪತ್ರೆ, ಹಾವೇರಿ | ಹಾವೇರಿ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ, ಹಾವೇರಿ | ಸರ್ಕಾರಿ ಆದೇಶ ಶಂಖ್ಯೆ ಆಕುಕ 124ಸಿಜಿಎಂ 2020 ಬೆಂಗಳೂರು ದಿನಾಂಕ 08-09-2020ರಲ್ಲಿ ಸೂಚಿಸಿರುವಂತೆ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದೆ. |
| 14 | ಚಿಕ್ಕಬಳ್ಳಾಪುರ | ಜಿಲ್ಲಾ ಆಸ್ಪತ್ರೆ, ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ ಚಿಕ್ಕಬಳ್ಳಾಪುರ | |
| 15 | ಚಿಕ್ಕಮಗಳೂರು | ಅರಳಗುಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು. | ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು | |
| 16 | ಯಾದಗಿರಿ | ಜಿಲ್ಲಾ ಆಸ್ಪತ್ರೆ, ಯಾದಗಿರಿ | ಯಾದಗಿರಿ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಗಳ & ಜಿಲ್ಲಾ ಆಸ್ಪತ್ರೆ, ಯಾದಗಿರಿ | |

## ಅನುಬಂಧ-2

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿರುವ ಜಿಲ್ಲಾ ಆಸ್ಪತ್ರೆಗಳ ವಿವರ

| ಕ್ರ.ಸಂ | ಜಿಲ್ಲೆಗಳು | ಜಿಲ್ಲಾ ಆಸ್ಪತ್ರೆಗಳು | ಷರಾ |
|---|---|---|---|
| 1 | ರಾಮನಗರ | ಜಿಲ್ಲಾ ಆಸ್ಪತ್ರೆ, ರಾಮನಗರ | |
| 2 | ಚಿತ್ರದುರ್ಗ | ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ | ಪ್ರಕ್ರಿಯೆ ಜಾರಿಯಲ್ಲಿದೆ |
| 3 | ತುಮಕೂರು | ಜಿಲ್ಲಾ ಆಸ್ಪತ್ರೆ, ತುಮಕೂರು | |
| 4 | ಕೋಲಾರ | ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ, ಕೋಲಾರ | |
| 5 | ದಾವಣಗೆರೆ | ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ | |
| 6 | ಮೈಸೂರು | ಜಿಲ್ಲಾ ಆಸ್ಪತ್ರೆ,ಮೇಟಗಳ್ಳಿ, ಮೈಸೂರು | |
| 7 | ದಕ್ಷಿಣ ಕನ್ನಡ | ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು | |
| 8 | ಉಡುಪಿ | ಜಿಲ್ಲಾ ಆಸ್ಪತ್ರೆ, ಉಡುಪಿ | |
| 9 | ವಿಜಯಪುರ | ಜಿಲ್ಲಾ ಆಸ್ಪತ್ರೆ, ವಿಜಯಪುರ | |
| 10 | ಬಾಗಲಕೋಟೆ | ಜಿಲ್ಲಾ ಆಸ್ಪತ್ರೆ,ಬಾಗಲಕೋಟೆ | |
| 11 | ಧಾರವಾಡ | ಜಿಲ್ಲಾ ಆಸ್ಪತ್ರೆ, ಧಾರವಾಡ | |
| 12 | ಬಳ್ಳಾರಿ, | ಜಿಲ್ಲಾ ಆಸ್ಪತ್ರೆ, ಬಳ್ಳಾರಿ. | |

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಗಳೇ, 28 ಜಿಲ್ಲಾ ಆಸ್ಪತ್ರೆಗಳ ಪೈಕಿ 16 ಜಿಲ್ಲಾ ಆಸ್ಪತ್ರೆಗಳನ್ನು ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಸಂಯೋಜಿಸಿದೆ ಎಂದು ತಿಳಿಸಿದ್ದಾರೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಏನು ಮೆಗ್ಗಾನ್ ಜಿಲ್ಲಾ ಆಸ್ಪತ್ರೆ ಇತ್ತೋ ಅಲ್ಲಿ, ದಿವಂಗತ ಬಂಗಾರಪ್ಪನವರು, ಮಾನ್ಯ ಕಾಗೋಡು ತಿಮ್ಮಪ್ಪನವರು ಹೋರಾಟ ಮಾಡಿದ ಹಿನ್ನೆಲೆಯಲ್ಲಿ ಶಿವಮೊಗ್ಗ ಮೆಡಿಕಲ್ ಕಾಲೇಜು ಬರುವುದಕ್ಕೆ ಸಹಾಯವಾಯಿತು. ಮೆಡಿಕಲ್ ಕಾಲೇಜು ಪ್ರಾರಂಭ ಮಾಡಬೇಕಾದರೆ ಸರ್ಕಾರದವರು, ಆ ಭಾಗದಲ್ಲಿ ಯಾವ ಜಿಲ್ಲಾ ಆಸ್ಪತ್ರೆ ಇದೆ ಎಂದು ನೋಡಿ ಅದಕ್ಕೆ attach ಮಾಡುತ್ತಾರೆ. ನಾನು ಒಂದು ಸಲ ಮೆಗ್ಗಾನ್ ಆಸ್ಪತ್ರೆಯ ವೈದ್ಯರು ಹೇಗೆ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿದುಕೊಳ್ಳಲು ಒಬ್ಬ ಸಾಮಾನ್ಯ ರೋಗಿಯಂತೆ ಹೋಗಿ ಸಾಲಿನಲ್ಲಿ ನಿಂತುಕೊಂಡೆ. Just to compare that, ಜಿಲ್ಲಾ ಆಸ್ಪತ್ರೆ ಇರಬೇಕು ಅಥವಾ ಮೆಡಿಕಲ್ ಕಾಲೇಜು ಇರುವಂತಹ ಆಸ್ಪತ್ರೆ ಇರಬೇಕೇ ಎನ್ನುವ ಕುತೂಹಲದಿಂದ ನಾನು ಅಲ್ಲಿಗೆ ಹೋಗಿದ್ದೆ. ಅಲ್ಲಿ ನನಗೆ, ಬಹಳಷ್ಟು

ವೈದ್ಯರು ಖಾಸಗಿ ನರ್ಸಿಂಗ್ ಹೋಮ್‌ಗಳಿಗೆ ಮತ್ತು ತಮ್ಮದೇ ಆದ ಕ್ಲಿನಿಕ್‌ಗಳನ್ನು ನಡೆಸುತ್ತಿದ್ದಾರೆ ಎನ್ನುವುದು ಗೊತ್ತಾಯಿತು. ಆಸ್ಪತ್ರೆಯಲ್ಲಿ ಇದರ ಬಗ್ಗೆ ವಿಚಾರಿಸಿದಾಗ, ಅವರು ಟೀಚಿಂಗ್ ಮಾಡುವುದಕ್ಕೆ ಹೋಗಿದ್ದಾರೆ ಎಂದು ಹೇಳಿದರು. ರೋಗಿಗಳು ಬೇರೆ ಬೇರೆ ಕಡೆ ಹೋಗಿ ಟ್ರೀಟ್‌ಮೆಂಟ್ ತೆಗೆದುಕೊಳ್ಳುವಂತೆ ಅವರ ದಾರಿಯನ್ನು ತಪ್ಪಿಸುತ್ತಿದ್ದಾರೆ. ಬೇರೆ ಬೇರೆ ಜಿಲ್ಲೆಗಳಲ್ಲೂ ಇದೇರೀತಿಯ ಅನಾಹುತಗಳು ಆಗುತ್ತಿವೆ ಎನ್ನುವ ಮಾಹಿತಿ ನನ್ನ ಹತ್ತಿರ ಬಂದಿದೆ; ಆದರೆ ಆ ಕುರಿತು ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಪ್ರತಿ ದಿವಸ 2,500 ಹೊರ ರೋಗಿಗಳು ಬರುತ್ತಾರೆ. 850 ಒಳರೋಗಿಗಳು ಬರುತ್ತಾರೆ. ಪ್ರತಿ ತಿಂಗಳು 750-775 ಹೆರಿಗೆಗಳು ಆಗುತ್ತವೆ. ಪ್ರತಿ ದಿವಸ 40 ಡಯಾಲಿಸಿಸ್ ಕೇಸ್‌ಗಳಿರುತ್ತವೆ. ತಿಂಗಳಿಗೆ 1,750 ಮೇಜರ್ ಸರ್ಜರಿ ಮತ್ತು ಮೈನರ್ ಸರ್ಜರಿ 1500, angiogram-80, cataract surgery-200 to 250, postmortem services-1,200 per month. ಒಂದು ವರ್ಷಕ್ಕೆ 10,000 ಬ್ಲಡ್ ಬಾಟಲ್ಸ್ ಬೇಕಾಗುತ್ತವೆ. ಸರ್ಕಾರ ಪ್ರತಿಯೊಂದಕ್ಕೂ, medical fitness certificate ಬೇಕು ಎಂದು ನಿಬಂಧನೆ ಹಾಕಿರುವುದರಿಂದ ವಿದ್ಯಾರ್ಥಿಗಳು ನೌಕರಿಗೆ ಅಪ್ಲೆ ಮಾಡಲು ಮತ್ತು ಬೇರೆ ಬೇರೆ ಉದ್ದೇಶಕ್ಕೆ medical fitness certificate ಪಡೆಯಲು ದಿನನಿತ್ಯ ಬರುತ್ತಿರುತ್ತಾರೆ. ವರ್ಷಕ್ಕೆ ಸುಮಾರು 2000 ಜನರು medical fitness certificate ಪಡೆಯುತ್ತಿದ್ದಾರೆ. ಈ ಎಲ್ಲಾ ಕಾರ್ಯಗಳು ಹಿಂದೆ ನಮ್ಮ ಜಿಲ್ಲಾ ಆಸ್ಪತ್ರೆಯಲ್ಲಿ ಆಗುತ್ತಿತ್ತು. ಆದರೆ ಈಗ ಟೀಚಿಂಗ್ ಆಸ್ಪತ್ರೆಯಾಗಿರುವುದರಿಂದ ಎಲ್ಲಾ ಹಿರಿಯ ವೈದ್ಯರು ಟೀಚಿಂಗ್‌ಗೆ ಎಂದು ಹೋಗಿ, ಅವರ ಕೊಠಡಿಗಳಲ್ಲಿ ಕಿರಿಯ ವೈದ್ಯರನ್ನು ಕೂರಿಸಿ ಹೋಗಿರುತ್ತಾರೆ. ನಾನು ನನ್ನ ನಿಜವಾದ ಹೆಸರು ಹೇಳದೆ, ಬೇರೆ ಹೆಸರು ಹೇಳಿ ಅಲ್ಲಿಗೆ ಹೋಗಿದ್ದಾಗ ಇನ್ನೂ ಕಲಿಯುತ್ತಿದ್ದ ವಿದ್ಯಾರ್ಥಿಗಳು (Junior Resident Doctors) ಅಟೆಂಡ್ ಮಾಡುವುದು ಕಂಡುಬಂತು. ಹಿರಿಯ ವೈದ್ಯರುಗಳು ಬೇರೆ ಬೇರೆ ಕ್ಲಿನಿಕ್‌ಗಳಿಗೆ ಹೋಗುತ್ತಿರುವುದು ನನ್ನ ಗಮನಕ್ಕೆ ಬಂತು. ಮಾನ್ಯ ಸಚಿವರ ಗಮನಕ್ಕೆ ಇಂತಹ ಪ್ರಕರಣಗಳು ಬಂದಿವೆಯೇ?

**ಡಾ: ಶರಣ ಪ್ರಕಾಶ ಆರ್.ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಖುದ್ದಾಗಿ ಅಲ್ಲಿಗೆ ಭೇಟಿ ಕೊಟ್ಟು ಪರಿಶೀಲನೆ ಮಾಡಿದಕ್ಕಾಗಿ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ನಮ್ಮ ಜನ ಪ್ರತಿನಿಧಿಗಳು ಆಗಾಗ ಆಸ್ಪತ್ರೆಗಳಿಗೆ ಭೇಟಿ ಕೊಟ್ಟರೆ ಅಲ್ಲಿನ ನ್ಯೂನತೆಗಳನ್ನು ಸರಿಪಡಿಸಬಹುದು. ಬಹುಶಃ, ಜಿಲ್ಲಾ ಆಸ್ಪತ್ರೆ ಪ್ರತ್ಯೇಕವಾಗಿರಬೇಕು, ಮೆಡಿಕಲ್ ಕಾಲೇಜು attach ಆದಮೇಲೆ ಸರಿಯಾಗಿ ಅಟೆಂಡ್ ಮಾಡುತ್ತಿಲ್ಲ ಎನ್ನುವುದು

ಮಾನ್ಯ ಸದಸ್ಯರ ಕಳಕಳಿಯಾಗಿದೆ. ಜ್ಯೂನಿಯರ್ ಡಾಕ್ಟರ್‌ಗಳು, ಜ್ಯೂನಿಯರ್ ಸರ್ಜನ್‌ಗಳು ಮಾತ್ರ ಈಗ ಟ್ರೀಟ್‌ಮೆಂಟ್ ಕೊಡುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದರು. ಅದು ಆ ರೀತಿ ಇರುವುದಿಲ್ಲ. ಯಾವುದೇ ಇಲಾಖೆಯಾಗಲಿ ಅಲ್ಲಿ ಮೂರ್ನಾಲ್ಕು ಯುನಿಟ್‌ಗಳಿರುತ್ತವೆ. (ಮುಂದು)

(158) 10-3-2025 12.20 ಡಿಎಸ್-ಬಿಎನ್‌ಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್(ಮುಂದು):-**

ಸರ್ಜರಿ ಡಿಪಾರ್ಟ್‌ಮೆಂಟ್ ಇದ್ದರೆ ಸರ್ಜರಿ ಓ.ಪಿ.ಡಿ. 3-4 ಯೂನಿಟ್‌ಗಳು ಇರುತ್ತದೆ. ಅವತ್ತು ಒಂದು ಓ.ಪಿ.ಡಿ. ಇರುತ್ತದೆ. ಓ.ಪಿ.ಡಿ. ದಿವಸ ಅಲ್ಲಿ ಎಲ್ಲರೂ ಇರುತ್ತಾರೆ. ಬೆಳಗ್ಗೆ 9 ಗಂಟೆಯಿಂದ 1 ಗಂಟೆಯವರೆಗೆ ಓ.ಪಿ.ಡಿ. ಸರ್ವಿಸಸ್ ಇದೆ. ಮತ್ತೆ 2 ಗಂಟೆಯಿಂದ 4 ಗಂಟೆಯವರೆಗೆ ಓ.ಪಿ.ಡಿ. ಸರ್ವಿಸಸ್‌ಗೆ ಅಲ್ಲಿ ಕಡ್ಡಾಯವಾಗಿ ಇರುತ್ತಾರೆ. ಬೇರೆ ವೈದ್ಯರುಗಳಿಗೆ ಸರ್ಜರಿ ಇದ್ದರೆ ಅವರಿಗೆ ಓ.ಟಿ. ಇರುತ್ತದೆ, ಟೀಚಿಂಗ್, ಬೇರೆ ಬೇರೆ ಕೆಲಸ ಕಾರ್ಯಗಳು ಇರುತ್ತವೆ. ಆದರೆ ಮಾನ್ಯ ಸದಸ್ಯರ ಕಳಕಳಿ ಏನೆಂದರೆ, ಜೂನಿಯರ್ ಡಾಕ್ಟರ್‌ಗಳು ಎಂದರೆ ಎರಡು ರೀತಿಯಲ್ಲಿ ಇದೆ. ಒಂದನೆಯದು, ಹೌಸ್ ಸರ್ಜನ್, ಅವರಿಗೆ ನಾವು Junior Doctor (J.R.) ಎಂದು ಹೇಳುವುದಿಲ್ಲ. ಜೆ.ಆರ್. sanctioned post, ಎಂ.ಬಿ.ಬಿ.ಎಸ್. ಆದವರು ಕೆಲಸ ಮಾಡುತ್ತಿರತಕ್ಕಂಥವರು. National Medical Commission (NMC) ಪ್ರಕಾರ Professor, Associate Professor, Assistant Professor ನಂತರ Senior Resident and Junior Resident. These are the required sanctioned posts as per NMC. ಇದರಲ್ಲಿ ಓ.ಪಿ.ಡಿ. ದಿವಸ ಹೊಸದಾಗಿ ರೋಗಿಗಳು ಬರುತ್ತಾರೆ, ಅವತ್ತಿನ ದಿವಸ ಓ.ಪಿ.ಡಿ.ಯಲ್ಲೇ ಇರಬೇಕೆಂದು ಕಡ್ಡಾಯವಿದೆ. ಅದರ ಬಗ್ಗೆ ಸುತ್ತೋಲೆಯನ್ನು ಹೊರಡಿಸಿದ್ದೇವೆ. ಬೆಳಗ್ಗೆ 9 ಗಂಟೆಯಿಂದ 4 ಗಂಟೆಯವರೆಗೆ ಯಾರು ಪ್ರಾಕ್ಟೀಸ್ ಮಾಡುವ ಹಾಗಿಲ್ಲ. ನಮ್ಮ ಗಮನಕ್ಕೆ ಏನು ಬಂದಿದೆ ಎಂದರೆ, 9 ಗಂಟೆಯಿಂದ 2 ಗಂಟೆ ಇರುವುದರಿಂದ ಅವರು ಮಧ್ಯಾಹ್ನ ಒಂದು ಗಂಟೆ ಪ್ರಾಕ್ಟೀಸ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಏಕೆಂದರೆ, ಅವರಿಗೆ allowed ಇದೆ. ಓ.ಪಿ.ಡಿ. ಅವಧಿ ಮುಗಿದ ಮೇಲೆ ಪ್ರಾಕ್ಟೀಸ್ ಮಾಡುವುದಕ್ಕೆ ಅವರಿಗೆ ಅವಕಾಶ ಇದೆ. ಮಧ್ಯಾಹ್ನ ಒಂದು ಗಂಟೆ ಅವಧಿ ಪ್ರಾಕ್ಟೀಸ್ ಮಾಡುತ್ತೇವೆ ಎನ್ನುವ ನೆಪದಲ್ಲಿ ಅವರು ಒಂದು ಗಂಟೆ ಮುಂಚೆ ಹೋಗುತ್ತಿದ್ದಾರೆ, ಒಂದು ಗಂಟೆ ತಡವಾಗಿ ಬರುತ್ತಿದ್ದಾರೆ ಎನ್ನುವ ಮಾಹಿತಿ ಇರುವುದರಿಂದ ನಾವು ಸುತ್ತೋಲೆಯನ್ನು ಎಲ್ಲಾ ಇನ್‌ಸ್ಟಿಟ್ಯೂಟ್‌ಗಳಿಗೆ ಕಳುಹಿಸಿದ್ದೇವೆ. 9 ಗಂಟೆಯಿಂದ 4 ಗಂಟೆಯವರೆವಿಗೂ ಯಾರು ಪ್ರಾಕ್ಟೀಸ್ ಮಾಡುವ ಹಾಗಿಲ್ಲ. 4 ಗಂಟೆಯಾದ

ಮೇಲೆ ನೀವು ಪ್ರಾಕ್ಟೀಸ್ ಮಾಡಿಕೊಳ್ಳಬಹುದು, ಅದಕ್ಕಿಂತ ಮುಂಚೆ ಮಾಡುವ ಹಾಗಿಲ್ಲ ಎಂದು ಸುತ್ತೋಲೆಯನ್ನು ಕಳುಹಿಸಿದ್ದೇವೆ. ಅಷ್ಟಲ್ಲದೇ, ನಾವು ಬಯೋಮೆಟ್ರಿಕ್ ಅನ್ನು ಅಳವಡಿಸಿದ್ದೇವೆ. ಈಗ ನಾವು ನಿರ್ದೇಶನವನ್ನು ಕೊಟ್ಟಿದ್ದೇವೆ. ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಎಲ್ಲಾ ಇನ್‌ಸ್ಟಿಟ್ಯೂಟ್‌ಗಳ ನಿರ್ದೇಶಕರುಗಳನ್ನು ಕರೆಯಿಸಿ ಇನ್ನು ಮೇಲೆ ಸ್ಯಾಲರಿ ಎಲ್ಲಾ ಬಯೋಮೆಟ್ರಿಕ್‌ಗೆ ಅನುಗುಣವಾಗಿರಬೇಕು. ಅಂದರೆ, ಬಯೋಮೆಟ್ರಿಕ್‌ನಲ್ಲಿ ಅವರು ಎಷ್ಟು ಗಂಟೆಗೆ ಬರುತ್ತಾರೆ, ಅಂದರೆ ಅವರು ಬೆಳಗ್ಗೆ 9 ಗಂಟೆ, 2 ಗಂಟೆ, 3 ಗಂಟೆ ಮತ್ತು 4 ಗಂಟೆಗೆ, ಹೀಗೆ 4 ಸಲ ಬಯೋಮೆಟ್ರಿಕ್ ಮಾಡಬೇಕು. ಬಯೋಮೆಟ್ರಿಕ್‌ಗೆ ಅನುಗಣವಾಗಿಯೇ ಸ್ಯಾಲರಿಯನ್ನು ಮಾಡಬೇಕೆಂದು ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಆ ರೀತಿಯ ಯಾವುದಾದರೂ ತೊಂದರೆ ಇದ್ದರೆ ನಾನು ಖಂಡಿತವಾಗಿಯೂ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಆದರೆ ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳುವುದೇನೆಂದರೆ, ಯಾವುದೇ ಸರ್ಕಾರಿ ಆಸ್ಪತ್ರೆ ಟೀಚಿಂಗ್ ಆಸ್ಪತ್ರೆಯಾದ ಮೇಲೆ ಅಲ್ಲಿ ಸರ್ವಿಸಸ್ ಇಂಪ್ರೂವ್ ಆಗುತ್ತದೆಯೇ ಹೊರತು ಸರ್ವಿಸಸ್ ಕಡಿಮೆಯಾಗುವುದಿಲ್ಲ. ಏಕೆಂದರೆ, ಅಲ್ಲಿ ಎನ್.ಎಂ.ಸಿ. ಪ್ರಕಾರ ಎಲ್ಲಾ ಡಿಪಾರ್ಟ್‌ಮೆಂಟ್‌ನಲ್ಲಿ ನಿರ್ದಿಷ್ಟವಾಗಿ ಇಷ್ಟು ಪ್ರೊಫೆಸರ್‌ಗಳು ಇರಬೇಕು, ಅಸೋಸಿಯೇಟ್ ಪ್ರೊಫೆಸರ್‌ಗಳು ಇರಬೇಕು, ಅಸಿಸ್ಟೆಂಟ್ ಪ್ರೊಫೆಸರ್‌ಗಳು ಇರಬೇಕು ಎಂದು ಮಾನದಂಡ ಇದೆ. ಮಾನ್ಯ ಸದಸ್ಯರು ಅಂಕಿ-ಅಂಶಗಳನ್ನು ಹೇಳಿದ್ದಾರೆ. ಅವರು ಇಷ್ಟೆಲ್ಲಾ ಅಂಕಿ-ಅಂಶಗಳನ್ನು ಹೇಳಿದ ಮೇಲೆ ಅವೆಲ್ಲಾ ಸರ್ವಿಸಸ್ ಅನ್ನು ಜೂನಿಯರ್ ಡಾಕ್ಟರ್‌ಗಳಿಗೆ ಕೊಡುವುದಕ್ಕಾಗುವುದಿಲ್ಲ. ಅಲ್ಲಿ ಅಷ್ಟು ವೈದ್ಯರುಗಳು ಕೆಲಸ ಮಾಡಿದ್ದಾರೆ ಎನ್ನುವುದಕ್ಕೆ ಆ ಅಂಕಿ-ಅಂಶಗಳು ಬಂದಿದೆಯೇ ಹೊರತು ಅದು ತಾನಾಗಿಯೇ ಆಗುವುದಕ್ಕೆ ಸಾಧ್ಯವಿಲ್ಲ ಎನ್ನುವಂಥದ್ದು ನನ್ನ ಸ್ಪಷ್ಟವಾದ ಹೇಳಿಕೆಯಾಗಿದೆ. ನಾನು ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥ ಮಾಡಿಕೊಂಡು ಮೆಗ್ಗಾನ್ ಆಸ್ಪತ್ರೆಗೆ ನಾನು ಖುದ್ದಾಗಿ ಭೇಟಿ ಮಾಡಿ ಸಭೆ ನಡೆಸಿ ಏನಾದರೂ ನ್ಯೂನತೆ ಇದ್ದರೆ ಅದನ್ನು ಸರಿಪಡಿಸುತ್ತೇನೆ.

**ಶ್ರೀ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ಟೀಚಿಂಗ್ ಆಸ್ಪತ್ರೆ ಮಾಡಿರುವ ವಿಚಾರದಲ್ಲಿ ನನದೇನೂ ತಕರಾರು ಇಲ್ಲ, ಮಾಡಿ. ಇದೊಂದೇ ಆಸ್ಪತ್ರೆಯಲ್ಲ, ನಾನು ಚಿತ್ರದುರ್ಗದ ಆಸ್ಪತ್ರೆಗೂ ಭೇಟಿ ಮಾಡಿದ ಮೇಲೆ ಅಲ್ಲಿಂದಲೂ ಒಂದಷ್ಟು ಜನ ಹೇಳಿದರು. ನಾನು ಹೇಳುವುದೇನೆಂದರೆ, ಪ್ರತ್ಯೇಕವಾಗಿ ಒಂದು ಜಿಲ್ಲಾ ಆಸ್ಪತ್ರೆ ನಮ್ಮ ಜಿಲ್ಲೆಗೆ ಬೇಕು. ಅಂಕಿ-ಅಂಶಗಳ ಪ್ರಕಾರ ಸರಾಸರಿ 2500 ಜನರು ಪ್ರತಿ ದಿವಸ ಬರುತ್ತಾರೆ. ಆದರೆ, ಅಲ್ಲಿ ಇನ್ನೂ 2000 ಜನರು ಸಮಯಕ್ಕೆ ಸರಿಯಾಗಿ ವೈದ್ಯರುಗಳು ಸಿಗದೆ ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಿದ್ದಾರೆ. ಅದಕ್ಕೆ ನನ್ನ

ಮನವಿ ಏನೆಂದರೆ, ಶಿವಮೊಗ್ಗ ಜಿಲ್ಲೆ ಬಹಳ ವೇಗವಾಗಿ ಬೆಳೆಯುತ್ತಿದೆ. ಬಹಳಷ್ಟು ಜನರು ಅಕ್ಕಪಕ್ಕ ಜಿಲ್ಲೆಗಳಿಂದ ಬಂದವರು ಅಲ್ಲಿ ವಾಸಿಸುತ್ತಿದ್ದಾರೆ. ಅತಿ ಅವಶ್ಯಕವಾಗಿ ಒಂದು ಜಿಲ್ಲಾ ಆಸ್ಪತ್ರೆ ಬೇಕಾಗಿದೆ. ಅಲ್ಲಿ 100 ಹಾಸಿಗೆವುಳ್ಳ ಜಿಲ್ಲಾ ಆಸ್ಪತ್ರೆಯನ್ನು ಪ್ರತ್ಯೇಕವಾಗಿ ಮಾಡಿಕೊಟ್ಟರೆ ಒಳ್ಳೆಯದು. ಒಂದೂವರೆ ಗಂಟೆಗೆ ಹೋಗಬಹುದೆಂದು ಮಾನ್ಯ ಸಚಿವರು ಹೇಳುತ್ತಾರೆ, ಆದರೆ 12 ಗಂಟೆಗೆ ವೈದ್ಯರುಗಳು ಹೋಗಿಬಿಡುತ್ತಾರೆ. ಇದು ಎಲ್ಲರಿಗೂ ಗೊತ್ತಿರುವಂತಹ ವಿಷಯ. ಒಂದೂವರೆ ಗಂಟೆ ಅವಧಿ ರಿಲ್ಯಾಕ್ಸೇಷನ್‌ಗೆ ಕೊಟ್ಟಿದ್ದೇವೆಂದರೆ ಸಾಕು, ಯಾರಿಗಾದರೂ ನಿಲ್ಲಿಸಿ ಹೋಗಿಬಿಡುತ್ತಾರೆ. ಟೀಚಿಂಗ್ ಆಸ್ಪತ್ರೆಯೂ ಇರಲಿ, ನನ್ನದೇನೂ ತಕರಾರು ಇಲ್ಲ. ಆದರೆ ನಮಗೆ ಪ್ರತ್ಯೇಕವಾಗಿ ಒಂದು ಜಿಲ್ಲಾ ಆಸ್ಪತ್ರೆ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ. ಮಾನ್ಯ ಸಚಿವರ ಪಕ್ಕದಲ್ಲಿ ಮಾನ್ಯ ದಿನೇಶ್ ಗುಂಡೂರಾವ್‌ರವರು ಇದ್ದಾರೆ. ಇಬ್ಬರು ಸೇರಿ ಹೊಸದಾಗಿ ನೂರು ಹಾಸಿಗೆಯುಳ್ಳ ಹೊಸ ಜಿಲ್ಲಾ ಆಸ್ಪತ್ರೆ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಆರೋಗ್ಯ ಇಲಾಖೆಯ ಸಚಿವರು ಪರಿಶೀಲನೆ ಮಾಡುತ್ತಿದ್ದಾರೆ. ಮೆಡಿಕಲ್ ಕಾಲೇಜು ಅಟ್ಯಾಚ್ ಆಗಿರುವುದರಿಂದ ಪ್ರತ್ಯೇಕವಾಗಿ ಜಿಲ್ಲಾ ಆಸ್ಪತ್ರೆಯನ್ನು ಸ್ಥಾಪನೆ ಮಾಡುವುದಕ್ಕೆ ಅವರು ಹಂತ ಹಂತವಾಗಿ ಕ್ರಮ ಕೈಗೊಳ್ಳುತ್ತಿದ್ದಾರೆ. ಅದು ಆರೋಗ್ಯ ಇಲಾಖೆಗೆ ಬರುತ್ತದೆ. ಅವರು ಮಾಡತಕ್ಕಂಥದ್ದರಲ್ಲಿ ಇದ್ದಾರೆ.

## ಪ್ರಶ್ನೆ ಸಂಖ್ಯೆ: 411

ಕರ್ನಾಟಕ ವಿಧಾನ ಪರಿಷತ್ತು

| ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 55(411) |
| ಸದಸ್ಯರ ಹೆಸರು | ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 10-03-2025 |
| ಉತ್ತರಿಸುವವರು | ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲೆಯಲ್ಲಿ ಇರುವ ಒಟ್ಟು ಅರಣ್ಯ ಭೂಮಿಯ ವಿಸ್ತೀರ್ಣವೆಷ್ಟು; ಇದರಲ್ಲಿ ಸಾಮಾಜಿಕ ಅರಣ್ಯ, ಮೀಸಲು ಅರಣ್ಯ, ಡೀಮ್ಡ್ ಅರಣ್ಯದ ತಾಲ್ಲೂಕುವಾರು, ಅರಣ್ಯ ವಿಧದ ಪ್ರಕಾರ ವಿಸ್ತೀರ್ಣ ನೀಡುವುದು: | ತುಮಕೂರು ಜಿಲ್ಲೆಯಲ್ಲಿರುವ ಒಟ್ಟು ಅರಣ್ಯ ಭೂಮಿಯ ವಿಸ್ತೀರ್ಣ 113123.23 ಹೆಕ್ಟೇರ್ ತಾಲ್ಲೂಕುವಾರು ಅರಣ್ಯದ ವಿಸ್ತೀರ್ಣದ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ) | ಈ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶಗಳನ್ನು ಭೂ ಮಾಪನ ಮಾಡಲಾಗಿದೆಯೇ; ಮಾಡಲಾಗಿದ್ದಲ್ಲಿ ಯಾವ ವರ್ಷ ಮಾಡಲಾಗಿದೆ ಮಾಡದೆ ಇದ್ದಲ್ಲಿ ಕಾರಣಗಳೇನು; ಯಾವ ಕಾಲಮಿತಿಯಲ್ಲಿ ಭೂ ಮಾಪನ ಮಾಡಲಾಗುವುದು: | ಜಿಲ್ಲೆಯಲ್ಲಿ ಅಧಿಸೂಚನೆಯಾಗಿರುವ ಮೀಸಲು ಅರಣ್ಯ, ಗ್ರಾಮ ಅರಣ್ಯ ಹಾಗೂ ರಕ್ಷಿತ ಅರಣ್ಯ, ಸೆಕ್ಷನ್-4 ಅರಣ್ಯ ಪ್ರದೇಶಗಳ 161 ಬ್ಲಾಕ್‌ಗಳ ಪೈಕಿ ಈವರೆಗೆ 105 ಬ್ಲಾಕ್‌ಗಳ ಸರ್ವೆ ಕಾರ್ಯವನ್ನು ಕೈಗೊಳ್ಳಲಾಗಿದೆ. ಬಾಕಿ ಇರುವ ಬ್ಲಾಕ್‌ಗಳ ಸರ್ವೆ ಕಾರ್ಯವನ್ನು ಪ್ರತಿ ವರ್ಷ ಆದ್ಯತೆ ಮೇರೆಗೆ ಕೈಗೆತ್ತಿಕೊಂಡು ಭೂಮಾಪನ ಮಾಡಲಾಗುವುದು. |
| ಇ) | ಜಿಲ್ಲೆಯಲ್ಲಿ ಒತ್ತುವರಿಯಾದ ಅರಣ್ಯ ಪ್ರದೇಶ ಎಷ್ಟು; ಸದರಿ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ತಾಲ್ಲೂಕುವಾರು, ಗ್ರಾಮವಾರು ಒತ್ತುವರಿದಾರರ ವಿವರ ನೀಡುವುದು) | ತುಮಕೂರು ವಿಭಾಗದ ಅಧಿಸೂಚಿತ ಅರಣ್ಯ ಪ್ರದೇಶಗಳಲ್ಲಿ ಈವರೆಗೆ ಒಟ್ಟು 4001 ಪ್ರಕರಣಗಳಲ್ಲಿ 8024.70 ಎಕರೆ ಜಮೀನು ಒತ್ತುವರಿ/ಭೂ ಮಂಜೂರಾತಿಯಾಗಿರುವುದು ಕಂಡು ಬಂದಿರುತ್ತದೆ. ಒತ್ತುವರಿದಾರರ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ.<br>ಒತ್ತುವರಿದಾರರ ವಿರುದ್ಧ ಈವರೆಗೆ ಒಟ್ಟು 500 ಪ್ರಕರಣಗಳನ್ನು ದಾಖಲಿಸಲಾಗಿದ್ದು, ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 64ಎ ರಡಿಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ತುಮಕೂರು, ಮಧುಗಿರಿ ಹಾಗೂ ತಿಪಟೂರು ಉಪವಿಭಾಗ ರವರು ಈವರೆಗೆ 106 ಪ್ರಕರಣಗಳು, 457-35 ಎಕರೆ ಒತ್ತುವರಿ ತೆರವುಗೊಳಿಸಲು ಆದೇಶ ಹೊರಡಿಸಿದ್ದು, ಈ ಪೈಕಿ 44 ಪ್ರಕರಣಗಳಲ್ಲಿನ 146.22 ಎಕರೆಯನ್ನು ಒತ್ತುವರಿಯಿಂದ ತೆರವುಗೊಳಿಸಲಾಗಿರುತ್ತದೆ.<br>ತಾಲ್ಲೂಕುವಾರು ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಿದೆ. |
| ಈ) | ಜಿಲ್ಲೆಯ ಮೂರು ಪ್ರಕಾರದ ಅರಣ್ಯದಲ್ಲಿ ಅರಣ್ಯೀಕರಣ ಮಾಡಲಾಗಿದೆಯೇ; ಮಾಡಲಾಗಿದ್ದರೆ ಕಳೆದ ಹತ್ತು ವರ್ಷಗಳಲ್ಲಿ ಅರಣ್ಯೀಕರಣಕ್ಕೆ | ತುಮಕೂರು ವಿಭಾಗದಲ್ಲಿ ಕಳೆದ 10 ವರ್ಷಗಳಲ್ಲಿ ಅರಣ್ಯೀಕರಣ ಮಾಡಲಾದ ವಿವರ ಈ ಕೆಳಕಂಡಂತಿದೆ. |

<table>
<tr><td></td><td>ಮಾಡಲಾದ ವೆಚ್ಚವೆಷ್ಟು: ಯಾವ ಪ್ರಭೇದದ ಗಿಡಗಳನ್ನು ನೆಡಲಾಗಿದೆ: (ವರ್ಷವಾರು, ಅರಣ್ಯವಾರು ವಿವರ ನೀಡುವುದು)</td><td>
<table>
<tr><th>ಕ್ರ. ಸಂ.</th><th>ವರ್ಷ</th><th>ನೆಡುತೋಪು ನಿರ್ಮಾಣ (ಹೆ.)</th><th>ಭರಿಸಿರುವ ವೆಚ್ಚ (ರೂ. ಲಕ್ಷಗಳಲ್ಲಿ)</th><th>ನೆಟ್ಟ ಗಿಡಗಳು</th></tr>
<tr><td>1</td><td>2013-14</td><td>1,220.00</td><td>229.23</td><td rowspan="11">ಹೊನ್ನೆ, ಶ್ರೀಗಂಧ, ಹೊಳೆಮತ್ತಿ, ತಪಸಿ, ಕಮರ, ಸಿಮಾರೂಬ, ಆಲ, ತಾರೆ, ಬೋರೆ, ಊವರ್ಶಿ, ಕಾಡು ಬಾದಾಮಿ, ಗೋಣಿ, ಕರಿಮತ್ತಿ, ಬಸರಿ, ಹೊಂಗೆ ಇತ್ಯಾದಿ ಗಿಡಗಳನ್ನು ನೆಡಲಾಗಿರುತ್ತದೆ.</td></tr>
<tr><td>2</td><td>2014-15</td><td>1,238.45</td><td>332.29</td></tr>
<tr><td>3</td><td>2015-16</td><td>2,352.40</td><td>555.374</td></tr>
<tr><td>4</td><td>2016-17</td><td>1757.69</td><td>614.942</td></tr>
<tr><td>5</td><td>2017-18</td><td>2,065.63</td><td>977.543</td></tr>
<tr><td>6</td><td>2018-19</td><td>1,350.55</td><td>435.290</td></tr>
<tr><td>7</td><td>2019-20</td><td>2,002.71</td><td>800.065</td></tr>
<tr><td>8</td><td>2020-21</td><td>2,762.00</td><td>1510.020</td></tr>
<tr><td>9</td><td>2021-22</td><td>903.00</td><td>564.321</td></tr>
<tr><td>10</td><td>2022-23</td><td>1,160.00</td><td>367.767</td></tr>
<tr><td>11</td><td>2023-24</td><td>747.38</td><td>452.458</td></tr>
</table>
</td></tr>
<tr><td>ಉ)</td><td>ಶಿರಾ ತಾಲ್ಲೂಕಿನ ಮುದಿಗೆರೆ ಕಾವಲ್‌ನಲ್ಲಿ ಇರುವ ಅರಣ್ಯವನ್ನು ಮೀಸಲು ಅರಣ್ಯ ಎಂದು ಯಾವಾಗ ಅಧಿಸೂಚನೆ ಹೊರಡಿಸಲಾಗಿಯಿತು: ಸದರಿ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು ಮತ್ತು ಸದರಿ ಅರಣ್ಯದಲ್ಲಿ ಯಾವ ಜಾತಿ ಕಾಡುಮರಗಳಿವೆ</td><td>ಶಿರಾ ತಾಲ್ಲೂಕು, ಕಸಬಾ ಹೋಬಳಿ, ಮುದಿಗೆರ ಅಮೃತ್ ಮಹಲ್ ಕಾವಲ್ ಸ.ನಂ. 12 ರಲ್ಲಿನ 3025-00 ಎಕರೆಯನ್ನು ಅಧಿಸೂಚನೆ ಸಂಖ್ಯೆ No. AF 5515-Ft.161-41-2 dated 06th April 1942 ರಲ್ಲಿ "ಮುದಿಗೆರೆ ಬ್ಲಾಕ್" "ಸ್ಟೇಟ್ ಫಾರೆಸ್ಟ್" ಎಂದು ಮೈಸೂರು ಮಹಾರಾಜರ ಸರ್ಕಾರವು ಸೆಕ್ಷನ್-17 ಮೈಸೂರು ಅರಣ್ಯ ಕಾಯ್ದೆ XI of 1900 ರಲ್ಲಿ ಆದೇಶ ಹೊರಡಿಸಿರುತ್ತದೆ.<br>ಮುದಿಗೆರೆ ಮೀಸಲು ಅರಣ್ಯ ಪ್ರದೇಶದಲ್ಲಿ ತುಗ್ಗಲಿ, ತೆರೆದು, ಹೊನ್ನೆ, ಹೊಂಗೆ, ಕಮರ, ಅರಳಿ, ನೀಲಗಿರಿ, ಅಕೇಶಿಯಾ ಇತ್ಯಾದಿ ಮರಗಳು ಇರುತ್ತವೆ.</td></tr>
<tr><td>ಊ)</td><td>ಶಿರಾ ತಾಲ್ಲೂಕು ಬುಕಾಪಟ್ಟಣ ತಾಲ್ಲೂಕಿನ ವನ್ಯಜೀವಿಧಾಮದಲ್ಲಿ ಅಳಿವಿನಂಚಿನಲ್ಲಿರುವ ಚಿಂಕಾರ (ಹುಲ್ಲೇಕರ) ಪ್ರಾಣಿಗಳ ರಕ್ಷಣೆಗೆ ಅರಣ್ಯ ಇಲಾಖೆ ಕೈಗೊಂಡಿರುವ ಕ್ರಮಗಳೇನು:</td><td>ಬುಕಾಪಟ್ಟಣ ಚಿಂಕಾರ ವನ್ಯಜೀವಿ ಧಾಮದಲ್ಲಿ ಇರುವ ಚಿಂಕಾರಗಳಿಗೆ ಆಹಾರ, ನೀರು ಒದಗಿಸಲು ಪೂರಕವಾಗಿರುವಂತೆ ಹಾಲಿ ಇರುವ ಹುಲ್ಲುಗಾವಲುಗಳಲ್ಲಿ ಲಂಟಾನಾಗಳನ್ನು ತೆರವುಗೊಳಿಸಿ ಆಹಾರಕ್ಕಾಗಿ ಹುಲ್ಲಿನ ಬೀಜ ಬಿತ್ತುವುದು ಹಾಗೂ ವಿವಿಧ ಜಾತಿಯ ಹುಲ್ಲುಗಳನ್ನು ನಾಟಿ ಮಾಡುವ ಮುಖಾಂತರ ಆಹಾರವನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೇ ಹಾಲಿ ಇರುವ ಕಟ್ಟೆಗಳಲ್ಲಿ ಹೂಳು ತೆಗೆಯುವುದು, ನಾಲಾಬದು, ಚೆಕ್‌ಡ್ಯಾಂಗಳನ್ನು ನಿರ್ಮಾಣ ಮಾಡಿ ನೀರಿನ ಸಂಗ್ರಹವನ್ನು ಹೆಚ್ಚಿಸಲಾಗಿದೆ.<br><br>ಕಳ್ಳಬೇಟೆ ತಡೆ ಶಿಭಿರಗಳನ್ನು ಸ್ಥಾಪಿಸಿ, ಹಗಲು ರಾತ್ರಿ ಸಿಬ್ಬಂದಿಗಳು, ಗಸ್ತು ಕಾರ್ಯ ಕೈಗೊಂಡಿದ್ದು, ಕಳ್ಳಬೇಟೆ ಸಂಭವಿಸದಂತೆ ನಿರಂತರವಾದ ನಿಗಾವಹಿಸಲಾಗಿದೆ.</td></tr>
</table>

| | | |
|---|---|---|
| ಋ) | ಬೇಸಿಗೆಯಲ್ಲಿ ಕಾಡಿಗೆ ಬೆಂಕಿ ಹಚ್ಚುವ ಮೂಲಕ ಗಿಡ-ಮರ ಗಿಡಮೂಲಿಕೆ ಔಷಧ ಗುಣ ಹೊಂದಿರುವ ಬಳ್ಳಿ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಇದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಹೌದು. ಕಾಡ್ಗಿಚ್ಚಿನಿಂದ ಅರಣ್ಯ ನಾಶ ತಡೆಯಲು ಈ ಕೆಳಕಂಡಂತೆ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಬೆಂಕಿ ರೇಖೆಗಳನ್ನು ನಿರ್ಮಾಣ ಮಾಡುವುದು.<br>• ಅರಣ್ಯ ಪ್ರದೇಶದಲ್ಲಿ ನಿರ್ಮಾಣ ಮಾಡಿರುವ ಹಳೆಯ ಬೆಂಕಿ ರೇಖೆಗಳನ್ನು ನಿರ್ವಹಣೆ ಮಾಡುವುದು.<br>• ಬೇಸಿಗೆ ಕಾಲದ ಸಂದರ್ಭದಲ್ಲಿ ಜನವರಿಯಿಂದ ಏಪ್ರಿಲ್ ಅಂತ್ಯದ ವರೆಗೆ ಬೆಂಕಿ ನಿಯಂತ್ರಣ ಕಾವಲುಗಾರರನ್ನು ನೇಮಿಸಿಕೊಂಡು ಬೆಂಕಿ ಬೀಳದಂತೆ ತಡೆಗಟ್ಟುವುದು.<br>• ಅರಣ್ಯದ ಅಂಚಿನ ಪ್ರದೇಶಗಳಲ್ಲಿರುವ ಗ್ರಾಮಗಳಲ್ಲಿ ಕರ ಪತ್ರಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಬೆಂಕಿ ಬೀಳದಂತೆ ತಡೆಗಟ್ಟಲು ತಿಳುವಳಿಕೆ ನೀಡುವುದು.<br>• ಅರಣ್ಯ ಪ್ರದೇಶದಲ್ಲಿ ಲಾಂಟಾನ ಇರುವ ಪ್ರದೇಶಗಳನ್ನು ಗುರುತಿಸಿ ಲಾಂಟನವನ್ನು ತೆಗೆಸಿ ಬೆಂಕಿ ಬೀಳದಂತೆ ತಡೆಗಟ್ಟಲಾಗುವುದು.<br>• ರಾತ್ರಿ ವೇಳೆಯಲ್ಲಿ ಇಲಾಖಾ ವಾಹನಗಳಲ್ಲಿ ಸಿಬ್ಬಂದಿಗಳು ಗಸ್ತು ತಿರುಗಿ ಬೆಂಕಿ ಬೀಳದಂತೆ ಮುಂಜಾಗ್ರತೆ ವಹಿಸಲಾಗುತ್ತಿದೆ.<br>• 24X7 ಫಾರೆಸ್ಟ್ ಫೈರ್ ಸೆಲ್ ಹೆಲ್ಪ್‌ಡೆಸ್ಕ್ ತಂಡವು ಅರಣ್ಯ ಅಧಿಕಾರಿಗಳು ಮತ್ತು RS & GIS ತಜ್ಞರನ್ನು ಒಳಗೊಂಡಿದ್ದು, ಬೆಂಕಿಯ ಕಾಲದಲ್ಲಿ ಕಾಡ್ಗಿಚ್ಚುಗಳನ್ನು ಮೇಲ್ವಿಚಾರಣೆ ಮಾಡಿ ಕ್ಷೇತ್ರ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಲಾಗುತ್ತಿದೆ.<br>• ರಾಷ್ಟ್ರೀಯ ದೂರಸಂವೇದಿ ಕೇಂದ್ರ (NRSC), ISRO ಬೆಂಬಲದೊಂದಿಗೆ ಸ್ಯಾಟಲೈಟ್ ರಿಮೋಟ್ ಸೆನ್ಸಿಂಗ್ ಆಧಾರಿತ ಸಂಪೂರ್ಣ ಸ್ವಯಂಚಾಲಿತ ಅರಣ್ಯ ಬೆಂಕಿ ಪತ್ತೆ ಹಚ್ಚುವ ಮತ್ತು ಎಚ್ಚರಿಕೆ ವ್ಯವಸ್ಥೆಯನ್ನು ಕೈಗೊಳ್ಳಲಾಗುತ್ತಿದ.<br>• ಕರ್ನಾಟಕ ಅರಣ್ಯ ಇಲಾಖೆಯೊಂದಿಗೆ ಕಾಡ್ಗಿಚ್ಚು, ಎಚ್ಚರಿಕೆಗಳನ್ನು ಮತ್ತು ಕಾಡ್ಗಿಚ್ಚಿನ ಘಟನೆಗಳ ಮೇಲ್ವಿಚಾರಣೆಯನ್ನು ಒದಗಿಸಲು ಬೆಂಕಿಯ ಋತುವಿನಲ್ಲಿ (ಜನವರಿ ಯಿಂದ ಮೇ) ಅರಣ್ಯ ಅಗ್ನಿಶಾಮಕ ಕೋಶ ಸಹಾಯವಾಣಿ ಕಾರ್ಯ ನಿರ್ವಹಿಸುತ್ತಿದೆ. |

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತುಮಕೂರು ಜಿಲ್ಲೆಯಲ್ಲಿರುವ ಒಟ್ಟು ಅರಣ್ಯ ಭೂಮಿಯ ವಿಸ್ತೀರ್ಣವೆಷ್ಟು; ಇದರಲ್ಲಿ ಸಾಮಾಜಿಕ ಅರಣ್ಯ, ಮೀಸಲು ಅರಣ್ಯ, ಡೀಮ್ಡ್ ಅರಣ್ಯದ ವಿಸ್ತೀರ್ಣ ಎಷ್ಟು ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಈ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶಗಳನ್ನು ಭೂ ಮಾಪನ ಮಾಡಲಾಗಿದೆಯೇ ಎಂದು ಪ್ರಶ್ನೆ ಕೇಳಿದ್ದೆ, 161 ಬ್ಲಾಕ್‌ಗಳ ಪೈಕಿ ಈವರೆಗೆ 105 ಬ್ಲಾಕ್‌ಗಳ ಸರ್ವೆ ಆಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಇನ್ನು 56 ಬ್ಲಾಕ್‌ಗಳಲ್ಲಿ ಸರ್ವೆ ಆಗಿಲ್ಲ. ಇದಕ್ಕೆ ಕಾರಣವೇನು ಎಂದು ಕೇಳುವುದಕ್ಕೆ ಬಯಸುತ್ತಿದ್ದೇನೆ. ತುಮಕೂರು ಜಿಲ್ಲೆಯಲ್ಲಿ ಅರಣ್ಯ ಪ್ರದೇಶ ಎಷ್ಟು ಒತ್ತುವರಿಯಾಗಿದೆ ಎಂದು ಪ್ರಶ್ನೆ ಕೇಳಿದ್ದೆ, 4001 ಪ್ರಕರಣಗಳಲ್ಲಿ 8024 ಎಕರೆ ಜಮೀನು ಒತ್ತುವರಿಯಾಗಿದೆ. ಅದರಲ್ಲಿ 457 ಎಕರೆ ಒತ್ತುವರಿ ತೆರವುಗೊಳಸಲು ಆದೇಶವಾಗಿದೆ. ಈ ಪೈಕಿ 44 ಪ್ರಕರಣಗಳಲ್ಲಿ 146 ಎಕರೆ ಜಮೀನನ್ನು ಒತ್ತುವರಿಯಿಂದ ತೆರವುಗೊಳಿಸಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇನ್ನುಳಿದ ಜಮೀನುಗಳನ್ನು ಆದೇಶವಾಗಿದ್ದರೂ ಏಕೆ ವಾಪಸ್ ಪಡೆಯುವುದಕ್ಕಾಗಲಿಲ್ಲ ಎನ್ನುವುದು ನನ್ನ ಪ್ರಶ್ನೆ. ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಮುದಿಗೆರೆ ಕಾವಲ್‌ನಲ್ಲಿ ಅರಣ್ಯ ಪ್ರದೇಶವಿದೆ. ಸುಮಾರು 3,025 ಎಕರೆಯಷ್ಟು ಜಮೀನು ಮಹಾರಾಜರ ಕಾಲದಲ್ಲಿ ಅಂದರೆ, ಅಧಿಸೂಚನೆ ಸಂಖ್ಯೆ No. AF 5515-Ft. 161-41-2 dated

06th April 1942 ರಲ್ಲಿ ಮೈಸೂರು ಮಹಾರಾಜರ ಕಾಲದಲ್ಲಿ ಅಧಿಸೂಚನೆಯಾಗಿದೆ. 3025 ಎಕರೆ ಜಮೀನು `ಸ್ಟೇಟ್ ಫಾರೆಸ್ಟ್' ಎಂದು ಆಗಿದೆ. ಅದರಲ್ಲಿ ಯಾವ್ಯಾವ ಜಾತಿಯ ಮರಗಳಿವೆ ಎಂದು ಪ್ರಶ್ನೆಯನ್ನು ಕೇಳಿದ್ದೇನೆ, ನನ್ನ ತೋಟ ಕೂಡ ಅದರ ಪಕ್ಕದಲ್ಲೇ ಅಟ್ಯಾಚ್ ಆಗಿದೆ. ನಾನು ಪ್ರತಿ ದಿನ ನೋಡುತ್ತೇನೆ, ಅಲ್ಲಿ ಬೇಲಿ ಗಿಡಗಳು ಲಂಟಾನಾ ಮತ್ತು ತುಗ್ಗಲಿ ಗಿಡ ಬಿಟ್ಟರೆ ಬೇರೆ ಇನ್ನು ಯಾವ ಅರಣ್ಯ ವೃಕ್ಷಗಳನ್ನು ಕೂಡ ಅರಣ್ಯ ಇಲಾಖೆ ಇಲ್ಲಿಯವರೆವಿಗೂ ಬೆಳಸಿರುವುದು ಕಂಡು ಬರುತ್ತಿಲ್ಲ. ಅದಕ್ಕೆ ಬೇಲಿ ಇಲ್ಲ, ಅದಕ್ಕೆ ಸರ್ವೆ ಆಗಿದೆಯೇ ಎಂಬುದು ಸರಿಯಾಗಿ ಗೊತ್ತಿಲ್ಲ. ನಾನು ನೋಡಿದ ಹಾಗೆ ಹೊಂಗೆ ಮರ, ಟೀಕ್ ಮರಗಳು ಇಲ್ಲ. ಅರಣ್ಯ ಮರಗಳು ಎಂದರೆ ಬೀಟೆ, ಮತ್ತಿ, ಹೊನ್ನೆ, ಈ ರೀತಿಯ ಮರಗಳನ್ನು ಬೆಳೆಯಬೇಕಾಗುತ್ತದೆ. ಅದರ ಜೊತೆಗೆ ಬುಕಾಪಟ್ಟಣ ಹೋಬಳಿಯಲ್ಲಿ ಒಂದು ಅರಣ್ಯ ಪ್ರದೇಶವಿದೆ. ಅದರಲ್ಲಿ ಚಿಂಕಾರ (ಹುಲ್ಲೇಕರ) ಪ್ರಾಣಿಗಳು ಜಾಸ್ತಿ ಇವೆ. ಅದರ ರಕ್ಷಣೆಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಆಹಾರ, ನೀರು ಒದಗಿಸಲು ವ್ಯವಸ್ಥೆಯಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಅಲ್ಲಿ ಖಂಡಿತವಾಗಿಯೂ ಯಾವುದೇ ವ್ಯವಸ್ಥೆಯನ್ನು ಮಾಡಿಲ್ಲ. ಈಗ ಬೇಸಿಗೆ ಕಾಲ ಜನವರಿ, ಫೆಬ್ರವರಿ, ಮಾರ್ಚ್, ಏಪ್ರಿಲ್ ತಿಂಗಳುಗಳಲ್ಲಿ ಸಹಜವಾಗಿ ಕಾಡಿಗೆ ಬೆಂಕಿ ಬೀಳುವುದು ಆಗುತ್ತದೆ. ಬೆಂಕಿ ರೇಖೆಗಳನ್ನು ನಿರ್ಮಾಣ ಮಾಡಿದ್ದೇವೆ, 24X7 ಫಾರೆಸ್ಟ್ ಫೈರ್ ವಿಜಿಲೆನ್ಸ್ ಇರುತ್ತಾರೆ, ಅಲ್ಲಿ ಕಾವಲುಗಾರರು ನೋಡುತ್ತಿದ್ದಾರೆ ಎಂದು ಹೇಳಿದ್ದಾರೆ. ಆದರೆ ಖಂಡಿತವಾಗಿಯೂ ಅದು ಯಾವುದು ಆಗುತ್ತಿಲ್ಲ. ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಟ್ಟಾದ ನಂತರ ಮತ್ತೆ ಎರಡು ಉಪ ಪ್ರಶ್ನೆಗಳನ್ನು ಕೇಳುತ್ತೇನೆ.

**ಶ್ರೀ ಈಶ್ವರ ಬಿ.ಖಂಡ್ರೆ (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):-** ಮಾನ್ಯ ಸಭಾಪತಿಯವರೇ, ತುಮಕೂರು ಜಿಲ್ಲೆಯಲ್ಲಿ ಒಟ್ಟು 113123.23 ಹೆಕ್ಟೇರ್ ಅರಣ್ಯ ಭೂಮಿ ಇದೆ. ಅದರಲ್ಲಿ ಮೀಸಲು ಅರಣ್ಯ, ಸಂರಕ್ಷಿತ ಅರಣ್ಯ, ಪರಿಭಾವಿತ ಅರಣ್ಯ, ಅವೆಲ್ಲಾ ವಿವರಗಳನ್ನು ಮಾನ್ಯ ಸದಸ್ಯರಿಗೆ ಈಗಾಗಲೇ ನಾವು ಕೊಟ್ಟಿದ್ದೇವೆ. ಅವರ ಪ್ರಮುಖವಾದಂತಹ ಪ್ರಶ್ನೆ, ಎಷ್ಟು ಅರಣ್ಯ ಪ್ರದೇಶಗಳ ಬ್ಲಾಕ್‌ಗಳನ್ನು ಭೂಮಾಪನ ಮಾಡಿದ್ದಾರೆ ಎಂದು ಪ್ರಶ್ನೆ ಕೇಳಿದ್ದಾರೆ. ಅದರಲ್ಲಿ ಈಗಾಗಲೇ 105 ಬ್ಲಾಕ್‌ಗಳ ಸರ್ವೆ ಕಾರ್ಯಗಳ ಸಮೀಕ್ಷೆಯಾಗಿದೆ. ಇನ್ನೂ ಸುಮಾರು 56 ಬ್ಲಾಕ್‌ಗಳ ಸರ್ವೆ ಆಗಬೇಕಾಗಿದೆ. ಈ ಭೂಮಾಪನ ಕಾರ್ಯ ಎಲ್ಲಾ ಕಡೆ ಹಂತ ಹಂತವಾಗಿ ನಡೆಯುತ್ತದೆ. ಒಂದೇ ಸಲ ಭೂಮಾಪನ ಮಾಡುವುದಕ್ಕಾಗುವುದಿಲ್ಲ. ಅಷ್ಟೊಂದು ಸಂಪನ್ಮೂಲ ಸರ್ಕಾರದಲ್ಲಿ ಇರುವುದಿಲ್ಲ. ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಮಾಡುತ್ತೇವೆ. ಯಾವ territory DCF (Deputy Conservator of Forests) ಇರುತ್ತಾರೆ ಅಂತಹ ಪ್ರದೇಶದಲ್ಲಿ ಒತ್ತುವರಿಯಾಗಲಿ, ಮತ್ತೊಂದು ಆಗಲಿ ಸಮಸ್ಯೆ ಇದೆ. ನಗರ ಪ್ರದೇಶದ ಹತ್ತಿರ ಇದೆ, ಅದಕ್ಕೆ ಭೂಮಾಪನ ಮಾಡಿ ಅದರ ಗಡಿ ಇವತ್ತು ನಿಗದಿ ಮಾಡಬೇಕು ಎಂದು ಹೇಳಿದಂತಹ ಸಂದರ್ಭದಲ್ಲಿ ಮಾಡುತ್ತೇವೆ.

(ಮುಂದು)

(159) 10.03.2025 12.30 ಎಸ್‌ಪಿಆರ್/ಬಿಎನ್‌ಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಈಶ್ವರ್ ಬಿ.ಖಂಡ್ರೆ (ಮುಂದು):-**

ಒಂದು ಕಿಲೋಮೀಟರ್ ಭೂಮಾಪನ ಮಾಡಬೇಕೆಂದರೆ, 75,000/- ರೂಪಾಯಿಗಳಿಂದ ಒಂದು ಲಕ್ಷ ರೂಪಾಯಿಗಳಷ್ಟು ಹಣ ಅವಶ್ಯವಿದೆ. 413 ಕಿಲೋಮೀಟರ್ ಭೂಮಾಪನ ಮಾಡುವುದು ಇನ್ನೂ ಬಾಕಿ ಇದ್ದು, ಇದಕ್ಕೆ ಸುಮಾರು ನಾಲ್ಕು ಕೋಟಿ ರೂಪಾಯಿಗಳ ಹಣದ ಅವಶ್ಯಕತೆ ಇದೆ. ಹಂತ ಹಂತವಾಗಿ ಅವಶ್ಯಕತೆ ಬಿದ್ದಂತೆ ಭೂಮಾಪನ ಕಾರ್ಯವನ್ನು ನಾವು ಪೂರ್ತಿಯಾಗಿ ಮಾಡುತ್ತೇವೆ. ಕಳೆದ ಒಂದು ದಶಕದಲ್ಲಿ ಎಷ್ಟು ಅರಣ್ಯೀಕರಣ ಮಾಡಲಾಗಿದೆ ಎಂಬ ಬಗ್ಗೆ ಪ್ರಶ್ನೆಯನ್ನು ಕೇಳಿದ್ದು, ಇದಕ್ಕೆ ಸಂಬಂಧಪಟ್ಟಂತೆ ವಿವರವಾದ ಉತ್ತರವನ್ನು ನೀಡಿದ್ದೇನೆ. KMERC (Karnataka Mining Environment Restoration Corporation) ಅನುದಾನ ಇದೆ. ಇದರಲ್ಲಿ ಸಂಪೂರ್ಣವಾಗಿ ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಎಷ್ಟು ಲಭ್ಯವಿದೆ, ಎಷ್ಟು ಅವಶ್ಯಕತೆ ಇದೆ ಎಷ್ಟು ಸರ್ಕಾರಿ ಜಮೀನು ಇದೆ ಮತ್ತು ಬೇರೆ ಬೇರೆ ಕಡೆಗಳಲ್ಲಿ ಅರಣ್ಯೀಕರಣ ಮಾಡುವುದಕ್ಕೆ ಅವಕಾಶವಿದೆ ಎಂದು ನಾನು ಹೇಳಲುಬಯಸುತ್ತೇನೆ. ಶಿರಾ ತಾಲ್ಲೂಕಿನ ಕಸಬಾ ಹೋಬಳಿ ಮುದಿಗೆರೆ ಅಮೃತ್ ಮಹಲ್ ಕಾವಲ್‌ನ ಸರ್ವೆ ನಂಬರ್ 12 ರಲ್ಲಿನ 3,025 ಎಕರೆಯನ್ನು ದಿನಾಂಕ 6ನೇ ಏಪ್ರಿಲ್ 1942 ರಲ್ಲಿ ಮೈಸೂರು ಮಹಾರಾಜರ ಅಧಿಕಾರಾವಧಿಯಲ್ಲಿಯೇ ಅಧಿಸೂಚನೆಯಾಗಿದೆ. ಇದನ್ನು ಮೀಸಲು ಅರಣ್ಯ ಪ್ರದೇಶ ಎಂಬುದಾಗಿ ಮಾಡಿದ್ದೇವೆ. ಇದಕ್ಕೆ ಸರ್ವೆಯನ್ನು ಮಾಡಿ ಗಡಿಯನ್ನು ನಿಗದಿಪಡಿಸಬೇಕೆಂದು ಸದಸ್ಯರು ಸಲಹೆಯನ್ನು ನೀಡಿದ್ದಾರೆ. ಇದಕ್ಕೆ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡುವಂತೆ ಇಲಾಖಾಧಿಕಾರಿಗಳಿಗೆ ಸೂಚನೆಯನ್ನು ನೀಡುತ್ತೇನೆ.

ಬುಕ್ಕಾಪಟ್ಟಣ ಚಿಂಕಾರ ವನ್ಯಜೀವಿ ಧಾಮದಲ್ಲಿರುವ ಚಿಂಕಾರಗಳನ್ನು ಸಂರಕ್ಷಣೆ ಮಾಡಲು ಅಲ್ಲಿ ಸುಮಾರು 13,000 ಹೆಕ್ಟೇರ್ ವನ್ಯಜೀವಿ ಧಾಮವಿದೆ. ಬೇಸಿಗೆ ಕಾಲದಲ್ಲಿ ಅಲ್ಲಿ ನೀರಿನ ಕೊರತೆ ಇದೆ. ಇವತ್ತಿನ ದಿವಸ ತುಮಕೂರಿನಲ್ಲಿಯೂ ಸಹ ವಾಡಿಕೆಯಂತೆ ಮಳೆ ಕಡಿಮೆ ಇದೆ. ಇಂತಹ ಪರಿಸ್ಥಿತಿಯಲ್ಲಿ ಎಲ್ಲೆಲ್ಲಿ ನೀರಿನ ಹೊಂಡಗಳಲ್ಲಿ ನೀರು ಇಲ್ಲವೋ, ಅವುಗಳ ಬಗ್ಗೆ ನಾವು ಈಗಾಗಲೇ ಸುತ್ತೋಲೆಯ ಮೂಲಕ ಸೂಚನೆಯನ್ನು ನೀಡಿದ್ದೇವೆ. ಇಡೀ ರಾಜ್ಯದಾದ್ಯಂತ ಇರುವ ಎಲ್ಲಾ ವನ್ಯಜೀವಿ ಧಾಮಗಳಲ್ಲಿ, ಮೀಸಲು ಅರಣ್ಯ ಪ್ರದೇಶಗಳಲ್ಲಿ ಅದರಲ್ಲೂ ವಿಶೇಷವಾಗಿ ಎಲ್ಲೆಲ್ಲಿ ವನ್ಯಜೀವಿಗಳಿವೆಯೋ, ಅಲ್ಲೆಲ್ಲಾ ನೀರಿನ ಕೊರತೆಯುಂಟಾಗಬಾರದು ಎಂದು ತಿಳಿಸಲಾಗಿದೆ. ಈ ಬಾರಿ ಸ್ವಲ್ಪ ಮಳೆ ಚೆನ್ನಾಗಿ ಆಗಿದೆ ಆದರೂ ಸಹ ಕೆಲವೊಂದು ನೀರಿನ ಹೊಂಡಗಳಲ್ಲಿ ನೀರಿನ ಕೊರತೆ ಇದೆ. ಇಂತಹ ಕಡೆಗಳಲ್ಲಿ ಸಬ್‌ಮರ್ಸಿಬಲ್ ಪಂಪ್‌ನ್ನು ಹಾಕಿ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು

ಈಗಾಗಲೇ ತಿಳಿಸಲಾಗಿದೆ. ಇದಲ್ಲದೇ, ಟ್ಯಾಂಕರ್ ಮುಖಾಂತರ ಸಹಿತವಾಗಿಯೂ ಸಹ ಅವಶ್ಯಕತೆ ಇರುವ ಕೆಲವೊಂದು ಕಡೆ ನೀರು ಹಾಕುವ ವ್ಯವಸ್ಥೆಯನ್ನು ಮಾಡಿದ್ದೇವೆ. ಭೂಮಿ ಒತ್ತುವರಿ ಬಗ್ಗೆಯೂ ಸಹ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಇವತ್ತಿನ ದಿವಸ ಸುಮಾರು 8,000 ಎಕರೆ ಭೂಮಿ ಒತ್ತುವರಿಯಾಗಿದೆ. ಅರಣ್ಯ ಪ್ರದೇಶದಲ್ಲಿ 4001 ಪ್ರಕರಣಗಳಲ್ಲಿ ಒಟ್ಟು 8,024.74 ಎಕರೆ ಭೂಮಿ ಒತ್ತುವರಿಯಾಗಿದೆ. ರಾಜ್ಯದಲ್ಲಿ ಈಗಾಗಲೇ ಸುಮಾರು 2 ರಿಂದ 2.5 ಲಕ್ಷ ಎಕರೆ ಭೂಮಿ ಒತ್ತುವರಿಯಾಗಿದೆ. ಇದನ್ನು ತೆರವುಗೊಳಿಸುವ ಸಂದರ್ಭದಲ್ಲಿ ಬಹಳಷ್ಟು ಸಲ, ಯಾರು ಬಡವರು ಇದ್ದಾರೆ, ಯಾರಿಗೆ 3 ಎಕರೆಗಳಿಗಿಂತ ಕಡಿಮೆ ಇರುವ ಒತ್ತುವರಿ ಭೂಮಿಯನ್ನು ತೆರವುಗೊಳಿಸುವುದು ಬೇಡ, ಪುರ್ನವಸತಿ, ಪುನರ್‌ನಿರ್ಮಾಣ ಮಾಡಿ ಪರಿಹಾರ ಕೊಡುವವರೆಗೆ ಈ ಬಗ್ಗೆ ಕ್ರಮ ತೆಗೆದುಕೊಳ್ಳಬಾರದು ಎಂಬುದಾಗಿ ಸರ್ಕಾರವು ತೀರ್ಮಾನಿಸಿ ಸುತ್ತೋಲೆಯನ್ನು ಹೊರಡಿಸಿದೆ. ತುಮಕೂರು ಜಿಲ್ಲೆಯಲ್ಲಿ ಈಗಾಗಲೇ ಕರ್ನಾಟಕ ಅರಣ್ಯ ಕಾಯ್ದೆ, 1963 ರ ಸೆಕ್ಷನ್ 64ಎ ರಡಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ತುಮಕೂರು, ಮಧುಗಿರಿ ಹಾಗೂ ತಿಪಟೂರು ಉಪವಿಭಾಗ ರವರು ಈವರೆಗೆ 106 ಪ್ರಕರಣಗಳು, 457-35 ಎಕರೆ ಒತ್ತುವರಿ ತೆರವುಗೊಳಿಸಲು ಆದೇಶ ಹೊರಡಿಸಿದ್ದಾರೆ. ಇನ್ನೂ ಕೆಲವು ಕಡೆ ಕರ್ನಾಟಕ ಅರಣ್ಯ ಕಾಯ್ದೆ, 1963 ರ ಸೆಕ್ಷನ್ 64ಎ ರಡಿ ಕ್ರಮ ತೆಗೆದುಕೊಂಡು ಒತ್ತುವರಿ ತೆರವುಗೊಳಿಸಬೇಕಾಗಿದೆ. ಈ ಬಗ್ಗೆ ನಾವು ಈಗಾಗಲೇ ಸೂಚನೆಯನ್ನು ನೀಡಿದ್ದು, ತೆರವುಗೊಳಿಸುವ ಕೆಲಸವನ್ನು ನಾವು ಮಾಡುತ್ತೇವೆ. ಒತ್ತುವರಿಯ ಸುಮಾರು 849 ಪ್ರಕರಣಗಳಲ್ಲಿ 3,589.65 ಎಕರೆ ಪ್ರದೇಶದಲ್ಲಿ ಮೂರು ಎಕರೆಗಿಂತ ಹೆಚ್ಚಿನ ಪ್ರಕರಣಗಳಿವೆ. 3,152 ಪ್ರಕರಣಗಳಲ್ಲಿ ಒಟ್ಟು ಒತ್ತುವರಿಯಾಗಿರುವ ಪ್ರದೇಶ 4,435 ಎಕರೆಗಳಷ್ಟು ಇದೆ. ಹೀಗಾಗಿ ಮೂರು ಎಕರೆಗಳಿಗಿಂತ ಜಾಸ್ತಿ ಇರುವ 3,589.65 ಎಕರೆ ಭೂಮಿಯಲ್ಲಿ ಕರ್ನಾಟಕ ಅರಣ್ಯ ಕಾಯ್ದೆ, 1963 ರ ಸೆಕ್ಷನ್ 64ಎ ರಡಿ ಪ್ರಕರಣವನ್ನು ದಾಖಲಿಸಿ, ತಕ್ಷಣವೇ ಹಾಗೂ ಆದಷ್ಟು ಶೀಘ್ರದಲ್ಲಿ ಒತ್ತುವರಿ ತೆರವುಗೊಳಿಸಬೇಕು ಎನ್ನುವ ಸೂಚನೆಯನ್ನು ನಾನು ಈಗಾಗಲೇ ಇಲಾಖಾಧಿಕಾರಿಗಳಿಗೆ ನೀಡಿದ್ದೇನೆ. ಯಾರು ದೊಡ್ಡ ಮಟ್ಟದ ಒತ್ತುವರಿಯನ್ನು ಮಾಡಿದ್ದಾರೆಯೋ ಅವರ ವಿರುದ್ಧ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅರಣ್ಯ ಭೂಮಿಯು ಅರಣ್ಯ ಭೂಮಿಯಾಗಿಯೇ ಉಳಿಯುತ್ತದೆ. ಒತ್ತುವರಿಯನ್ನು ತೆರವುಗೊಳಿಸುತ್ತೇವೆ ಎನ್ನುವ ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಚಿದಾನಂದ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಶಿರಾ ತಾಲ್ಲೂಕು, ಕಸಬಾ ಹೋಬಳಿ, ಮುದಿಗೆರೆ ಅಮೃತ ಮಹಲ್ ಕಾವಲ್‌ನ ಸರ್ವೆ ನಂಬರ್ 12 ರಲ್ಲಿ 3,025 ಎಕರೆ ಅರಣ್ಯ

ಪ್ರದೇಶವೇನಿದೆ, ಇದಕ್ಕೆ ಹೊಂದಿಕೊಂಡಂತೆ ಕೆ.ಐ.ಎ.ಡಿ.ಬಿ. ಸಂಸ್ಥೆಯಿಂದ ಸಾವಿರಾರು ಎಕರೆ ಜಮೀನು ಕೈಗಾರಿಕೆ ಪಟ್ಟಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ತುಮಕೂರಿನ ಶಿರಾ ಪ್ರದೇಶವು ಬಯಲು ಸೀಮೆ ಪ್ರದೇಶವಾಗಿದ್ದು, ಬರದ ನಾಡಾಗಿದೆ. ಅಲ್ಲಿ ಇದೊಂದೇ ಅರಣ್ಯ ಪ್ರದೇಶವು ಉಳಿದುಕೊಂಡಿದೆ. ಅಲ್ಲಿ 3,025 ಎಕರೆ ಜಮೀನಿನಷ್ಟು ಜಾಗ ಇರುವುದು ನಮಗೆ ಗೊತ್ತಿರಲಿಲ್ಲ. ಇದು ನಮ್ಮ ಚಿಕ್ಕನಾಯಕನಹಳ್ಳಿ ಮತ್ತು ಶಿರಾ ತಾಲ್ಲೂಕಿನ ಪ್ರದೇಶದಲ್ಲಿ ಇದೊಂದು "ಲಂಗ್ ಸ್ಪೇಸ್" ಇದ್ದಂತೆ ಇದೆ. ಮೈಸೂರು ಮಹಾರಾಜರ ಕಾಲದಲ್ಲಿಯೇ ಅಂದರೆ ದಿನಾಂಕ 06/04/1942 ರಲ್ಲಿಯೇ ಅಧಿಸೂಚನೆ ಹೊರಡಿಸಿರುವುದರಿಂದ ಸರ್ಕಾರವು ಅದನ್ನು ಯಾವ ರೀತಿಯಾಗಿ ಪರಿಗಣಿಸುತ್ತದೆ ಎಂದು ನಾನು ಪ್ರಶ್ನಿಸುತ್ತೇನೆ. ಇದು ಮೀಸಲು ಅರಣ್ಯ ಪ್ರದೇಶದಡಿ ಬರುತ್ತದೆಯೇ ಅಥವಾ ಮುಂದಿನ ದಿನಗಳಲ್ಲಿ ಯಾವುದಾದರೊಂದು ಕೈಗಾರಿಕೆ, ವಿಮಾನ ನಿಲ್ದಾಣ ಅಥವಾ ಮತ್ತಿತರೆ ಕಾಮಗಾರಿಗಳಿಗಾಗಿ ಅಷ್ಟೂ ಅರಣ್ಯ ಪ್ರದೇಶವನ್ನು ನಾಶ ಮಾಡುವ ಅಥವಾ ಅಷ್ಟನ್ನೂ ಸ್ವಾಧೀನಪಡಿಸಿಕೊಳ್ಳುವ ಅವಕಾಶ ಅಥವಾ ಉದ್ದೇಶ ಸರ್ಕಾರಕ್ಕೆ ಏನಾದರೂ ಇದೆಯೇ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಒಂದು ವೇಳೆ ಇಲ್ಲವೆಂದಾದರೆ, ಅದಕ್ಕೆ ಪೂರ್ತಿಯಾಗಿ ಗಡಿ ನಿಗದಿಪಡಿಸಿ, ಅಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮರಗಿಡಗಳನ್ನು ಬೆಳೆಸಿ, ಅದನ್ನು ಉಳಿಸಿದರೆ..., ಏಕೆಂದರೆ ಸಹಜವಾಗಿ ಅಲ್ಲಿ ಕೈಗಾರಿಕಾ ಪಟ್ಟಣಗಳು ಬಂದರೆ, ಅಲ್ಲಿ ಜಲ, ವಾಯು ಮಾಲಿನ್ಯಗಳುಂಟಾಗುತ್ತವೆ. ಇವುಗಳನ್ನು ತಡೆಗಟ್ಟಬೇಕಾದರೆ..., ಪುಣ್ಯಕ್ಕೆ ಅದರ ಪಕ್ಕದಲ್ಲಿಯೇ ಹೊಂದಿಕೊಂಡಂತೆ ಈ ಅರಣ್ಯ ಪ್ರದೇಶವಿದೆ. ಈ ವಿಚಾರದಲ್ಲಿ ನನ್ನ ಕಳಕಳಿಯ ವಿನಂತಿ ಏನೆಂದರೆ, ಸರ್ಕಾರವು ದಯಮಾಡಿ ಈ ಅರಣ್ಯ ಪ್ರದೇಶವನ್ನು ಉಳಿಸಿಕೊಡಬೇಕು. ಯಾವುದೇ ಕಾರಣಕ್ಕೂ ಸಹ ಬೇರೆ ಯಾವುದೇ ಯೋಜನೆಗಳಿಗೆ ಇದನ್ನು ಬಳಸುವ ಉದ್ದೇಶವಿದೆಯೇ ಎಂಬುದರ ಬಗ್ಗೆ ಸಚಿವರು ತಿಳಿಸಬೇಕು. ಅರಣ್ಯ ಪ್ರದೇಶವನ್ನು ಉಳಿಸುವುದಕ್ಕಾಗಿ ಬೇಲಿಯನ್ನು ಹಾಕಬೇಕು. ಅಲ್ಲಿ ಇನ್ನೂ ಹೆಚ್ಚಿನ ಅರಣ್ಯೀಕರಣ ಮಾಡುವುದಕ್ಕೆ ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ಈಶ್ವರ್ ಬಿ.ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):-** ಮಾನ್ಯ ಸಭಾಪತಿಯವರೆ, ಶಿರಾ ತಾಲ್ಲೂಕು ಕಸಬಾ ಹೋಬಳಿ ಮುದಿಗೆರೆ ಅಮೃತ್ ಮಹಲ್ ಕಾವಲ್‌ನ ಸರ್ವೆ ನಂಬರ್ 12 ರಲ್ಲಿನ 3,025 ಎಕರೆಯನ್ನು ದಿನಾಂಕ 6ನೇ ಏಪ್ರಿಲ್ 1942 ರಲ್ಲಿ "ಮುದಿಗೆರೆ ಬ್ಲಾಕ್" "ಸ್ಟೇಟ್ ಫಾರೆಸ್ಟ್" ಎಂದು ಮೈಸೂರು ಮಹಾರಾಜರ ಸರ್ಕಾರವು ಸೆಕ್ಷನ್-17 ಮೈಸೂರು ಅರಣ್ಯ ಕಾಯ್ದೆ XI of 1900 ರಲ್ಲಿ ಆದೇಶ ಹೊರಡಿಸಿರುತ್ತದೆ. ಈ ವಿಚಾರದಲ್ಲಿ ನಾನು ಬಹಳ ಸ್ಪಷ್ಟವಾಗಿ ಹೇಳಲು ಬಯಸುವುದೇನೆಂದರೆ, ಯಾವುದೇ ಅಧಿಸೂಚಿತ ಅರಣ್ಯ

ಪ್ರದೇಶ ಅದು ಸಂರಕ್ಷಿತ, ಮೀಸಲು ಅಥವಾ ಪರಿಭಾವಿತ ಅರಣ್ಯ ಪ್ರದೇಶಗಳಿರಬಹುದು ಅದು ಒಂದು ಬಾರಿ ಅರಣ್ಯ ಪ್ರದೇಶವೆಂದು ಘೋಷಣೆಯಾದರೆ, ಅದು ಯಾವಾಗಲೂ ಅರಣ್ಯ ಪ್ರದೇಶವಾಗಿಯೇ ಇರುತ್ತದೆ. ಹೀಗಾಗಿ 3,025 ಎಕರೆಯಷ್ಟು ಅಧಿಸೂಚಿತ ಅರಣ್ಯ ಪ್ರದೇಶವಿದೆ ಯಾವುದೇ ಪರಿಸ್ಥಿತಿಯಲ್ಲಿಯೂ ಸಹ ಇದನ್ನು ಅರಣ್ಯೇತರ ಕೆಲಸ ಕಾರ್ಯಗಳಿಗೆ ಕಾನೂನು ಬದ್ಧವಾಗಿ ಕೊಡುವುದಕ್ಕೆ ಬರುವುದಿಲ್ಲ. ಅದೇ ರೀತಿಯಾಗಿ ಇದನ್ನು ಉಡುಗೊರೆ, ಅನುದಾನ ರೀತಿಯಾಗಿಯೂ ಸಹ ನೀಡುವುದಕ್ಕೆ ಅವಕಾಶವಿರುವುದಿಲ್ಲ. ಇದನ್ನು ಅನ್ಯಕಾರ್ಯ ನಿಮಿತ್ತ ಉಪಯೋಗ ಮಾಡಲು ಅವಕಾಶವಿರುವುದಿಲ್ಲ. ಇದು ಅರಣ್ಯ ಪ್ರದೇಶವಾಗಿಯೇ ಉಳಿಯುತ್ತದೆ. ಸರ್ಕಾರವು ಇದನ್ನು ಅರಣ್ಯ ಪ್ರದೇಶವಾಗಿಯೇ ಉಳಿಸುತ್ತದೆ. ಸದಸ್ಯರು ಪ್ರಸ್ತಾಪಿಸಿದಂತೆ, ಇದು ಆ ಭಾಗದ "ಲಂಗ್ ಸ್ಪೇಸ್" ಆಗಿರುವುದರಿಂದ ಅದನ್ನು ಅಭಿವೃದ್ಧಿಪಡಿಸುತ್ತೇವೆ. ಅನುದಾನದ ಲಭ್ಯತೆಯ ಆಧಾರದ ಮೇರೆಗೆ, ಹೆಚ್ಚಿನ ಗಿಡಮರಗಳನ್ನು ಬೆಳೆಸಿ, ದಟ್ಟವಾದ ಅರಣ್ಯ ಪ್ರದೇಶವನ್ನಾಗಿ ಮಾಡುವುದಕ್ಕೆ ಸರ್ಕಾರವು ಕ್ರಮ ಕೈಗೊಳ್ಳುತ್ತದೆ ಎಂಬ ಭರವಸೆಯನ್ನು ಸದಸ್ಯರಿಗೆ ಕೊಡಲಚ್ಛಿಸುತ್ತೇನೆ.

**ಶ್ರೀ ಚಿದಾನಂದ ಎಂ.ಗೌಡ:-** ಮಾನ್ಯ ಸಭಾಪತಿಯವರೆ, ಶಿರಾ ಈ ವಿಚಾರಕ್ಕೆ ಸಂಬಂಧಪಟ್ಟಂತೆ, ಸಚಿವರು ಸದರಿ ಪ್ರದೇಶಕ್ಕೆ ಭೇಟಿ ನೀಡಿದರೆ ಒಳ್ಳೆಯದಾಗುತ್ತದೆ.

## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 380* |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : ಶ್ರೀ ಸಿ.ಟಿ ರವಿ(ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 10.03.2025 |
| ಉತ್ತರಿಸುವ ಸಚಿವರು | : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಹೊಸದಾಗಿ ಬಿ.ಪಿ.ಎಲ್ ಪಡಿತರ ಚೀಟಿ ಪಡೆಯಲು ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಹೊಸದಾಗಿ ಬಿ.ಪಿ.ಎಲ್ ಪಡಿತರ ಚೀಟಿ ಪಡೆಯಲು ಅರ್ಜಿ ಸಲ್ಲಿಸಿರುವವರ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-01 ರಲ್ಲಿ ಒದಗಿಸಲಾಗಿದೆ. |
| ಆ | ಕಳೆದ ಎರಡು ವರ್ಷದಿಂದ ಎಷ್ಟು ಹೊಸ ಬಿ.ಪಿ.ಎಲ್ ಕಾರ್ಡ್ ವಿತರಣೆ ಮಾಡಲಾಗಿದೆ; ಎಷ್ಟು ಅರ್ಜಿಗಳು ವಿಲೇವಾರಿ ಮಾಡಲು ಬಾಕಿ ಇವೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಮಾಹಿತಿಯನ್ನು ಅನುಬಂಧ-01 ರಲ್ಲಿ ಒದಗಿಸಲಾಗಿದೆ. |
| ಇ | ಹೊಸ ಬಿ.ಪಿ.ಎಲ್ ಕಾರ್ಡ್ ವಿತರಿಸದೆ ಇರುವುದರಿಂದ ಅರ್ಜಿ ಸಲ್ಲಿಸಿರುವ ಹಲವಾರು ಅರ್ಹ ಫಲಾನುಭವಿಗಳಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ತುರ್ತು ವೈದ್ಯಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅರ್ಹರಿಗೆ ಆದ್ಯತಾ ಪಡಿತರ ಚೀಟಿ ನೀಡಲು ಹಾಗೂ ಪಡಿತರ ಚೀಟಿಯಲ್ಲಿನ ಹೆಸರು ಸೇರ್ಪಡೆ/ತಿದ್ದುಪಡಿಗೆ ನಿಯಮಿತವಾಗಿ ಅವಕಾಶ ಕಲ್ಪಿಸಲಾಗುತ್ತಿರುತ್ತದೆ. |
| ಈ | ಬಂದಿದ್ದರೆ, ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳಿಗೆ ಯಾವಾಗ ಬಿ.ಪಿ.ಎಲ್ ಕಾರ್ಡ್ ವಿತರಣೆ ಮಾಡಲಾಗುವುದು? | ಹೊಸ ಆದ್ಯತಾ ಪಡಿತರ ಚೀಟಿಯನ್ನು ಕೋರಿ ಮಾರ್ಚ್ 2023ರ ವರೆಗೆ ಸಲ್ಲಿಕೆಯಾಗಿರುವ 2,95,986 ಅರ್ಜಿಗಳ ವಿಲೇವಾರಿ ಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ಆನಾಸ 211 ಡಿಆರ್ಎ 2021, ದಿನಾಂಕ: 29.09.2023 ರಲ್ಲಿ ಆದೇಶಿಸಲಾಗಿದ್ದು, ಅದರಂತೆ ಕ್ರಮವಹಿಸಲಾಗಿರುತ್ತದೆ.<br>• ಬಾಕಿ ಇರುವ ಅರ್ಜಿಗಳನ್ನು ಪರಿಶೀಲಿಸಿ, ಈಗಾಗಲೇ 2,04,760 ಆದ್ಯತಾ ಪಡಿತರ ಚೀಟಿಗಳನ್ನು ವಿತರಿಸಲಾಗಿರುತ್ತದೆ. |

| | | |
|---|---|---|
| | | • ತುರ್ತು ವೈದ್ಯಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅರ್ಹರಿಗೆ ಆದ್ಯತಾ ಪಡಿತರ ಚೀಟಿ ನೀಡಲು ಹಾಗೂ ಪಡಿತರ ಚೀಟಿಯಲ್ಲಿನ ಹೆಸರು ಸೇರ್ಪಡೆ/ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿದೆ.<br>• ಇ-ಶ್ರಮ್ ನೊಂದಾಯಿತ ಕಾರ್ಮಿಕರಿಗೆ ಹಾಗೂ ಬುಡಕಟ್ಟು ಜನಾಂಗದವರಿಗೆ ಹೊಸ ಆದ್ಯತಾ ಪಡಿತರ ಚೀಟಿಗಳನ್ನು ವಿತರಿಸಲು ಕ್ರಮವಹಿಸಲಾಗುತ್ತಿದೆ. |

**ಶ್ರೀ ಸಿ.ಟಿ.ರವಿ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಹೊಸದಾಗಿ ಬಿ.ಪಿ.ಎಲ್. ಪಡಿತರ ಚೀಟಿ ಪಡೆಯಲು ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು ಎಂಬುದಾಗಿ ನಾನು ಕೇಳಿರುವ ಪ್ರಶ್ನೆಗೆ ಸಚಿವರು ಉತ್ತರಿಸಿದ್ದಾರೆ. ಎಲ್ಲರಿಗೂ ಬಿ.ಪಿ.ಎಲ್. ಕಾರ್ಡ್‌ನ್ನು ನೀಡಲಾಗಿದೆಯೇ ಎಂದು ಕೇಳಿದರೆ, ಎಲ್ಲರಿಗೂ ಬಿ.ಪಿ.ಎಲ್. ಕಾರ್ಡ್‌ನ್ನು ನೀಡಿರುವುದಿಲ್ಲ. ಇದನ್ನು ಹಂತ ಹಂತವಾಗಿ ನೀಡಲಾಗುವುದೆಂದು ಸಚಿವರು ತಿಳಿಸಿದ್ದು, ಇದನ್ನು ಯಾವಾಗ ನೀಡಲಾಗುತ್ತದೆ ಎನ್ನುವುದರ ಮಾಹಿತಿಯನ್ನು ಸಚಿವರು ತಿಳಿಸಬೇಕು.

**ಶ್ರೀ ಕೆ.ಹೆಚ್.ಮುನಿಯಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು):-** ಮಾನ್ಯ ಸಭಾಪತಿಯವರೆ, ಈಗಾಗಲೇ 2,95,986 ಕಾರ್ಡ್‌ಗಳನ್ನು ವಿಲೇ ಮಾಡಲಾಗಿದೆ. 2,04,760 ಕಾರ್ಡ್‌ಗಳನ್ನು ಕೊಡಲಾಗಿದೆ ಇನ್ನುಳಿದ ಕೆಲವು ಎ.ಪಿ.ಎಲ್. ವರ್ಗಕ್ಕೆ ಸೇರುತ್ತವೆ. ಸುಮಾರು 91 ಸಾವಿರ ಕಾರ್ಡ್‌ಗಳು ಪರಿಷ್ಕರಣೆಯಲ್ಲಿದ್ದು, ಇದನ್ನು ಆದಷ್ಟು ಶೀಘ್ರದಲ್ಲಿ ವಿಲೇ ಮಾಡಲಾಗುವುದು. ಬಿ.ಪಿ.ಎಲ್. ಕಾರ್ಡ್‌ಗಳನ್ನು ನೀಡಲು ಮಾನದಂಡಗಳಿವೆ. ಕೇಂದ್ರ ಸರ್ಕಾರವು 1.10 ಕೋಟಿ ಕಾರ್ಡ್‌ದಾರರಿಗೆ ಮಾತ್ರವೇ ಅನುಮತಿ ನೀಡಿದೆ. ಹೀಗಾಗಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಡ್‌ಗಳನ್ನು ನೀಡುವುದಕ್ಕೆ ಅವಕಾಶವಿಲ್ಲ. ಬಿ.ಪಿ.ಎಲ್. ಕಾರ್ಡ್‌ಗೆ ಅರ್ಹರು ಜಾಸ್ತಿ ಇರುವುದರಿಂದ ರಾಜ್ಯ ಸರ್ಕಾರ ಸುಮಾರು 25 ಲಕ್ಷ ಕಾರ್ಡ್‌ಗಳನ್ನು ನೀಡಿದೆ. ಅಂತ್ಯೋದಯ ಕಾರ್ಡ್‌ಗಳನ್ನು ಒಳಗೊಂಡಂತೆ ಕೇಂದ್ರ ಸರ್ಕಾರವು ಕೇವಲ 4.50 ಕೋಟಿ ಕಾರ್ಡ್‌ಗಳನ್ನು ಮಾತ್ರವೇ ನೀಡುತ್ತಿದೆ. ರಾಜ್ಯ ಸರ್ಕಾರವು ಇದರ ಜೊತೆಗೆ 25 ಲಕ್ಷ ಕಾರ್ಡ್‌ಗಳನ್ನೂ ಸಹ ನೀಡುತ್ತಿದೆ. ಈ ವಿಷಯವು ಸದಸ್ಯರಿಗೆ ತಿಳಿದಿದೆ. ಬಿ.ಪಿ.ಎಲ್. ಕಾರ್ಡ್‌ಗಳಲ್ಲಿ ಶೇಕಡಾ 10 – 20 ರಷ್ಟು ಎ.ಪಿ.ಎಲ್. ಕಾರ್ಡ್‌ದಾರರು ಇದ್ದಾರೆ. ಹೀಗಾಗಿ ಇದರ ಪರಿಷ್ಕರಣೆಯನ್ನು ನಾನು ಪ್ರಾರಂಭಿಸಿದ್ದೇನೆ. ಇದಕ್ಕೆ ಬಹಳವಾಗಿ ತದ್ವಿರುದ್ಧವಾದ ವಾತಾವರಣ ಬೆಳೆದು ಬಂದಿತು. ಹೀಗಾಗಿ ಸರ್ಕಾರವು ಈ ವಿಚಾರದಲ್ಲಿ ಯೋಚನೆ ಮಾಡಿದೆ. ಏಕೆಂದರೆ, ಕೇಂದ್ರ ಸರ್ಕಾರದ ಮಾನದಂಡಗಳನ್ನು ಅನುಸರಿಸಿ, ನಾವು ಬಿ.ಪಿ.ಎಲ್.

ಕಾರ್ಡ್‌ಗಳನ್ನು ಕೊಡಬೇಕಾಗಿದೆ. ಇದು ಕೇಂದ್ರ ಸರ್ಕಾರದ ಯೋಜನೆಯಾಗಿದೆ. ಆದ್ದರಿಂದ ಮತ್ತೊಮ್ಮೆ ಇದನ್ನು ಪರಿಷ್ಕರಣೆ ಮಾಡಿದಾಗ ನೀವುಗಳೆಲ್ಲರೂ ಸಹಕರಿಸಿದರೆ, ನಮ್ಮ ರಾಜ್ಯದಲ್ಲಿ ನಿಜವಾಗಲೂ ಅರ್ಹರಿರುವವರಿಗೆ ಬಿ.ಪಿ.ಎಲ್. ಕಾರ್ಡ್ ನೀಡಲು ಅವಕಾಶವಾಗುತ್ತದೆ. (ಮುಂದು)

(160) 10-03-2025 12.40 BKP-KS (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ. ಹೆಚ್. ಮುನಿಯಪ್ಪ (ಮುಂದು):-**

ಏನು ಶೇಕಡ 15-20% ಎ.ಪಿ.ಎಲ್. (Above Poverty Line) ಕಾರ್ಡ್‌ಗಳನ್ನು ತೆಗೆದಾಗ ಮಾತ್ರ, ಈ ಉಳಿದಂತಹ ಬಿ.ಪಿ.ಎಲ್. ನವರಿಗೆ ಕಾರ್ಡ್‌ಗಳನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ. ಇದನ್ನು serious ಆಗಿ ಪರಿಷ್ಕರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಇದು ಸರಿ ಹೋಗಬೇಕಾದರೆ ಮೊನ್ನೆ ಆದಂತೆ, ಗೊಂದಲ ಮಾಡದಂತೆ ಸಹಕಾರ ನೀಡುವಂತೆ ಸರ್ವಪಕ್ಷದವರನ್ನು ಸಹ ಕೇಳಿಕೊಳ್ಳುತ್ತೇನೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಯಾವುದೇ ಕಾರಣಕ್ಕೂ ಸಹ ಅರ್ಹರ ಬಿ.ಪಿ.ಎಲ್. ಕಾರ್ಡ್‌ಗಳು ರದ್ದಾಗದಂತೆ ನೋಡಿಕೊಳ್ಳಿ ಎಂದು ಮಾನ್ಯ ಮುಖ್ಯಮಂತ್ರಿಗಳೇ ಹೇಳಿಕೆ ಕೊಟ್ಟಿದ್ದರು. ಆದರೂ ಸಹ ಅರ್ಹರ ಬಿ.ಪಿ.ಎಲ್. (Below Poverty Line) ಕಾರ್ಡ್‌ಗಳು ರದ್ದಾಗಿವೆ. ನಿಜವಾಗಿ ಅರ್ಹ ಫಲಾನುಭವಿಗಳಿಗೆ ತೊಂದರೆಯಾಗುತ್ತಿದೆ. ಬಿ.ಪಿ.ಎಲ್. ಕಾರ್ಡ್‌ಗಳು ಇಲ್ಲದೇ ಇರುವುದರಿಂದ ವಯೋವೃದ್ಧರು ಜೀವನ ನಡೆಸುವುದಕ್ಕೂ ಸಹ ಕಷ್ಟವಾದಂತಹ ಪರಿಸ್ಥಿತಿಯಲ್ಲಿದ್ದಾರೆ. ನಿಮ್ಮ ಗೊತ್ತಿರುವಂತೆ ಅವರುಗಳು ನಿಮ್ಮ ಕಾರ್ಯಾಲಯಕ್ಕೆ ಹಾಗೂ ಶಾಸಕರ ಕಾರ್ಯಾಲಯಕ್ಕೆ ದಿನನಿತ್ಯ ಓಡಾಡುತ್ತಿರುತ್ತಾರೆ. ಯಾವುದೇ ಜನಪ್ರತಿನಿಧಿ ಅಥವಾ ಜನಸಂಪರ್ಕ ಸಭೆಯನ್ನು ಯಾವುದೇ ಪಂಚಾಯಿತಿಯಲ್ಲಿ ಇಟ್ಟುಕೊಂಡರೂ ಸಹ ಆ ಪಂಚಾಯಿತಿಯಲ್ಲಿ ನಮ್ಮ ಬಿ.ಪಿ.ಎಲ್. ಕಾರ್ಡ್ ರದ್ದಾಗಿದೆ, ನಮಗೆ ಕಾರ್ಡ್ ಅನ್ನು ಕೊಡಿಸಿ ಎಂದು ಕಣ್ಣೀರು ಇಡುವಂತಹದ್ದು ಸಾಮಾನ್ಯವಾದ ಸಂಗತಿಯಾಗಿದೆ. ಇದರ ಜೊತೆ, ಬಿ.ಪಿ.ಎಲ್. ಪಡಿತರ ಚೀಟಿಗೆ ಹೆಸರು ಸೇರ್ಪಡೆ ಮಾಡುವುದಕ್ಕೆ ಹಾಗೂ ತೆಗೆಯುವುದಕ್ಕೆ, ಒಂದು ಅಥವಾ ಎರಡು ದಿನಗಳನ್ನು ನಿಗದಿ ಮಾಡುತ್ತೀರಿ, ಅದೇ ಸಮಯದಲ್ಲಿ server ಅನ್ನು open ಮಾಡುತ್ತಾರೆ, ಇದರಿಂದ overcrowd ಆಗಿ, server jam ಆಗುತ್ತದೆ. ಹಾಗಾಗಿ, ಅರ್ಜಿಗಳನ್ನು ಹಾಕಲು ಬಂದವರು ಬೆಳಗ್ಗೆಯಿಂದ ಸಂಜೆಯವರೆಗೆ ಕಾದು ಅರ್ಜಿಗಳನ್ನು ಹಾಕದ ಹಾಗೆ ವಾಪಸ್ಸು ಹೋಗುತ್ತಾರೆ. ಮಾನ್ಯ ಸಚಿವರು ಹೇಳಿದಾಗೆ, ಕೇವಲ 2,95,986 ಅರ್ಜಿಗಳು ಮಾತ್ರ ವಿಲೇವಾರಿಗೆ ಬಾಕಿಯಿರುವುದಲ್ಲ ಹಾಗೂ ಎಷ್ಟೋ ಜನರಿಗೆ because of server problems online ನಲ್ಲಿ

ಅರ್ಜಿಗಳನ್ನು submit ಮಾಡಲಾಗುತ್ತಿಲ್ಲ, . ಮತ್ತೆ, ಅರ್ಜಿಗಳನ್ನು ಸಲ್ಲಿಸಲು ಕೇವಲ ಒಂದು ಅಥವಾ ಎರಡು ದಿನಗಳು ಮಾತ್ರ server open ಮಾಡುತ್ತಾರೆ. ಹಾಗಾಗಿ, ಇದರ ಬದಲು online ಮೂಲಕ ಅರ್ಜಿಗಳನ್ನು ಸಲ್ಲಿಸಲು ಯಾವಾಗಲೂ server ಅನ್ನು open ಮಾಡಲು ಏಕೆ ಸಾಧ್ಯವಿಲ್ಲ ಹಾಗೂ ಏಕೆ ಇಡಬಾರದು? ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚುತ್ತಿರುವುದರಿಂದ ಹೊಸ ಪಡಿತರ ಚೀಟಿಯ ವಿತರಣೆಗೆ ಅವಕಾಶ ನೀಡುತ್ತಿಲ್ಲವೆಂದು ಯಾವಾಗಲೂ ಒಂದು readymade answer ಅನ್ನು ನೀಡುತ್ತೀರಿ.

ಆಮೇಲೆ ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ಹಾಗೂ ಇ-ಶ್ರಮ್ ಕಾರ್ಡ್ ಹೊಂದಿರುವಂತಹ ಫಲಾನುಭವಿಗಳಿಗೆ ಬಿ.ಪಿ.ಎಲ್. ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದಿದ್ದೀರಿ, ಇದೊಂದು ಮಾತ್ರ ಚಾಲ್ತಿಯಲ್ಲಿದೆ. ಇದು ಬಿಟ್ಟು ಬಾಕಿ ಯಾವುದು ಚಾಲ್ತಿಯಲಿಲ್ಲ. ಬಾಕಿಯನ್ನು ಚಾಲ್ತಿಯಲ್ಲಿಡುವುದಕ್ಕೆ, ಯಾರು ಬೇಕಾದರೂ ಅರ್ಜಿಯನ್ನು ಹಾಕುವುದಕ್ಕೆ ಹಾಗೂ ಅವರಿಗೆ ಅರ್ಹತೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡುವುದಕ್ಕೆ ವರ್ಷದ 365 ದಿನಗಳು ಸಹ ಸರ್ವರ್ ಅನ್ನು open ಇಡಲು ಸಮಸ್ಯೆ ಏನು ಎಂದು ಹೇಳುತ್ತಾ, ಇನ್ನೊಂದು ವಿಚಾರ ಎಂದರೆ ಅರ್ಜಿಯನ್ನು ಪೆಂಡಿಂಗ್ ಇಡುವುದರಿಂದ ಸಮಸ್ಯೆಗಳನ್ನು ಪರಿಹಾರ ಮಾಡಲು ಸಾಧ್ಯವೇ? ಮಾನ್ಯ ಸಚಿವರು ನೀಡಿರುವ ಅಂಕಿ-ಅಂಶದ ಪ್ರಕಾರ, ಕಳೆದ 29 ಸೆಪ್ಟೆಂಬರ್ 2023 ರಿಂದ ಇಲ್ಲಿಯವರೆಗೆ 2,95,986 ಅರ್ಜಿಗಳು ಪೆಂಡಿಂಗ್ ಇವೆ. ಅದರಲ್ಲಿ ನೀವು 2,04,760 ಅರ್ಜಿಗಳನ್ನು clear ಮಾಡಿದ್ದೀರಿ. ಬಾಕಿ ಅರ್ಜಿಗಳನ್ನು ಇನ್ನೂ clear ಮಾಡಿಲ್ಲ. ಅವರು ಅರ್ಹರೋ ಅಥವಾ ಅನರ್ಹರೋ ಎಂಬುದು ತೀರ್ಮಾನವೇ ಆಗಿಲ್ಲ. ಇದಲ್ಲದೆ, ಬಾಕಿ ಇರುವಂತವರು online ನಲ್ಲಿ ಅರ್ಜಿ ಹಾಕಲು ಸಾಧ್ಯವಾಗದೆ ಇರುವಂತಹವರು ಬಹಳಷ್ಟು ಜನರಿದ್ದಾರೆ. ಅವರು ಯಾವಾಗಲೂ server problem ಇರುತ್ತದೆಂದು ಹೇಳುತ್ತಿದ್ದಾರೆ. It is a practical problem. ಹಾಗಾಗಿ, ಮಾನ್ಯ ಸಚಿವರು ಇದರ ಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ. ಈಗಾಗಲೇ, ಕೇಂದ್ರ ಸರ್ಕಾರವು ಸುಮಾರು 1,10,00,000 ಕುಟುಂಬಗಳಿಗೆ ಬಿ.ಪಿ.ಎಲ್. ಪಡಿತರ ಚೀಟಿಯನ್ನು ವಿತರಣೆ ಮಾಡಲು ಅವಕಾಶ ಕೊಟ್ಟಿದೆ ಎಂದು ಮಾನ್ಯ ಸಚಿವರು ಹೇಳಿದರು. ತಾವು ಕೊಟ್ಟಿರುವ ಅಂಕಿ-ಅಂಶದ ಪ್ರಕಾರವೇ ಸುಮಾರು 1,53,69,975 ಕುಟುಂಬಗಳಿಗೆ ಬಿ.ಪಿ.ಎಲ್. ಪಡಿತರ ಚೀಟಿಯನ್ನು ವಿತರಣೆ ಮಾಡಿದ್ದೀರಿ. ಇವರೆಲ್ಲರೂ ಅರ್ಹರೆಂದು ಸರ್ಕಾರ ಭಾವಿಸಿದೆಯೇ?

**ಶ್ರೀ ಕೆ. ಹೆಚ್. ಮುನಿಯಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು online server ಸಮಸ್ಯೆ ಇದೆ ಎಂದು ಹೇಳಿದ್ದಾರೆ. ಆದರೆ, server problems ಎಲ್ಲವನ್ನು ಪರಿಹಾರ ಮಾಡಿದ್ದೇವೆ. ಈಗ ಅದರ

ಸಮಸ್ಯೆಯಿಲ್ಲ. ಒಟ್ಟಾರೆಯಾಗಿ, ಅಂತ್ಯೋದಯ ಪಡಿತರ ಚೀಟಿ, ಕೇಂದ್ರ ಸರ್ಕಾರದ ಪಡಿತರ ಚೀಟಿ, ರಾಜ್ಯ ಸರ್ಕಾರದ ಪಡಿತರ ಚೀಟಿ ಹಾಗೂ ಆದ್ಯತಾ ಪಡಿತರ ಚೀಟಿ ಎಲ್ಲವನ್ನು ಸೇರಿ ನಾನು ಆ ಪಟ್ಟಿಯನ್ನು ಹೇಳಿದ್ದೇನೆ. ಈಗ ಆದ್ಯತಾ ಪಡಿತರ ಚೀಟಿಯನ್ನು ಸದ್ಯ ಕೊಡುತ್ತಿದ್ದೇವೆ. ಆದರೆ, ಸದ್ಯ ಎ.ಪಿ.ಎಲ್. ಕಾರ್ಡ್‌ಗಳನ್ನು ನಿಲ್ಲಿಸಿದ್ದೇವೆ ಹಾಗೂ ಈಗ ಪಟ್ಟಿಯಲ್ಲಿ ಸುಮಾರು 25 ಲಕ್ಷ ಕಾರ್ಡ್‌ಗಳಿವೆ. ಅದರ ಪೈಕಿ ಸುಮಾರು ಒಂದು ಲಕ್ಷ ಜನ ಕೂಡ ತೆಗೆದುಕೊಳ್ಳಲು ಬರುತ್ತಿಲ್ಲ. ಇದು ಪೂರ್ತಿ ಪರಿಷ್ಕರಣೆಯಾದ ಮೇಲೆ ನೋಡೋಣವೆಂದು ಸದ್ಯಕ್ಕೆ ಅದನ್ನು ನಿಲ್ಲಿಸಲಾಗಿದೆ. ಈಗ ಏನು ಸುಮಾರು 91,000 ಅರ್ಜಿಗಳು ಬಾಕಿಯಿದೆ, ಇದನ್ನು ಆದಷ್ಟು ಬೇಗ ಪರಿಷ್ಕರಣೆ ಮಾಡುತ್ತೇವೆ. ಇದರಲ್ಲಿ....

**ಶ್ರೀ ಸಿ.ಟಿ.ರವಿ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಆದಷ್ಟು ಬೇಗ ಅಂದರೆ, ಯಾವಾಗ? ಇದು ಒಂದುವರೆ ವರ್ಷದಿಂದ ಬಾಕಿಯಿದೆ. ಇದಕ್ಕೆ time-bound ಏನು? ಇದು ದಿನಾಂಕ 29.09.2023 ರಿಂದ ಬಾಕಿ ಇರುವಂತಹ ಅರ್ಜಿಗಳು. ಇದನ್ನು ಪೂರ್ಣಗೊಳಿಸಲು time-bound ಏನು?

**ಶ್ರೀ ಕೆ. ಹೆಚ್. ಮುನಿಯಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಇನ್ನೊಂದು ಅಂಶವನ್ನು ತಿಳಿದುಕೊಳ್ಳಬೇಕು. ಹಿಂದಿನ ಸರ್ಕಾರವು ಸುಮಾರು ಮೂರು ವರ್ಷ ಕಾರ್ಡ್ ಗಳನ್ನು ಪರಿಷ್ಕರಣೆ ಮಾಡಿರಲಿಲ್ಲ. ಅದನ್ನು ಸಹ ನಾವು ಅಧಿಕಾರಕ್ಕೆ ಬಂದ ಮೇಲೆ ಪರಿಷ್ಕರಣೆ ಮಾಡುತ್ತಿದ್ದೇನೆ. 91,000 ಪಡಿತರ ಚೀಟಿಗಳ ಪೈಕಿ ಸುಮಾರು 50,000 ರಿಂದ 60,000 ಎ.ಪಿ.ಎಲ್. ಪಡಿತರ ಚೀಟಿಗೆ ಹೋಗುತ್ತದೆ. ಇದನ್ನು ಪರಿಷ್ಕರಣೆ ಮಾಡುವಾಗ, ಮಾನ್ಯ ಸದಸ್ಯರು ಹೇಳಿದಾಗೆ, ಎಲ್ಲೋ ಒಂದು ಬಿ.ಪಿ.ಎಲ್. ಪಡಿತರ ಚೀಟಿಯವರನ್ನು ಬಿಟ್ಟರೆ ದೊಡ್ಡದಾಗಿ ಮಾಧ್ಯಮದಲ್ಲಿ ಅದೇ ಬರುವಂತಹದ್ದು. ಆದರೆ, 99 ಎ.ಪಿ.ಎಲ್. ಪಡಿತರ ಚೀಟಿಯಲ್ಲಿ ಅನರ್ಹರನ್ನು ತೆಗೆದುದ್ದನ್ನು ಯಾರು ಕೇಳುವುದಿಲ್ಲ. ಒಂದು ಬಿ.ಪಿ.ಎಲ್. ಕಾರ್ಡ್ ಮಿಸ್ ಆದರೆ, ಅದು ಒಂದು ಪ್ರಚಾರಕ್ಕೆ ಹೋಗುತ್ತದೆ. ಆದ್ದರಿಂದ, ಆದಷ್ಟು ಬೇಗ ಅಂದರೆ, ನಾನು ಇದಕ್ಕೆ ಮೊದಲು priority ಕೊಟ್ಟು ಒಂದೆರಡು ತಿಂಗಳಲ್ಲಿ ಮಾಡಿಬಿಡುತ್ತೇನೆ. ಏಕೆಂದರೆ, ಇದರಲ್ಲಿ ಯಾರಾದರೂ ಸಹ ಬಿ.ಪಿ.ಎಲ್. ಕಾರ್ಡ್‌ನವರು ಇದ್ದರೆ ಅವರಿಗೆ ಅನಾನುಕೂಲವಾಗುವುದು ಬೇಡವೆಂದು ಹೇಳಿ, ಮುಂದಿನ ಕೆಲಸ ಅದನ್ನೆ ಮಾಡಲಾಗುವುದು. ಇದಕ್ಕೆ ನಿಮ್ಮೆಲ್ಲರ ಸಹಕಾರವಿರಬೇಕು. ಬಿ.ಪಿ.ಎಲ್. ನಲ್ಲಿ ಎ.ಪಿ.ಎಲ್. ನವರನ್ನು ತೆಗೆದರೆ, ಇನ್ನು ಎಷ್ಟೇ ಜನ ಇರಲಿ ಶೇಕಡ 15-20% ಮಾತ್ರವೆಂದು ಹೇಳುತ್ತಿದ್ದೇವೆ. ಅಂದರೆ, ನೀವು ಅರ್ಥ ಮಾಡಿಕೊಳ್ಳಬೇಕು 1,10,00,000 ಚೀಟಿದಾರರಲ್ಲಿ ಸುಮಾರು 20 ಲಕ್ಷ ಎ.ಪಿ.ಎಲ್. ಪಡಿತರ ಚೀಟಿದಾರರಿದ್ದಾರೆ.

ಮಾನ್ಯ ಸಭಾಪತಿಯವರೇ, ಅನರ್ಹ ಇವರನ್ನು ತೆಗೆಯುವುದಕ್ಕೆ ನಮಗೆ ಸಹಕಾರ ನೀಡಿದರೆ ಏನಾದರೂ ಬಿ.ಪಿ.ಎಲ್. ಜನರಿದ್ದರೆ, ಅವರಿಗೆ ಕೊಡಲು ಅನುಕೂಲವಾಗುತ್ತದೆ. ಆದರೆ, ಇಡೀ ಭಾರತ ದೇಶದಲ್ಲಿ, ಅದರಲ್ಲೂ ದಕ್ಷಿಣ ಭಾರತದಲ್ಲಿ ಶೇಕಡ 65-68% ಬಿ.ಪಿ.ಎಲ್. ಜನರಿರುವುದು ಕರ್ನಾಟಕ ರಾಜ್ಯದಲ್ಲೇ ಜಾಸ್ತಿ. ಇದು ತಮಿಳುನಾಡಿನಲ್ಲಿ ಇಲ್ಲ, ಆಂಧ್ರಪ್ರದೇಶದಲ್ಲಿ ಇಲ್ಲ ಹಾಗೂ ತೆಲಂಗಾಣದಲ್ಲಿ ಇಲ್ಲ ಎಂಬುದು ಅರ್ಥವಾಗುತ್ತಿಲ್ಲ. ಇಡೀ ಭಾರತ ದೇಶದಲ್ಲಿ ಆರ್ಥಿಕ ಪರಿಸ್ಥಿತಿ ಚೆನ್ನಾಗಿರುವುದು ಮಹರಾಷ್ಟ್ರವನ್ನು ಬಿಟ್ಟರೆ ಕರ್ನಾಟಕದ್ದೇ ಎಂದ ಮೇಲೆ, ಇದು ಎಲ್ಲಾ ಮಾನ್ಯ ಸದಸ್ಯರುಗಳಿಗೆ ಇದು ಗೊತ್ತಾಗುತ್ತದೆ, ಅರ್ಥವಾಗುತ್ತದೆ ಎಂದು ಭಾವಿಸುತ್ತೇನೆ. ನಮ್ಮ ರಾಜ್ಯದಲ್ಲಿ ಕೇವಲ ಶೇ. 15-20% ಮಾತ್ರ ಬಿ.ಪಿ.ಎಲ್. ಪಡಿತರ ಚೀಟಿದಾರಾರಿದ್ದಾರೆ. ಇದಕ್ಕೆ ಸಹಕಾರ ಕೊಡುತ್ತೇನೆ, ಏಕೆಂದರೆ, ಮಾನ್ಯ ಸದಸ್ಯರಾದ ಸಿ.ಟಿ.ರವಿಯವರು ಒಂದೆರಡು ವರ್ಷದಿಂದ ಬಿ.ಪಿ.ಎಲ್. ಪಡಿತರ ಚೀಟಿಗೆ ಅರ್ಹರಿದ್ದರೂ ಸಹ ಕೊಟ್ಟಿಲ್ಲವೆಂಬುದು ಗಂಭೀರವಾದಂತಹ ವಿಷಯವಾಗಿದೆ ಎಂದು ಹೇಳಿದರು. ಹಾಗಾಗಿ, ಇದಕ್ಕೆ ನನಗೆ ಸಹಕಾರ ಕೊಟ್ಟರೆ ನಾನು serious ಆಗಿ ಮಾಡುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿದ್ದೇನೆ. ಇದರ ಜವಾಬ್ದಾರಿ ಜಿಲ್ಲಾ ಮಟ್ಟದ Deputy Commissioner and C.E.O. (Chief Executive Officer) ಗೆ ಇತ್ತು. ಇದನ್ನು ಗ್ರಾಮ ಮಟ್ಟದಲ್ಲಿ P.D.O. (Panchayath Development Officer), Panchayath Secretary, Revenue Inspector and Village Accountant ಇವರನ್ನು ಒಳಗೊಂಡಂತೆ ಒಂದು ಸಮಿತಿ ಮಾಡಲಾಗಿದೆ. ಅಂದರೆ, ಗ್ರಾಮ ಮಟ್ಟದಲ್ಲಿ ನಿಜವಾದ ಪರಿಷ್ಕರಣೆ ಆಗಬೇಕು. ಇದು ಕಂಪ್ಯೂಟರ್ ನಲ್ಲಿ ಪರಿಷ್ಕರಣೆ ಮಾಡಿದರೆ ಆಗುವುದಿಲ್ಲ. ಇದನ್ನು physical ಆಗಿ ಪರಿಷ್ಕರಣೆ ಮಾಡಬೇಕು. ಅದು ಆದಾಗ ಮಾತ್ರ ಇದನ್ನು ಕ್ಲಿಯರ್ ಆಗಿ ಮಾಡುವುದಕ್ಕಾಗುತ್ತದೆ. ಈ ಕೆಲಸಕ್ಕೆ, ಈ ಅಧಿವೇಶನ ಮುಗಿದ ನಂತರ ಮಾಡಲು ತಯಾರಿ ಮಾಡಿಕೊಂಡಿದ್ದೇನೆ. ಆಗ ಎಷ್ಟು ಜನ ಬಿ.ಪಿ.ಎಲ್. ಇದ್ದಾರೆ, ಅವರಿಗೆ ಪಡಿತರ ಚೀಟಿಯನ್ನು ನೀಡಲು ನಿಮ್ಮ ಸಹಕಾರವಿರಲಿ ಹಾಗೂ ಆದಷ್ಟು ಬೇಗ ಇದನ್ನು ಮಾಡುತ್ತೇವೆ. ಉಳಿದಿರುವಂತಹ ಅರ್ಜಿಗಳನ್ನು ಎರಡು ತಿಂಗಳಲ್ಲಿ ಪರಿಶೀಲನೆ ಮಾಡುತ್ತೇವೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು 2,95,986 ಅರ್ಜಿಗಳನ್ನು ಮಾತ್ರ ಎರಡು ತಿಂಗಳಲ್ಲಿ clear ಮಾಡುತ್ತೇವೆಂದು ಹೇಳಿದ್ದಾರೆ. ಅರ್ಹರಿಗೆ ಪಡಿತರ ಚೀಟಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. As per the guidelines, ಇನ್ನೂ ಈ ಅನರ್ಹ ಬಿ.ಪಿ.ಎಲ್. ಪಡಿತರ ಚೀಟಿದಾರರನ್ನು ಯಾವಾಗ ಪತ್ತೆ ಹಚ್ಚಿ, ಅವರನ್ನು ಹೊರ ಹಾಕುತ್ತೀರಿ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಬಿ.ಪಿ.ಎಲ್. ಪಡಿತರ ಚೀಟಿಯನ್ನು ನೀಡುವುದಕ್ಕೆ ಒಂದು ನಿಯಮವನ್ನು ರೂಪಿಸಿದ್ದೀರಿ, ಅದರ ಪ್ರಕಾರ ಯಾವ ಕಾಲಮಿತಿಯೊಳಗೆ ಅನರ್ಹ ಬಿ.ಪಿ.ಎಲ್. ಪಡಿತರ ಚೀಟಿದಾರರನ್ನು ಪತ್ತೆ ಹಚ್ಚಿ ಅವರನ್ನು ಹೊರ ಹಾಕುತ್ತೀರಾ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಕೆ. ಹೆಚ್. ಮುನಿಯಪ್ಪ:-** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರವು ನೀಡಿರುವ guidelines ಪ್ರಕಾರ, ನಾನೀಗ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಜವಾಬ್ದಾರಿಯನ್ನು fix ಮಾಡಿ, ಗ್ರಾಮ ಮಟ್ಟದ ಒಂದು ಕಮಿಟಿಯನ್ನು ಮಾಡುವುದರ ಮುಖಾಂತರ ಇದನ್ನು ಸಂಪೂರ್ಣವಾಗಿ physical ಪರಿಷ್ಕರಣೆ ಮಾಡುವುದಕ್ಕೆ, ಈ ಅಧಿವೇಶನ ಮುಗಿದ ತಕ್ಷಣ ಕರೆದು ಒಂದು ಸಭೆ ನಡೆಸಿ, ಒಂದು time-bound ನ ಒಳಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಯಾವ time-bound ಎಂಬುದನ್ನು ಹೇಳಬೇಕು. ಮಾನ್ಯ ಸಚಿವರು 2,95,986 ಅರ್ಜಿಗಳ ಕುರಿತು ಎರಡು ತಿಂಗಳಲ್ಲಿ clear ಮಾಡುತ್ತೇವೆಂದು ಹೇಳಿದ್ದಾರೆ. ಅದೇ ರೀತಿ ಇದಕ್ಕೂ ಹೇಳಬೇಕು.

**ಉಪಸಭಾಪತಿಯವರು:-** ಮಾನ್ಯ ಸಚಿವರು, ಈ ಅಧಿವೇಶನ ಮುಗಿದ ತಕ್ಷಣ ಅಧಿಕಾರಿಗಳೊಂದಿಗೆ ಒಂದು ಸಭೆ ನಡೆಸಿ, ಪ್ರಾರಂಭ ಮಾಡಿ ಮಾಡುತ್ತೇನೆಂದು ಹೇಳಿದ್ದಾರೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಶೇಕಡ 80-90% ಬಿ.ಪಿ.ಎಲ್. ಪಡಿತರ ಚೀಟಿದಾರರು ಇಲ್ಲ. ಆದರೆ, ಪಡಿತರ ಚೀಟಿಗಳಿವೆ. ಅಷ್ಟು ಜನ ಬಡವರು ಇದ್ದರೆ, ನಾವು ಕರ್ನಾಟಕ ರಾಜ್ಯವನ್ನು 'ಸಮೃದ್ಧ ಕರ್ನಾಟಕ' ವೆಂದು ಹೇಗೆ ಹೇಳುತ್ತೇವೆ? . ಹಾಗಾದರೆ, ಶೇಕಡ 90% ರಷ್ಟು ಬಡವರನ್ನು ಇಟ್ಟುಕೊಂಡು ಸಮೃದ್ಧ ಕರ್ನಾಟಕ ಹೇಗೆ ಆಗುತ್ತದೆ. ಅಂದರೆ, ನಾವು ಹೇಳಬೇಕಾದರೆ, ಬಡ ಕರ್ನಾಟಕವೆಂದು ಹೇಳಬೇಕಾಗುತ್ತದೆ.

**ಉಪಸಭಾಪತಿಯವರು:-** ಇದು ಬಹಳ ಗಂಭೀರವಾದಂತಹ ವಿಚಾರ. ಮಾನ್ಯ ಸಚಿವರು ಇದನ್ನು ಗಂಭೀರವಾಗಿ ತೆಗೆದುಕೊಂಡು, ಆದಷ್ಟು ಶೀಘ್ರವಾಗಿ ಮಾಡಿ.

**ಶ್ರೀ ಕೆ. ಹೆಚ್. ಮುನಿಯಪ್ಪ:-** ಮಾನ್ಯ ಸಭಾಪತಿಯವರೆ, ನಾನು ಇದನ್ನು ಬಹಳ ಗಂಭೀರವಾಗಿಯೇ ತೆಗೆದುಕೊಂಡಿದ್ದೇನೆ. ತಮಗೆ ಗೊತ್ತಿರಬೇಕು, ಮೂರು ತಿಂಗಳ ಹಿಂದೆ ನಾನು ಬಹಳ ಗಂಭೀರವಾಗಿ ತೆಗೆದುಕೊಂಡು 10 ಲಕ್ಷ ಪಡಿತರ ಚೀಟಿಯನ್ನು ಹುಡುಕಿದೆ. ಅದರ ಪೈಕಿ, ಒಂದೆರಡು ಕಾರ್ಡ್ ಗಳನ್ನು

ತೆಗೆದುಕೊಂಡು ಮಾಧ್ಯಮದ ಮುಂದೆ ಹೋಗಿ ಅದನ್ನು ರದ್ದು ಮಾಡುವಂತಹ ಕೆಲಸವನ್ನು ಕೆಲವರು ಮಾಡಿದರು. ಇದು ಎಲ್ಲರಿಗೂ ಗೊತ್ತಿದೆ. ಅದಕ್ಕೆ ಅವಕಾಶ ಕೊಡಿ, ನೋಡುತ್ತೇನೆ.

(ಮುಂದು)

**(161) 10.03.2025 12.50 ಎಸ್‌ವಿ-ಕೆಎಸ್ (ಉಪ ಸಭಾಪತಿಯವರ ಉಪಸ್ಥಿತಿ)**

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 57 (486)
ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 10-03-2025
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 13 ವರ್ಷಗಳಿಂದ ಪ್ರೌಢಶಾಲಾ ಶಿಕ್ಷಕರಿಗೆ ಪದವಿ ಪೂರ್ವ ಕಾಲೇಜಿಗೆ ಉಪನ್ಯಾಸಕರಾಗಿ ಬಡ್ತಿ ನೀಡದಿರಲು ಕಾರಣವೇನು: ಈ ವಿಳಂಬದಿಂದಾಗಿ ಸಾಕಷ್ಟು ಶಿಕ್ಷಕರು ಸುದೀರ್ಘ ಸೇವೆ ಮಾಡಿ ಬಡ್ತಿ ಇಲ್ಲದೆ ನಿವೃತ್ತಿ ಹೊಂದುತ್ತಿದ್ದು, ಅನ್ಯಾಯಕ್ಕೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; | ಹೌದು<br>ಪ್ರೌಢ ಶಾಲಾ ಸಹ ಶಿಕ್ಷಕರ ಹುದ್ದೆಯಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ಹುದ್ದೆಗೆ ಪದೋನ್ನತಿ ನೀಡುವ ಸಂಬಂಧ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆರವರು ದಿನಾಂಕ:02/02/2024 ಮತ್ತು 07/3/2024ರ ಪತ್ರಗಳಲ್ಲಿ ರಾಜ್ಯ ಮಟ್ಟದ ಒಂದೇ ಜೇಷ್ಠತಾ ಪಟ್ಟಿಯನ್ನು ತಯಾರಿಸಬೇಕಿದ್ದಲ್ಲಿ ಅನುಸರಿಸಬೇಕಾದ ಮಾನದಂಡಗಳ ಕುರಿತು ಸರ್ಕಾರದ ಆದೇಶದ ಅವಶ್ಯವಿರುವುದಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.<br>ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಇವರ ಪ್ರಸ್ತಾವನೆಯ ಹಿನ್ನೆಲೆಯಲ್ಲಿ, ರಾಜ್ಯ ಮಟ್ಟದ ಒಂದೇ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ಅನುಸರಿಸಬೇಕಾದ ಮಾನದಂಡಗಳ ಬಗ್ಗೆ ಸೂಕ್ತ ಆದೇಶ ಹೊರಡಿಸುವಂತೆ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ), ಬೆಂಗಳೂರು ಇವರು ದಿನಾಂಕ:23-04-2024ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.<br>ಈ ಪ್ರಸ್ತಾವನೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ದಿನಾಂಕ:16-10-2024ರಂದು ನೀಡಿರುವ ಅಭಿಪ್ರಾಯದನ್ವಯ ಶಾಲಾ ಶಿಕ್ಷಣ ಇಲಾಖೆಯ ನಾಲ್ಕು ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿ ಪಡೆದ ಅರ್ಹ ಸಹ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸಿ ಸಾಮಾನ್ಯ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ, ಅಂತಿಮ ರಾಜ್ಯ ಮಟ್ಟದ ಒಂದೇ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957ರ ನಿಯಮ 7-ಎ ರ ನಿಯಮದನ್ವಯ ಪರಿಶೀಲಿಸಿ ಅಗತ್ಯಕ್ರಮವಹಿಸಲು ಸರ್ಕಾರದ ಪತ್ರ ಸಂಖ್ಯೆ:ಇಪಿ 164 ಎಸ್‌ಓಹೆಚ್ 2023 ದಿನಾಂಕ:23-10-2024ರಲ್ಲಿ ಆಯುಕ್ತರು, ಮತ್ತು ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ ಮತ್ತು ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ), ಬೆಂಗಳೂರು ಇವರಿಗೆ ಸೂಚಿಸಲಾಗಿತ್ತು. |
| ಆ) | ಸರ್ಕಾರವು 2025 ಫೆಬ್ರವರಿ ತಿಂಗಳೊಳಗಾಗಿಯೇ ಬಡ್ತಿ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ಎಂದು ಸದನದಲ್ಲಿ ಭರವಸೆ ನೀಡಿದ್ದರೂ ಇಲ್ಲಿಯವರಗೆ ಜೇಷ್ಠತಾ ಪಟ್ಟಿಯನ್ನೇ ತಯಾರಿಸಿಲ್ಲದಿರುವುದರಿಂದ ಅಧಿಕಾರಿಗಳ ಮೇಲೆಯೇ ಅನುಮಾನ ಮೂಡುವಂತೆ ಮಾಡುತ್ತಿದ್ದು, ಯಾವ ಕಾಲಮಿತಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿ ಬಡ್ತಿಯನ್ನು ನೀಡಲಾಗುವುದು? | |

| | | |
|---|---|---|
| | | ಪ್ರಸ್ತುತ ಪ್ರೌಢಶಾಲಾ ಸಹ ಶಿಕ್ಷಕರುಗಳಿಗೆ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡುವ ಕುರಿತಂತೆ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರ ಹಂತದಲ್ಲಿ ನಾಲ್ಕು ವಿಭಾಗಗಳ ಪ್ರೌಢ ಶಾಲಾ ಶಿಕ್ಷಕರುಗಳ ಪಟ್ಟಿಯನ್ನು ಪಡೆದು ಕ್ರೋಢೀಕರಿಸಲಾಗುತ್ತಿದ್ದು, ಒಂದೇ ಸಾಮಾನ್ಯ ಅರ್ಹತಾ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ಕ್ರಮವಹಿಸಲಾಗುತ್ತಿದೆ. ಪ್ರೌಢ ಶಾಲಾ ಸಹ ಶಿಕ್ಷಕರಿಗೆ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡುವ ಪ್ರಕ್ರಿಯೆಯ ಬಗ್ಗೆ ತ್ವರಿತವಾಗಿ ನಿಯಮಾನುಸಾರ ಕ್ರಮವಹಿಸಲಾಗುವುದು. |

**ಶ್ರೀ ಶಶಿಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಪ್ರೌಢಶಾಲೆಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಸಹ ಶಿಕ್ಷಕರಿಗೆ ಬಡ್ತಿ ಕೊಡುವ ವಿಷಯದ ಬಗ್ಗೆ ನಾನು ಕಳೆದ ಅನೇಕ ಬಾರಿ ಪ್ರಶ್ನೆಗಳನ್ನು ಕೇಳಿದ್ದೇನೆ. 2011ರಲ್ಲಿ ಈ ಹಿಂದೆ ಬಡ್ತಿಯನ್ನು ಕೊಡಲಾಗಿತ್ತು. ತದನಂತರ 13 ವರ್ಷಗಳಿಂದ ಇಲ್ಲಿಯವರೆಗೆ ಅವರಿಗೆ ಪಿ.ಯು. ಕಾಲೇಜಿಗೆ ಬಡ್ತಿಯನ್ನು ಕೊಟ್ಟಿಲ್ಲ. ಕಳೆದ ವರ್ಷ ಈ ಬಡ್ತಿ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದೇವೆಂದು ಸರ್ಕಾರದಿಂದ ಆದೇಶ ಬರಲಿ ಎಂದು ಪತ್ರ ಬರೆದಿದ್ದಾರೆಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ವಿಳಂಬವಾಗಿದೆ. ಮಾನ್ಯ ಸಚಿವರಿಗೆ ನಾನು ಈ ವಿಚಾರದಲ್ಲಿ ಮತ್ತು ಬೇರೆ ಬೇರೆ ವಿಚಾರಗಳಲ್ಲಿ ಧನ್ಯವಾದಗಳನ್ನು ಹೇಳುತ್ತೇನೆ. ಮೊನ್ನೆ ಅವರೊಂದು ಸಭೆ ಕರೆದು ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ಅದಕ್ಕೆ ನಾನು ಅವರಿಗೆ ಧನ್ಯವಾದಗಳನ್ನು ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೆ, ಈ ಸೀನಿಯಾರಿಟಿ ಲಿಸ್ಟ್ ಮಾಡಲಿಕ್ಕೆ 4 ವಿಭಾಗದ ಪಟ್ಟಿ ತರಿಸಿ ಮಾಡಲಿಕ್ಕೆ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದೇವೆಂದು ಹೇಳಿದರು. ಒಂದು ವರ್ಷವಾಯಿತು. ಇನ್ನೂ ಪಟ್ಟಿ ಸಿದ್ಧವಾಗಿಲ್ಲ. ಯಾವಾಗ ತಯಾರು ಮಾಡುತ್ತೀರಿ? ಪಟ್ಟಿ ತಯಾರು ಮಾಡಿ ಇನ್ನೂ ಅನೇಕ ಕೆಲಸಗಳಿವೆ. ದಯವಿಟ್ಟು ತಕ್ಷಣ ಅದನ್ನು ಮಾಡಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ. ಇದರ ಮಾನದಂಡಗಳೇನು ಎಂದು ತಾವು ಸ್ಪಷ್ಟತೆಯನ್ನು ಕೊಡಬೇಕು. ಒಂದು eligibility ಯು 55% ಇದ್ದ ನಿಯಮವನ್ನು 50%ಗೆ ಇಳಿಸಿದ್ದೀರಿ. ಅದಕ್ಕೆ ಧನ್ಯವಾದ ಹೇಳುತ್ತಿದ್ದೇನೆ. ಅದು ಮೊದಲಿನಿಂದಲೂ ಆಗಿದೆ. ಅದು ಒಳ್ಳೆಯದು. ಸರ್ಕಾರಿ ನೌಕರನು ಪರೀಕ್ಷೆ ಬರೆದು ಬಡ್ತಿಯನ್ನು ಪಡೆಯಬೇಕು ಎಂದು ಎಲ್ಲಿಯೂ ಇಲ್ಲ. ಆದರೆ ಇಲ್ಲಿ ಬಡ್ತಿ ಕೊಡಬೇಕಾಗಿರುವುದು 2011ರಿಂದ. 15-20 ವರ್ಷಗಳ ಹಿಂದೆ ಅವರು Post-Graduation course ಅನ್ನು ಮಾಡಿಕೊಂಡಿದ್ದಾರೆ. ಮತ್ತೆ ಈಗ ಪರೀಕ್ಷೆ ಬರೆಯಿರಿ ಎಂದರೆ ಕಷ್ಟವಾಗುತ್ತದೆ. ಆ condition ಅನ್ನು ಕೈಬಿಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಆ condition ಅನ್ನು ಮಾಡಿ withdraw ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ. ಉತ್ತರ ಕೊಡಲಿ. ಆಮೇಲೆ supplementary question ಅನ್ನು ಕೇಳುತ್ತೇನೆ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಕಾಲ ಸಚಿವರು):-** ಮಾನ್ಯ ಸಭಾಪತಿಯವರೆ, ನಾವು ಫೆಬ್ರವರಿಯಲ್ಲಿ ಮಾಡುತ್ತೇವೆಂದು ಹೇಳಿದ್ದೆವು. ಇನ್ನೊಂದು ತಿಂಗಳೊಳಗೆ ಇದನ್ನು finalize ಮಾಡತಕ್ಕಂಥದ್ದು.

2013 ಆದ ಮೇಲೆ C & R (Cadre and Recruitment) Rules change ಮಾಡಿದಾಗ, examination ಮಾಡಿ seniority ಆಧಾರದಲ್ಲಿ ಮಾಡಬೇಕು ಮತ್ತು ಇಡೀ ರಾಜ್ಯದ್ದು ಇರುವುದರಿಂದ ಸುಮಾರು ಜನರ ಮಾಹಿತಿ ತೆಗೆದುಕೊಳ್ಳಬೇಕಾಗಿರುವುದರಿಂದ ಸ್ವಲ್ಪ ಕಾಲಾವಕಾಶ ಜಾಸ್ತಿ ತೆಗೆದುಕೊಂಡಿದೆ. ಒಂದು ಬಾರಿ ಮಾಡುವಾಗ ಸರಿಯಾಗಿ ಮಾಡಿಬಿಡಬೇಕು. ಇಲ್ಲವಾದರೆ ಮತ್ತೆ ಇದೇ ತೊಂದರೆಯಾಗುತ್ತದೆ. ಈಗ ನಾವು ಮಾಡಿರುವುದು ಪರೀಕ್ಷೆ ಮಾಡಿ ಮಾಡಬೇಕು ಎಂದು ಇರುವುದರಿಂದ ಅದನ್ನು ರದ್ದು ಮಾಡುವ ಬಗ್ಗೆ ಈಗಲೇ ಏನೂ ಹೇಳಲಿಕ್ಕಾಗುವುದಿಲ್ಲ. ಏಕೆಂದರೆ ಅಂದಿನ ಕಲಿಕೆಗೂ ಇಂದಿನ ಕಲಿಕೆಗೂ ನೋಡಿಕೊಂಡು ತೀರ್ಮಾನ ಮಾಡಿರುತ್ತಾರೆ. ಇಲಾಖೆಯಲ್ಲಿ ಯಾವ ರೀತಿ ಮಾಡಬೇಕು, ಪರೀಕ್ಷೆ ತೆಗೆದು ಮಾಡುವುದಕ್ಕೆ ನಾನು ಯಾವುದೇ ತರಹದ ಸ್ಪಷ್ಟವಾದ ನಿರ್ಧಾರವನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಆಗುವುದಿಲ್ಲ. ಒಂದು ತಿಂಗಳಲ್ಲಿ ತುಂಬಾ ವಿಳಂಬವಾಗಿರುವ ಈ ಪ್ರಕ್ರಿಯೆಯ ಬಗ್ಗೆ ಬೇಗ ತೀರ್ಮಾನ ತೆಗೆದುಕೊಳ್ಳಲಾಗುವುದು. ಮೊನ್ನೆಯೂ ಕೂಡ ನಿಮ್ಮ ಜೊತೆಗೆ ಇಲಾಖೆಯವರ ಸಮ್ಮುಖದಲ್ಲಿಯೇ ನಾನು ಮಾತನಾಡಿದ್ದೇನೆ. ತಮಗೆಲ್ಲಾ ಗೊತ್ತಿದೆ. ನೀವು ಆ ಕ್ಷೇತ್ರಗಳಿಂದ ಬಂದಿರುವುದರಿಂದ ನಿಮ್ಮ ಸಲಹೆಗಳನ್ನು ತಿಳಿದುಕೊಂಡು ಇನ್ನು ಒಂದು ತಿಂಗಳೊಳಗೆ final ಮಾಡಲಾಗುವುದು ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಶಶಿಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೆ, ಖಾಲಿ ಹುದ್ದೆಗಳನ್ನು ತುಂಬಿಕೊಳ್ಳಬೇಕು. ರಾಜ್ಯದಲ್ಲಿ 2 ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿಯಿವೆ. ಬಡ್ತಿ ಇರಲಿ ಅಥವಾ ಖಾಲಿ ಹುದ್ದೆಗಳನ್ನು ತುಂಬುವುದೇ ಇರಲಿ ಸರ್ಕಾರ ಪದೇ ಪದೇ ಹೇಳಿಕೊಳ್ಳುತ್ತಾ ಬಂದಿದೆ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗದ ವರದಿ ಬರುವವರೆಗೆ ಅಂದರೆ ಒಳ ಮೀಸಲಾತಿ ಜಾರಿಗೆ ತರುವವರೆಗೆ ಯಾವ ಬಡ್ತಿಯನ್ನೂ ಕೊಡಕೂಡದು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಒಂದು ಆದೇಶ ಮಾಡಿದ್ದಾರೆ. ವರದಿ ಯಾವಾಗ ಕೊಡುತ್ತಾರೆ ಎಂಬುದು, it is a million-dollar question. ಈ ಒಳ ಮೀಸಲಾತಿ ತರುವುದನ್ನು ನಾವು ಸ್ವಾಗತ ಮಾಡುತ್ತೇವೆ, ಎಲ್ಲರೂ ಸ್ವಾಗತ ಮಾಡುತ್ತಾರೆ. ಅದರೊಳಗೆ ಎರಡು ಮಾತಿಲ್ಲ. 20 ವರ್ಷದಿಂದ ಸದನದಲ್ಲಿ ಮತ್ತು ಎಲ್ಲಾ ಕಡೆಗಳಲ್ಲಿ ನಾವು ಪ್ರಶ್ನೆಯನ್ನು ಮಾಡುತ್ತಿದ್ದೇವೆ. ಒಂದು ತಿಂಗಳಲ್ಲ, ಎರಡು ತಿಂಗಳಲ್ಲಿ ಮಾಡಿ ಎಂದು 'Terms of Reference' ಹಾಕಿ ಕೊಟ್ಟಿದ್ದಾರೆ. ಈಗ ಅದು ಕೊಟ್ಟು ನಾಲ್ಕು ತಿಂಗಳಾಯಿತು. ಇನ್ನೂ ಏನೂ ಬಂದಿಲ್ಲ? ಏಕೆಂದರೆ ನನಗೆ ತಿಳಿದಿರುವಂತೆ ಅಂಕಿ-ಸಂಖ್ಯೆ ಏನೂ ಇಲ್ಲ. 101 ಒಳ ಜಾತಿಗಳ ಅಂಕಿ-ಸಂಖ್ಯೆಗಳು ಎಲ್ಲಿವೆ? ಯಾರು ಅದರ ಬಗ್ಗೆ ಸರ್ವೆ ಮಾಡಿ ಅಂಕಿ-ಸಂಖ್ಯೆಗಳನ್ನು ಪಟ್ಟಿ ಮಾಡಿದ್ದೇವೆ ಎನ್ನುವ ಒಂದು ಮಾತನ್ನು ಸ್ಪಷ್ಟವಾಗಿ ಹೇಳಲಿ, ನೋಡೋಣ. ಇಲ್ಲವೇ ಇಲ್ಲ.

**ಉಪ ಸಭಾಪತಿಯವರು:-** ಒಂದು ತಿಂಗಳೊಳಗಾಗಿ ಅದಕ್ಕೆ ಸಂಬಂಧಪಟ್ಟ ಹಾಗೆ ಎಲ್ಲವನ್ನೂ clear ಮಾಡಿಸುತ್ತೇನೆ ಎಂದು ಹೇಳಿದ್ದಾರೆ.

**ಶ್ರೀ ಶಶಿಲ್ ಜಿ. ನಮೋಶಿ:–** ಮಾನ್ಯ ಸಭಾಪತಿಯವರೆ, seniority list ಮಾಡುತ್ತಾರೆ. ಆದರೆ ಅದರ ಮುಂದೆ ಹೋಗಿ ನಾವು promotion ಕೊಡಬೇಕೆಂದರೂ, it is as good as appointment of lecturers at P.U. colleges.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಅದು ಒಂದು logic ಇದೆ. ಒಂದು ತಿಂಗಳಲ್ಲಿ ಸಚಿವರು ಮಾಡುತ್ತೇವೆಂದು ಹೇಳಿದ್ದಾರೆ. ಮಾಡುತ್ತಾರೆಂದು ಇಟ್ಟುಕೊಳ್ಳೋಣ. SC (Scheduled Castes) categorization ಏನು ಆಗಿತ್ತು ಅದನ್ನು ಮಾಡಬೇಕು ಎಂದು ಹೇಳಿ ಈಗಾಗಲೇ ಆಯೋಗ ನೇಮಕ ಆಗಿದೆ. ವರದಿ ಬರುವವರೆಗೆ ಮಾಡಬಾರದು ಎಂದು ಕೂಡ ಆದೇಶವಿದೆ.

**ಶ್ರೀ ಶಶಿಲ್ ಜಿ. ನಮೋಶಿ:–** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆ ಏನೆಂದರೆ, reservation ಅಡಿಯಲ್ಲಿ ಕೊಡುವುದರಲ್ಲಿ ಒಳ ಮೀಸಲಾತಿಯನ್ನು ಜಾರಿಗೆ ಕೊಡಬೇಕಾದರೆ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗ ವರದಿ ಕೊಡಬೇಕು. ಒಳಮೀಸಲಾತಿಯಲ್ಲಿ ಎಷ್ಟೆಷ್ಟು percentage reservation ಕೊಡಬೇಕೆಂದು ತೀರ್ಮಾನ ಆದ ಮೇಲೆ ಇದನ್ನು ಮಾಡುತ್ತಾರೆಂದರೆ ಯಾವಾಗ promotion ಆಗುತ್ತದೆ? ಬಹಳ ಕಷ್ಟದಾಯಕವಾದ ವಿಷಯ. ಮಾನ್ಯ ಸಚಿವರಿಗೆ ನನ್ನದೊಂದು ವಿನಂತಿ. ವಿಶೇಷ ಪ್ರಕರಣವೆಂದು ಪರಿಗಣಿಸಿ, ಅದನ್ನು ಬದಿಗಿಟ್ಟು ಇದನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಿಂದ ಅನುಮತಿ ಪಡೆಯಿರಿ. ಇದು ಕೇವಲ ಬಡ್ತಿಯ ಸಲುವಾಗಿ ಅಷ್ಟೇ ಅಲ್ಲ. ಒಳ ಮೀಸಲಾತಿ ಜಾರಿಗೆ ತರುವವರೆಗೆ 'no appointments' ಎನ್ನುವುದು ಬಹಳ ಗಂಭೀರವಾದ ವಿಷಯ. ಸರ್ಕಾರ ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ನಾನು ಮತ್ತೊಮ್ಮೆ ಹೇಳುತ್ತೇನೆ. We welcome internal reservations. ಯಾರೂ ಇದನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳಬೇಡಿ. ಅಲ್ಲಿಯವರೆಗೆ appointment ಇಲ್ಲ ಎಂದರೆ ನನಗೆ ಅನುಮಾನ ಬರುತ್ತದೆ. ಈ ಸರ್ಕಾರ ಯಾವುದೂ appointment ಮಾಡಲಿಕ್ಕಿಲ್ಲ ಎನ್ನುವ ಭಯ ನಮ್ಮಲ್ಲಿ ಮೂಡಿದೆ. ಇದನ್ನು ಸ್ಪಷ್ಟ ಪಡಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೆ, ಎಲ್ಲಾ appointment ಕೂಡ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರ ವರದಿಗನುಗುಣವಾಗಿರುವುದರಿಂದ ಅದನ್ನು ಹೊರತುಪಡಿಸಿ ಬಡ್ತಿಯನ್ನು ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಚೆಕ್ ಮಾಡಬೇಕು. ಮಾಡತಕ್ಕಂಥ ಅವಶ್ಯಕತೆ ಇದ್ದರೆ ಮಾಡುತ್ತೇನೆ. ಇದಕ್ಕೆ ನಿಯಮ ನೋಡಿಕೊಂಡು ನಾನು ಮಾಡಬೇಕಾಗುತ್ತದೆ.

**ಶ್ರೀ ಶಶಿಲ್ ಜಿ. ನಮೋಶಿ:–** ಮಾನ್ಯ ಸಚಿವರೆ, ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ಮಾಡಿ. ಏಕೆಂದರೆ ಪಿ.ಯು.ಕಾಲೇಜುಗಳಲ್ಲಿ ಲೆಕ್ಚರರ್ಸ್ ಇಲ್ಲ. ಅಲ್ಲಿ ಕನಿಷ್ಠ promotion ಆದರೂ ಮಾಡಿ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೆ, ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಮಾಡಿ. ಅದಕ್ಕೆ salvation ಅನ್ನು ಮಾಡುವಂತಹದನ್ನು ಮಾಡಿ.

## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 401
2. ಸದಸ್ಯರ ಹೆಸರು : ಡಾ. ಉಮಾಶ್ರೀ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 10.03.2025
4. ಉತ್ತರಿಸಬೇಕಾದ ಸಚಿವರು : ವೈದ್ಯಕೀಯ ಶಿಕ್ಷಣ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ರಾಜ್ಯದಲ್ಲಿ ಮಕ್ಕಳಲ್ಲಿ ಕ್ಯಾನ್ಸರ್ ಕುರಿತಂತೆ ಪ್ರತಿ ವರ್ಷ ಎಷ್ಟು ಪ್ರಕರಣಗಳು ನೋಂದಣಿಯಾಗುತ್ತಿವೆ; ಯಾವ ಯಾವ ರೀತಿಯ ಕ್ಯಾನ್ಸರ್ ಖಾಯಿಲೆಗಳು ಮಕ್ಕಳನ್ನು ಬಾಧಿಸುತ್ತಿದೆ; | ಜನಸಂಖ್ಯಾ ಆಧಾರಿತ ಕ್ಯಾನ್ಸರ್ ನೋಂದಣಿ, ಬೆಂಗಳೂರು ಅಂದಾಜಿನ ಪ್ರಕಾರ 0-14 ವಯಸ್ಸಿನ ಮಕ್ಕಳಲ್ಲಿ ಪ್ರತೀವರ್ಷ ಸುಮಾರು 876 ಪ್ರಕರಣಗಳು ಗಂಡು ಮಕ್ಕಳಲ್ಲಿ ಹಾಗೂ 657 ಪ್ರಕರಣಗಳು ಹೆಣ್ಣು ಮಕ್ಕಳಲ್ಲಿ ಹೀಗೆ ಒಟ್ಟು 1533 ಪ್ರಕರಣಗಳು ಪ್ರತೀವರ್ಷ ರಾಜ್ಯದಲ್ಲಿ ಕಂಡು ಬರುತ್ತಿದೆ.<br><br>ಗಂಡು ಮಕ್ಕಳಲ್ಲಿ ಸಾಮಾನ್ಯವಾಗಿ ಶೇ.45 ರಕ್ತದ ಕ್ಯಾನ್ಸರ್ ಹಾಗೂ ಶೇ.14.5 ಲಿಂಫೋಮಾ ಕ್ಯಾನ್ಸರ್, ಮೆದುಳು ಹಾಗೂ ನರಗಳಿಗೆ ಸಂಬಂಧಿಸಿದ ಕ್ಯಾನ್ಸರ್ ಶೇ.12.9, ಮೂಳೆಗೆ ಸಂಬಂಧಿಸಿದ ಕ್ಯಾನ್ಸರ್ ಶೇ.5.6, ಮೂತ್ರಪಿಂಡದ ಕ್ಯಾನ್ಸರ್ ಶೇ.3.6 ಹಾಗೂ ಕಣ್ಣಿಗೆ ಸಂಬಂಧಪಟ್ಟ ಕ್ಯಾನ್ಸರ್ ಶೇ.2.6ರಷ್ಟು ಸಾಮಾನ್ಯವಾಗಿ ಕಂಡು ಬರುತ್ತಿದೆ.<br><br>ಹೆಣ್ಣು ಮಕ್ಕಳಲ್ಲೂ ಕೂಡ ಮುಖ್ಯವಾಗಿ ರಕ್ತಕ್ಕೆ ಸಂಬಂಧಪಟ್ಟ ಕ್ಯಾನ್ಸರ್ ಅತೀ ಸಾಮಾನ್ಯವಾಗಿ ಕಂಡುಬರುವುದು(ಶೇ.44.6). ಮೆದುಳು ಹಾಗೂ ನರಗಳಿಗೆ ಸಂಬಂಧಪಟ್ಟ ಕ್ಯಾನ್ಸರ್ ಶೇ.12.1ರಷ್ಟು, ದುಗ್ಧ ಗ್ರಂಥಿ ಅಥವಾ ಲಿಂಫೋಮಾ ಕ್ಯಾನ್ಸರ್ ಶೇ.9.5ರಷ್ಟು, ಮೂಳೆಗೆ ಸಂಬಂಧಸಿದ ಕ್ಯಾನ್ಸರ್ ಶೇ.5.8ರಷ್ಟು, ಹಾಗೂ ಮೃದು ಅಂಗಾಂಶ (Soft Tissue) ಸಂಬಂಧಸಿದ ಕ್ಯಾನ್ಸರ್ ಶೇ.3.4ರಷ್ಟು ಕಂಡು ಬರುತ್ತದೆ.<br><br>ಗಂಡು ಮತ್ತು ಹೆಣ್ಣು ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡುಬರುವ ವಿವಿಧ ರೀತಿಯ ರಕ್ತದ ಕ್ಯಾನ್ಸರ್ ಕಾಯಿಲೆಗಳ ವಿವರಗಳನ್ನು **ಅನುಬಂಧ-1ರಲ್ಲಿ** ಒದಗಿಸಲಾಗಿದೆ. |
| (ಆ) | ಈ ರೋಗಕ್ಕೆ ಯಾವ ರೀತಿಯ ಚಿಕಿತ್ಸೆ ಸೌಲಭ್ಯಗಳನ್ನು ನೀಡಲಾಗುತ್ತಿದೆ; ಆಧುನಿಕ ಶಸ್ತ್ರಚಿಕಿತ್ಸಾ ಸೌಲಭ್ಯವನ್ನು ಒದಗಿಸಲಾಗಿದೆಯೇ; | ಮಕ್ಕಳಲ್ಲಿ ಕಂಡುಬರುವ ಕ್ಯಾನ್ಸರ್‌ಗೆ ಮುಖ್ಯವಾಗಿ ಕೀಮೊಥೆರಪಿ ಚಿಕಿತ್ಸಾ ವಿಧಾನವನ್ನು (ಶೇ.73) ಅನುಸರಿಸಲಾಗುವುದು ಹಾಗೂ ಈ ಚಿಕಿತ್ಸೆಯೊಂದಿಗೆ ಕೆಳಕಂಡ ಕ್ಯಾನ್ಸರ್ ರೋಗದ ಯಾವುದೇ ಚಿಕಿತ್ಸೆಯ ಸಂಯೋಜನೆಯೊಂದಿಗೆ |

| | | |
|---|---|---|
| | | (ಉದಾಹರಣೆಗೆ: ರಕ್ತದಲ್ಲಿ ಕಾಣಿಸುವ ಕ್ಯಾನ್ಸರ್, ಲಿಂಫೋಮಾ ಹಾಗೂ ಇತರೆ ರೀತಿಯ ಕ್ಯಾನ್ಸರ್) ನೀಡಲಾಗುವುದು.<br><br>ಶೇ.12ರಷ್ಟು ರೋಗಿಗಳಿಗೆ ವಿಕಿರಣ ಚಿಕಿತ್ಸೆ (Radio Therapy) ಯನ್ನು ಒದಗಿಸಲಾಗುವುದು (ಉದಾಹರಣೆಗೆ: ಮೆದುಳು ಹಾಗೂ ಇನ್ನಿತರೆ ಭಾಗದ ನರಗಳಲ್ಲಿ ಕಾಣಿಸಿಕೊಳ್ಳುವ ಕ್ಯಾನ್ಸರ್).<br><br>ಶಸ್ತ್ರ ಚಿಕಿತ್ಸೆಯನ್ನು ಶೇ.7 ರಷ್ಟು ಮಕ್ಕಳಲ್ಲಿ ಕಂಡುಬರುವ ಕ್ಯಾನ್ಸರ್ ಗೆ ಇತರೆ ಮೇಲೆ ತಿಳಿಸಿರುವ ಚಿಕಿತ್ಸಾ ವಿಧಾನದೊಂದಿಗೆ ನೀಡಲಾಗುವುದು.<br><br>ಇತ್ತೀಚಿನ ದಿನಗಳಲ್ಲಿ ಆಧುನಿಕ ಚಿಕಿತ್ಸೆಗಳಾದ Targeted Therapy ಹಾಗೂ ಅಸ್ಥಿಮಜ್ಜೆ ಚಿಕಿತ್ಸೆಯನ್ನು ಕೆಲವು ಮಕ್ಕಳಿಗೆ ನೀಡಲಾಗುತ್ತಿದೆ.<br><br>ಕಿದ್ವಾಯಿ ಸಂಸ್ಥೆಯಲ್ಲಿ ಪ್ರತ್ಯೇಕ ಮಕ್ಕಳ ಕ್ಯಾನ್ಸರ್ ಚಿಕಿತ್ಸೆ ಮತ್ತು ಹಾರೈಕೆ ವಿಭಾಗವಿದ್ದು, ಪ್ರತಿ ವರ್ಷ ಸುಮಾರು 630 ಹೊಸ ರೋಗಿಗಳು ದಾಖಲಾಗುತ್ತಿದ್ದು ಈ ಮಕ್ಕಳಿಗೆ ಅಸ್ಥಿ ಮಜ್ಜೆ ಚಿಕಿತ್ಸೆಯನ್ನು ಒಳಗೊಂಡಂತೆ ಇತರೆ ಎಲ್ಲಾ ರೀತಿಯ ಆಧುನಿಕ ಚಿಕಿತ್ಸೆಯನ್ನು ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ / ರೋಗಿಗಳ ಕಲ್ಯಾಣ ನಿಧಿಯ ಹಣದಲ್ಲಿ ಅರ್ಹ ಫಲಾನುಭವಿಗಳಿಗೆ ಉಚಿತವಾಗಿ ಗುಣಮಟ್ಟದ ಚಿಕಿತ್ಸೆಯನ್ನು ನೀಡಲಾಗುತ್ತಿದೆ. |
| (ಇ) | ಅಸ್ಥಿಮಜ್ಜೆ ಕಸಿ ಆಗ್ತಿದ್ದ ಮಕ್ಕಳಿಗೆ ಬಿ.ಎಂ.ಟಿ ಮಾಡಲಾಗುತ್ತಿದೆಯೇ; ಹಾಗಿದ್ದಲ್ಲಿ ತಿಂಗಳಲ್ಲಿ ಎಷ್ಟು ಮಕ್ಕಳಿಗೆ ಬಿ.ಎಂ.ಟಿ ಮಾಡಲಾಗುತ್ತಿದೆ; | ಕಿದ್ವಾಯಿ ಸಂಸ್ಥೆಯಲ್ಲಿ ಇದುವರೆಗೂ ಒಟ್ಟು 107 ಅಸ್ಥಿಮಜ್ಜೆ ಚಿಕಿತ್ಸೆಯನ್ನು ಯಶಸ್ವಿಯಾಗಿ ಪೂರೈಸಿದ್ದು, ಇವರಲ್ಲಿ 32 ಮಕ್ಕಳಿಗೆ ಅಸ್ಥಿಮಜ್ಜೆ ಚಿಕಿತ್ಸೆಯನ್ನು ಒದಗಿಸಲಾಗಿದೆ. ಪ್ರತೀ ತಿಂಗಳು ಅಂದಾಜು 2 ಮಕ್ಕಳಿಗೆ ಅಸ್ಥಿಮಜ್ಜೆ ಚಿಕಿತ್ಸೆಯನ್ನು ನೀಡಲಾಗುತ್ತಿದೆ.<br><br>ಇಲ್ಲಿಯವರೆಗೂ ಕೈಗೊಂಡಂತಹ ಚಿಕಿತ್ಸೆಗೆ ಸರ್ಕಾರದ ಯೋಜನೆಗಳಾದಂತಹ 'ಅಪರೂಪದ ಖಾಯಿಲೆ' (Rare Disease) ಯೋಜನೆಯ ಅಡಿಯಲ್ಲಿ ಮತ್ತು 'ರೋಗಿಗಳ ಕಲ್ಯಾಣ ನಿಧಿ'ಯನ್ನು ಉಪಯೋಗಿಸಿಕೊಂಡು ಸಂಪೂರ್ಣ 'ಅಸ್ಥಿಮಜ್ಜೆ' ಚಿಕಿತ್ಸೆಯನ್ನು ಉಚಿತವಾಗಿ ನೀಡಲಾಗಿದೆ. |
| (ಈ) | ಸರ್ಕಾರವು ಸಾರ್ವಜನಿಕರಲ್ಲಿ, ಮಕ್ಕಳಲ್ಲಿ ಕಾಣಿಸಿಕೊಳ್ಳುವ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ನಡೆಸಲಾಗುತ್ತಿದೆಯೇ? | ಕಿದ್ವಾಯಿ ಸಂಸ್ಥೆಯು ಮಕ್ಕಳಲ್ಲಿ ಕಂಡುಬರುವ ಕ್ಯಾನ್ಸರ್ ಅನ್ನು ಒಳಗೊಂಡಂತೆ ಎಲ್ಲಾ ರೀತಿಯ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಲವು ದಶಕಗಳಿಂದ ನಡೆಸಿಕೊಂಡು ಬಂದಿರುತ್ತದೆ. ರಾಜ್ಯದಾದ್ಯಂತ |

| | | |
|---|---|---|
| | | ಸಾರ್ವಜನಿಕ ಸ್ಥಳಗಳಲ್ಲಿ ಬೀದಿ ನಾಟಕ, ವೀಡಿಯೋ ಪ್ರದರ್ಶನ, ಶಾಲಾ ಕಾಲೇಜುಗಳಲ್ಲಿ ಕ್ಯಾನ್ಸರ್ ಕುರಿತು ಮಕ್ಕಳು ಹಾಗೂ ಅಧ್ಯಾಪಕ ವೃಂದದವರೊಂದಿಗೆ ಸಂವಾದ ಕಾರ್ಯಕ್ರಮ, ಅಂಗನವಾಡಿ ಮತ್ತು ಆಶಾಕಾರ್ಯಕರ್ತರಲ್ಲಿ ಅರಿವು ಮೂಡಿಸುವ, ಸರ್ಕಾರ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳಲ್ಲಿ ಮತ್ತು ಸ್ತ್ರೀ ಶಕ್ತಿ ಸಂಘಗಳಲ್ಲಿ ಕ್ಯಾನ್ಸರ್ ಕುರಿತು ಮುಂಜಾಗ್ರತಾ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ.<br><br>ಕ್ಯಾನ್ಸರ್ ರೋಗಲಕ್ಷಣದ ಕುರಿತು ಶಾಲಾ ಕಾಲೇಜು ಮಕ್ಕಳಲ್ಲಿ ಹಾಗೂ ಉಪನ್ಯಾಸಕರಲ್ಲಿ ಅರಿವು ಮೂಡಿಸುವುದಕ್ಕಾಗಿ ಉಪನ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪತ್ರಿಕೆಗಳಲ್ಲಿ ಮಕ್ಕಳ ಕ್ಯಾನ್ಸರ್ ಬಗ್ಗೆ ಪ್ರಕಟಣೆ, ಮಾಧ್ಯಮಗಳಲ್ಲಿ ಸಂವಾದ ಕಾರ್ಯಕ್ರಮ ಹಾಗೂ ಪ್ರತೀ ವರ್ಷ ಫೆಬ್ರುವರಿ 15ರಂದು **'ಅಂತಾರಾಷ್ಟ್ರೀಯ ಮಕ್ಕಳ ಕ್ಯಾನ್ಸರ್ ದಿನ**'ದಂದು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಕಾಲ್ನಡಿಗೆ ಜಾಥಾ, ತಜ್ಞರೊಂದಿಗೆ ಸಾರ್ವಜನಿಕರ ಸಂವಾದ, ಮಾಧ್ಯಮಗಳೊಂದಿಗೆ ಸಂವಾದ, ವಿವಿಧ ಆಸ್ಪತ್ರೆಯ ಆರೋಗ್ಯ ಕಾರ್ಯಕರ್ತರನ್ನು ಒಟ್ಟುಗೂಡಿಸಿ ಕಾರ್ಯಾಗಾರವನ್ನು ಏರ್ಪಡಿಸಲಾಗುತ್ತದೆ.<br><br>ಪ್ರತೀ ಸೆಪ್ಟೆಂಬರ್ ಮಾಸವನ್ನು ಮಕ್ಕಳ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸುವ ಮಾಸವನ್ನಾಗಿ ಆಚರಿಸಲಾಗುತ್ತಿದೆ. ಈ ಮಾಸದಲ್ಲಿ ಮಕ್ಕಳ ಕ್ಯಾನ್ಸರ್ ಕುರಿತಾಗಿ ಅರಿವಿನ ಕಾರ್ಯಕ್ರಮಗಳನ್ನು ಹಾಗೂ ವಿವಿಧ ರೀತಿಯ ಸ್ಪರ್ಧೆಗಳನ್ನು ಅಂದರೆ ಪ್ರಬಂಧ ಸ್ಪರ್ಧೆ, ಏಕಪಾತ್ರಾಭಿನಯ, ಕಥೆಗಳ ಮುಖಾಂತರ ಮಕ್ಕಳಲ್ಲಿ ಹಾಗೂ ಪೋಷಕರಲ್ಲಿ ಅರಿವು ಮೂಡಿಸುವ ಮೂಲಕ ನಿರಂತರ ಪ್ರಯತ್ನವನ್ನು ಮಾಡಲಾಗುತ್ತಿದೆ. |

ಅನುಬಂಧ-01

ಅನುಬಂಧ-1

**Table1.1: Estimated Top Fifteen Leading Sites of Cancer in Boys (0-14) for the year 2024: Karnataka**

| Site | Number | Percentage |
|---|---|---|
| Lymphoid Leuk. | 225 | 25.7 |
| Brain, Nervous System | 113 | 12.9 |
| Myeloid Leukaemia | 98 | 11.2 |
| NHL | 74 | 8.4 |
| Leukaemia Unspecified | 55 | 6.2 |
| Hodgkins Disease | 53 | 6.0 |
| Bone | 49 | 5.6 |
| Kidney etc. | 26 | 3.0 |
| Eye | 23 | 2.6 |
| Multiple Myelema | 14 | 1.6 |
| Liver | 12 | 1.4 |
| Stomach | 11 | 1.2 |
| Other Skin | 9 | 1.0 |
| Conn. & Soft Tissue | 9 | 1.0 |
| Adrenal Gland | 7 | 0.8 |
| All Other Sites | 98 | 11.2 |
| **Total** | **876** | **100.0** |

**Table 1.2: Estimated Top Fifteen Leading Sites of Cancer in Girls (0-14) for the year 2024: Karnataka**

| Site | Number | Percentage |
|---|---|---|
| Lymphoid Leuk. | 194 | 29.6 |
| Brain, Nervous System | 80 | 12.1 |
| Myeloid Leukaemia | 62 | 9.5 |
| Bone | 38 | 5.8 |
| NHL | 36 | 5.5 |
| Leukaemia Uns | 28 | 4.2 |
| Hodgkins Disease | 26 | 4.0 |
| Conn. & Soft Tissue | 23 | 3.4 |
| Ovary etc. | 23 | 3.4 |
| Kidney etc. | 23 | 3.4 |
| Liver | 14 | 2.1 |
| Eye | 12 | 1.8 |
| Adrenal Gland | 10 | 1.6 |
| Multiple Myeloma | 5 | 0.8 |
| CMD,O&U LHM | 3 | 0.5 |
| Others | 80 | 12.1 |
| **Total** | **657** | **100.0** |

**ಡಾ: ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಮಕ್ಕಳಲ್ಲಿ ಕ್ಯಾನ್ಸರ್ ಕುರಿತಂತೆ ಪ್ರತಿ ವರ್ಷ ಎಷ್ಟು ಪ್ರಕರಣಗಳು ನೋಂದಣಿಯಾಗುತ್ತಿವೆ ಎಂದರೆ ಅವರು ಅನುಬಂಧ-01 ರಲ್ಲಿ 'Estimated Top Fifteen Leading Sites of Cancer in Boys and Girls (0-14) for the

year 2024: Karnataka' ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈ ರೀತಿಯ 15 ಕ್ಯಾನ್ಸರ್‌ಗಳು 0-14 ರ ಒಳಗಿನ ಮಕ್ಕಳಲ್ಲಿ ಬರುತ್ತವೆ ಎಂದು ಹೇಳಿದ್ದಾರೆ. ಎಷ್ಟು ಪ್ರಕರಣಗಳು ಎಂದರೆ ಪ್ರತಿ ವರ್ಷ ಗಂಡು ಮಕ್ಕಳಲ್ಲಿ 876 ಪ್ರಕರಣಗಳು ಮತ್ತು 657 ಪ್ರಕರಣಗಳು ಹೆಣ್ಣು ಮಕ್ಕಳಲ್ಲಿ ಒಟ್ಟು 1533 ಪ್ರಕರಣಗಳು ಕಂಡು ಬರುತ್ತವೆ. ಇದು ನಮಗೆ ತುಂಬಾ ಆಘಾತಕಾರಿಯಾದ ವಿಷಯ. ಏಕೆಂದರೆ ರಕ್ತದ ಕ್ಯಾನ್ಸರ್ 45% ಗಂಡು ಮಕ್ಕಳಲ್ಲಿ ಬರುತ್ತದೆ ಎನ್ನುವಂಥದ್ದು. ಹೆಣ್ಣು ಮಕ್ಕಳಲ್ಲಿ 44.6%. ಈ ರೀತಿ ಮೆದುಳಿಗೆ, ನರಮಂಡಲಕ್ಕೆ ಮತ್ತು ಮೂಳೆಗಳಿಗೆ ಸಂಬಂಧಪಟ್ಟದ್ದು ಹೀಗೆ. ಕಿದ್ವಾಯಿ ಇನ್ಸ್‌ಟಿಟ್ಯೂಟ್‌ನಲ್ಲಿ ತುಂಬಾ ಒಳ್ಳೆಯ treatment ಅನ್ನು ಕೊಡುತ್ತಿದ್ದಾರೆ. ಯಾವ ರೀತಿ ಸೌಲಭ್ಯ ಇದೆ, ಯಾವ ರೀತಿ bone marrow cancer ಏನು ಗೆ treatment ಕೊಡಲಾಗಿದೆ ಎಂದು ಹೇಳಿದಾಗ ಕಿಮೋಥೆರಪಿಯನ್ನೊಳಗೊಂಡಂತೆ ಆಧುನಿಕ ಚಿಕಿತ್ಸೆಗಳನ್ನು ಕೊಡುತ್ತಿದ್ದಾರೆ. ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. (ಮುಂದು)

(162) 10-03-2025/1.00/ಎಂವಿ-ಎಂಡಿ (ಉಪ ಸಭಾಪತಿಯವರ ಉಪಸ್ಥಿತಿ)

**ಡಾ: ಉಮಾಶ್ರೀ (ಮುಂದು):-**

ನನಗೆ ಇಲ್ಲಿ ಬೇಕಾಗಿರತಕ್ಕಂಥದ್ದು ಏನೆಂದರೆ, ಉತ್ತರ ಕರ್ನಾಟಕದ ಮತ್ತು ಕಲ್ಯಾಣ ಕರ್ನಾಟಕ ಭಾಗದ ಜನರು ಏನಿದ್ದಾರೆ, ಈಗ majority ಮಕ್ಕಳಲ್ಲಿ ಬರತಕ್ಕಂತಹ ಈ ಕಾಯಿಲೆಗಳಿಗೆ ಚಿಕಿತ್ಸೆಯನ್ನು ತೆಗೆದುಕೊಳ್ಳುವುದಕ್ಕೆ ಅವರೆಲ್ಲರೂ Cancer Institute ಗೆ ಬರುತ್ತಿದ್ದಾರೆ. ಈಗ ನನ್ನ ಪ್ರಶ್ನೆ ಏನೆಂದರೆ, ಈ ಚಿಕಿತ್ಸಾ ಸೌಲಭ್ಯಗಳನ್ನು ಕಲ್ಯಾಣ ಕರ್ನಾಟಕ ಭಾಗ ಮತ್ತು ಉತ್ತರ ಕರ್ನಾಟಕ ಭಾಗದಲ್ಲಿಯೇ ಕೊಡುವುದಾದರೆ, ಇಲ್ಲಿ ಒತ್ತಡ ಕಡಿಮೆಯಾಗುತ್ತದೆ. ಮತ್ತೆ ಅಲ್ಲಿ ಚಿಕಿತ್ಸೆಯೂ ಸಿಕ್ಕಿದ ಹಾಗೆ ಆಗುತ್ತದೆ. ಅದನ್ನು ಏಕೆ ಮಾಡಬಾರದು ಎನ್ನುವುದನ್ನು ಒಂದು ಸಲಹೆ ರೂಪದಲ್ಲಿ ಕೊಡುತ್ತಿದ್ದೇನೆ. ಇದು ತುಂಬಾ ಅಗತ್ಯ ಇರತಕ್ಕಂಥದ್ದು. ಎರಡನೆಯದು ಏನೆಂದರೆ, ನಾನು ಇಲ್ಲಿ ಗಮನಿಸಿದ ಹಾಗೆ, ಆ ಮಕ್ಕಳ ಚಿಕಿತ್ಸೆಗಳಿಗೆ ಹಣವನ್ನು ಎಲ್ಲಿಂದ ಉಪಯೋಗ ಮಾಡುತ್ತೀರಿ ಎಂದರೆ, ಅಪರೂಪದ ಕಾಯಿಲೆ ಮತ್ತು ರೋಗಿಗಳ ಕಲ್ಯಾಣ ನಿಧಿಯಲ್ಲಿ ಭರಿಸುತ್ತೇವೆಂದು ತಿಳಿಸಿದ್ದಾರೆ. ರೋಗಿಗಳ ಕಲ್ಯಾಣ ನಿಧಿ ಇದು ಸಾಮಾನ್ಯವಾದುದು. ಸಾಮಾನ್ಯವಾಗಿಯೇ ಹೊರಗಿನ donors ಅನ್ನು ತೆಗೆದುಕೊಂಡಿರುತ್ತಾರೆ. ಅದರಿಂದ ಸ್ವಲ್ಪಮಟ್ಟಿಗೆ ಖರ್ಚು ಮಾಡುತ್ತಾರೆ. ಆದರೆ, ನಾನು ಕೇಳುವಂಥದ್ದು, ವಿಶೇಷವಾಗಿ ಇಂತಹ ಮಕ್ಕಳಿಗಾಗಿಯೇ ಒಂದು ಕ್ಯಾನ್ಸರ್ ಕಲ್ಯಾಣ ನಿಧಿ ಎಂದು ಮಾಡುವುದಕ್ಕೆ ಸಾಧ್ಯವಿದೆ. ಆ ರೀತಿ ಮಾಡಲಿ ಅಥವಾ exclusive ಆಗಿ ಅಂದರೆ, ಈ ರೀತಿಯ ಮಕ್ಕಳಿಗೆ free ಆಗಿ treatment ಕೊಡಬೇಕು ಎಂದು. ಕೇರಳ ರಾಜ್ಯ

ಸರ್ಕಾರದವರು ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಆ ರೀತಿಯಾದರೂ ಸಹ ಮಾಡಲಿ. ಮಾನ್ಯ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ರವರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಆಯವ್ಯಯದಲ್ಲಿ ಸ್ವಲ್ಪ ಹಣವನ್ನು ಇಂದಿರಗಾಂಧಿ ಮಕ್ಕಳ ಆಸ್ಪತ್ರೆಗೆ ಕೊಟ್ಟಿದ್ದಾರೆ. ಹಾಗೆಯೇ ನೆಫ್ರೋಲಾಜಿಗೂ ಸಹ ಕೊಟ್ಟಿದ್ದಾರೆ. ಆದರೆ, ಆಯವ್ಯಯದಲ್ಲಿ ವೈದ್ಯಕೀಯ ಶಿಕ್ಷಣಕ್ಕಾಗಿ ಕಾಣುತ್ತಿಲ್ಲ. ಮಕ್ಕಳಿಗೆ ಹಣವನ್ನು ನಿದಗಿಪಡಿಸಿದಂತೆ Somewhere ಈ ಮಕ್ಕಳಿಗೆ ಎಂದು ಹಣವನ್ನು ತೆಗೆದಿಟ್ಟು, ಅವರನ್ನು ಕಾಪಾಡುವಂಥದ್ದನ್ನು ಮಾಡಲಿ ಎಂದು ವಿನಂತಿ ಮಾಡುತ್ತೇನೆ ಮತ್ತೆ ಅರಿವು ಮೂಡಿಸುತ್ತಿದ್ದೇನೆ. ಈಗ ಬೆಂಗಳೂರು ಭಾಗದಲ್ಲಿ ಒಳ್ಳೆಯ ಅರಿವನ್ನು ಮೂಡಿಸುತ್ತಿದ್ದಾರೆ. What about Taluk Centres? Taluk Centres ಗಳಲ್ಲಿ ಕಡ್ಡಾಯವಾಗಿ ಮಕ್ಕಳ ಕ್ಯಾನ್ಸರ್ ಮತ್ತು ಇತರೆ ಕ್ಯಾನ್ಸರ್‌ಗಳಿಗೆ ವಿಶೇಷವಾಗಿ ಒತ್ತು ನೀಡಲಿ. ಅದನ್ನು ಕಡ್ಡಾಯ ಮಾಡಲಿ. ಈ ಕಾರ್ಯಕ್ರಮದ ಬಗ್ಗೆ ಕಡ್ಡಾಯವಾಗಿ ಪ್ರತಿವರ್ಷವೂ ಕೂಡ ಅರಿವು ಮೂಡಿಸುವಂಥದ್ದು ಆಗಬೇಕು. ಅದೇ ರೀತಿ ಬೇರೆ ಬೇರೆ ಕಾರ್ಯಕ್ರಮಗಳಂತೆಯೇ ಸಂವಿಧಾನ ದಿನಾಚರಣೆಯನ್ನು ಸಹ ಕಡ್ಡಾಯ ಮಾಡಿ, ಇದರ ಬಗ್ಗೆ ಅರಿವು ಮೂಡಿಸುವಂತಹ ಕಾರ್ಯಕ್ರಮವನ್ನು ಸಹ ಮಾಡಲಿ ಎಂದು ದಯಮಾಡಿ ವಿನಂತಿ ಮಾಡುತ್ತೇನೆ. ಅದು ಪ್ರತಿ ತಾಲ್ಲೂಕಿನಲ್ಲಿ ಆಗಬೇಕು. ಅದಕ್ಕೆ ನಿಧಿಯನ್ನು ಕೊಡಬೇಕು. ಅದರ ಜೊತೆಗೆ ಉತ್ತರ ಕರ್ನಾಟಕದ ಆ ಎರಡೂ ಭಾಗಗಳಲ್ಲಿ ಈ ಸೌಲಭ್ಯವನ್ನು ಕೊಡಬೇಕು.

**ಡಾ: ಶರಣಪ್ರಕಾಶ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಪ್ರಮುಖವಾದಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ನಾನು ಮಾನ್ಯ ಸದಸ್ಯರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಈ ರೀತಿಯ ವಿಷಯಗಳು ನಮ್ಮ ರಾಜ್ಯದಲ್ಲಿ ಮಕ್ಕಳ ಬಗ್ಗೆ ಬಹಳ ವಿಶೇಷವಾಗಿ ಕಾಳಜಿ ವಹಿಸುವಂಥದ್ದು ನಮ್ಮ ಸರ್ಕಾರದ ಆದ್ಯತೆಯಾಗಿದೆ. ಮತ್ತೆ ಮಕ್ಕಳಲ್ಲಿ ಕ್ಯಾನ್ಸರ್ ರೋಗ ಬಂದಾಗ ಆ ಕುಟುಂಬಗಳಿಗೆ ತುಂಬಾ ಆಘಾತಕಾರಿಯಾಗುವಂತಹ ಪರಿಸ್ಥಿತಿ ಇರುತ್ತದೆ. ಅಂತಹ ಒಂದು ಪರಿಸ್ಥಿತಿಯನ್ನು ನಿಭಾಯಿಸಲು ನಮ್ಮ ಸರ್ಕಾರ ಸಂಪೂರ್ಣವಾದ ಜವಾಬ್ದಾರಿಯನ್ನು ತೆಗೆದುಕೊಂಡು, ನಾವು ಕಿದ್ವಾಯಿ ಕ್ಯಾನ್ಸರ್ ಸೆಂಟರ್‌ನಲ್ಲಿ ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಇಲ್ಲಿಗೆ ಪ್ರತಿವರ್ಷ ಎಷ್ಟು ರೋಗಿಗಳು ಬರುತ್ತಾರೆಂದು ಕೇಳಿದ್ದಾರೆ. ಅದಕ್ಕೆ ಸುಮಾರು 1533 ರೋಗಿಗಳು ಬರುತ್ತಾರೆ ಎಂದು ಅವುಗಳ ಅಂಕಿಸಂಖ್ಯೆಗಳನ್ನು ಸಹ ನೀಡಿದ್ದೇವೆ. ನಾವು

ಅದರಲ್ಲಿ ಎಲ್ಲಾ ರೀತಿಯ ಚಿಕಿತ್ಸೆಗಳನ್ನು ನೀಡುತ್ತಿದ್ದೇವೆ. ಮಾನ್ಯ ಸದಸ್ಯರು ವಿಶೇಷವಾಗಿ Bone Marrow Transplant ಬಗ್ಗೆ ಹೇಳುತ್ತಿದ್ದಾರೆ.

**ಡಾ:ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, I am happy, ಅವರು ಎಲ್ಲವನ್ನು ಸಹ ಕೊಡುತ್ತಿದ್ದಾರೆ. My question is, ಅವರು ಆ ಕಡೆಗೆ ಕೊಡಲಿ ಎಂಬುದಾಗಿದೆ. ಆದರೆ, ಮಾನ್ಯ ಸಚಿವರು ಅದನ್ನೇ repeat ಮಾಡುತ್ತಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೆ, ಮಾನ್ಯ ಸಚಿವರು ಉತ್ತರ ಹೇಳಿದ ನಂತರ, ತಾವು ಹೇಳಿ.

**ಡಾ: ಶರಣಪ್ರಕಾಶ ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ Bone Marrow Transplant ಅನ್ನು ಕೂಡ Kidwai Memorial Institute of Oncology ಯಲ್ಲಿ ಪ್ರಾರಂಭ ಮಾಡಿದ್ದೇವೆ. ನಾವು ಅಲ್ಲಿ ಬಡವರಿಗೆ ಉಚಿತವಾಗಿ Bone Marrow Transplant ಅನ್ನು ಕೂಡ ಮಾಡುತ್ತಿದ್ದೇವೆ. ಅದು ಮುಂಚೆ Government Sector ನಲ್ಲಿ ಇರಲಿಲ್ಲ. ಈಗ ಅದನ್ನೂ ಕೂಡ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಸ್ಪಷ್ಟವಾಗಿ ಬೇರೆ ಬೇರೆ ಭಾಗದಲ್ಲಿಯೂ ಮಾಡಬೇಕೆಂದು ಹೇಳಿದ್ದಾರೆ. ಅದನ್ನೂ ಸಹ ಖಂಡಿತವಾಗಿ ಪರಿಶೀಲನೆ ಮಾಡುತ್ತಿದ್ದೇವೆ. ನಾವು ನಾಲ್ಕು ಕಡೆಗಳಲ್ಲಿ ಅಂದರೆ, ಮೈಸೂರು, ಕಲಬುರಗಿ ಮತ್ತು ಹುಬ್ಬಳ್ಳಿಯಲ್ಲಿ ಮಾಡಬೇಕು ಎನ್ನುವಂತಹ ಉದ್ದೇಶವಿದೆ. ಅದಕ್ಕೆ ಮುಂದಿನ ತಯಾರಿಗಳನ್ನು ಸಹ ಮಾಡಿಕೊಳ್ಳುತ್ತೇವೆ. ಅದರ ಜೊತೆಗೆ ನಮ್ಮ ಸರ್ಕಾರ ಇದರ ಬಗ್ಗೆ ವಿಶೇಷ ಕಾಳಜಿಯನ್ನು ವಹಿಸಿ ಮಾರ್ಚ್ 5ನೇ ತಾರೀಖಿನಂದು ನಾವು ಒಂದು ಪ್ರಕಟಣೆಯನ್ನು ಹೊರಡಿಸಿದ್ದೇವೆ. ಅದು ಏನೆಂದರೆ, AB-ARK (Ayushman Bharat Arogya Karnataka Scheme) ಯಲ್ಲಿ ನಾವು Bone Marrow Transplant ಗೆ ಅದು ಆ ಪ್ರಾವಿಷನ್ ಇರಲಿಲ್ಲ. ಈಗ ನಾವು Prime Minister's National Relief Fund ನಿಂದ ಬೇರೆ ಬೇರೆ ಹಣ ತೆಗೆದುಕೊಂಡು ಮತ್ತು ಎಸ್.ಸಿ.ಪಿ/ಟಿ.ಎಸ್.ಪಿ.ಯಲ್ಲಿ ಅದಕ್ಕೆ ಮಾತ್ರ ಹಣ ಬಳಸಿಕೊಳ್ಳುತ್ತಿದ್ದೇವೆ. ಈಗ ಸರ್ಕಾರದಿಂದ ಹೊಸ ಸುತ್ತೋಲೆಯನ್ನು ಹೊರಡಿಸಿದ್ದೇವೆ. ಅದು ಏನೆಂದರೆ, ನಾನು ಮಾನ್ಯ ಆರೋಗ್ಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರು Heart and Lung Transplant and Bone Marrow Transplant ಅನ್ನು AB-ARK ಅಳವಡಿಸಿಕೊಂಡಿದ್ದಾರೆ. ಅದಕ್ಕೆ 15, 18 ಮತ್ತು 21 ಲಕ್ಷ ರೂಪಾಯಿಗಳನ್ನು ನಾವು ಎಲ್ಲಾ Bone Marrow Transplant ಗೆ ಕೊಡಬಹುದು ಎನ್ನುವಂಥದ್ದು. ಈಗ ಅದಕ್ಕೆ ಸಿಕ್ಕಿದೆ. ಹಾಗಾಗಿ, ಅದರಿಂದ ಬಹಳ ಅನುಕೂಲವಾಗುತ್ತದೆ. ಏಕೆಂದರೆ, ಇದು ಯಾರ ಮೇಲೂ ಸಹ ಹೊರೆಯಾಗುವುದಿಲ್ಲ. ಏಕೆಂದರೆ, ಸಾಮಾನ್ಯ

ವರ್ಗದ ಅಥವಾ ಮಧ್ಯಮ ವರ್ಗದ ಯಾವುದೇ ಕುಟುಂಬವೂ ಕೂಡ ಒಂದು ಮಗುವನ್ನು ಉಳಿಸಿಕೊಳ್ಳುವಂತಹ ಆದ್ಯತೆ ಇರುತ್ತದೆ. ಹಾಗೆಯೇ ಅವರು ಅದನ್ನು afford ಮಾಡುವುದಕ್ಕೆ ಆಗುವುದಿಲ್ಲ. ಹಾಗಾಗಿ, ಸರ್ಕಾರ ಇದನ್ನು ಮನಗಂಡು ನಾವು ಈಗಾಗಲೇ ಇದನ್ನು AB-ARK ಯಲ್ಲಿಯೇ ಭರಿಸತಕ್ಕಂಥದ್ದಕ್ಕೆ ಎಂದು ಮಾಡಿದ್ದೇವೆ. ಮತ್ತೆ ಸರ್ಕಾರದಲ್ಲೂ ಸಹ ಮಾಡಿದ್ದೇವೆ. ನಾವು ಇಲ್ಲಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಅಷ್ಟೆ ಅಲ್ಲದೆ Indira Gandhi Institute of Child Health ನಲ್ಲಿಯೂ ಕೂಡ ಮಾಡಬೇಕು ಎಂಬ ಉದ್ದೇಶವಿದೆ. ಈಗಾಗಲೇ ಕಲಬುರಗಿಯಲ್ಲಿ ಕಿದ್ವಾಯಿ ಆಸ್ಪತ್ರೆಯ ಶಾಖೆ ಇದೆ. ಆದರೆ, ಮುಂದಿನ ದಿನಗಳಲ್ಲಿ ಅದನ್ನು ಇನ್ನೂ 150 ಬೆಡ್‌ಗಳ ಸಾಮರ್ಥ್ಯವುಳ್ಳ ಆಸ್ಪತ್ರೆಯನ್ನಾಗಿ ಮಾಡುತ್ತಿದ್ದೇವೆ. ಆ ಸಂದರ್ಭದಲ್ಲಿ ಅಳವಡಿಸಿಕೊಳ್ಳಬೇಕಾಗಿರುವಂತಹ ಉದ್ದೇಶವಿದೆ. ಅದೇ ರೀತಿ ಮೈಸೂರು ಮತ್ತು ಹುಬ್ಬಳ್ಳಿಯಲ್ಲೂ ಕೂಡ ಈ ಒಂದು ವ್ಯವಸ್ಥೆ ವಿಶೇಷವಾಗಿ ಮಕ್ಕಳ ಚಿಕಿತ್ಸೆಗಾಗಿ ಅಲ್ಲಿ Bone Marrow Transplant ಅನ್ನು establish ಮಾಡುವಂಥದ್ದಕ್ಕೆ ಸರ್ಕಾರದ ಪರಿಶೀಲನೆಯಲ್ಲಿದೆ. ನಾವು ಅದನ್ನು ಖಂಡಿತವಾಗಿ ಸಕಾರಾತ್ಮಕವಾಗಿ ಮಾಡುತ್ತೇವೆ.

**ಡಾ:ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಕೇವಲ Bone Marrow Transplant ಒಂದೇ ಅಲ್ಲ. ಮಕ್ಕಳಿಗೆ ಬರತಕ್ಕಂತಹ ಪ್ರತಿಯೊಂದು ಕ್ಯಾನ್ಸರ್‌ಗೂ ಸಂಬಂಧಪಟ್ಟ ಹಾಗೆ ಚಿಕಿತ್ಸೆಗಳನ್ನು ಕೊಡುವುದಕ್ಕೆ ಪ್ರತ್ಯೇಕವಾಗಿ ಒಂದು ನಿಧಿಯನ್ನು ಇಟ್ಟರೆ, ತುಂಬಾ ಒಳ್ಳೆಯದಾಗುತ್ತದೆ. ಈಗ ಅಲ್ಲಿ ಏನೋ ಸಹಾಯ ಮಾಡಿಸುತ್ತೇವೆ. ಇಲ್ಲಿ ಏನೋ ಸಹಾಯ ಮಾಡಿಸುತ್ತೇವೆ ಎಂಬುದು ಬೇಡ. ಅದನ್ನು ಸರ್ಕಾರವೇ ಮಾಡಲಿ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೆ, ಅವರ ಸಲಹೆ ತೆಗೆದುಕೊಳ್ಳಿ.

**ಡಾ: ಶರಣಪ್ರಕಾಶ ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ಈಗಾಗಲೇ provision ಇದೆ. ಉಚಿತ ಚಿಕಿತ್ಸೆ ಕೊಡುವುದಕ್ಕೆ ಸರ್ಕಾರ AB-ARK ಬಳಸಿಕೊಳ್ಳುವಂತಹ ಪ್ರಾವಿಷನ್ ಇದೆ. ಹಾಗಾಗಿ, ಅದನ್ನು ಉಪಯೋಗ ಮಾಡಿಕೊಂಡು, ರಾಜ್ಯದ ನಾಲ್ಕು ಡಿವಿಷನ್‌ನ Head Quarter ಗಳಿಗೆ ಮಾಡತಕ್ಕಂಥದ್ದಕ್ಕೆ ಖಂಡಿತವಾಗಿ ನಾವು ಪ್ರಯತ್ನ ಮಾಡುತ್ತೇವೆ.

**ಡಾ:ಉಮಾಶ್ರೀ:-** ಮಾನ್ಯ ಸಭಾಪತಿಯವರೇ,.....

**ಉಪ ಸಭಾಪತಿಯವರು:-** ಮಾನ್ಯ ಸಚಿವರು ತಮ್ಮ ಸಲಹೆ ತೆಗೆದುಕೊಳ್ಳುತ್ತೇನೆಂದು ತಿಳಿಸಿದ್ದಾರೆ. ಇದು ಪ್ರಶ್ನೋತ್ತರ ವೇಳೆಯಾಗಿರುವುದರಿಂದ ಹೆಚ್ಚಿನ ಚರ್ಚೆಗೆ ಅವಕಾಶವಿಲ್ಲ.

**(ಗೊಂದಲ)**

**ಡಾ:ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಬೇರೆ ಬೇರೆ ಮಾನ್ಯ ಸದಸ್ಯರು ಅರ್ಧ ಗಂಟೆಗಳವರೆಗೆ ಮಾತನಾಡಿದ್ದಾರೆ. ಅವರು ಪ್ರತಿಯೊಂದು ತಾಲ್ಲೂಕಿನಲ್ಲಿ ಅರಿವು ಮೂಡಿಸುವಂತಹ ಕಾರ್ಯಕ್ರಮವನ್ನು ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೆ ನೋಡಿ, direct ನನಗೆ complaint ಮಾಡಬೇಕು.

**(ಗೊಂದಲ)**

**ಡಾ:ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಪ್ರತಿಯೊಂದು ತಾಲ್ಲೂಕಿನಲ್ಲೂ ಅರಿವು ಮೂಡಿಸುವಂತಹ ಕಾರ್ಯಕ್ರಮ ಮಾಡಬೇಕೆಂದು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರ ಕಡೆಯಿಂದ ಉತ್ತರ ಬರಲಿಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲಿ ಈ ಅರಿವು ಮೂಡಿಸುವಂತಹ ಕಾರ್ಯಕ್ರಮವನ್ನು ಕಡ್ಡಾಯವಾಗಿ ಮಾಡಬೇಕು.

**ಡಾ: ಶರಣಪ್ರಕಾಶ ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಪ್ರತಿವರ್ಷ 15ನೇ ಫೆಬ್ರವರಿಯಂದು International Childhood Cancer Day ಎಂದು ಆಚರಣೆ ಮಾಡುತ್ತೇವೆ. ಇದನ್ನು ವ್ಯಾಪಕವಾಗಿ ಪ್ರಚಾರ ಮಾಡುವುದಕ್ಕೆ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆ.

**ಉಪ ಸಭಾಪತಿಯವರು:-** ಡಾ: ಉಮಾಶ್ರೀಯವರೆ, ಈಗ ತಾವು ಕುಳಿತುಕೊಳ್ಳಿ.

## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 458 |
| ಸದಸ್ಯರ ಹೆಸರು | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು) |
| ಉತ್ತರಿಸಬೇಕಾದ ದಿನಾಂಕ | 10-03-2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಆಯುಷ್ ಇಲಾಖೆಯಲ್ಲಿ ಖಾಯಂ ತಜ್ಞ ವೈದ್ಯರುಗಳ ಹುದ್ದೆಗಳು ಖಾಲಿ ಇರುವುದರಿಂದ ದೀರ್ಘಕಾಲಿಕ ರೋಗಿಗಳಿಗೆ ಪರಿಣಾಮಕಾರಿ ಚಿಕಿತ್ಸೆ ಲಭಿಸದೇ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು: (ವಿವರ ನೀಡುವುದು) | ಆಯುಷ್ ಇಲಾಖೆಯಲ್ಲಿ ಖಾಯಂ ತಜ್ಞ ವೈದ್ಯರ ಹುದ್ದೆಗಳು ಇರುವುದಿಲ್ಲ.<br>• ತಜ್ಞ ವೈದ್ಯರ ಸೇವೆಯನ್ನು ಸಾರ್ವಜನಿಕರಿಗೆ ನೀಡಲು ಈಗಾಗಲೇ ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯಡಿ 166 ತಜ್ಞವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜನೆಮಾಡಿ ಸುಮಾರು 83 ತಾಲ್ಲೂಕು ಆಯುಷ್ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಪ್ರಸ್ತುತ 129 ತಜ್ಞ ವೈದ್ಯರುಗಳನ್ನು ಯೋಜನೆ ಇರುವವರೆಗೆ ತಾತ್ಕಾಲಿಕವಾಗಿ ವಿವಿಧ ಪದ್ಧತಿಗಳಲ್ಲಿ ನೇಮಿಸಿಕೊಂಡು ಆಯುಷ್ ಚಿಕಿತ್ಸಾ ಪದ್ಧತಿಗಳಾದ ಶಲ್ಯ, ಶಾಲಕ್ಯ, ಪಂಚಕರ್ಮ, ದ್ರವ್ಯಗುಣ, ರಸಶಾಸ್ತ್ರ, ಇತ್ಯಾದಿ ವಿಶೇಷ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ.<br>• ಪ್ರಸ್ತುತ ಇಲಾಖೆಯಲ್ಲಿ 180 ಖಾಯಂ ವೈದ್ಯರುಗಳು ಸ್ನಾತ್ತಕೋತ್ತರ ಪದವಿ ಪಡೆದ ವೈದ್ಯರು ಸೇರಿದಂತೆ 129 ಗುತ್ತಿಗೆ ಆಧಾರದ ಸ್ನಾತ್ತಕೋತ್ತರ ಪದವಿ ಪಡೆದ ವೈದ್ಯರು ರಾಜ್ಯಾದ್ಯಂತ ಚಿಕಿತ್ಸಾಲಯ ಮತ್ತು ಆಸ್ಪತ್ರೆಗಳಲ್ಲಿ ತಮ್ಮ ತಜ್ಞತೆಯಲ್ಲಿ ಚಿಕಿತ್ಸೆ ನೀಡುತ್ತಿದ್ದು, ಸದರಿ ಚಿಕಿತ್ಸೆಗಳ ಮೂಲಕ ದೀರ್ಘಕಾಲಿಕ ರೋಗಗಳಾದ ಸಕ್ಕರೆ ಖಾಯಿಲೆ, ಪಾರ್ಶವಾಯು, ಹೈಪರ್ ಟೆನ್ಶನ್ ಮತ್ತು ಅರ್ಥೈಟಿಸ್, ಅಸ್ತಮ, ಒಬೆಸಿಟಿ ಮತ್ತು ಇತರ ಖಾಯಿಲೆಗಳಿಗೆ ಪರಿಣಾಮಕಾರಿಯಾಗಿ ಚಿಕಿತ್ಸೆ ನೀಡಲಾಗುತ್ತಿದೆ. ಕಳೆದ ಸಾಲಿನಲ್ಲಿ ಸರ್ಕಾರಿ ಆಯುಷ್ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳ ಮೂಲಕ ಚಿಕಿತ್ಸೆ ಪಡೆದ ಒಟ್ಟಾರೆ ರೋಗಿಗಳ ಸಂಖ್ಯೆ ಹಾಗೂ ಪಂಚಕರ್ಮ, ಕ್ಷಾರ ಕರ್ಮ, ಉಪಕರ್ಮ ಇತ್ಯಾದಿ ವಿವಿಧ ಚಿಕಿತ್ಸಾವಿಧಾನಗಳನ್ನು ನಿರ್ವಹಿಸಿದ ವಿವರ ಈ ಕೆಳಕಂಡಂತಿದೆ. |

| ವರ್ಷ | ಹೊರ ರೋಗಿಗಳ ಸಂಖ್ಯೆ | ಒಳ ರೋಗಿಗಳ ಸಂಖ್ಯೆ | ನಿರ್ವಹಿಸಿದ ಚಿಕಿತ್ಸಾ ವಿದಾನಗಳ ಸಂಖ್ಯೆ |
|---|---|---|---|
| 2022-23 | 4929993 | 29005 | 1627604 |
| 2023-24 | 5373886 | 45117 | 2378762 |
| 2024-25 | 5135811 | 49529 | 2161077 |

<table>
<tr>
<td>ಆ)</td>
<td>ಆಯುಷ್ ಇಲಾಖೆಯಲ್ಲಿ ಖಾಯಂ ತಜ್ಞ ವೈದ್ಯರುಗಳು ಇಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕೋಟ್ಯಾಂತರ ರೂಪಾಯಿ ಅನುದಾನಗಳು ಸಮರ್ಪಕವಾಗಿ ವಿನಿಯೋಗವಾಗುತ್ತಿಲ್ಲ ಎಂಬುದು ನಿಜವೇ; ನಿಜವಾಗಿದ್ದಲ್ಲಿ ವಿನಿಯೋಗಿಸಲು ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)</td>
<td>
<ul>
<li>ಆಯುಷ್ ಇಲಾಖೆಯಲ್ಲಿ ತಜ್ಞ ವೈದ್ಯರು ಎಂಬ ಪದನಾಮದೊಂದಿಗೆ ಯಾವುದೇ ಖಾಯಂ ಹುದ್ದೆಗಳು ಇರುವುದಿಲ್ಲ. ಆದಾಗ್ಯೂ ಇಲಾಖೆಯಲ್ಲಿ 180 ವಿವಿಧ ಪದ್ಧತಿ ಮತ್ತು ತಜ್ಞತೆಯಲ್ಲಿ ಸ್ನಾತ್ತಕೋತ್ತರ ಪದವಿ ಪಡೆದ ಖಾಯಂ ವೈದ್ಯರುಗಳು ರಾಜ್ಯಾದ್ಯಂತ ಆಯುಷ್ ಆಸ್ಪತ್ರೆ ಮತ್ತು ಚಿಕಿತ್ಸಾಲಯ/ ಆಯುಷ್ ಆರೋಗ್ಯ ಮಂದಿರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.</li>
<li>ಅಲ್ಲದೇ ಕೇಂದ್ರ ಪುರಸ್ಕೃತ ಯೋಜನೆ ರಾಷ್ಟ್ರೀಯ ಆಯುಷ್ ಅಭಿಯಾನದಡಿ ಒಟ್ಟು 83 ಆಸ್ಪತ್ರೆಗಳನ್ನು ಜಿಲ್ಲಾ/ ತಾಲ್ಲೂಕು ಮಟ್ಟದಲ್ಲಿ ಮೇಲ್ದರ್ಜೆಗೇರಿಸಲಾಗಿದ್ದು, ಪ್ರತಿ ಆಸ್ಪತ್ರೆಗೆ 02 ರಂತೆ ಒಟ್ಟು 166 ತಜ್ಞವೈದ್ಯರ ಹುದ್ದೆಗಳನ್ನು ಹಾಗೂ ಇತರೆ ಅವಶ್ಯಕ ಅರೆ ವೈದ್ಯಕೀಯ ಸಿಬ್ಬಂದಿಗಳಾದ ಮಸಾಜಿಸ್ಟ್, ಔಷಧ ವಿತರಕರು, ಕ್ಷಾರಸೂತ್ರ ಮತ್ತು ಸ್ತ್ರೀ ರೋಗ ಅಟೆಂಡರ್ ಸೇರಿದಂತೆ ಒಟ್ಟು 664 ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜಿಸಿಕೊಂಡು, ಗುತ್ತಿಗೆ ಆಧಾರದ ಮೇಲೆ 525 ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ನೇಮಕಮಾಡಿಕೊಂಡು ಯೋಜನೆ ಇರುವವರೆಗೆ ಇವರ ಸೇವೆಯನ್ನು ಪಡೆಯಲಾಗುತ್ತಿದೆ.</li>
<li>ಆಯುಷ್ ವೈದ್ಯಕೀಯ ಸೇವೆಗಳನ್ನು ಪರಿಣಾಮಕಾರಿಯಾಗಿ ನೀಡಲು ಗುತ್ತಿಗೆ ತಜ್ಞ ವೈದ್ಯರ ಸಂಚಿತ ವೇತನ ಹಾಗೂ ಇತರೆ ಗುತ್ತಿಗೆ ಸಿಬ್ಬಂದಿಗಳ ಸಂಚಿತ ವೇತನ, ನಿರ್ವಹಣೆ ಔಷಧಿ ಯೋಗ ತರಬೇತುದಾರರ ಸಂಚಿತ ವೇತನ ಆಯುಷ್ ಆರೋಗ್ಯ ಮಂದಿರ ಅಭಿವೃದ್ಧಿ ಇತ್ಯಾದಿ ರಾಜ್ಯ ಮತ್ತು ಕೇಂದ್ರದ ಪಾಲಿನ ರೂಪದಲ್ಲಿ ಇಲಾಖೆಗೆ ಕಳೆದ 03 ವರ್ಷಗಳಿಂದ ಬಿಡುಗಡೆಯಾದ ಅನುದಾನವು ಸಮರ್ಪಕವಾಗಿ ವಿನಿಯೋಗಿಸಲಾಗುತ್ತಿದೆ. ಬಿಡುಗಡೆ, ವೆಚ್ಚ ಹಾಗೂ ಉಳಿಕೆ ವಿವರಗಳು ಈ ಕೆಳಕಂಡಂತಿದೆ.</li>
</ul>
(ರೂ. ಲಕ್ಷಗಳಲ್ಲಿ)
<table>
<tr><th>ಒಟ್ಟು ಬಿಡುಗಡೆ</th><th>ವೆಚ್ಚ</th><th>ಉಳಿಕೆ</th></tr>
<tr><td>17369.015</td><td>14883.503</td><td>2485.512</td></tr>
</table>
</td>
</tr>
<tr>
<td>(ಇ)</td>
<td>ಆಯುಷ್ ಇಲಾಖೆಯ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಯುಷ್ ಆಸ್ಪತ್ರೆಗಳಿಗೆ ಖಾಯಂ ತಜ್ಞ ವೈದ್ಯರುಗಳ ನೇಮಕಗೊಳಿಸಲು ಬಜೆಟ್‌ನಲ್ಲಿ ಮೀಸಲಿಡಲಾದ ಅನುದಾನವೆಷ್ಟು? (ವಿವರ ನೀಡುವುದು)</td>
<td>
<ul>
<li>ಆಯುಷ್ ಇಲಾಖೆಯಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಯುಷ್ ಆಸ್ಪತ್ರೆಗಳಿಗೆ ಖಾಯಂ ತಜ್ಞ ವೈದ್ಯರುಗಳ ಹುದ್ದೆ ಸೃಜನೆಯಾಗಿಲ್ಲದಿರುವುದರಿಂದ ಬಜೆಟ್‌ನಲ್ಲಿ ಯಾವುದೇ ಅನುದಾನ ಮೀಸಲಿರಿಸಿರುವುದಿಲ್ಲ.</li>
<li>ಹಾಲಿ ರಾಜ್ಯದಲ್ಲಿ ಸ್ನಾತ್ತಕೋತ್ತರ ತಜ್ಞತೆಯೊಂದಿಗೆ ಕಾರ್ಯನಿರ್ವಹಿಸುತ್ತಿರುವ 180 ಖಾಯಂ ವೈದ್ಯರುಗಳಲ್ಲಿ 64 ವೈದ್ಯರು ಚಿಕಿತ್ಸಾಲಯದ ಹಂತದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಸದರಿ ವೈದ್ಯರನ್ನು ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಿಗೆ ಮರುವಿನ್ಯಾಸಗೊಳಿಸಿ ತೈನಾತಿಸುವ ಮೂಲಕ ತಜ್ಞ ಚಿಕಿತ್ಸೆಗಳ ಸೌಲಭ್ಯವನ್ನು ಸಾರ್ವಜನಿಕರಿಗೆ ನೀಡಲಾಗುವುದು.</li>
</ul>
</td>
</tr>
</table>

**ಶ್ರೀ ಶಾಂತರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಸಚಿವರು ವಾಸ್ತವದ ಸಂಗತಿಯನ್ನು ತಮ್ಮ ಉತ್ತರದಲ್ಲಿ ನೀಡಿದ್ದಾರೆ. ನಾನು ಮೂರು ಉಪ ಪ್ರಶ್ನೆಗಳನ್ನು ಕೇಳಿದ್ದೆ. 'ಆಯುಷ್ ಇಲಾಖೆಯಲ್ಲಿ ಖಾಯಂ ತಜ್ಞ ವೈದ್ಯರುಗಳ ಹುದ್ದೆಗಳು ಖಾಲಿ ಇರುವುದರಿಂದ ದೀರ್ಘಕಾಲಿಕ ರೋಗಿಗಳಿಗೆ ಪರಿಣಾಮಕಾರಿ ಚಿಕಿತ್ಸೆ ಲಭಿಸದೇ ತೊಂದರೆ ಆಗುತ್ತಿರುವುದು

ಸರ್ಕಾರದ ಗಮನಕ್ಕೆ ಬಂದಿದೆಯೇ' ಎಂಬ ಪ್ರಶ್ನೆಗೆ ತಮ್ಮ ಉತ್ತರದಲ್ಲಿ ತಜ್ಞ ವೈದ್ಯರ ಸೇವೆಯನ್ನು ಸಾರ್ವಜನಿಕರಿಗೆ ನೀಡಲು ಈಗಾಗಲೇ ರಾಷ್ಟ್ರೀಯ ಆಯುಷ್ ಅಭಿಯಾನದ ಅಡಿಯಲ್ಲಿ ಗುತ್ತಿಗೆ ಆಧಾರದಲ್ಲಿ ರಾಜ್ಯದ 83 ಆಯುಷ್ ಕೇಂದ್ರಗಳಲ್ಲಿ ವೈದ್ಯರನ್ನು ನೇಮಕ ಮಾಡಿಕೊಂಡು ಸಂಬಂಧಪಟ್ಟಂತಹ ಚಿಕಿತ್ಸೆಯನ್ನು ಕೊಡಲಾಗುತ್ತಿದೆ ಎಂಬ ಉತ್ತರವನ್ನು ನೀಡಿದ್ದಾರೆ. ವಿಶೇಷವಾಗಿ ಆಯುರ್ವೇದ ಪದ್ಧತಿಯಲ್ಲಿ ಶಲ್ಯ, ಶಾಲಕ್ಯ, ಪಂಚಕರ್ಮ ಮತ್ತೆ ರಸಶಾಸ್ತ್ರ ಇತ್ಯಾದಿ ಎಲ್ಲಾ ವಿಭಾಗದಲ್ಲಿಯೂ ಗುತ್ತಿಗೆ ಆಧಾರಿತ ತಜ್ಞ ವೈದ್ಯರು ಕೆಲಸ ಮಾಡುತ್ತಿದ್ದಾರೆಂದು ತಿಳಿಸಿದ್ದಾರೆ. ನಾನು ಮಾನ್ಯ ಸಚಿವರಿಗೆ ಕೇಳುವುದು ಏನೆಂದರೆ, ಅವರ ಉತ್ತರದಲ್ಲಿ ಇರುವಂತೆ ಸುಮಾರು 52 ಲಕ್ಷದಷ್ಟು ರೋಗಿಗಳು ರಾಜ್ಯದಲ್ಲಿ ಈ ಆಯುಷ್ ಯೋಜನೆಯ ಉಪಯೋಗವನ್ನು ಪಡೆದುಕೊಳ್ಳುತ್ತಾರೆ. ಅವರ ಇನ್ನೂ ಅನೇಕ ಕಾಯಿಲೆಗಳಿಗೆ ಯೋಗ್ಯವಾದಂತಹ ಚಿಕಿತ್ಸೆ ಸಿಗುವುದಿಲ್ಲ. ಈಗ ವೈದ್ಯರನ್ನು ತೆಗೆದುಕೊಳ್ಳುವುದು ನಿಜವಾದರೂ ಕೂಡ, ಅವರಿಂದ ಪೂರ್ಣಪ್ರಮಾಣದ ಸೇವೆಯನ್ನು ಪಡೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂಬುದು ಅನೇಕ ಗ್ರಾಮೀಣ ಪ್ರದೇಶದ ಚಿಕಿತ್ಸಾ ಕೇಂದ್ರಗಳಿಂದ ನಮ್ಮ ಗಮನಕ್ಕೆ ಬಂದಿದೆ.

ನನ್ನ ಎರಡನೇ ಉಪ ಪ್ರಶ್ನೆ ಏನೆಂದರೆ, ಆಯುಷ್ ಇಲಾಖೆಯಲ್ಲಿ ಖಾಯಂ ತಜ್ಞ ವೈದರುಗಳು ಇಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕೋಟ್ಯಂತರ ರೂಪಾಯಿಗಳ ಅನುದಾನ ಸಮರ್ಪಕವಾಗಿ ವಿನಿಯೋಗವಾಗುತ್ತಿಲ್ಲ ಎಂಬುದು ನಿಜವೇ ಎಂದು. ಅದಕ್ಕೆ ಮಾನ್ಯ ಮಂತ್ರಿಗಳು ಆಯುಷ್ ಇಲಾಖೆಯಲ್ಲಿ ತಜ್ಞ ವೈದ್ಯರು ಎಂಬ ಪದನಾಮದೊಂದಿಗೆ ಯಾವುದೇ ಖಾಯಂ ಹುದ್ದೆಗಳು ಇರುವುದಿಲ್ಲ ಎಂಬ ಕಾರಣಕ್ಕೆ... ಎಂಬ ಅದೇ ಉತ್ತರವನ್ನು ನೀಡಿದ್ದಾರೆ. ಮಾನ್ಯ ಸಚಿವರು ಕೊಟ್ಟಂತಹ ಉತ್ತರಕ್ಕೆ ತಕ್ಕಂತೆ ಹೇಳುವುದಾದರೆ, ಸುಮಾರು 173 ಕೋಟಿ ರೂಪಾಯಿಗಳ ಅನುದಾನದಲ್ಲಿ ಬಳಕೆಯಾಗದೆ ಉಳಿಕೆಯಾಗಿರುವುದು ಸುಮಾರು 24 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ. ಇದು ಕೂಡ ಪೂರ್ಣಪ್ರಮಾಣದಲ್ಲಿ ಬಳಕೆಯಾಗಬೇಕೆಂದು ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ನನ್ನ ಮೂರನೇ ಪ್ರಶ್ನೆ ಏನೆಂದರೆ, ಆಯುಷ್ ಇಲಾಖೆಯ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಯುಷ್ ಆಸ್ಪತ್ರೆಗಳಿಗೆ ಖಾಯಂ ತಜ್ಞ ವೈದ್ಯರುಗಳನ್ನು ನೇಮಕಗೊಳಿಸಲು ಬಜೆಟ್‌ನಲ್ಲಿ ಹಣವನ್ನು ಮೀಸಲಿಡಲಾಗಿದೆಯೇ ಮತ್ತು ಎಷ್ಟು ಹಣವನ್ನು ಇಡಲಾಗಿದೆ ಎಂಬ ಪ್ರಶ್ನೆಗೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಯುಷ್ ಆಸ್ಪತ್ರೆಗಳಲ್ಲಿ ಖಾಯಂ ತಜ್ಞರ ಹುದ್ದೆ ಸೃಜನೆಯಾಗಿರುವುದಿಲ್ಲವೆಂದು ಉಲ್ಲೇಖ ಮಾಡಿದ್ದಾರೆ.

(ಮುಂದು)

(163) 10.03.2025 01.10 LL-MD (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಾಂತರಾಮ್ ಬುಡ್ನ ಸಿದ್ದಿ(ಮುಂದು):-**

ಒಂದೆರಡು ಮನವಿಯನ್ನು ಮಾನ್ಯ ಸಚಿವರಿಗೆ ಮಾಡುವುದೇನೆಂದರೆ, ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಂತಹ ವೈದ್ಯರುಗಳು ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ರೋಗಿಗಳಿಗೆ ಸಮಸ್ಯೆಯಾಗುವಂತಹ ಪಾರ್ಶ್ವವಾಯು ಇರಬಹುದು ಅಥವಾ ಫೈಲ್ಸ್ ಇರಬಹುದು ಈ ರೀತಿಯ ಗಂಭೀರ ಕಾಯಿಲೆಗಳಿಗೆ ಪೂರ್ಣ ಪ್ರಮಾಣದ ಚಿಕಿತ್ಸೆಯನ್ನು ಈ ವೈದ್ಯರುಗಳು ಕೊಡುವುದಕ್ಕೆ ಆಗುವುದಿಲ್ಲ. ಹಾಗಾಗಿ, ವಿಶೇಷವಾಗಿ 83 ಆಯುಷ್ ಕೇಂದ್ರಗಳಲ್ಲಿ ಕನಿಷ್ಠ ಎರಡು ವೈದ್ಯರುಗಳನ್ನಾದರೂ ಖಾಯಂ ಆಗಿ ನೇಮಕ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಕೇಂದ್ರ ಸರ್ಕಾರ ಏನು ಹಣ ನೀಡುತ್ತದೆ, ಆ ಹಣವನ್ನು ಆಸ್ಪತ್ರೆಗಳನ್ನು ಮೇಲ್ದಟ್ಟಕ್ಕೆ ತರುವುದಕ್ಕೆ ಉಪಯೋಗಿಸುತ್ತೇವೆಂಬ ಮಾತನ್ನು ಹೇಳಿರುತ್ತಾರೆ. ಆದರೆ, ವೈದ್ಯರುಗಳನ್ನು ಒಂದು ಟೈಮ್ ಬಾಂಡ್‌ನೊಳಗೆ ಖಾಯಂಗೊಳಿಸಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ದಿನೇಶ್ ಗುಂಡುರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಂತರಾಮ್ ಬುಡ್ನ ಸಿದ್ದಿಯವರು ನಮ್ಮ ಆಯುಷ್ ಇಲಾಖೆಗೆ ಸಂಬಂಧಿಸಿದಂತೆ, ಕೆಲವು ಪ್ರಶ್ನೆ/ಉಪಪ್ರಶ್ನೆಗಳನ್ನು ಕೇಳಿದ್ದಾರೆ. ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ನಮ್ಮಲ್ಲಿ ತಜ್ಞ ಆಯುಷ್ ವೈದ್ಯರು ಏನಿದ್ದಾರೆ, ಆ ಹುದ್ದೆಗಳು ಸೃಜನೆ ಆಗಿರುವುದಿಲ್ಲ. ಏಕೆಂದರೆ, ನಮ್ಮಲ್ಲಿ ಇರುವಂತಹ ನಾರ್ಮ್ಸ್ ಪ್ರಕಾರ, ಆ ಹುದ್ದೆಗಳ ಸೃಜನೆಗೆ ಅವಕಾಶವಿರಲಿಲ್ಲ. ಆದರೆ, ತಜ್ಞ ವೈದ್ಯರು ಮತ್ತು ವಿವಿಧ ಪದ್ಧತಿಗಳ ತಜ್ಞತೆ ಇರುವಂತಹ ಸ್ನಾತಕೋತ್ತರ ವೈದ್ಯರು ನಮ್ಮಲ್ಲಿದ್ದಾರೆ. ಆ ಹುದ್ದೆಗಳು ಇಲ್ಲದೇ ಇದ್ದರೂ ಸಹ, ಅವರನ್ನು ನೇಮಕಾತಿ ಮಾಡಿಕೊಂಡಿದ್ದೇವೆ ಮತ್ತು ಅವರಿಗೆ ಸಮಾನವಾದ ವೇತನವನ್ನು ಸಹ ನೀಡುತ್ತಿದ್ದೇವೆ. ಅಂದರೆ, ಅಲೋಪತಿಯಲ್ಲಿ ಸಿಗುವಂತಹ ತಜ್ಞ ವೈದ್ಯರಿಗೆ ಯಾವ ವೇತನ ಇದೆ, ಇವರಿಗೂ ಸಹ ಅದೇ ವೇತನವನ್ನು ಕೊಡುತ್ತಿದ್ದೇವೆ. ನಮ್ಮಲ್ಲಿ ಈ ರೀತಿ ಸುಮಾರು 180 ಖಾಯಂ ತಜ್ಞ ವೈದ್ಯರುಗಳಿದ್ದಾರೆ ಮತ್ತು ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ 166 ತಜ್ಞ ವೈದ್ಯರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದ್ದು, ಅದರಲ್ಲಿ 129 ತಜ್ಞ ವೈದ್ಯರನ್ನು ತೆಗೆದುಕೊಂಡಿದ್ದು ಒಟ್ಟಾರೆಯಾಗಿ 380 ತಜ್ಞ ವೈದ್ಯರಿದ್ದಾರೆ. ಮಾನ್ಯ ಸದಸ್ಯರು, ಈ ವೈದ್ಯರುಗಳು ಹೆಚ್ಚಿನ ಸೇವೆಯನ್ನು ಕೊಡುವಂತೆ ಆಗಬೇಕೆಂದು ಹೇಳಿರುತ್ತಾರೆ. ಅದಕ್ಕೆ ನಾವು ಕೆಲವು ಬದಲಾವಣೆಗಳನ್ನು ಮಾಡುತ್ತಿದ್ದೇವೆ. ಸುಮಾರು 103 ತಾಲ್ಲೂಕುಗಳಲ್ಲಿ ಈ ಆಯುಷ್ ವೈದ್ಯರಿದ್ದಾರೆ. ಅದರಲ್ಲಿ ತಜ್ಞ ವೈದ್ಯರು ಹಾಗೂ ಆಯುಷ್‌ನಲ್ಲಿ ಬರತಕ್ಕಂತಹ ಯುನಾನಿ, ಆಯುರ್ವೇದ

ಮತ್ತು ಇತರೆ ತಜ್ಞ ವೈದ್ಯರಿದ್ದಾರೆ. ಇನ್ನು ೮೦ ತಾಲ್ಲೂಕುಗಳಿಗೆ ಈ ಸೇವೆಯನ್ನು ವಿಸ್ತೀರ್ಣ ಮಾಡುವುದಕ್ಕೆ ಹೊರಟಿದ್ದೇವೆ. ಇದಕ್ಕಾಗಿ ನಾವು ಹೊಸ ಆಯುಷ್ ಆಸ್ಪತ್ರೆಗಳನ್ನು ನಾವು ಕಟ್ಟುತ್ತಿಲ್ಲ. ಬದಲಾಗಿ, ನಮ್ಮಲ್ಲಿರುವಂತಹ ತಾಲ್ಲೂಕು ಆಸ್ಪತ್ರೆಯಲ್ಲಿ ಇರುವಂತಹ ಸುಮಾರು 5 ರಿಂದ 6 ಹಾಸಿಗೆಗಳನ್ನು ಪಡೆದುಕೊಂಡು, ಈ ಆಯುಷ್ ತಜ್ಞ ವೈದ್ಯರನ್ನು ಅಲ್ಲಿ ನೇಮಿಸಿ ಚಿಕಿತ್ಸೆ ನೀಡುವಂತಹ ವ್ಯವಸ್ಥೆ ಮಾಡುತ್ತಿದ್ದೇವೆ. ಈಗ dispensary ಗಳಲ್ಲಿ ಈ ರೀತಿಯ ತಜ್ಞ ವೈದ್ಯರಿದ್ದಾರೆ. ಅದರಂತೆ, ಸುಮಾರು 64 ತಜ್ಞ ವೈದ್ಯರು ಬೇರೆ ಬೇರೆ dispensary ಗಳಲ್ಲಿ ಇದ್ದಾರೆ. ಅಲ್ಲಿ ಹೆಚ್ಚು ಅವರ ಅವಶ್ಯಕತೆ ಇರುವುದಿಲ್ಲ. ಅದಕ್ಕಾಗಿ, ಅವರನ್ನು ತಾಲ್ಲೂಕು ಆಸ್ಪತ್ರೆಗಳಲ್ಲಿ ನೇಮಿಸಿದರೆ, ಹೆಚ್ಚು ಜನರು ಅಲ್ಲಿಗೆ ಬಂದು ಆಯುಷ್‌ನ ಪ್ರಯೋಜನ ಪಡೆದುಕೊಳ್ಳುವಂತಹ ಸಾಧ್ಯತೆ ಇದೆ. ಅದಕ್ಕಾಗಿ ನಾವು ಇದನ್ನು ಮರುವಿನ್ಯಾಸ ಮಾಡುತ್ತಿದ್ದೇವೆ. ಇದೊಂದು ರೀತಿಯಲ್ಲಿ integrated approach ಆಗಿರುತ್ತದೆ. ಅಂದರೆ, ಒಂದು ತಾಲ್ಲೂಕು ಆಸ್ಪತ್ರೆಯಲ್ಲಿ ಆಯುಷ್ ವಿಂಗ್ ಇಟ್ಟುಕೊಂಡರೆ ಒಂದು integrated approach ಆಗುತ್ತದೆ. ಜೊತೆಗೆ, ಆಯುಷ್‌ನ ಅವಶ್ಯಕತೆ ಇರುವಂತಹ ರೋಗಿಗಳು ತಾಲ್ಲೂಕು ಆಸ್ಪತ್ರೆಗಳಿಗೆ ಹೋಗಬಹುದು ಅಥವಾ ಅಲೋಪತಿ ಕಡೆಗೂ ಬರಬಹುದು. ಈ ರೀತಿ ನಾವು ಮಾಡುತ್ತಿದ್ದೇವೆ. ಈಗ IPHS (Indian Public Health Standards) 2024ರ ಹೊಸ ನಾರ್ಮ್ಸ್ ಬಂದಿರುತ್ತದೆ. ಅದರ ಅನ್ವಯ ನಾವು ಆಯುಷ್ ತಜ್ಞ ವೈದ್ಯ ಹುದ್ದೆಗಳನ್ನು ಸೃಜನೆ ಮಾಡುವುದಕ್ಕೆ ಅವಕಾಶ ಇದೆ. ಅದರಂತೆ, ಮುಂದಿನ ದಿನಗಳಲ್ಲಿ ನಾರ್ಮ್ಸ್ ಪ್ರಕಾರ ಹುದ್ದೆಗಳ ನೇಮಕಾತಿ ಮಾಡುತ್ತೇವೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳಬಯಸುತ್ತೇನೆ.

**ಶ್ರೀ ಶಾಂತರಾಮ್ ಬುಡ್ನ ಸಿದ್ದಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ನನ್ನ ವಿನಂತಿ ಏನೆಂದರೆ, ಆಯುರ್ವೇದ ಪದ್ಧತಿಗೆ WHO (World Health Organization) ನಿಂದ ಅನುಮತಿ ಇರುವುದರಿಂದ ಇದರಲ್ಲಿ ಇನ್ನು ಅನೇಕ ಸಿಬ್ಬಂದಿಗಳು ಬರುತ್ತಾರೆ. ಉದಾಹರಣೆಗೆ, ಮಸಾಜ್ ಮಾಡುವವರು, ಔಷಧಿ ವಿತರಕರು ಹಾಗೂ ಇತರರು ಬರುತ್ತಾರೆ. ಇವರುಗಳನ್ನು ಖಾಯಂ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಈಗ ಇರುವಂತಹ ಆಸ್ಪತ್ರೆಗಳ ಕಟ್ಟಡಗಳು ಬಹಳ ಶಿಥಿಲಾವಸ್ಥೆಯಲ್ಲಿರುತ್ತವೆ. ಅವುಗಳನ್ನು ದುರಸ್ತಿ ಮಾಡಬೇಕೆಂದು ಮತ್ತು ಮಾನ್ಯ ಸಚಿವರು ಉಲ್ಲೇಖ ಮಾಡಿರುವಂತಹ ಬೇರೆ ಬೇರೆ ವಿಭಾಗಗಳು ಅಲ್ಲಿರುವುದಿಲ್ಲ. ಆ ವಿಭಾಗಗಳನ್ನು ತಾಲ್ಲೂಕು ಆಸ್ಪತ್ರೆಗಳಲ್ಲಿ ತೆರೆಯಬೇಕೆಂಬ ಬೇಡಿಕೆಯನ್ನು ಮಾನ್ಯ ಸಚಿವರಲ್ಲಿ ಮಾಡುವುದಕ್ಕೆ ಬಯಸುತ್ತೇನೆ.

**ಶ್ರೀ ದಿನೇಶ್ ಗುಂಡುರಾವ್:-** ಮಾನ್ಯ ಸಭಾಪತಿಯವರೇ, ಈ ರೀತಿಯ ಸುಮಾರು 664 ಹುದ್ದೆಗಳು ನಮ್ಮಲ್ಲಿವೆ. ಅಂದರೆ, ಮಸಾಜ್ ಮಾಡುವವರು, ಔಷಧಿ ವಿತರಕರು ಹಾಗೂ ಬೇರೆ ಹುದ್ದೆಗಳು ಸೇರಿದಂತೆ ಸುಮಾರು

664 ಹುದ್ದೆಗಳಿವೆ. ಅದರಲ್ಲಿ 525 ಹುದ್ದೆಗಳನ್ನು ನಾವು ಗುತ್ತಿಗೆ ಆಧಾರದ ಮೇರೆಗೆ ತೆಗೆದುಕೊಂಡಿರುತ್ತೇವೆ. ಈಗ ನಾವು ತಾಲ್ಲೂಕು ಆಸ್ಪತ್ರೆಗಳಿಗೆ ಆಯುಷ್ ಸೇವೆಯನ್ನು ಏನು ವಿಸ್ತರಣೆ ಮಾಡುತ್ತಿದ್ದೇವೆ, ಅಲ್ಲಿ ಖಂಡಿತವಾಗಿಯೂ ಇನ್ನು ಅಗತ್ಯವಿರುವ ಸಿಬ್ಬಂದಿಯನ್ನು ನಾವು ನೇಮಕ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಇಂತಹ ತಾಲ್ಲೂಕು ಕೇಂದ್ರಗಳಲ್ಲಿ ಪಂಚಕರ್ಮ ಹಾಗೂ ಇತರೆ ಚಿಕಿತ್ಸೆ ಕೊಡುವಂತಹ ವ್ಯವಸ್ಥೆ ಏನಿದೆ, ಅಲ್ಲಿ ಮಸಾಜ್ ರೂಮ್ ಇರಬಹುದು ಅಥವಾ ಬೇರೆ ಥೆರಪಿಗಳಿಗೆ ಕೊಡುವಂಥಹ ರೂಮ್‌ಗಳು ಇರಬಹುದು, ಅದೆಲ್ಲವನ್ನೂ ಮಾಡುವಂಥದ್ದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಈಗ ನಾವು ಒಂದು ಹೊಸ ಸರ್ಕಾರಿ ಆಯುರ್ವೇದಿಕ್ ಕಾಲೇಜಿನಲ್ಲಿ ಈ ವ್ಯವಸ್ಥೆಯನ್ನು ಮಾಡಿದ್ದು, ಸದ್ಯದಲ್ಲಿಯೇ ಅದು ಉದ್ಘಾಟನೆಯಾಗುತ್ತಿದೆ. ಅದೇ ಪ್ರಕಾರ ಬೇರೆ ಕಡೆಗಳಲ್ಲಿ ಮಾಡುವುದಕ್ಕೆ ನಾವು ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ.

**ಉಪ ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀಮತಿ ಹೇಮಲತಾ ನಾಯಕ್, ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಎಸ್.ವ್ಹಿ. ಸಂಕನೂರ, ಶ್ರೀ ಶರವಣ ಟಿ.ಎ. ಹಾಗೂ ಶ್ರೀ ಡಿ.ಎಸ್. ಅರುಣ್‌ರವರದ್ದು. ಈಗ ಈ ಪ್ರಶ್ನೆಯನ್ನು ಎಲ್ಲರೂ ಕೇಳುತ್ತೀರೋ ಅಥವಾ ಯಾರಾದರೂ ಒಬ್ಬರು ಕೇಳುತ್ತೀರೋ?

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಅವಕಾಶ ನೀಡಬೇಕು.

**ಉಪ ಸಭಾಪತಿಯವರು:-** ಹಾಗಾದರೆ, ಮೊದಲಿಗೆ ಶ್ರೀಮತಿ ಹೇಮಲತಾ ನಾಯಕ್‌ರವರಿಂದ ಪ್ರಾರಂಭ ಮಾಡುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದಕ್ಕಿಂತಲೂ ಮುಂಚೆ...

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಲ್ಲವಾದರೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ನೀಡಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಭೋಜೇಗೌಡರವರೇ, ಮಾನ್ಯ ಶರವಣರವರೇ ದಯಮಾಡಿ ತಾವು ಕುಳಿತುಕೊಳ್ಳಿ. **(ಗೊಂದಲ)** ಶ್ರೀಮತಿ ಹೇಮಲತಾ ನಾಯಕ್‌ರವರದ್ದು ಮೊದಲನೆ ಹೆಸರು ಇದೆ. ಹಾಗಾಗಿ, ಅವರು ಮೊದಲು ಮಾತನಾಡಲಿ. ಬೇಕಾದರೆ ತಾವು ಅವರ ಅನುಮತಿ ಪಡೆದು ತಾವು ಮಾತನಾಡಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವರೇ ಮೊದಲು ಮಾತನಾಡಲಿ. ನಾನು ಈಗ ಮಾತನಾಡುವುದಿಲ್ಲ. ಆದರೆ, ನಾನು ಕೇಳುವುದೇನೆಂದರೆ, ಈ ದಿನ ಪೂರ್ವಾಹ್ನ ಸದನದಲ್ಲಿ 7 ಜನ ಮಾನ್ಯ ಸಚಿವರು ಕಡ್ಡಾಯವಾಗಿ ಉಪಸ್ಥಿತರಿರಬೇಕಾಗಿರುತ್ತದೆ. ಆದರೆ, ಈಗ ಸದನದಲ್ಲಿ ಆ ಪೈಕಿ ಒಬ್ಬ ಸಚಿವರು ಹಾಜರಿರುವುದಿಲ್ಲ. ಹಾಗಾಗಿ, ತಾವು ಕಡ್ಡಾಯವಾಗಿ ಹಾಜರಿರಬೇಕೆಂದು ಏತಕ್ಕೆ ನಮೂದು ಮಾಡುತ್ತೀರೋ ಅದು ನನಗೆ ಗೊತ್ತಿಲ್ಲ. ಅದನ್ನು ತಾವು ಸ್ವಲ್ಪ ಕೇಳಬೇಕು. ಅದನ್ನು ನಾನು ಕೇಳುತ್ತಿದ್ದೇನೆ. **(ಗೊಂದಲ)** ಮಾನ್ಯ ಸಭಾಪತಿಯವರೇ, 7 ಜನ ಮಾನ್ಯ ಸಚಿವರು ಕಡ್ಡಾಯವಾಗಿ ಸದನದಲ್ಲಿ ಹಾಜರಿರಬೇಕಾಗಿದ್ದು, ಅದರಲ್ಲಿ 6 ಜನ ಸಚಿವರು ಗೈರಾಗಿದ್ದಾರೆ. ಅದನ್ನು ತಾವು ಕೇಳಬೇಕೋ ಅಥವಾ ಬೇಡವೋ? ಅದರಲ್ಲಿ ಶ್ರೀ ಪ್ರಿಯಾಂಕ್ ಖರ್ಗೆಯವರು ಹಾಜರಿರುವುದಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಭೋಜೇಗೌಡರವರೇ, ಆ ಪಟ್ಟಿಯನ್ನು ನಾನು ಓದುತ್ತೇನೆ. ದಯಮಾಡಿ ತಾವು ಕುಳಿತುಕೊಳ್ಳಿ. ಈ ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದಾಂತಹ ಸಚಿವರುಗಳು. ಶ್ರೀ ಎನ್.ಎಸ್. ಬೋಸರಾಜುರವರು. ಶ್ರೀ ಪ್ರಿಯಾಂಕ್ ಖರ್ಗೆಯವರು.

**ಶ್ರೀ ಎನ್.ಎಸ್. ಬೋಸರಾಜು(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಹಾಜರಿದ್ದಾರೆ.

**ಉಪ ಸಭಾಪತಿಯವರು:-** ಅವರು ಹಾಜರಿದ್ದಾರೆ, ಹೌದು. ಆದರೆ, ಸದನದೊಳಗೆ ಹಾಜರಿದ್ದಾರೆಯೇ ಎಂಬುದನ್ನು ತಾವು ಹೇಳಿ. ಅವರು ಸದನದಲ್ಲಿ ಹಾಜರಿರಬೇಕಲ್ಲವೇ? ಇಲ್ಲವಾದರೆ, ಸದನಕ್ಕೆ ಏನು ಗೌರವ ಕೊಟ್ಟಂತಾಗುತ್ತದೆ? ಹಾಗಾಗಿ, ಅವರನ್ನು ಆದಷ್ಟು ಬೇಗ ಸದನಕ್ಕೆ ಕರೆಯಿಸಿ. ಅದೇ ರೀತಿ, ಶ್ರೀ ಆರ್.ಬಿ. ತಿಮ್ಮಾಪೂರರವರು ಇಲ್ಲಿಯವರೆಗೂ ಸದನದಲ್ಲಿ ಹಾಜರಿದ್ದು ಅವರ ಪ್ರಶ್ನೆ ಮುಗಿದ ತಕ್ಷಣ ಹೊರಟು ಹೋಗಿದ್ದಾರೆ. ಇದು ಮಾನ್ಯ ಸಭಾನಾಯಕರು ಗಮನಿಸಬೇಕಾದಂತಹ ವಿಚಾರ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರನ್ನು ಕೂಡಲೇ ಸದನಕ್ಕೆ ಕರೆಯಿಸುತ್ತೇನೆ.

**ಉಪ ಸಭಾಪತಿಯವರು:-** ಶ್ರೀ ಶರಣಬಸಪ್ಪ ದರ್ಶನಾಪೂರರವರು, ಈ ದಿನ ಸದನಕ್ಕೆ ಹಾಜರಾಗಲು ಸಾಧ್ಯವಾಗುತ್ತಿಲ್ಲವೆಂದು ಪತ್ರ ಬರೆದಿದ್ದು, ಅವರಿಗೆ ವಿನಾಯಿತಿ ಇರುತ್ತದೆ. ಇನ್ನು ಎಸ್.ಎಸ್. ಮಲ್ಲಿಕಾರ್ಜುನರವರು.

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾಪತಿಯವರೇ, ಅವರಂತೂ ಈ ಸದನಕ್ಕೆ ಬರುವುದೇ ಇಲ್ಲ.

**ಉಪ ಸಭಾಪತಿಯವರು:-** ಅದೇ ರೀತಿ, ಶ್ರೀ ರಹೀಂ ಖಾನ್‌ರವರು ಮತ್ತು ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್‌ರವರು ಈ ಸದನದಲ್ಲಿ ಹಾಜರಿರುವುದಿಲ್ಲ. ಮಾನ್ಯ ಸಭಾನಾಯಕರೇ, ಇದು ಏನಾಗಿದೆಯೆಂದರೆ ಮನಸ್ಸಿಗೆ ಬಂದಾಗ ಬರುವುದು, ಬೇಡವಾದಾಗ ಹೋಗುವುದು ಎನ್ನುವ ರೀತಿ ಆಗಿದೆ. ಇಲ್ಲಿ ಸೂಚನೆ ಏನಿದೆ ಹೇಳ...

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಈ ದಿನ ಸದನದಲ್ಲಿ ಮಾನ್ಯ ಸಚಿವರು ಕಡ್ಡಾಯವಾಗಿ ಹಾಜರಿರಬೇಕು. ನಮ್ಮ ಸದಸ್ಯರೆಲ್ಲರೂ ಯಾವಾಗಲೂ ಕೂಡ ಈ ಕಡೆ ನೋಡಿಕೊಂಡೇ ಮಾತನಾಡುತ್ತಾರೆ. ಆದರೆ, ಅವರು ಇದ್ದಾಗ ಮಾತನಾಡುವುದಿಲ್ಲ. ಆಗಲೇ ಎಲ್ಲರೂ ಸಹ ಬಂದಿದ್ದರು. **(ಗೊಂದಲ)** ಆದರೆ, ಮಾನ್ಯ ಶರಣಬಸಪ್ಪ ದರ್ಶನಾಪೂರರವರು ಮಾತ್ರ ಬಂದಿರುವುದಿಲ್ಲ. ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್‌ರವರು ಎರಡು ತಾಸು ಕುಳಿತುಕೊಂಡ ನಂತರ, ಅವರಿಗೆ ವಿಶ್ರಾಂತಿ ಬೇಕಾಗುತ್ತದೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಶರಣಬಸಪ್ಪ ದರ್ಶನಾಪೂರರವರು ವಿನಾಯಿತಿ ಕೇಳಿರುತ್ತಾರೆ. ಮಾನ್ಯ ವಿರೋಧ ಪಕ್ಷದವರು ಮಾನ್ಯ ಸಚಿವರು ಈ ಸದನದಲ್ಲಿ ಇದ್ದಾರೆಯೋ ಅಥವಾ ಇಲ್ಲವೋ ಎಂದು ಕೇಳಿದ್ದಾರೋ ಅಥವಾ ಬಿಟ್ಟರೋ ಅದು ಪ್ರಶ್ನೆ ಅಲ್ಲ. ಆದರೆ, ಈ ದಿನ ಸದನದಲ್ಲಿ ಪೂರ್ವಾಹ್ನದಿಂದ ಅಪರಾಹ್ನದವರೆಗೆ ಕಡ್ಡಾಯವಾಗಿ ಹಾಜರಿರಬೇಕಾದಂತಹ ಮಂತ್ರಿಗಳು ಎಂದು ಹೇಳಿದ್ದಾರೆ. ಹಾಗಾಗಿ, ಅವರು ಕಡ್ಡಾಯವಾಗಿ ಸದನದಲ್ಲಿ ಹಾಜರಿರಬೇಕಲ್ಲವೇ? ಅದು ನಿಮ್ಮ ಜವಾಬ್ದಾರಿ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾನಾಯಕರು ಸದನದ ಗೌರವವನ್ನು ಕಾಪಾಡಬೇಕು. ಪದೇ ಪದೇ ನಾವು ಈ ರೀತಿ ಹೇಳಬಾರದು.

**ಉಪ ಸಭಾಪತಿಯವರು:-** ಈ ದಿನ ಸದನದಲ್ಲಿ ಹಾಜರಿರಬೇಕಾದಂತಹ ಮಾನ್ಯ ಸಚಿವರ ಪಟ್ಟಿಯಲ್ಲಿ ಶ್ರೀ ಕೆ.ಜೆ. ಜಾರ್ಜ್‌ರವರ ಹೆಸರು ಇರುವುದಿಲ್ಲ. ಮಾನ್ಯ ವಿರೋಧ ಪಕ್ಷದವರು ಕೇಳಿದಾಗ, ಅದನ್ನು ಓದಬೇಕಾಗಿರುವುದು

ಮತ್ತು ಸಹಜವಾಗಿ ಸದನದಲ್ಲಿ ಮಂತ್ರಿಗಳು ಹಾಜರಿರುವಂಥದ್ದಾಗಿದೆ. ಹಾಗಾಗಿ, ಮಾನ್ಯ ಸಚಿವರನ್ನು ಆದಷ್ಟು ಬೇಗ ಸದನಕ್ಕೆ ಕರೆಯಿಸಿ.

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾಪತಿಯವರೇ, ಅದೇ ರೀತಿ ಅಧಿಕಾರಿಗಳ ಪಟ್ಟಿಯನ್ನು ಸಹ ಓದಿ.

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳ ಸಂಖ್ಯೆಯನ್ನು ಸಹ ತಾವು ನೋಡಬೇಕು. ಈ ಕಡೆ ನಾವು ಸುಮಾರು 25 ಜನ ಇದ್ದೇವೆ.

**ಉಪ ಸಭಾಪತಿಯವರು:-** ಆಯಿತು, ಕುಳಿತುಕೊಳ್ಳಿ. **(ಗೊಂದಲ)** ಈಗ ಅದರ ಬಗ್ಗೆ ಚರ್ಚೆ ಬೇಡ. ಈ ದಿನ ಸದನದಲ್ಲಿ ಹಾಜರಿರಬೇಕಾದ ಅಧಿಕಾರಿಗಳು; ಶ್ರೀಮತಿ ಕೆ.ಎಸ್. ಲತಾಕುಮಾರಿ, ಭಾ.ಆ.ಸೇ., ಮುಖ್ಯ ನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ. ಸದರಿಯವರು ಹಾಜರಿದ್ದಾರೆ. ಶ್ರೀ ಮೊಹಮದ್ ಮೊಹಸಿನ್, ಭಾ.ಆ.ಸೇ. ಹಾಗೂ ಶ್ರೀಮತಿ ರೋಹಿಣಿ ಸಿಂಧೂರಿ ದಾಸರಿ, ಭಾ.ಆ.ಸೇ. ಮತ್ತು ಶ್ರೀಮತಿ ಶಾಶ್ವತಿ ಮಿಶ್ರಾ ಐ.ಎಫ್.ಎಸ್., ರವರು. ಇವರೆಲ್ಲರೂ ಸಹ ಸದನದಲ್ಲಿ ಹಾಜರಿದ್ದಾರೆ. ಆಯಿತು, ಈಗ ಶ್ರೀಮತಿ ಹೇಮಲತಾ ನಾಯಕ್‌ರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ. (ಮುಂದು)

(164) 10.03.2025 1.20 ವೈಎಲ್-ಎಕೆ (ಉಪ ಸಭಾಪತಿಯವರ ಉಪಸ್ಥಿತಿ)

**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | | 464+473+419+476+453 |
| ಮಾನ್ಯ ಸದಸ್ಯರ ಹೆಸರು | | 1. ಶ್ರೀಮತಿ ಹೇಮಲತಾ ನಾಯಕ್, (ವಿಧಾನಸಭೆಯಿಂದ ಚುನಾಯಿತರಾದವರು)<br>2. ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)<br>3. ಶ್ರೀ ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ)<br>4. ಶ್ರೀ ಶರವಣ ಟಿ.ಎ (ವಿಧಾನಸಭೆಯಿಂದ ಚುನಾಯಿತರಾದವರು)<br>5. ಶ್ರೀ ಡಿ. ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | | 10.03.2025 |
| | **ಪ್ರಶ್ನೆ** | **ಉತ್ತರ** |
| (ಅ) | ಸರ್ಕಾರವು ರಾಜ್ಯದಲ್ಲಿ ಸ್ಥಾಪಿಸಿರುವ ವಿಶ್ವವಿದ್ಯಾಲಯಗಳು ಯಾವುವು; ಹಾಗೂ ಯಾವ ಮಾನದಂಡದ ಅಡಿಯಲ್ಲಿ ಸ್ಥಾಪಿಸಲಾಗಿದೆ; ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಿರುವ ನಿಯಮಗಳೇನು; (ವಿವರ ನೀಡುವುದು) | ರಾಜ್ಯದಲ್ಲಿ ಉನ್ನತ ಶಿಕ್ಷಣ ಇಲಾಖೆಯಡಿ ಒಟ್ಟು 32 ಸಾರ್ವಜನಿಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗಿರುತ್ತದೆ. ವಿವರವನ್ನು **ಅನುಬಂಧ-1** ರಲ್ಲಿರಿಸಿದೆ.<br><br>ಏಕ ವಿಶ್ವವಿದ್ಯಾಲಯದ ಕಾರ್ಯಒತ್ತಡವನ್ನು ಕಡಿಮೆ ಮಾಡಲು, ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲತೆಗಳನ್ನು ಕಲ್ಪಿಸಲು ಉನ್ನತ ಶಿಕ್ಷಣ ಸೌಲಭ್ಯಗಳನ್ನು ವಿಸ್ತರಿಸುವುದಕ್ಕಾಗಿ ಆಯಾ ಜಿಲ್ಲೆಗಳ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ಕ್ಷೇತ್ರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲೆಗಳಲ್ಲಿ ವಿಶೇಷ ಹಾಗೂ ಮಹಿಳಾ ಮತ್ತು ಸಾರ್ವಜನಿಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗಿರುತ್ತದೆ.<br><br>ರಾಜ್ಯದಲ್ಲಿ ಸಾರ್ವಜನಿಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಯು.ಜಿ.ಸಿ.ಯು ಯಾವುದೇ ನಿರ್ದಿಷ್ಟ ಮಾನದಂಡಗಳನ್ನು ವಿವರಿಸಿರುವುದಿಲ್ಲ. ಆದಾಗ್ಯೂ, ಯು.ಜಿ.ಸಿ.ಯು ಸಾರ್ವಜನಿಕ ಮತ್ತು ಖಾಸಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಒಂದು Expert Committee ರಚಿಸಿದ್ದು, ಈ ಸಮಿತಿಯು NEP ನೀತಿಯನ್ವಯ UGC ಗೆ Report to Determine land requirement for Higher Education Institutions, 2024 ನ್ನು ಸಲ್ಲಿಸಿದ್ದು, ಈ ವರದಿಯಲ್ಲಿ Plans for academic, land, faculty, student, research, and infrastructure development, finance, administration, and governance ಬಗ್ಗೆ ವಿವರಣೆಯನ್ನು ನೀಡಿರುತ್ತದೆ. ವರದಿಯ ಪ್ರತಿಯನ್ನು **ಅನುಬಂಧ-2** ರಲ್ಲಿರಿಸಿದೆ. |
| (ಆ) | ರಾಜ್ಯದ ಗ್ರಾಮೀಣ ಭಾಗದಲ್ಲಿರುವ ಒಟ್ಟು ವಿಶ್ವವಿದ್ಯಾಲಯಗಳು ಎಷ್ಟು ಹಾಗೂ ಇದರಲ್ಲಿ ಎಷ್ಟು ವಿದ್ಯಾರ್ಥಿಗಳು, ಬೋಧಕ-ಬೋಧಕೇತರ ಹಾಗೂ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ; (ಗ್ರಾಮೀಣವಾರು ವಿವರ ನೀಡುವುದು) | ರಾಜ್ಯದಲ್ಲಿ ಆಯಾ ಜಿಲ್ಲೆಗಳ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿಯೇ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗಿರುತ್ತದೆ. ಸದರಿ ವಿಶ್ವವಿದ್ಯಾಲಯಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಹಾಗೂ ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳ ವಿವರವನ್ನು **ಅನುಬಂಧ-3 & ಅನುಬಂಧ -4**ರಲ್ಲಿರಿಸಿದೆ. |
| (ಇ) | ಪ್ರಸ್ತುತ ಸರ್ಕಾರವು ಈ ವಿಶ್ವವಿದ್ಯಾಲಯಗಳಿಗೆ ವಾರ್ಷಿಕವಾಗಿ ಯಾವ ಯೋಜನೆಗಳಿಗೆ ಅನುದಾನ ನೀಡುತ್ತಿದೆ ಮತ್ತು ಅದನ್ನು ಯಾವ ಉದ್ದೇಶಗಳಿಗೆ ಬಳಸಲಾಗುತ್ತಿದೆ; | 2024-25ನೇ ಸಾಲಿನ ಉನ್ನತ ಶಿಕ್ಷಣ ಇಲಾಖೆಯ ವಿಶ್ವವಿದ್ಯಾಲಯಗಳಿಗೆ ಅನುದಾನ ಬಿಡುಗಡೆಗೊಳಿಸಿರುವ ವಿವರವನ್ನು **ಅನುಬಂಧ-5**ರಲ್ಲಿರಿಸಿದೆ. |
| (ಈ) | ಹಿಂದಿನ ಸರ್ಕಾರದಲ್ಲಿ ಸ್ಥಾಪಿಸಲಾದ ಒಟ್ಟು 09 ವಿಶ್ವವಿದ್ಯಾಲಯಗಳನ್ನು ಬಂದ್ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದರಲ್ಲಿ ಕೊಪ್ಪಳ ವಿಶ್ವವಿದ್ಯಾಲಯವು ಸೇರಿದೆಯೇ; (ವಿವರ ನೀಡುವುದು) | ರಾಜ್ಯದಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾಲಯಗಳನ್ನು ಒಳಗೊಂಡಂತೆ ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸನ್ಮಾನ್ಯ ಉಪಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ |

| | | |
|---|---|---|
| (ಉ) | ರಾಜ್ಯದ ಇತಿಹಾಸದಲ್ಲಿ ಒಮ್ಮೆ ವಿಶ್ವವಿದ್ಯಾಲಯ ಪ್ರಾರಂಭಿಸಿ, ಕಾರ್ಯನಿರ್ವಹಿಸುತ್ತಿರುವ ಒಂದು ವಿಶ್ವವಿದ್ಯಾಲಯವನ್ನು ಶಾಶ್ವತವಾಗಿ ಬಂದ್ ಮಾಡಿರುವ ಉದಾಹರಣೆ ಇದೆಯೇ ವಿಶ್ವವಿದ್ಯಾಲಯವು ಶಾಶ್ವತವಾಗಿ ಬಂದ್ ಮಾಡುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ; ಇದಕ್ಕೆ ಹೊಣೆ ಯಾರು; (ವಿವರ ನೀಡುವುದು) | ಉಪಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಈ ಬಗ್ಗೆ ಸಭೆ ನಡೆಸಿದ್ದು, ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳೊಂದಿಗೆ ರಾಜ್ಯದಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿ ಹಾಗೂ ಅವರ ಮುಂಬರುವ ಭವಿಷ್ಯದ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ವಿದ್ಯಾರ್ಥಿಗಳಿಗೆ ಗುಣಾತ್ಮಕ ಶೈಕ್ಷಣಿಕ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಕೆಲವು ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿ, ವಿದ್ಯಾರ್ಥಿಗಳ ಪ್ರವೇಶಾತಿ, ಮೂಲಸೌಲಭ್ಯದ ಕೊರತೆ ಮುಂತಾದ ಪ್ರಮುಖ ಅಂಶಗಳ ಕುರಿತು ಮೊದಲ ಸಭೆಯಲ್ಲಿ ಚರ್ಚಿಸಲಾಗಿದ್ದು, ಸಭೆಯಲ್ಲಿ ಸ್ವೀಕೃತವಾದ ಸಲಹೆಗಳನ್ನು ಪರಾಮರ್ಶಿಸಿ ಕೆಲವು ವಿಶ್ವವಿದ್ಯಾಲಯಗಳ ವಿಲೀನ, ಹೆಚ್ಚಿನ ಅನುದಾನದ ಅಗತ್ಯತೆ ಮತ್ತು ಹಂತ-ಹಂತವಾಗಿ ಖಾಲಿ ಹುದ್ದೆಗಳ ಭರ್ತಿ ಸೇರಿದಂತೆ ವಿಶ್ವವಿದ್ಯಾಲಯಗಳ ಬಲವರ್ಧನೆಗಾಗಿ ಉನ್ನತ ಶಿಕ್ಷಣ ಇಲಾಖೆ ಮತ್ತು ಆರ್ಥಿಕ ಇಲಾಖೆಯು ಒಟ್ಟಾರೆ ಸೇರಿ ವಿಸ್ತೃತವಾದ ವರದಿ/ಪ್ರಸ್ತಾವನೆಯನ್ನು ಸಚಿವ ಸಂಪುಟಕ್ಕೆ ಮಂಡಿಸಿ ಸೂಕ್ತ ತೀರ್ಮಾನ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| (ಊ) | ಸಚಿವ ಸಂಪುಟ ಉಪ ಸಮಿತಿಯ ಶಿಫಾರಸ್ಸಿನ ಅನ್ವಯ ಸರ್ಕಾರಿ ವಿಶ್ವವಿದ್ಯಾಲಯಗಳನ್ನು ಮುಚ್ಚುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ; ಹಾಗೂ ಈ ವಿಶ್ವವಿದ್ಯಾಲಯಗಳನ್ನು ಮುಚ್ಚದೆ ಸುಧಾರಿಸುವ ನಿಟ್ಟಿನಲ್ಲಿ ಸರ್ಕಾರವೇನಾದರೂ ಕ್ರಮ ಕೈಗೊಳ್ಳುವುದೇ; | |
| (ಋ) | ಹೊಸದಾಗಿ ಪ್ರಾರಂಭವಾಗಿರುವ ವಿಶ್ವವಿದ್ಯಾಲಯಗಳ ಬಗ್ಗೆ ಅಧ್ಯಯನ ಮಾಡಲು ರಚಿಸಿದ ಸಂಪುಟ ಉಪ ಸಮಿತಿ ನಿರ್ಣಯ ಕೈಗೊಳ್ಳುವಾಗ ಶಿಕ್ಷಣ ತಜ್ಞರ ಅಭಿಪ್ರಾಯಗಳನ್ನು ಪಡೆಯಲಾಗಿದೆಯೇ; ( ಈ ಕುರಿತು ವಿವರವಾದ ಮಾಹಿತಿ ನೀಡುವುದು) | |
| (ಎ) | ಕೊಪ್ಪಳ ವಿಶ್ವವಿದ್ಯಾಲಯವನ್ನು ಯಾವಾಗ ಪ್ರಾರಂಭಿಸಲಾಗಿದೆ; ಇದರ ಕಾರ್ಯರೂಪವೇನು; ಸದರಿ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ಕಾಲೇಜುಗಳೆಷ್ಟು; ಸದರಿ ಕಾಲೇಜುಗಳ ಮೂಲಕ ಪ್ರವೇಶ ಪಡೆದಿರುವ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳೆಷ್ಟು? (ಕೋರ್ಸುವಾರು, ಕಾಲೇಜುವಾರು ವಿವರ ನೀಡುವುದು) | ಕರ್ನಾಟಕ ರಾಜ್ಯ ವಿಶ್ವವಿದ್ಯಾಯಗಳ (ತಿದ್ದುಪಡಿ) ವಿಧೇಯಕ, 2022ನ್ನು ಅನುಷ್ಠಾನಗೊಳಿಸುವ ಮೂಲಕ ಕೊಪ್ಪಳ ಜಿಲ್ಲೆಯಲ್ಲಿ ಕೊಪ್ಪಳ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸರ್ಕಾರದ ಆದೇಶ ಸಂಖ್ಯೆ: ಇಡಿ 81 ಯುಎನ್ಇ 2022, ದಿನಾಂಕ: 18.04.2022ರನ್ವಯ ಕೆಲವು ಷರತ್ತುಗಳಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದ್ದು, ಅದರನ್ವಯ ಕೊಪ್ಪಳ ವಿಶ್ವವಿದ್ಯಾಲಯವನ್ನು ದಿನಾಂಕ:20.3.2023 ರಿಂದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಲಾಗಿರುತ್ತದೆ.<br><br>ಸದರಿ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ಕಾಲೇಜುಗಳು ಹಾಗೂ ಪ್ರವೇಶ ಪಡೆದಿರುವ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಕೋರ್ಸುವಾರು, ಕಾಲೇಜುವಾರು ವಿವರ **ಅನುಬಂಧ -6**ರಲ್ಲಿರಿಸಿದೆ. |

# ಅನುಬಂಧ-1

## ಸಾರ್ವಜನಿಕ ವಿಶ್ವವಿದ್ಯಾಲಯಗಳು

| ಕ್ರ. ಸಂ. | ವಿಶ್ವವಿದ್ಯಾಲಯಗಳ ಹೆಸರು |
|---|---|
| 1 | ಮೈಸೂರು ವಿಶ್ವವಿದ್ಯಾಲಯ ಮೈಸೂರು. |
| 2 | ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ |
| 3 | ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು |
| 4 | ಗುಲ್ಬರ್ಗ ವಿಶ್ವವಿದ್ಯಾಲಯ ಕಲಬುರಗಿ |
| 5 | ಮಂಗಳೂರು ವಿಶ್ವವಿದ್ಯಾಲಯ ಬೆಂಗಳೂರು |
| 6 | ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟ ಶಿವಮೊಗ್ಗ |
| 7 | ಕನ್ನಡ ವಿಶ್ವವಿದ್ಯಾಲಯ ಹಂಪಿ. |
| 8 | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮೈಸೂರು |
| 9 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ. |
| 10 | ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ |
| 11 | ತುಮಕೂರು ವಿಶ್ವವಿದ್ಯಾಲಯ ತುಮಕೂರು |
| 12 | ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಮೈಸೂರು |
| 13 | ದಾವಣಗೆರೆ ವಿಶ್ವವಿದ್ಯಾಲಯ ದಾವಣಗೆರೆ. |
| 14 | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ. |
| 15 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ. |
| 16 | ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯ ಬೆಂಗಳೂರು |
| 17 | ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ ಶಿಗ್ಗಾವಿ ತಾಲ್ಲೂಕು ಹಾವೇರಿ ಜಿಲ್ಲೆ. |
| 18 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಸೆಂಟ್ರಲ್ ಕಾಲೇಜು ಆವರಣ ಬೆಂಗಳೂರು. |
| 19 | ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ತಮಕಾ ಕೋಲಾರ ಜಿಲ್ಲೆ. |
| 20 | ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ ಬೆಂಗಳೂರು. |
| 21 | ಮಂಡ್ಯ ವಿಶ್ವವಿದ್ಯಾಲಯ ಮಂಡ್ಯ. |
| 22 | ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ ಬೆಂಗಳೂರು. |
| 23 | ರಾಯಚೂರು ವಿಶ್ವವಿದ್ಯಾಲಯ ಯರಗೇರಾ ರಾಯಚೂರು. |
| 24 | ನೃಪತುಂಗ ವಿಶ್ವವಿದ್ಯಾಲಯ ಬೆಂಗಳೂರು. |
| 25 | ಹಾಸನ ವಿಶ್ವವಿದ್ಯಾಲಯ ಹಾಸನ |
| 26 | ಹಾವೇರಿ ವಿಶ್ವವಿದ್ಯಾಲಯ ಹಾವೇರಿ |
| 27 | ಕೊಪ್ಪಳ ವಿಶ್ವವಿದ್ಯಾಲಯ ಕೊಪ್ಪಳ |
| 28 | ಬೀದರ್ ವಿಶ್ವವಿದ್ಯಾಲಯ ಬೀದರ್ |
| 29 | ಚಾಮರಾಜ ನಗರ ವಿಶ್ವವಿದ್ಯಾಲಯ ಚಾಮರಾಜನಗರ |
| 30 | ಕೊಡಗು ವಿಶ್ವವಿದ್ಯಾಲಯ ಕೊಡಗು ಜಿಲ್ಲೆ. |
| 31 | ಬಾಗಲಕೋಟೆ ವಿಶ್ವವಿದ್ಯಾಲಯ ಬಾಗಲಕೋಟೆ |
| 32 | ನಿರ್ದೇಶಕರು ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್ ಬೆಂಗಳೂರು. |

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಎಲ್ಲಾ ಪ್ರಶ್ನೆಗಳಿಗೂ ಚೆನ್ನಾಗಿ ಉತ್ತರವನ್ನು ನೀಡಿದ್ದಾರೆ. ಪ್ರಾದೇಶಿಕ ಸಮತೋಲನ ಎನ್ನುವ ವಿಚಾರ ಬಂದರೆ, ನಮ್ಮ ಕೊಪ್ಪಳ ಜಿಲ್ಲೆಗೆ ಅನ್ಯಾಯವಾಗಿದ್ದು, ಎಲ್ಲದರಲ್ಲಿಯೂ ಈ ಜಿಲ್ಲೆ ಬಹಳಷ್ಟು ಬಲಿ ಪಶುವಾಗಿದೆ ಎಂದು ಹೇಳಬಯಸುತ್ತೇನೆ. ಏಕೆಂದರೆ,

ಕೊಪ್ಪಳ ಎಂಬುದು ಸಿರಿಗನ್ನಡ ನಾಡು. ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಪಿ.ಜಿ. ಕಾಲೇಜುಗಳಿವೆ. ಹಿಂದಿನ ಸರ್ಕಾರದಲ್ಲಿ ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಬಸವರಾಜ ಬೊಮ್ಮಾಯಿರವರು ವಿಶ್ವವಿದ್ಯಾಲಯವನ್ನು sanction ಮಾಡಿದಾಗ ಆ ಭಾಗದ ಜನ ಬಹಳಷ್ಟು ಖುಷಿಪಟ್ಟರು. ಈಗ ನೋಡಿದರೆ ಮಾನ್ಯ ಸಚಿವರು ಆ ವಿಶ್ವವಿದ್ಯಾಲಯವನ್ನು ರದ್ದುಗೊಳಿಸುವಂಥ ವಿಷಯವನ್ನು ಮಾತನಾಡಿದ್ದಾರೆ. ಅದರ ವಿರೋಧ ಬಂದಾಗ ವಿಲೀನ ಮಾಡುತ್ತೇನೆ ಎನ್ನುವಂಥ ಹೊಸ ಹೇಳಿಕೆ ಬರುತ್ತಿದ್ದು, ಏತಕ್ಕೆ ಈ ರೀತಿ ಮಾಡುತ್ತಿದ್ದಾರೆ ಎಂಬುದನ್ನು ಕೇಳಬಯಸುತ್ತೇನೆ. ಕೊಪ್ಪಳ ಭಾಗದಲ್ಲಿ ಕೆಲವೊಂದು ಕಾಲೇಜುಗಳು ಉತ್ತಮವಾಗಿ ನಡೆಯುತ್ತಿದೆ. ಎಲ್ಲದಕ್ಕಿಂತ ಹೆಚ್ಚಾಗಿ ಒಂದು ಭಾಗದಲ್ಲಿ ಇಂಜಿನಿಯರಿಂಗ್ ನಡೆಯುತ್ತಿದೆ. ನಾವೇನು ಎದೆ ಮೇಲೆ ಕುಳಿತುಕೊಂಡು ಭೂಮಿ ಕೊಡಿ, ಅಪಾರ್ಟ್‌ಮೆಂಟ್ ಕೊಡಿ ಎಂದು ಕೇಳುತ್ತಿಲ್ಲ. ಅದೆಲ್ಲವೂ ಮುಗಿದು ಹೋದ ಕಥೆ. ಆ ರೀತಿ ಮಾತನಾಡಿದರೆ ಬಹಳಷ್ಟು ಮಾತನಾಡಬೇಕಾಗುತ್ತದೆ. ಎಲ್ಲಾ ಪ್ರಶ್ನೆಗಳಿಗೂ ಚೆನ್ನಾಗಿ ಸ್ಪಷ್ಟನೆ ನೀಡಿದ್ದಾರೆ. ಆದರೆ, ಕಾಲೇಜುಗಳಿಗೆ ಒಳಪಟ್ಟಿರುವ ಉತ್ತರವನ್ನು ನೋಡಿದಾಗ ಸ್ವಲ್ಪ ಮಾಹಿತಿ ಕಡಿಮೆ ಎಂದು ಅನಿಸುತ್ತದೆ. ಕೊಪ್ಪಳ ವಿಶ್ವವಿದ್ಯಾಲಯದಲ್ಲಿ 40 ಕಾಲೇಜುಗಳು ಒಳಪಟ್ಟಿವೆ. ಆದರೆ, ಅಲ್ಲಿ 11,000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಎಲ್ಲದಕ್ಕಿಂತ ಹೆಚ್ಚಾಗಿ ನಮ್ಮ ಭಾಗದಲ್ಲಿ ಹಣಕಾಸಿನ ವ್ಯವಸ್ಥೆ ಬಗ್ಗೆ ಹೇಳಿ, ನಂತರ ಹಣ ಒದಗಿಸಲು ಹಿನ್ನಡೆ ಮಾಡುತ್ತಿದ್ದಾರೆ. ಇನ್ನೂ ಮುಂದುವರೆದು ಹೇಳುವುದಾದರೆ ಹಣದ ಕೊರತೆ ಬಗ್ಗೆ ಹೇಳುತ್ತಿದ್ದಾರೆ. ಇಲ್ಲಿಯವರೆಗೂ ಕೆ.ಕೆ.ಆರ್.ಡಿ.ಬಿ. ಯ ಅನುದಾನದಿಂದ ನಮ್ಮ ಭಾಗದಲ್ಲಿ ಅಭಿವೃದ್ಧಿ ಕಾರ್ಯಗಳು ಆಗುತ್ತಿವೆ. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಹಾಗೂ ಮಾನ್ಯ ಸಚಿವರಿಗೆ ಕೇಳಬಯಸುವುದೇನೆಂದರೆ, ರೂ.500.00 ಕೋಟಿಗಳನ್ನು ಅಭಿವೃದ್ಧಿ ಕಾರ್ಯಗಳಿಗೆ ನೀಡುತ್ತಿದ್ದು, ಅದರಲ್ಲಿ ಶೇಕಡ 10 ರಷ್ಟು ವಿಶ್ವವಿದ್ಯಾಲಯಕ್ಕೆ ಮೀಸಲಿರಿಸಿ. ಆ ರೀತಿ ಮಾಡಲಿಲ್ಲವೆಂದರೆ, ಅಭಿವೃದ್ಧಿ ಕೆಲಸವು ಹೇಗೆ ಆಗುತ್ತದೆ. ಈಗಾಗಲೇ ಅಲ್ಲಿರುವಂಥ ವಿದ್ಯಾರ್ಥಿಗಳು ನಿರಾಶೆಯಾಗಿದ್ದಾರೆ. ಈಗಾಗಲೇ ವಿಶ್ವವಿದ್ಯಾನಿಲಯಕ್ಕಾಗಿ ನೂರಾರು ಎಕರೆ ಜಮೀನು ಬೇಕೆಂದು ಹೇಳುತ್ತಿದ್ದು, ಅದು ಏತಕ್ಕೆ? ಬೋಧಕ-ಬೋಧಕೇತರ ಖಾಯಂ ಶಿಕ್ಷಕರಿಲ್ಲ, ಆದಾಗ್ಯೂ ಶಾಲೆ ನಡೆಯುತ್ತಿದೆ. ಈ ರೀತಿಯಾಗಿ ಎಲ್ಲವೂ ಸರಾಗವಾಗಿ ನಡೆಯುತ್ತಿರುವಾಗ ಯಾವುದೇ ಸಭೆಗಳನ್ನು ಮಾಡದೇ, ಯಾವುದೇ ತಜ್ಞರ ಅಭಿಪ್ರಾಯ ಪಡೆಯದೇ 9 ವಿಶ್ವವಿದ್ಯಾಲಯಗಳನ್ನು ರದ್ದು ಮಾಡುತ್ತೇವೆ ಎಂದು ಹೇಳುವುದು ಅಷ್ಟು ಸಮಂಜಸವಾಗಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಹೇಮಲತಾ ನಾಯಕರ್‌ರವರೇ, ಈ ಪ್ರಶ್ನೆ ಮೇಲೆ 5 ಮಂದಿ ಮಾತನಾಡಬೇಕಾಗಿದೆ. ಎಲ್ಲರಿಗೂ ಎರಡೆರಡೂ ನಿಮಿಷ ಕಾಲಾವಕಾಶ ಕಲ್ಪಿಸಲಾಗುವುದು.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 5 ನಿಮಿಷ ಮಾತನಾಡಲು ಅವಕಾಶ ಕಲ್ಪಿಸಿ.

**ಉಪ ಸಭಾಪತಿಯವರು:-** ಆಗುವುದಿಲ್ಲ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನನ್ನ ಮನವಿ ಏನೆಂಬುದನ್ನು ಕೇಳಿ.

**(ಗೊಂದಲ)**

**ಉಪ ಸಭಾಪತಿಯವರು:-** ದಯವಿಟ್ಟು ನನ್ನ ಮಾತನ್ನು ಕೇಳಿ. ತಮಗೆ ಮಾತನಾಡಲು ಅವಕಾಶ ಕಲ್ಪಿಸುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಇದೇ ವಿಷಯದ ಕುರಿತು ನಿಯಮ 72 ರಡಿ ಮಾತನಾಡಲು 6 ಮಂದಿ ಅವಕಾಶ ಕೇಳಿದ್ದಾರೆ. ಹಾಗೆಯೇ ಪ್ರಶ್ನೆ ಮೇಲೆ ಮಾತನಾಡಲು 5 ಮಂದಿ ಅವಕಾಶ ಕೇಳಿದ್ದಾರೆ. ದಯವಿಟ್ಟು ನಿಯಮ 72 ರಡಿ ಮಾತನಾಡಲು ಅವಕಾಶ ಕಲ್ಪಿಸಿಬಿಡಿ.

**(ಗೊಂದಲ)**

**ಡಾ|| ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಸುಮಾರು ಮಂದಿ ಮಾತನಾಡಲು ಅವಕಾಶ ಕೇಳಿರುವುದರಿಂದ ನಿಯಮ 330 ರಡಿ ಅಥವಾ ನಿಯಮ 72 ರಡಿ ಅವಕಾಶ ಕಲ್ಪಿಸಿ.

**ಉಪ ಸಭಾಪತಿಯವರು:-** ಹಾಗಾದರೆ, ಈ ವಿಷಯದ ಕುರಿತು ಚರ್ಚಿಸಲು ನಿಯಮ 72 ರಡಿ ಅವಕಾಶ ಕಲ್ಪಿಸಲಾಗುವುದು. ಈಗ ಶೂನ್ಯ ವೇಳೆ ತೆಗೆದುಕೊಳ್ಳಲಾಗುವುದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈಗ 2 ನಿಮಿಷ ಮಾತನಾಡಲು ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಮೇಲೆ 2 ನಿಮಿಷ ಮಾತನಾಡಲು ಅವಕಾಶ ಕಲ್ಪಿಸುತ್ತೇನೆ ಎಂದು ತಾವೇ ಹೇಳಿದ್ದೀರಿ.

**(ಗೊಂದಲ)**

**ಉಪ ಸಭಾಪತಿಯವರು:-** ಆ ರೀತಿ ಆಗುವುದಿಲ್ಲ. ಈಗಾಗಲೇ ನಿಯಮ 72 ರಡಿ ಅವಕಾಶ ಕಲ್ಪಿಸುತ್ತೇನೆ ಎಂದು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, I don't want to waste the precious time of this House.

**(ಗೊಂದಲ)**

**ಉಪ ಸಭಾಪತಿಯವರು:-** ಒಂದು ವೇಳೆ ಈ ವಿಷಯವನ್ನು ನಿಯಮ 72 ರಡಿ ಕನ್ವರ್ಟ್ ಮಾಡದೇ ಇದ್ದ ಪಕ್ಷದಲ್ಲಿ 2 ನಿಮಿಷ ಮಾತನಾಡಲು ಅವಕಾಶ ಕೊಡುತ್ತೇನೆ ಎಂದು ಹೇಳಿರುವುದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಅದಕ್ಕೆ ಪೂರಕವಾಗಿ ಹೇಳಿದ್ದೇನೆ. I don't want to waste the precious time of this House. ಇದು ಬಹಳ ಮುಖ್ಯವಾದ ವಿಚಾರವಾಗಿದೆ. ನನ್ನ ಪ್ರಶ್ನೆ ಸ್ಟಾರ್ ಆಗುವುದೇ ನನಗೆ ದೊಡ್ಡ ಸ್ಟಾರ್ ಸಿಕ್ಕಿದ ಹಾಗೆ ಆಗುತ್ತದೆ. ಆ ಪ್ರಶ್ನೆಯನ್ನು ನಿಯಮ 72 ರಡಿ ಚರ್ಚೆಗೆ ತೆಗೆದುಕೊಳ್ಳಿ. ಈಗ 2 ನಿಮಿಷ ಅವಕಾಶ ಕಲ್ಪಿಸಿ ಮಾನ್ಯ ಸಚಿವರು ಏನೆಂದು ಉತ್ತರ ಕೊಡುತ್ತಾರೆ ಎಂಬುದನ್ನು ನೋಡೋಣ.

**ಉಪ ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ತಾವು ಈಗ ಮಾತನಾಡಿದರೆ, ನಿಯಮ 72 ರಡಿ ಚರ್ಚೆ ಮಾಡಬಾರದು.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದನ್ನು above two minutes ಮಾತನಾಡಲು ಅವಕಾಶ ಕೊಡಬೇಕಾಗುತ್ತದೆ. ಪ್ರಶ್ನೋತ್ತರ ಅವಧಿಯಲ್ಲಿ ಪ್ರಶ್ನೆ ಕೇಳಿದ್ದು,...

**(ಗೊಂದಲ)**

**ಉಪ ಸಭಾಪತಿಯವರು:-** ತಾವು ಅರ್ಥ ಮಾಡಿಕೊಳ್ಳಲಿಲ್ಲವೆಂದರೆ ಹೇಗೆ? ಪ್ರಶ್ನೋತ್ತರ ಅವಧಿಯಲ್ಲಿ ಮಾತನಾಡಿದರೆ 2 ನಿಮಿಷ ಮಾತ್ರ ಅವಕಾಶ ಸಿಗುತ್ತದೆ. ಆದರೆ, ನಿಯಮ 72 ರಡಿ ಮಾತನಾಡಿದರೆ 15 ನಿಮಿಷಗಳವರೆಗೂ ಮಾತನಾಡಬಹುದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಒಂದು ನಿಮಿಷ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಭೋಜೇಗೌಡರವರೇ,...

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಐವನ್ ಡಿ'ಸೋಜಾರವರೇ, ಇದು ನನ್ನ ಪ್ರಶ್ನೆಯಾಗಿದ್ದು, ತಾವು ಏತಕ್ಕೆ ಮಧ್ಯೆ ಮಾತನಾಡುತ್ತೀರಿ. ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಿಯಮ 72 ರಡಿ ತೆಗೆದುಕೊಂಡರೆ, ನಾವು ಸ್ವಲ್ಪ ಮಾತನಾಡಬಹುದ್ದಾಗಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, I request the Hon. Member not to interfere in my question.

**ಉಪ ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, it is very clear. ತಾವು ಪ್ರಶ್ನೋತ್ತರ ಅವಧಿಯಲ್ಲಿ 2 ನಿಮಿಷ ಮಾತನಾಡಿದರೆ, ನಿಯಮ 72 ರಡಿ ಮಾತನಾಡಲು ಅವಕಾಶ ಕೊಡುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದು ನಮ್ಮ ಹಕ್ಕಾಗಿದೆ. It's my right. How can you curtail my right? ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೆ ಅದು ಸಮಂಜಸವಾಗಿಲ್ಲವೆಂದಾದ ಪಕ್ಷದಲ್ಲಿ ನಿಯಮ 72 ರಡಿ ಕನ್ವರ್ಟ್ ಮಾಡಿ.

**ಉಪ ಸಭಾಪತಿಯವರು:-** ಸಾಧ್ಯವಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸರಿಯಾಗಿ ಉತ್ತರ ಕೊಡಲಿಲ್ಲವೆಂದರೆ

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಈಗ 2 ನಿಮಿಷ ಮಾತನಾಡಲು ಅವಕಾಶ ಕೊಡುತ್ತೇನೆ ಎಂದು ತಾವೇ ಹೇಳಿದ್ದೀರಿ.

**ಉಪ ಸಭಾಪತಿಯವರು:-** ಈ ವಿಷಯವನ್ನು ನಿಯಮ 72 ಕ್ಕೆ ಕನ್ವರ್ಟ್ ಮಾಡಲಾಗಿದೆ. **(ಗೊಂದಲ)** ಹಾಗಾಗಿ, ಪ್ರಶ್ನೋತ್ತರ ಅವಧಿ ಮುಗಿದಿದೆ. I am very sorry. The Question Hour is closed.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, I am very sorry. ಈ ರೀತಿ ಸದಸ್ಯರ ಹಕ್ಕನ್ನು ಮೊಟಕುಗೊಳಿಸುವಂಥ ಕೆಲಸ ಮಾಡಬಾರದು. This is not fair. ಮಾನ್ಯ ಸಚಿವರು ಉತ್ತರ ನೀಡುವುದು ಸಮಂಜಸವಾಗಿಲ್ಲವೆಂದಾದರೆ, ನಿಯಮ 72 ಕ್ಕೆ ಕನ್ವರ್ಟ್ ಮಾಡಿ. It's not correct.

ಆ) **ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ದಿನಾಂಕ: 10ನೇ ಮಾರ್ಚ್ 2025 ರ ಲಿಖಿತ ಮೂಲಕ ಉತ್ತರಿಸುವ ಸಮೂಹ-1ರ ಒಟ್ಟು 137 ಪ್ರಶ್ನೆಗಳ ಪೈಕಿ 56 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:** ಮಂಡಿಸಲಾಯಿತು.

**೦೩. ನಿಯಮ ೫೯ಎ ಮೇರೆಗೆ ಶೂನ್ಯವೇಳೆ ಸೂಚನೆಗಳು**

**ಅ) ವಿಷಯ:- ಔಷಧಗಳು ಬೇರೆ ಕಡೆ ಕಡಿಮೆ ಬೆಲೆಯಲ್ಲಿ ಲಭ್ಯವಿದ್ದರೂ ಸಹ ಅಂತಹ ಔಷಧಗಳನ್ನು ತಮ್ಮ ಔಷಧಾಲಯಗಳಿಂದಲೇ ಖರೀದಿಸಲು ಒತ್ತಾಯಿಸುತ್ತಿರುವ ಖಾಸಗಿ ಆಸ್ಪತ್ರೆಗಳಿಗೆ ಸುಪ್ರೀಂ ಕೋರ್ಟ್ ಹೇಳಿದಂತೆ ಮಾರ್ಗಸೂಚಿ ರಚಿಸುವ ಕುರಿತು.**

****

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ ೦೫.೦೩.೨೦೨೫ ರಂದು 'ವಿಜಯವಾಣಿ' ದಿನ ಪತ್ರಿಕೆಯಲ್ಲಿ ನಾಗರೀಕರನ್ನು ಶೋಷಣೆಗೆ ಒಳಪಡಿಸುವಂತಹ ಖಾಸಗಿ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಸ್ಥೆಗಳ ವಿರುದ್ಧ ಮಾರ್ಗಸೂಚನೆಗಳನ್ನು ರಚಿಸುವಂತೆ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಖಾಸಗಿ ಆಸ್ಪತ್ರೆಗಳಲ್ಲಿನ ಶೋಷಣೆ ಕುರಿತು ಸಾರ್ವಜನಿಕರ ಹಿತಾಸಕ್ತಿ ಅರ್ಜಿ ವಿಚಾರಣೆ ವೇಳೆ ನ್ಯಾಯಮೂರ್ತಿ ಸೂರ್ಯಕಾಂತ ಹಾಗೂ ನ್ಯಾಯಮೂರ್ತಿ ಎನ್.ಕೆ.ಸಿಂಗ್ ನೇತೃತ್ವದ ಪೀಠ ಈ ನಿರ್ದೇಶನ ನೀಡಿತು. ಈ ಸಂಬಂಧ ಕಡ್ಡಾಯ ನಿರ್ದೇಶನಗಳನ್ನು ನೀಡುವುದು ಸೂಕ್ತವಲ್ಲದಿದ್ದರೂ, ಈ ಸಂಬಂಧ ರಾಜ್ಯ ಸರ್ಕಾರಗಳನ್ನು ಸಂವೇದನಾಶೀಲಗೊಳಿಸುವುದು ಅಗತ್ಯ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಕೆಲವು ರಾಜ್ಯಗಳು ಅಗತ್ಯ ವೈದ್ಯಕೀಯ ಆರೈಕೆ ಒದಗಿಸುವಲ್ಲಿ ವಿಫಲವಾಗಿದೆ. ಇದರಿಂದ ಖಾಸಗಿ ಆಸ್ಪತ್ರೆಗಳಿಗೆ ಅನುಕೂಲ ಹಾಗೂ ಉತ್ತೇಜನ ಒದಗಿಸುವಂಥದ್ದಾಗಿದೆ. ಅಂತಹ ಸಂಸ್ಥೆಗಳನ್ನು ರಾಜ್ಯ ಸರ್ಕಾರಗಳು ನಿಯಂತ್ರಿಸಬೇಕು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಅಲ್ಲದೇ, ಅಗತ್ಯ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದು ಸರ್ಕಾರಗಳ ಕರ್ತವ್ಯ ಎಂದು ಸರ್ವೋಚ್ಛ ನ್ಯಾಯಾಲಯವು ತಿಳಿಸಿದೆ.

ಯಾವುದೇ ಔಷಧಿ ಬೇರೆ ಕಡೆ ಕಡಿಮೆ ಬೆಲೆಯಲ್ಲಿ ಲಭ್ಯ ಇರುವಾಗ ಅಂತಹ ಔಷಧಿಗಳನ್ನು ತಮ್ಮ ಔಷಧಾಲಯಗಳಿಂದಲೇ ಖರೀದಿಸಬೇಕು ಎಂದು ಖಾಸಗಿ ಆಸ್ಪತ್ರೆಗಳು ರೋಗಿಗಳಿಗೆ ಮತ್ತು ಅವರ ಕುಟುಂಬಸ್ಥರಿಗೆ ಒತ್ತಾಯಿಸದಂತೆ ರಾಜ್ಯ ಸರ್ಕಾರಗಳು ಸೂಚಿಸಬೇಕು ಎಂದು ಸುಪ್ರೀಂ ಕೋರ್ಟ್ ಈಗಾಗಲೇ ರಾಜ್ಯ ಸರ್ಕಾರಗಳಿಗೆ ನೋಟೀಸ್ ಜಾರಿ ಮಾಡಿದ್ದು, ಇದಕ್ಕೆ ಪ್ರತಿಯಾಗಿ ಕೆಲವು ರಾಜ್ಯಗಳು ಅಫಿಡವಿಟ್ ಸಲ್ಲಿಸಿವೆ.

ತಮ್ಮದೇ ಆಸ್ಪತ್ರೆಯಲ್ಲಿ ಔಷಧಾಲಯದಲ್ಲಿ ಖರೀದಿಸಲು ಒತ್ತಾಯಿಸುತ್ತಿರುವ ಖಾಸಗಿ ಆಸ್ಪತ್ರೆಗಳಿಗೆ ರಾಜ್ಯ ಸರ್ಕಾರಗಳು ಸುಪ್ರೀಂ ಕೋರ್ಟ್ ಹೇಳಿದಂತೆ ಮಾರ್ಗಸೂಚಿ ರಚಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಡಾ॥ ಶರಣಪ್ರಕಾಶ್ ಆರ್ ಪಾಟೀಲ (ವೈದ್ಯಕೀಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಈಗಾಗಲೇ ಉತ್ತರವನ್ನು ಒದಗಿಸಿದ್ದೇನೆ.

**ಆ) ವಿಷಯ:- ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಮೆ॥ ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್ ಮಳಖೇಡ ಕಂಪನಿಯು ತನ್ನ ನಾಲ್ಕನೆಯ ಸಿಮೆಂಟ್ ಉತ್ಪಾದನಾ ಘಟಕಕ್ಕೆ ರೈತರಿಂದ ಕೃಷಿ ಜಮೀನುಗಳನ್ನು ಖರೀದಿಸಿ ಯೋಗ್ಯ ಬೆಲೆ ನೀಡದಿರುವ ಬಗ್ಗೆ.**

****

**ಡಾ॥ ತಳವಾರ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಮೆ॥ ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್, ರಾಜಶ್ರೀ ಸಿಮೆಂಟ್ ವರ್ಕ್ಸ ಆದಿತ್ಯ ನಗರ, ಮಳಖೇಡ, ಕಂಪನಿಯು ತನ್ನ ನಾಲ್ಕನೆಯ ಸಿಮೆಂಟ್ ಉತ್ಪಾದನಾ ಘಟಕಕ್ಕೆ ಹಂಗನಹಳ್ಳಿ, ಊಡಗಿ, ಹುಡಾ (ಬಿ) ಮತ್ತು ನೃಪತುಂಗ ನಗರ ಗ್ರಾಮಗಳ ರೈತರಿಂದ ಫಲವತ್ತಾದ ಕೃಷಿ ಜಮೀನು ಖರೀದಿಸಿ ಯೋಗ್ಯ ಬೆಲೆ ನೀಡದೆ ವಂಚನೆ ಮಾಡಿರುವ ಬಗ್ಗೆ ವಿಜಯ ಕರ್ನಾಟಕ, ಪ್ರಜಾವಾಣಿ, ವಿಜಯವಾಣಿ' ದಿನಪತ್ರಿಕೆಗಳಲ್ಲಿ ವರದಿಯಾಗಿದೆ. ಅಲ್ಟ್ರಾಟೆಕ್ ಸಿಮೆಂಟ್ ನಾಲ್ಕನೇ ಘಟಕಕ್ಕಾಗಿ ಸರ್ಕಾರ 999 ಎಕರೆ ಕೃಷಿ ಜಮೀನು ಖರೀದಿ ಮಾಡಲು 2010 ರಲ್ಲಿ 572 ಎಕರೆ 24 ಗುಂಟೆ ಹಾಗೂ 2011 ರಲ್ಲಿ 425 ಎಕರೆ 30 ಗುಂಟೆ ಜಮೀನುಗಳ ಅಧಿಸೂಚನೆ ಹೊರಡಿಸಿದೆ. ಜಮೀನು ಖರೀದಿಗೆ ಮಂಜೂರಾತಿ ನೀಡುವಾಗ ಸಾರ್ವಜನಿಕ, ರೈತರ ಹಿತಾಸಕ್ತಿ ವಿಷಯಗಳನ್ನು ಲಿಖಿತರೂಪದಲ್ಲಿ ದಾಖಲಿಸಿರುವುದಿಲ್ಲ ಇದು ಭೂ ಅಧಿನಿಯಮ 1961 ಕಲಂ 109(1)ಎ ರ ಸ್ಪಷ್ಟ ಉಲ್ಲಂಘನೆಯಾಗಿದೆ. ಕಂಪನಿಯವರು ಸರ್ಕಾರದ ಬೀಳು ಭೂಮಿಗೆ ರೂ. 8,00,000/- ರಂತೆ ಖರೀದಿಸಿ, ರೈತರ ಫಲವತ್ತಾದ ಕೃಷಿ ಜಮೀನುಗಳಿಗೆ ರೂ. 3,50,000/- ನೀಡಿ ರೈತರಿಗೆ ವಂಚನೆ ಮಾಡಿರುತ್ತಾರೆ. ಸೇಡಂ ತಾಲೂಕಿನ ನೀಲಹಳ್ಳಿ, ಕೊಂಕನಹಳ್ಳಿ ಮತ್ತು ಬೀರನಳ್ಳಿ ಗ್ರಾಮಗಳಲ್ಲಿ ದಾಲ್ಮಿಯಾ ಸಿಮೆಂಟ್ ಕಂಪನಿಯವರು 2008 ರಲ್ಲಿಯೇ ರೈತರ ಫಲವತ್ತಾದ ಕೃಷಿ ಜಮೀನುಗಳಿಗೆ ರೂ. 8,00,000/- ರಂತೆ ಖರೀದಿಸಿದ್ದಾರೆ ಹಾಗೂ ಭೂಮಿ ಕಳೆದುಕೊಂಡ ರೈತರ ಕುಟುಂಬಗಳಿಗೆ ಉದ್ಯೋಗವನ್ನು ನೀಡಿರುತ್ತಾರೆ. ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್ ಕಂಪನಿಯವರು ರೈತರ ಕುಟುಂಬದ ಸದಸ್ಯರಿಗೆ ಡಾ. ಸರೋಜಿನಿ ಮಹಿಷಿ ವರದಿಯಂತೆ ವಿದ್ಯಾರ್ಹತೆಗೆ ಅನುಗುಣವಾಗಿ ಕಂಪನಿಯಲ್ಲಿ ಖಾಯಂ ಉದ್ಯೋಗ ನೀಡಲು ಕಂದಾಯ ಇಲಾಖೆಯ ಅಧೀನ ಕಾರ್ಯದರ್ಶಿಯವರು 2012 ರಲ್ಲಿ ಆದೇಶಿಸಿದ್ದರು ಕಂಪನಿಯವರು ಭೂಮಿ ಕಳೆದುಕೊಂಡ ರೈತರ ಕುಟುಂಬಗಳಿಗೆ ಉದ್ಯೋಗ ನೀಡಿರುವುದಿಲ್ಲ. ಕಂಪನಿಯವರು ಜಿಲ್ಲೆಯ ಭೂಮಿ, ಅದಿರು, ನೀರು, ಇನ್ನಿತರ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಲಾಭ ಮಾಡಿಕೊಳ್ಳುತ್ತಿದ್ದಾರೆ. ಆದರೆ ಕಂಪನಿಯವರು ರೈತರ ಮತ್ತು ಸಾರ್ವಜನಿಕ ಹಿತ ಕಾಯುತ್ತಿಲ್ಲ. ಇದಕ್ಕಾಗಿ ಭೂಮಿ ಕಳೆದುಕೊಂಡ ರೈತರು 2015 ರಿಂದ 2020 ರ ವರೆಗೆ ಸೇಡಂನ ಸಹಾಯಕ ಆಯುಕ್ತರ ಕಛೇರಿಯ ಎದುರುಗಡೆ ಚಳಿ, ಮಳೆ, ಗಾಳಿ ಲೆಕ್ಕಿಸದೇ 1712 ದಿನಗಳ ಧರಣಿ ಸತ್ಯಾಗ್ರಹ ಮಾಡಿರುತ್ತಾರೆ, ಈ ಧರಣಿಯಲ್ಲಿ 22 ಜನ ರೈತರು ಪ್ರಾಣ ಕಳೆದುಕೊಂಡಿದ್ದಾರೆ. ಅಲ್ಲದೆ ರೈತರು ನಿರಂತರವಾಗಿ ಜಿಲ್ಲಾಧಿಕಾರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಕೈಗಾರಿಕಾ ಸಚಿವರನ್ನು ಸಂಪರ್ಕಿಸಿ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಸೇಡಂ ಹಾಗೂ ಕಲಬುರಗಿಯಲ್ಲಿ ರೈತರಿಗೆ ನ್ಯಾಯ ಒದಗಿಸಲು ಮನವಿ ಸಲ್ಲಿಸಲಾಗಿತ್ತು, ಆದರೆ, ಇಲ್ಲಿಯವರೆಗೆ ಯಾವುದೇ

ಪ್ರಯೋಜನವಾಗಿರುವುದಿಲ್ಲ. ಇದು ಕಂಪನಿಯ ರೈತ ವಿರೋಧಿ ಧೋರಣೆಯನ್ನು ತೋರಿಸುತ್ತದೆ. ಈ ಹಿನ್ನಲೆಯಲ್ಲಿ, ಹಂಗನಹಳ್ಳಿ, ಊಡಗಿ, ಹುಡಾ (ಬಿ) ಮತ್ತು ನೃಪತುಂಗ ನಗರ ಗ್ರಾಮಗಳ ರೈತರ ಜಮೀನುಗಳಿಗೆ ಪರಿಹಾರದ ಉಳಿದ ಮೊತ್ತ ರೂ. 4.50 ಲಕ್ಷ ನೀಡಬೇಕು. ಧರಣಿ ನಿರತ ರೈತರು ಪ್ರಾಣ ಕಳೆದುಕೊಂಡಿದ್ದರಿಂದ ಪ್ರತಿ ಕುಟುಂಬಕ್ಕೆ ರೂ. 10 ಲಕ್ಷ ಪರಿಹಾರ ನೀಡಬೇಕು. ಡಾ. ಸರೋಜಿನಿ ಮಹಿಷಿ ವರದಿಯ ಆದೇಶದಂತೆ ಕಂಪನಿಯು ಭೂಮಿ ಕಳೆದುಕೊಂಡ ಪ್ರತಿ ರೈತರ ಕುಟುಂಬಕ್ಕೆ ಒಂದು ಖಾಯಂ ಉದ್ಯೋಗ ನೀಡಬೇಕೆಂದು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಮಂತ್ರಿಯವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

(ಮುಂದು)

(165) 10.03.2025/1.30/ಎಸ್‌ಕೆ-ಎಕೆ (ಉಪ ಸಭಾಪತಿಯವರ ಉಪಸ್ಥಿತಿ)

**ಇ) ವಿಷಯ:- ಬಾಗಲಕೋಟೆ ಜಿಲ್ಲೆಗೆ 4 ಹೊಸ ತಾಲ್ಲೂಕುಗಳು ಘೋಷಣೆಯಾಗಿದ್ದರೂ ಸರ್ಕಾರದಿಂದ ತಾಲ್ಲೂಕುಗಳ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಇರುವ ಬಗ್ಗೆ.**

-------

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಹಲವು ವರ್ಷಗಳ ಹೋರಾಟದ ಫಲವಾಗಿ ಬಾಗಲಕೋಟೆ ಜಿಲ್ಲೆಗೆ ನಾಲ್ಕು ಹೊಸ ತಾಲ್ಲೂಕುಗಳು ಘೋಷಣೆಯಾಗಿದ್ದರೂ ಹೆಸರಿಗಷ್ಟೇ ಮೂರು ಮತ್ತೊಂದು ತಾಲ್ಲೂಕು ಎಂಬಂತಾಗಿರುವ ಬಗ್ಗೆ "ಉದಯವಾಣಿ" ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ಈ ಪೈಕಿ ನೂತನ ತಾಲ್ಲೂಕು ಕೇಂದ್ರವಾಗಿರುವ ರಬಕವಿ ಬನಹಟ್ಟಿ ಮೂಲಭೂತ ಸೌಕರ್ಯಗಳನ್ನು ಎದರಿಸುತ್ತಿದೆ. ತಾಲ್ಲೂಕು ಘೋಷಣೆಯಾಗಿ 9 ವರ್ಷಗಳು ಕಳೆದರೂ ತಾಲ್ಲೂಕು ಪಂಚಾಯತಿ ಕಛೇರಿ ಹೊರತುಪಡಿಸಿ ಯಾವುದೇ ಇಲಾಖೆ ಕಛೇರಿಗಳು ಇಲ್ಲ ಕಾರ್ಯನಿರ್ವಹಿಸುತ್ತಿಲ್ಲ. ಕಂದಾಯ, ಆರೋಗ್ಯ, ಶಿಕ್ಷಣ, ಕೃಷಿ, ಪಶುಸಂಗೋಪನೆ ಶಿಶು ಅಭಿವೃದ್ಧಿ, ಸಮಾಜ ಕಲ್ಯಾಣ, ಲೋಕೋಪಯೋಗಿ ಇಲಾಖೆ, ತೋಟಗಾರಿಕೆ ಹೀಗೆ ಯಾವುದೇ ಕಚೇರಿಗಳು ಅಲ್ಲಿ ಇರುವುದಿಲ್ಲ ಅದರಂತೆ ಗುಳೇದಗುಡ್ಡ ಪಟ್ಟಣ ತಾಲ್ಲೂಕು ಕೇಂದ್ರವಾಗಿ 9 ವರ್ಷ ಕಳೆದಿದ್ದರೂ ತಹಶೀಲ್ದಾರ್ ಕಛೇರಿ ಹೊರತುಪಡಿಸಿ ಎಲ್ಲದಕ್ಕೂ ಹುನುಗುಂದವನ್ನು ಅಶ್ರಯಸುವಂತಾಗಿದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಎರಡೂ ತಾಲ್ಲೂಕುಗಳನ್ನು ನೋಡಿಕೊಳ್ಳುತ್ತಿದ್ದಾರೆ. ಇನ್ನೂ ತೆರೆದಾಳ ತಾಲ್ಲೂಕು ಸ್ವಾತಂತ್ರ್ಯ ಪೂರ್ವದಲ್ಲಿ ತಾಲ್ಲೂಕು ಕೇಂದ್ರವಾಗಿತ್ತು ಆ ಬಳಿಕ ತಾಲ್ಲೂಕು ಸ್ಥಾನಮಾನವನ್ನು ಕಳೆದುಕೊಂಡಿತ್ತು. ಆದರೆ ಹಲವಾರು ವರ್ಷಗಳ ಹೋರಾಟಕ್ಕೆ ಮಣಿದು ಹೊಸ ತಾಲ್ಲೂಕು ಎಂದು ಆಧಿಸೂಚನೆ ಹೊರಡಿಸಿದ್ದರೂ ಇಂದಿಗೂ ಪೂರ್ಣಪ್ರಮಾಣದಲ್ಲಿ ಜಾರಿಗೆ ಬಂದಿರುವುದಿಲ್ಲ.

ಈ ಎಲ್ಲ ತಾಲ್ಲೂಕುಗಳಿಗೆ ಸಿಗಬೇಕಾದ ಸ್ಥಾನಮಾನಗಳು ಇದುವರೆಗೂ ದೊರೆಯದಿರುವುದು ಅತ್ಯಂತ ನೋವಿನ ಸಂಗತಿಯಾಗಿರುತ್ತದೆ. ಸರ್ಕಾರಕ್ಕೆ ಸಂಕಷ್ಟಗಳು ಹೊಸದಲ್ಲ. ಆದರೆ ರಾಜ್ಯದಲ್ಲಿ ಅಧಿಕೃತವಾಗಿ ಹೊಸ ತಾಲ್ಲೂಕುಗಳು ರಚನೆಯಾದ ಮೇಲೆ ಪೂರ್ಣ ಪ್ರಮಾಣದ ಕಛೇರಿ ಕಾರ್ಯರಂಭಕ್ಕೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತದೆ.

ಆದಕಾರಣ, ಸರ್ಕಾರದ ಈ ನಾಲ್ಕೂ ತಾಲ್ಲೂಕುಗಳ ಅಭಿವೃದ್ಧಿಗೆ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರನ್ನು ಒದಗಿಸಲಾಗುವುದು.

**ಈ) ವಿಷಯ: ಮಾರುಕಟ್ಟೆಯಲ್ಲಿ ಮೆಣಸಿನಕಾಯಿ ಬೆಲೆ ಕುಸಿತ ಮತ್ತು ಬಳ್ಳಾರಿಯಲ್ಲಿ ಮೆಣಸಿನಕಾಯಿ ಮಾರುಕಟ್ಟೆ ಸ್ಥಾಪಿಸುವ ಕುರಿತು.**

------

**ಶ್ರೀ ವೈ ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಮಾನ್ಯ ಸಭಾಪತಿಯವರೇ, ದಿನಾಂಕ 07.03.2025ರಂದು ದಿನ ಪತ್ರಿಕೆಗಳಲ್ಲಿ ಸುದ್ದಿಯಾಗಿರುವ "ಮಾರುಕಟ್ಟೆಯಲ್ಲಿ ಮೆಣಸಿನಕಾಯಿ ಬೆಲೆ ಕುಸಿತ ಮತ್ತು ಬಳ್ಳಾರಿಯಲ್ಲಿ ಮೆಣಸಿನಕಾಯಿ ಮಾರುಕಟ್ಟೆ ಸ್ಥಾಪಿಸಲು ಅಗ್ರಹ" ಎಂಬ ಸುದ್ದಿಯು ಪ್ರಕಟವಾಗಿದ್ದು, ಬಳ್ಳಾರಿ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಸುಮಾರು 43 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮೆಣಸಿನಕಾಯಿಯನ್ನು ಬೆಳೆಯುತ್ತಿದ್ದು, ಕಳೆದ ಎರಡು ಮೂರು ವರ್ಷಗಳಿಂದ ಒಣಮೆಣಸಿನಕಾಯಿಯ ದರವು ಕುಸಿತವಾಗಿ ರೈತರನ್ನು ಸಂಕಷ್ಟಕ್ಕೆ ದೂಡಿದೆ. ಆಳುಕಾಳು, ಬಿತ್ತನೆ ಬೀಜ, ಹಿಡುವಳಿ ಎಲ್ಲಾವನ್ನು ಸೇರಿಸಿದರೆ, ಖರ್ಚು ಮಾಡಿದ ಬೆಲೆಯು ಸಹ ಬರದೇ ರೈತರನ್ನು ಸಾಲಗಾರ್ರಾಗಿ ಮಾಡಿದೆ. ಅಲ್ಲದೆ ಜಿಲ್ಲೆಯಲ್ಲಿ ಒಣಮೆಣಸಿನಕಾಯಿ ಮಾರುಕಟ್ಟೆ ಇಲ್ಲದೇ ತೊಂದರೆಯಾಗಿದ್ದು, ರೈತರಿಗೆ ತೊಂದರೆಯಾಗಿರುತ್ತದೆ.

ಈ ಜಿಲ್ಲೆ ಮೆಣಸಿನಕಾಯಿ ಬೆಲೆ ಕುಸಿತವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ ಬೆಂಬಲ ಬೆಲೆಯನ್ನು ಘೋಷಿಸುವ ಮೂಲಕ ಹಾಗೂ ಬಳ್ಳಾರಿಯಲ್ಲಿ ತುರ್ತಾಗಿ ಒಣಮೆಣಸಿನಕಾಯಿ ಮಾರುಕಟ್ಟೆ ಸ್ಥಾಪಿಸುವ ಮೂಲಕ ರೈತರ ನೆರವಿಗೆ ಬರುವಂತೆ ಈ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರನ್ನು ಒದಗಿಸಲಾಗುವುದು.

**ಉ) ವಿಷಯ: ಚಾಮರಾಜನಗರ ಜಿಲ್ಲೆಯ ನಂಜನಗೂಡು ತಾಲ್ಲೂಕಿನ ವರುಣ ವಿಧಾನಸಭಾ ವ್ಯಾಪ್ತಿಯ ಕೆರೆ ಸಂರಕ್ಷಣೆ ಕುರಿತು.**

------

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಚಾಮರಾಜನಗರ ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಆಳಗುಂಚೆ ಗ್ರಾಮದ ಮಹಾಲಿಂಗೇಶ್ವರ ದೇವಾಲಯದ ಆವರಣದಲ್ಲಿದ್ದ 692 ವರ್ಷಗಳಷ್ಟು ಪುರಾತನ ಕಾಲದ ಕೆರೆ ಅಥವಾ ಕಲ್ಯಾಣಿಯಲ್ಲಿ ನೀರು ನಿಲ್ಲುವುದಿಲ್ಲ ಎಂಬ ನೆಪವೊಡ್ಡಿ ಕೆರೆ ಮುಚ್ಚಿ ಹಾಕಿ ಆಟದ ಮೈದಾನ ನಿರ್ಮಾಣ ಕಾರ್ಯ ನಡೆಯುತ್ತಿರುವ ಬಗ್ಗೆ ದಿನಾಂಕ 09.03.2025ರ "ಕನ್ನಡ ಪ್ರಭ" ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ನನ್ನ ಮತ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ಈ ಆಳಗಂಚಿ ಗ್ರಾಮದ ಕೆರೆಯನ್ನು 1333 ರಲ್ಲಿ ನಿರ್ಮಿಸಿರುವ ಬಗ್ಗೆ ದೇವಾಲಯದ ಮುಂಭಾಗ ಶಾಸನವಿದ್ದು, ದೇವಸ್ಥಾನದ ಸ್ವಚ್ಛತೆಗಾಗಿ, ನೈವೇದ್ಯಕ್ಕಾಗಿ ಜನರು ಕುಡಿಯುವ ನೀರು ಮತ್ತು ದನಕರುಗಳಿಗೆ ನೀರಿನ ಸೌಲಭ್ಯಕ್ಕಾಗಿ ಮುಜರಾಯಿ ಇಲಾಖೆಗೆ ಸೇರಿದ ಈ ಕೆರೆಕಟ್ಟೆಯನ್ನೇ ಅಲವಂಭಿಸಿದ್ದರು. ಆದರೆ ಕ್ರಮೇಣ ಮಳೆಯ ಆಭಾವದಿಂದ ನೀರಿನ ಮಾರ್ಗಗಳು ತಪ್ಪಿ ಹೋಗಿ ಕೆರೆ ಬತ್ತಿದ್ದರಿಂದ ಪುನರಜ್ಜೀವನಕ್ಕಾಗಿ ನರೇಗಾ ಯೋಜನೆಯಡಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಆದರೂ ನೀರಿನ ಮಾರ್ಗಗಳು ತಪ್ಪಿದ್ದರಿಂದ ಕೆಲವು ಪ್ರಭಾವಿಗಳಂದಾಗಿ ಕೆರೆಯನ್ನು ಆಟದ ಮೈದಾನವನ್ನಾಗಿ ನಿರ್ಮಿಸುತ್ತಿರುವ ಬಗ್ಗೆ ಗ್ರಾಮಸ್ಥರು, ಪರಿಸರ ಪ್ರೇಮಿಗಳು ಪ್ರತಿಭಟನೆ ನಡೆಸಿದ್ದು, ಸರ್ಕಾರದ ಅನುಮತಿ ಪಡೆಯದೇ ಕೆರೆ ಮುಚ್ಚುತ್ತಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುತ್ತಾರೆ.

ಕೆರೆ ಮುಚ್ಚುವುದಾಗಿದ್ದಲ್ಲಿ ಅನ್ಯಥಾ ನರೇಗಾ ಹಣ ಖರ್ಚು ಮಾಡುವ ಅವಶ್ಯಕತೆ ಏನಿತ್ತು? ಕೆರೆ ಮುಚ್ಚುವಿಕೆಯಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಧಾರ್ಮಿಕ ದತ್ತಿ ಇಲಾಖೆಯ ಅಧಿಕಾರಿಗಳು ಮತ್ತು ಕಂದಾಯ ಅಧಿಕಾರಿಗಳು ಹಾಗೂ ನೀರಾವರಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಈ ಕೆರೆಯನ್ನು ಮುಚ್ಚಲು ಹೊರಟಿರುವವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಪ್ರಭಾವಿಗಳ ಒತ್ತಡಕ್ಕೆ ಮಣಿಯದೇ ಕೆರೆ ಸಂರಕ್ಷಣೆ

ಮಾಡಿ, ಕೆರೆಯನ್ನು ಯಥಾಸ್ಥಿತಿ ಮರು ನಿರ್ಮಾಣ ಮಾಡಿ ಪುನರುಜ್ಜೀವನಗೊಳಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎನ್. ಎಸ್ ಬೋಸರಾಜು (ಸಣ್ಣ ನೀರಾವರಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ಇದು ಸಣ್ಣ ನೀರಾವರಿ ಇಲಾಖೆ ಸಂಬಂಧಪಡುವುದಿಲ್ಲ. ಈಗಾಗಲೇ ನಾನು verify ಮಾಡಿಸಿದ ನಂತರ ನಮ್ಮ ಇಲಾಖೆಗೆ ಸೇರಿರುವಂತಹ ಕೆರೆ ಅಲ್ಲ. ನಮ್ಮ ಅಧಿಕಾರಿಗಳ ಮುಖಾಂತರ ಗ್ರಾಮ ಪಂಚಾಯಿತಿಯಲ್ಲಿ verify ಮಾಡಿದಾಗ, ಅಲ್ಲಿಂದ ಒಂದು ವರದಿ ಬಂದಿದೆ. ಇದಕ್ಕೆ ಸಂಬಂಧವಿಲ್ಲದ್ದನ್ನು ತಾವು ಹೇಳುವ ವಿಷಯಗಳನ್ನು ಗಮನಿಸಿದಾಗ, ಮುಜರಾಯಿ ಇಲಾಖೆಗೆ ಸೇರಿರುವಂತಹ ದೇವಸ್ಥಾನವಲ್ಲ. ಎರಡನೆಯದಾಗಿ, ಅದರ ಪಕ್ಕದಲ್ಲಿರುವ 346 ವಿದ್ಯಾರ್ಥಿಗಳಿರುವ ಸರ್ಕಾರಿ ಶಾಲೆಯಾಗಿರುತ್ತದೆ. 2015-16ರಲ್ಲಿ ನರೇಗಾ ಯೋಜನೆಯಿಂದ ಅಲ್ಲಿ ಏನು ಗುಂಡಿ ಇತ್ತು. ಅದರಲ್ಲಿ ನೀರು ಬಂದಿಲ್ಲ ಎಂದು ಹೇಳಿ ಪಂಚಾಯಿತಿಯವರು ತೀರ್ಮಾನ ತೆಗೆದುಕೊಂಡು, ಆ ವಾರ್ಡ್‌ನವರು ಒಂದು ಗ್ರಾಮ ಸಭೆಯನ್ನು ಮಾಡಿ. ಆ ಗ್ರಾಮಸಭೆಯ ಮುಖಾಂತರ ಗ್ರಾಮಸ್ಥರೆಲ್ಲರೂ ಸೇರಿ ಆಟದ ಮೈದಾನ ಮಾಡಬೇಕೆಂದು ಹೇಳಿ, ತೀರ್ಮಾನ ತೆಗೆದುಕೊಂಡಾಗ, ಆ ಗ್ರಾಮ ಪಂಚಾಯ್ತಿಯವರು ಇವತ್ತಿನ ದಿನಾಂಕವನ್ನು ನಮೂದು ನಮಗೆ ಕಳುಹಿಸಿಕೊಟ್ಟಿದ್ದಾರೆ. ಇದಕ್ಕೆ ತಮಗೆ ವಿವರ ಬೇಕೆಂದರೆ, ಆರ್.ಡಿ.ಪಿ.ಆರ್. ಇಲಾಖೆಯಲ್ಲಿ verify ಮಾಡಿದಾಗ, ಇದು ಮುಜರಾಯಿ ಇಲಾಖೆಗೆ ಸೇರಿಲ್ಲ. ಇದು ನೀರಾವರಿಗೆ ಸಂಬಂಧಪಟ್ಟ ಕೆರೆಯಲ್ಲ. ಈ ಗ್ರಾಮ ಪಂಚಾಯಿತಿಯವರು ಕೊಟ್ಟಿರುವ ಪ್ರಕಾರ ಕೆರೆ ಕಟ್ಟೆ, ಕಲ್ಯಾಣಿ ಯಾವುದೂ ಅಲ್ಲಿ ಇರುವುದಿಲ್ಲ ಎಂದು ವರದಿ ಕಳುಹಿಸಿದ್ದಾರೆ. ಇದಕ್ಕೆ ಮಾಹಿತಿ ಬೇಕೆಂದರೆ, ಆರ್.ಡಿ.ಪಿ.ಆರ್.,ನಿಂದ ಕೊಡಿಸುತ್ತೇವೆ.

(ಮುಂದು)

(166) 10.03.2025/1.40/ಟಿಸಿಹೆಚ್-ಆರ್‌ಎನ್ (ಉಪ ಸಭಾಪತಿಯವರ ಉಪಸ್ಥಿತಿ)

**ಊ)ವಿಷಯ:- ತುಂಗಭದ್ರಾ ನದಿ ತೀರದಲ್ಲಿ ಪರವಾನಗಿ ಪಡೆಯದೇ ಹಲವಾರು ರೆಸಾರ್ಟ್‌ಗಳು ಅನಧಿಕೃತವಾಗಿ ತಲೆ ಎತ್ತಿರುವ ಕುರಿತು.**

-----

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ತಮಿಳುನಾಡು ಮೂಲದ ಮಹಿಳೆಯೊಬ್ಬರು ಗಂಗಾವತಿ ಸಣಾಪುರ ಬಳಿ ಹೋಮ್ ಸ್ಟೇ ನಡೆಸುತ್ತಾರೆ. ಈಕೆ ಮಾರ್ಚ್ 6ನೇ ತಾರೀಖು ರಾತ್ರಿ, ಅಮೆರಿಕಾ ಪ್ರಜೆ ಶ್ರೀ ಡ್ಯಾನಿಯಲ್, ಇಸ್ರೇಲ್ ದೇಶದ ಮಹಿಳಾ ಪ್ರವಾಸಿ, ಮಹಾರಾಷ್ಟ್ರದ ನಾಸಿಕ್‌ನ ಪಂಕಜ್ ಪಟೇಲ್ ಹಾಗೂ ಒರಿಸ್ಸಾದ ಬಿಬಾಸ್ ಎಂಬುವವರನ್ನು ರಾತ್ರಿ ವಾಯುವಿಹಾರಕ್ಕೆ ಕರೆದೊಯ್ದಿದ್ದಾರೆ. ನಿರ್ಜನ ಪ್ರದೇಶದಲ್ಲಿ ರಾತ್ರಿ ಸಮಯ 11.30ರ ವೇಳೆಗೆ ಪ್ರವಾಸಿಗರು ಗೀಟಾರ್ ನುಡಿಸಿಕೊಂಡು ಕಾಲುವೆ ಮೇಲೆ ಕುಳಿತಿದ್ದಾಗ, ಬೈಕ್‌ನಲ್ಲಿ ಬಂದಿದ್ದ ಮೂವರು ಯುವಕರು, ಹಣ ಕೇಳುವ ನೆಪದಲ್ಲಿ ಬಂದು, ಪ್ರವಾಸಿಗರಿಂದ ಹಣದ ಬ್ಯಾಗ್ ಮತ್ತು ಮೊಬೈಲ್‌ಅನ್ನು ಕಿತ್ತುಕೊಂಡಿದ್ದಾರೆ.

ನಂತರ ರೆಸಾರ್ಟ್ ಒಡತಿ ಮತ್ತು ಇಸ್ರೇಲ್ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದ್ದಾರೆ. ಅತ್ಯಾಚಾರ ತಡೆಯಲು ಬಂದಿದ್ದ ಅಮೇರಿಕಾದ ಶ್ರೀ ಡ್ಯಾನಿಯಲ್, ಮಹಾರಾಷ್ಟ್ರ ಮೂಲ ಶ್ರೀ ಪಂಕಜ್ ಪಟೇಲ್ ಹಾಗೂ ಒರಿಸ್ಸಾ ಮೂಲದ ಶ್ರೀ ಬಿಬಾಸ್ ರವರನ್ನು ಕಾಲುವೆಗೆ ತಳ್ಳಿದ್ದಾರೆ. ಕಾಲುವೆಯಿಂದ ಮೇಲೆ ಬರಲು ಯತ್ನಿಸಿದ ಶ್ರೀ ಬಿಬಾಸ್ ಮೇಲೆ ಆರೋಪಿಗಳು ಕಲ್ಲು ಎತ್ತಿ ಹಾಕಿದ್ದು, ಈಜು ಗೊತ್ತಿದ್ದರೂ ಮೇಲೆ ಬರಲು ಸಾಧ್ಯವಾಗದೇ ಶನಿವಾರ ಶವವಾಗಿ ಪತ್ತೆ ಆಗಿದ್ದಾನೆ. ಅಮೇರಿಕಾದ ಶ್ರೀ ಡ್ಯಾನಿಯಲ್ ಎಂಬಾತ ಶ್ರೀ ಪಂಕಜ್‌ರನ್ನು ರಕ್ಷಣೆ ಮಾಡಿ ತಾನೂ ಪ್ರಾಣಾಪಾಯದಿಂದ ಪಾರಾಗಿದ್ದಾನೆ.

ಘಟನೆಗೆ ಸಂಬಂಧಿಸಿದಂತೆ, ಗಂಗಾವತಿ ಪೋಲೀಸರು, ಗಂಗಾವತಿಯ ಸಾಯಿನಗರದ ನಿವಾಸಿಗಳಾದ ಶ್ರೀ ಮಲ್ಲೇಶ್ ಅಲಿಯಾಸ್ ಹಂದಿ ಮಲ್ಲ, ಸುಮಾರು 22 ವರ್ಷ, ಶ್ರೀ ಚೇತನಸಾಯಿ ಶಿಳ್ಳೇಕ್ಯಾತರ್ ಸುಮಾರು 21 ವರ್ಷ ಮತ್ತು ಶ್ರೀ ಸಾಯಿನಗರದ ಶ್ರೀ ಶರಣು ಸುಮಾರು 23 ವರ್ಷ ಎಂಬುವರನ್ನು ಬಂಧಿಸಿದ್ದಾರೆ. ಈ ಘಟನೆಗೆ ಕೊಪ್ಪಳ ಪೋಲೀಸ್ ಮತ್ತು ಜಿಲ್ಲಾಡಳಿತ ವೈಫಲ್ಯವೇ ಕಾರಣವಾಗಿದೆ. ದೇಶವೇ ತಲೆತಗ್ಗಿಸುವ ಈ ಘಟನೆಯಲ್ಲಿ ಪೋಲೀಸ್ ವೈಫಲ್ಯ ಎದ್ದು ಕಾಣುತ್ತಿದೆ. ವಿದೇಶಿ ಮಹಿಳೆ ಮೇಲೆ ಅತ್ಯಾಚಾರ ಮಾಡಿರುವ ಮೂವರು ಆರೋಪಿಗಳು,

ಈ ಹಿಂದೆಯೂ ಬೇರೆಬೇರೆ ಪ್ರಕರಣದಲ್ಲಿ ಪೊಲೀಸ್ ಠಾಣೆಗೆ ಬಂದು ಹೋಗಿದ್ದರು. ಆರೋಪಿ ಶ್ರೀ ಮಲ್ಲೇಶ್ ಅಲಿಯಾಸ್ ಹಂದಿ ಮಲ್ಲನ ವಿರುದ್ಧ ಗಂಗಾವತಿ ನಗರ ಮತ್ತು ಗ್ರಾಮೀಣ ಠಾಣೆಯಲ್ಲಿ ಅನೇಕ ಪ್ರಕರಣಗಳು ದಾಖಲಾಗಿವೆ. ಇತ್ತೀಚೆಗಷ್ಟೇ ಬಸವನದುರ್ಗ ಗ್ರಾಮದಲ್ಲಿ ಕಿರಾಣಿ ಅಂಗಡಿ ಮತ್ತು ಬೈಕ್ ಕಳ್ಳತನ ಮಾಡಿದ್ದರು. ಸಂಗಾಪುರ ಗ್ರಾಮದಲ್ಲಿ ಮಹಿಳಾ ಶಿಕ್ಷಕಿ ಮೇಲೆ ಹಲ್ಲೆ ಮಾಡಿದ್ದರು. ಈ ಎಲ್ಲಾ ಪ್ರಕರಣ ಪೊಲೀಸ್ ಠಾಣೆ ಮೆಟ್ಟಿಲು ಏರಿದ್ದರೂ ಕೂಡ ಪ್ರಕರಣ ದಾಖಲಾಗಿಲ್ಲ. ಬದಲಿಗೆ ಪೊಲೀಸ್ ಠಾಣೆಯಲ್ಲೇ ರಾಜಿ-ಸಂಧಾನ ನಡೆದಿದೆ. ತುಂಗಾಭದ್ರ ನದಿ ತೀರದಲ್ಲಿ ಮತ್ತು ನದಿ ತೀರದ ಗ್ರಾಮದಲ್ಲಿ ನೂರಾರು ರೆಸಾರ್ಟ್‌ಗಳು ನಾಯಿ ಕೊಡೆಗಳಂತೆ ತಲೆ ಎತ್ತಿವೆ. ಬಹುತೇಕ ರೆಸಾರ್ಟ್, ಹೋಮ್‌ಸ್ಟೇಗಳೂ ಭೂಮಿ NA ಮಾಡಿಲ್ಲ. ಯಾವುದೇ ಪರವಾನಗಿ ಪಡೆದಿಲ್ಲ. ಇವುಗಳ ಮೇಲೆ ಯಾರದು ಹಿಡಿತ ಇಲ್ಲ. ಹಂಪಿಗೆ ಬರುವ ದೇಶ, ವಿದೇಶಿ ಪ್ರವಾಸಿಗರಿಗೆ ಇವೇ ಮೋಜಿನ ತಾಣಗಳಾಗಿವೆ. ಇಲ್ಲಿ ಅನಧಿಕೃತ ಮದ್ಯ ಮಾರಾಟ ಸೇರಿ, ಎಲ್ಲಾ ರೀತಿಯ ಮಾದಕ ವಸ್ತು ಸಿಗುತ್ತವೆ ಎಂಬ ಆರೋಪ ಇದೆ. ಇದಕ್ಕೆಲ್ಲಾ ಪೊಲೀಸ್‌ನವರ ಸಾತ್ ಇದೆ ಹಾಗೂ ಕೊಪ್ಪಳ ಪೊಲೀಸರು ರೆಸಾರ್ಟ್ ಮೇಲೆ ಎಷ್ಟು ಅನಿರೀಕ್ಷಿತ ದಾಳಿ ಮಾಡಿ, ಎಷ್ಟು ಮಾದಕ ವಸ್ತುಗಳನ್ನು ವಶಕ್ಕೆ ಪಡೆದಿದ್ದಾರೆ ಎಂಬ ಬಗ್ಗೆ ಮಾಹಿತಿ ನೀಡಲಿ ಎಂಬ ದೂರು ಸ್ಥಳೀಯರಿಂದ ಕೇಳಿಬಂದಿದೆ. ಆದ್ದರಿಂದ ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಯವಿಟ್ಟು ತಾವು ಇದನ್ನು ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ಕೊಡಬೇಕು. ಇದನ್ನು ನಿಯಮ ೩೩೦ಕ್ಕೆ convert ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದು ಕೇವಲ ಜಿಲ್ಲೆ ಅಥವಾ ರಾಜ್ಯದ ಸಮಸ್ಯೆಯಾಗಿರದೆ, ಈಗ ಇದು ಅಂತರ್‌ರಾಷ್ಟ್ರೀಯ ಮಟ್ಟದ ಸಮಸ್ಯೆಯಾಗುತ್ತಿದೆ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ನೋಟೀಸ್ ಕೊಡಿ ನಾನು ಯಾವ ನಿಯಮದಲ್ಲಿ ಬರುತ್ತದೆಂದು ನೋಡಿ consider ಮಾಡುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಇದಕ್ಕೆ ವಿಶೇಷ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ವಿಶೇಷ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ದಯವಿಟ್ಟು ನಿಯಮ 330 ರಲ್ಲಿ ತಗೆದುಕೊಳ್ಳುತ್ತೀರೋ ಅಥವಾ ಯಾವ ನಿಯಮದಲ್ಲಿ ತೆಗೆದುಕೊಳ್ಳುತ್ತೀರಿ ಹೇಳಿ.

**ಉಪ ಸಭಾಪತಿಯವರು:-** ನೋಟೀಸ್ ಕೊಟ್ಟಿದ್ದಾರೆ, ಹೇಗೆ ಅದನ್ನು consider ಮಾಡಬೇಕೆಂದು ಹೇಳುತ್ತೇನೆ. ವಿದೇಶಿ ಪ್ರವಾಸಿಗರ ಮೇಲೆ ದೂರು ಬಂದಿರುವ ದೆಸೆಯಿಂದ ಇದನ್ನು ಯಾವ ನಿಯಮದಲ್ಲಿ ತೆಗೆದುಕೊಳ್ಳಬೇಕೆಂದು ಇಂದು ಮಧ್ಯಾಹ್ನ ಹೇಳುತ್ತೇನೆ. ಆಯಿತು, ನಿಯಮ 330 ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಲಾಗಿದೆ.

**ಖ) ವಿಷಯ:- ಕಬ್ಬನ್ ಪಾರ್ಕ್‌ನ ವೆಂಕಟಪ್ಪ ಆರ್ಟ್ ಗ್ಯಾಲರಿ ಮುಂಭಾಗದಲ್ಲಿ ಖಾಸಗಿ ಕಂಪನಿ ಮ್ಯಾಪ್ ಆರ್ಟ್ ಗ್ಯಾಲರಿ ನಿರ್ಮಿಸಲು 5 ಎಕರೆ ಜಮೀನು ನೀಡುತ್ತಿರುವುದನ್ನು ರದ್ದುಪಡಿಸುವ ಕುರಿತು.**

-----

**ಶ್ರೀ ಟಿ.ಎನ್.ಜವರಾಯಿಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

ದಿನಾಂಕ 05.03.2025 ಮತ್ತು 06.03.2025ರ ರಾಜ್ಯದ ಪ್ರಮುಖ ಪತ್ರಿಕೆಗಳಾದ ಕ್ರಮವಾಗಿ 'ವಿಜಯವಾಣಿ' ಮತ್ತು 'ವಿಜಯ ಕರ್ನಾಟಕ'ದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ವರದಿಯಾಗಿದೆ. ಬೆಂಗಳೂರು ನಿವಾಸಿಗಳಿಗೆ ಲಾಲ್ ಬಾಗ್ ಮತ್ತು ಕಬ್ಬನ್ ಪಾರ್ಕ್ ಎರಡು ಕಣ್ಣುಗಳಿದ್ದಂತೆ. ಈಗಾಗಲೇ ಕಬ್ಬನ್ ಪಾರ್ಕ್‌ಗೆ ಹೊಂದಿಕೊಂಡಂತೆ ವಿಶ್ವೇಶ್ವರಯ್ಯ ಮ್ಯೂಸಿಯಂ ಹಾಗೂ ಬಾಲಭವನ ಇರುವಾಗ ಕಬ್ಬನ್ ಪಾರ್ಕ್‌ನ ವೆಂಕಟಪ್ಪ ಆರ್ಟ್ ಗ್ಯಾಲರಿ ಮುಂಭಾಗದಲ್ಲಿ ಖಾಸಗಿ ಕಂಪನಿಯವರಿಗೆ ಮ್ಯಾಪ್ ಆರ್ಟ್ ಗ್ಯಾಲರಿ ನಿರ್ಮಿಸಲು 5 ಎಕರೆ ಜಮೀನು ನೀಡುತ್ತಿರುವ ಸರ್ಕಾರದ ನಡೆ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಕಬ್ಬನ್ ಪಾರ್ಕ್ ನಗರದ ಪರಂಪರೆಯ ಸಂಕೇತ. ಅಲ್ಲಿನ ಪರಿಸರ ಸಂಪತ್ತನ್ನು ಉಳಿಸಿ, ಬೆಳೆಸಿ ಮುಂದಿನ ಜನಾಂಗಕ್ಕೆ ಉಳಿಸುವುದು ಎಲ್ಲರ ಕರ್ತವ್ಯ. ನಗರದ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಕಬ್ಬನ್ ಪಾರ್ಕ್ ಪಾತ್ರ ಮಹತ್ವವಾದುದ್ದು. ಸಾರ್ವಜನಿಕ ಸಮಾಲೋಚನೆ ಇಲ್ಲದೇ ಈ ಯೋಜನೆ ಗುಪ್ತವಾಗಿ ಸಾಗುತ್ತಿದ್ದು, ಸರ್ವೇ ಮುಂತಾದ ಪ್ರಕ್ರಿಯೆಯನ್ನು ಪ್ರಾರಂಭ ಮಾಡಲಾಗುತ್ತಿದೆ.

ಆದಕಾರಣ, ಮೇಲೆ ತಿಳಿಸಿರುವ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಸಾರ್ವಜನಿಕರು ಕಬ್ಬನ್ ಪಾರ್ಕ್‌ನ ಸಂಘ ಸಂಸ್ಥೆಗಳು ಹೋರಾಟ, ಪ್ರತಿಭಟನೆ ಮಾಡುತ್ತಿರುವುದರಿಂದ ಕಬ್ಬನ್ ಪಾರ್ಕ್‌ನಲ್ಲಿ ಖಾಸಗಿ ಕಂಪನಿ ವತಿಯಿಂದ ಮ್ಯಾಪ್ ಆರ್ಟ್ ಗ್ಯಾಲರಿ ನಿರ್ಮಿಸಲು 5 ಎಕರೆ ಜಮೀನು ನೀಡುತ್ತಿರುವುದನ್ನು ತಕ್ಷಣವೇ ರದ್ದುಪಡಿಸಬೇಕೆಂದು ಈ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಲಾಗುವುದು.

**ಎ) ವಿಷಯ:- ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ಆಲಮಟ್ಟಿಯ ಲಾಲ್ ಬಹದ್ದೂರ್ ಶಾಸ್ತ್ರಿ ಜಲಾಶಯದಿಂದ ತೆಲಂಗಾಣ ರಾಜ್ಯಕ್ಕೆ ಬಿಡುತ್ತಿರುವ 1.27 ಟಿ.ಎಂ.ಸಿ., ನೀರನ್ನು ಕೂಡಲೇ ನಿಲ್ಲಿಸಿ, ರೈತರಿಗೆ ಅನುಕೂಲ ಕಲ್ಪಿಸುವ ಕುರಿತು.**

-----

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

ರೈತರ ವಿರೋಧದ ನಡುವೆಯೂ ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ಆಲಮಟ್ಟಿಯ ಲಾಲ್ ಬಹದ್ದೂರ್ ಶಾಸ್ತ್ರಿ UKP ಯ ಜಲಾಶಯದಿಂದ ತೆಲಂಗಾಣ ರಾಜ್ಯಕ್ಕೆ ಫೆಬ್ರವರಿ 21ನೇ ತಾರೀಖುನಂದು 1.27 ಟಿ.ಎಂ.ಸಿ ನೀರನ್ನು ಬಿಡುಗಡೆ ಮಾಡಿರುವ ಕುರಿತು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಇದೇ ರೀತಿ 2017-18ನೇ ಸಾಲಿನಲ್ಲಿಯೂ ಸಹ ಬೇರೆ ಬೇರೆ ಯೋಜನೆಗೆ ನೀರು ಬಿಡುಗಡೆ ಮಾಡಿದಾಗ, ಆ ಭಾಗದ ರೈತರು ಆಕ್ಷೇಪಣೆ ಮಾಡಿದರೂ ಸಹ ಆಗಿನ ನೀರಾವಿ ಸಚಿವರು ರೈತರ ಮನವಿಯನ್ನು ಪರಿಗಣನೆಗೆ ತೆಗೆದುಕೊಳ್ಳದೇ ನೀರನ್ನು ಕೆಳಭಾಗದ ನದಿಗೆ ಹಾಗೂ ಕಾರ್ಖಾನೆಗಳಿಗೆ ಬಿಟ್ಟಿರುವುದರಿಂದ ಆ ವರ್ಷ ಸಾಕಷ್ಟು ರೈತರಿಗೆ, ಜನ ಸಾಮಾನ್ಯರಿಗೆ ಅಷ್ಟೇ ಅಲ್ಲದೇ ವಿಜಯಪುರ ನಗರಕ್ಕೆ ಕುಡಿಯಲು ನೀರಿಲ್ಲದೇ ಪರದಾಡುವ ಪರಿಸ್ಥಿತಿಯನ್ನು ಎದುರಿಸಿದ್ದನ್ನು ನಾವು ಪುನಃ ಗಮನಿಸಬೇಕಾದ ಪ್ರಮುಖ ಅಂಶವಾಗಿದೆ. ನದಿಯಲ್ಲಿರುವ ಜಲಚರ ಪ್ರಾಣಿಗಳು ಕೂಡ ನೀರಿಲ್ಲದೇ ಸಾವನ್ನಪ್ಪಿರುವುದು ಮರೆಯುವಂತಿಲ್ಲ ಮತ್ತು ಈ ವರ್ಷ ಮಾರ್ಚ್ ಅಂತ್ಯದಲ್ಲಿಯೇ ಕುಡಿಯುವ ನೀರಿಗೆ ತೊಂದರೆ ಎದುರಾಗಿ ಪರದಾಡುವಂತಾಗುತ್ತದೆ ಎಂಬ ಭಯ ಜನರಲ್ಲಿ ಉಂಟಾಗಿದೆ.

ಹಾಗಾಗಿ, ಮತ್ತೆ ಈ ವರ್ಷದಲ್ಲಿ ತೆಲಂಗಾಣ ಮತ್ತು ಆಂಧ್ರಪ್ರದೇಶಕ್ಕೆ ನೀರು ಬಿಟ್ಟರೆ, ಅಚ್ಚುಕಟ್ಟು ಪ್ರದೇಶದ ರೈತರಿಗೆ ತುಂಬಲಾರದ ನಷ್ಟವನ್ನು ಎದುರಿಸಬೇಕಾಗುತ್ತದೆ ಎಂಬ ಅಂಶವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

ಸರ್ಕಾರವು ನಮ್ಮ ರೈತರ ದನಕರುಗಳ, ಜನ ಸಾಮಾನ್ಯರ ಹಿತದೃಷ್ಟಿಯಿಂದ ತಕ್ಷಣವೇ ಬೇರೆ ರಾಜ್ಯಕ್ಕೆ ಬಿಡುಗಡೆ ಮಾಡುತ್ತಿರುವ ನೀರನ್ನು ನಿಲ್ಲಿಸಬೇಕು ಮತ್ತು ಇನ್ನು ಮುಂದೆ ಮತ್ತೆ ನೀರನ್ನು ಬಿಡುಗಡೆ ಮಾಡುವ ಪ್ರಯತ್ನ ಮಾಡಬಾರದು ಎಂದು ತಮ್ಮ ಮೂಲಕ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಲಾಗುವುದು.

**ಏ) ವಿಷಯ:- ಬೆಂಗಳೂರು ವೈದ್ಯಕೀಯ ಆಸ್ಪತ್ರೆಯ ಮುಂಭಾಗದಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳುವ ಕುರಿತು.**

-----

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಂಗಳೂರು ವೈದ್ಯಕೀಯ ಆಸ್ಪತ್ರೆಯ ಮುಂಭಾಗದಲ್ಲಿ ವೈಟ್ ಟಾಪಿಂಗ್ ಕಾಮಗಾರಿಯಿಂದ ಧೂಳಿನಮಜ್ಜನ ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದಂತಹ ಸುದ್ದಿಯನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಬೆಂಗಳೂರಿನ ಆಸ್ಪತ್ರೆಯ ಮುಂಭಾಗವೇ ತೆರೆದ ಒಳಚರಂಡಿ, ರಸ್ತೆಯಲ್ಲಿಯೇ ಮಣ್ಣಿನ ರಾಶಿ ಅಲಲ್ಲಿ ಬಿದ್ದಿರುವ ಬೃಹತ್ ಕೊಳವೆಗಳು, ರಸ್ತೆ ಮಧ್ಯೆಯೇ ಬ್ಯಾರಿಕೇಡ್ ಅಳವಡಿಕೆಯಿಂದ ಹಾಗೂ ರಸ್ತೆಗಳು ಸಂಪೂರ್ಣ ಹಾಳಾಗಿರುವುದರಿಂದ; ವಾಹನಗಳು ಆಮೆಗತಿಯಲ್ಲಿ ಸಂಚರಿಸಿ ದೂಳಿನಿಂದ ರಕ್ಷಿಸಿಕೊಳ್ಳಲು ಮುಖಗವಸು ಧರಿಸಿರುವ ವ್ಯಾಪಾರಿಗಳು.

ಇದು ನಗರದ ಹೃದಯ ಭಾಗದಲ್ಲಿರುವ ಜೆ.ಸಿ. ರಸ್ತೆಯ ಚಿತ್ರಣ. ಈ ರಸ್ತೆಯಲ್ಲಿ ನಾಲಾ ಜಂಕ್ಷನ್‌ನಿಂದ ಪುರಭವನ ಜಂಕ್ಷನ್‌ವರೆಗೆ ವೈಟ್‌ಟಾಪಿಂಗ್ ಕಾಮಗಾರಿ ಪ್ರಗತಿಯಲ್ಲಿದ್ದು, ಕಳೆದ ನವೆಂಬರ್‌ನಲ್ಲಿ ಪ್ರಾರಂಭವಾದ ಈ ಕಾಮಗಾರಿ ಕುಂಟುತ್ತಾ ಸಾಗುತ್ತಿದೆ. ಪ್ರಸ್ತುತ ಒಳಚರಂಡಿ ಕೊಳವೆ ಹಾಗೂ ಆಪ್ಟಿಕಲ್ ಫೈಬರ್ ಕೇಬಲ್ (ಓಎಫ್‌ಸಿ) ಅಳವಡಿಕೆ ಕಾಮಗಾರಿ ನಡೆಯುತ್ತಿದ್ದು, ಒಳಚರಂಡಿ ಕೊಳವೆ ಅಳವಡಿಕೆ ಸಂಬಂಧ ರಸ್ತೆಯ ಕೆಲವೆಡೆ ಅಗೆದು ಹಾಗೆಯೇ ಬಿಡಲಾಗಿದೆ. ಈ ರಸ್ತೆಯಲ್ಲಿ ಭಾಗಶಃ ಸಂಚಾರ ನಿರ್ಬಂಧ ವಿಧಿಸಿರುವುದರಿಂದ ದಿನದಿಂದ ದಿನಕ್ಕೆ ವಾಹನ ದಟ್ಟಣೆ ಹೆಚ್ಚುತ್ತಲೇ ಇದೆ. ಇನ್ನೊಂದೆಡೆ ಮಣ್ಣು ನಡು ರಸ್ತೆಯಲ್ಲಿ ವ್ಯಾಪಿಸಿಕೊಂಡಿರುವುದರಿಂದ ಇಲ್ಲಿ ಸಂಚರಿಸುವವರಿಗೆ ಧೂಳಿನ ಮಜ್ಜನವಾಗುತ್ತಿದೆ. ಒಳಚರಂಡಿ ಕೊಳವೆ ಹಾಗೂ ಆಪ್ಟಿಕಲ್ ಫೈಬರ್ ಕೇಬಲ್ (ಓಎಫ್‌ಸಿ) ಅಳವಡಿಕೆ ಕಾಮಗಾರಿಯಿಂದಾಗಿ ಪಾದಚಾರಿ ಮಾರ್ಗ ಸಂಪೂರ್ಣ ಕಣ್ಮರೆಯಾಗಿದೆ. ಅಗೆದ ಮಣ್ಣನ್ನು ಕೂಡ ಪಾದಚಾರಿ ಮಾರ್ಗದಲ್ಲಿಯೇ ಹಾಕಲಾಗಿದೆ. ಕೆಲವು ಕೊಳವೆಗಳನ್ನೂ ಇರಿಸಲಾಗಿದೆ. ರಸ್ತೆಯಲ್ಲಿ ವಾಹನ ದಟ್ಟಣೆ ಇರುವುದರಿಂದ ಪಾದಚಾರಿಗಳು ಮಣ್ಣಿನ ರಾಶಿಯ ನಡುವೆಯೇ ಸಾಹಸ ಮಾಡಿ ಸಾಗಬೇಕಾಗಿದೆ. ಇದರಿಂದ ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

ದಕ್ಷಿಣ ಬೆಂಗಳೂರಿನಿಂದ ಮಧ್ಯ ಬೆಂಗಳೂರಿಗೆ ಬರುವುದಕ್ಕೆ ಪ್ರಮುಖ ರಸ್ತೆಯಾಗಿರುವ ಕಾರಣ ನಾಲ್ಕು ರಸ್ತೆಗಳಲ್ಲಿ ಬರುವ ವಾಹನಗಳು ಒಂದೇ ರಸ್ತೆಯಲ್ಲಿ ಬಂದು ಸೇರುತ್ತಿವೆ. ಸಹಜವಾಗಿ ಇದು ವಾಹನಗಳ ದಟ್ಟಣೆಯಿಂದ ಕೂಡಿರುವುದರಿಂದ ಈ ರಸ್ತೆಯಲ್ಲಿ ವಾಹನ ಸಂಚಾರವೇ ಸವಾಲಾಗಿ ಪರಿಣಮಿಸಿದೆ.

ಪಾದಚಾರಿ ಮಾರ್ಗದಲ್ಲಿ ಮಣ್ಣನ್ನು ಹಾಕಿರುವುದರಿಂದ ಮಕ್ಕಳನ್ನು ಶಾಲೆಯಿಂದ ಮನೆಗೆ ಕರೆತರುವುದು ಕಷ್ಟಸಾಧ್ಯವಾಗಿದೆ. ವಾಹನಗಳು ವೇಗವಾಗಿ ಬರುವುದರಿಂದ ರಸ್ತೆಯಲ್ಲಿಯೂ ಹೋಗಲು ಸಾಧ್ಯವಿಲ್ಲ. ಪ್ರತಿನಿತ್ಯ ಸಮಸ್ಯೆ ಎದುರಿಸುತ್ತಿದ್ದೇವೆ ಎಂದು ಸ್ಥಳೀಯ ನಿವಾಸಿ ಶ್ರೀಮತಿ ಆನಂದವಲ್ಲಿಯವರು ತಿಳಿಸಿದ್ದಾರೆ. ಚಾಮರಾಜಪೇಟೆ, ಬಸವನಗುಡಿ ಕಡೆಯಿಂದ ಬರುವವರು ಲಾಲ್‌ಬಾಗ್ ಫೋರ್ಟ್ ರಸ್ತೆ ಮೂಲಕ ಬಂದು ಜೆ.ಸಿ.ರಸ್ತೆ ತಲುಪುತ್ತಾರೆ. ಅದೇ ರೀತಿ ಜೆ.ಪಿ.ನಗರ, ಜಯನಗರ, ವಿ.ವಿ.ಪುರ ಭಾಗದಿಂದ ಬರುವವರು ಡಯಾಗನಲ್ ರಸ್ತೆ ಹಾಗೂ ಆರ್.ವಿ.ರಸ್ತೆ ಮೂಲಕ ಬಂದು, ಜೆ.ಸಿ. ರಸ್ತೆ ಸೇರುತ್ತಾರೆ. ಎಚ್.ಸಿ.ಜವರಾಯ ವೃತ್ತದ ಕಡೆಯಿಂದ ಬರುವವರು ಲಾಲ್‌ಬಾಗ್ ಫೋರ್ಟ್ ರಸ್ತೆ ಮೂಲಕ ಜೆ.ಸಿ.ರಸ್ತೆ ತಲುಪುತ್ತಾರೆ. ಇದರಿಂದಾಗಿ ನಾಲ್ಕು ರಸ್ತೆಗಳಲ್ಲಿ ಬರುವ ವಾಹನಗಳು ಒಂದೇ ರಸ್ತೆಯನ್ನು ಸೇರಲಿವೆ. ಸಹಜವಾಗಿ ದಟ್ಟಣೆಯಿಂದ ಕೂಡಿರುತ್ತಿದ್ದ ಈ ರಸ್ತೆಯಲ್ಲಿ ಈಗ ವಾಹನ ಸಂಚಾರ ಸವಾಲಾಗಿ ಪರಿಣಮಿಸಿದೆ.

ಆದ್ದರಿಂದ ವೈಟ್ ಟಾಪಿಂಗ್ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುತ್ತೇನೆ. (ಮುಂದು)

(167)10.3.2025/1.50/ಎಂ.ಎಂ-ಆರ್.ಎನ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಐ) ವಿಷಯ:- ಹಳೆ ಹುಬ್ಬಳ್ಳಿಯ ಅಂಗನವಾಡಿಯಲ್ಲಿ ಮಕ್ಕಳಿಗೆ ಮತ್ತು ಬಾಣಂತಿಯರಿಗೆ ವಿತರಿಸಬೇಕಾಗಿದ್ದ ಪೌಷ್ಟಿಕ ಆಹಾರವನ್ನು ಅಕ್ರಮವಾಗಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ.**

- - - -

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಹಳೇ ಹುಬ್ಬಳ್ಳಿಯ ಅಂಗನವಾಡಿಯಲ್ಲಿ ಮಕ್ಕಳಿಗೆ ಮತ್ತು ಬಾಣಂತಿಯರಿಗೆ ವಿತರಿಸಬೇಕಾಗಿರುವ ಪೌಷ್ಟಿಕ ಆಹಾರಗಳನ್ನು ಅಕ್ರಮವಾಗಿ ಕಳ್ಳ ಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಪ್ರಕರಣದಲ್ಲಿ ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಅನ್ನುವ ಹಾಗೆ ಅಧಿಕಾರಿಗಳನ್ನು ಅಮಾನತು ಮಾಡಲಾಗಿದ್ದು, ಪ್ರಕರಣದ ಪ್ರಮುಖ ಆರೋಪಿಗಳನ್ನು ಬಂಧಿಸುವಲ್ಲಿ ಪೋಲೀಸ್ ಇಲಾಖೆ ವಿಫಲವಾಗಿದೆ ಅಥವಾ ಕಣ್ಣಾ ಮುಚ್ಚಾಲೆ ಆಡುತ್ತಿದೆಯೇನೋ ಗೊತ್ತಿಲ್ಲ. ಇದುವರೆಗೂ ಪ್ರಕರಣದ ಪ್ರಮುಖ ಆರೋಪಿಗಳನ್ನು ಬಂಧಿಸಲಿಲ್ಲ. ಇದೊಂದು ದೊಡ್ಡ ಮಾಫಿಯಾ ಆಗಿದ್ದು, ಬಾಲ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ನೀಡುತ್ತಿರುವ ಆಹಾರ ಸಹ ಬಿಡುತ್ತಿಲ್ಲ ಎಂದರೆ ಇದೊಂದು ಸಮಾಜಘಾತುಕ ಕೆಲಸವಾಗಿರುತ್ತದೆ.

ಕಾರಣ ಸಭಾಪತಿಗಳು ಸದರಿ ಪ್ರಕರಣದ ಪ್ರಮುಖ ಆರೋಪಿಗಳನ್ನು ಬಂಧಿಸಿ ಸೂಕ್ತ ಕ್ರಮ ಕೈಗೊಳ್ಳಲು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರೇ, ಇದೊಂದು ಗಂಭೀರವಾದ ವಿಚಾರವಾಗಿದೆ. ಇದು ಇಡೀ ರಾಜ್ಯದಲ್ಲಿ ನಡೆಯುತ್ತಿದೆ.

**ಉಪ ಸಭಾಪತಿಯವರು:-** ಮಾನ್ಯ ಪ್ರದೀಪ್ ಶೆಟ್ಟರ್‌ರವರೇ, ಶೂನ್ಯ ವೇಳೆಯಲ್ಲಿ ಓದಬೇಕು ಅಷ್ಟೇ, ಚರ್ಚೆ ಇಲ್ಲ. ಮಾನ್ಯ ಸಭಾನಾಯಕರೇ, ಮಾನ್ಯ ಮಂತ್ರಿಗಳೇ . . . ಏನಿದು?

**(ಈ ಹಂತದಲ್ಲಿ ಸಭಾನಾಯಕರು ಪಕ್ಕದಲ್ಲಿದ್ದ ಮಾನ್ಯ ಸಚಿವರಾದ ರಹೀಂ ಖಾನ್‌ರವರ ಜೊತೆ ಮಾತನಾಡುತ್ತಿದ್ದರು)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಹೇಳಿ.

**ಶ್ರೀ ಪ್ರದೀಪ್ ಶೆಟ್ಟರ್:-** ಇದು ಇಡೀ ರಾಜ್ಯದ್ಯಂತ ನಡೆಯುತ್ತಿದೆ. ಇದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತಿದ್ದೇನೆ. ನಾನು ಶೂನ್ಯವೇಳೆಯಲ್ಲಿ ಚರ್ಚೆ ಮಾಡುತ್ತಿಲ್ಲ. ಬಾಣಂತಿಯರ ಸಾವು ಅಂಗನವಾಡಿಯಲ್ಲಿ ಅಕ್ರಮ ನಡೆಯುತ್ತಿದೆ.

**ಉಪ ಸಭಾಪತಿಯವರು:-** ಆಯಿತು, ಇದನ್ನು discussion ಮಾಡೋಣ. ಕುಳಿತುಕೊಳ್ಳಿ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**೦4. ನಿಯಮ 58ಎ ಅಡಿಯಲ್ಲಿ ಪ್ರಸ್ತಾಪಿಸಿದ ಶೂನ್ಯವೇಳೆ ಸೂಚನೆಗಳಿಗೆ ಸರ್ಕಾರದ ಲಿಖಿತ ಉತ್ತರಗಳು**

**ಅ) ವಿಷಯ:- ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮಗಳ ಸೂಕ್ತ ಅನುಷ್ಠಾನದ ಕುರಿತು.**

- - - - -

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಡಿ.ಎಸ್. ಅರುಣ್‌ರವರು ದಿನಾಂಕ 05.3.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಭಾರತ ಸಂವಿಧಾನದ 73ನೇ ತಿದ್ದುಪಡಿ ಅನುಸಾರ ಪಂಚಾಯತ್ ರಾಜ್ ಸಂಸ್ಥೆಗಳನ್ನು ಆರ್ಥಿಕ ಹಾಗೂ ಆಡಳಿತಾತ್ಮಕವಾಗಿ ಹಾಗೂ ಆರ್ಥಿಕವಾಗಿ ಸಶಕ್ತಗೊಳಿಸಲು, ರಾಜ್ಯದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ನ್ನು ದಿನಾಂಕ: 10.05.1993 ರಿಂದ ಜಾರಿಗೊಳಿಸಲಾಗಿರುತ್ತದೆ.

ಈ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸರ್ಕಾರವು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿರುತ್ತದೆ. ಅಧಿನಿಯಮಕ್ಕೆ ಆಗಿಂದಾಗ್ಗೆ ಅವಶ್ಯಕವಾಗಿರುವ ತಿದ್ದುಪಡಿಗಳನ್ನು ವಿಷಯ ತಜ್ಞರ ಸಮಿತಿಯ ಶಿಫಾರಸ್ಸಿನಂತೆ ತರಲಾಗಿರುತ್ತದೆ. ಕಾಯ್ದೆಗೆ 2016 ರಲ್ಲಿ ಸಮಗ್ರವಾಗಿ ತಿದ್ದುಪಡಿ ತರಲಾಗಿದ್ದು, ಅಧಿಕಾರ ವಿಕೇಂದ್ರೀಕರಣಕ್ಕೆ ಸಂಬಂಧಿಸಿದಂತೆ ಅನುಸರಿಸಬೇಕಾದ ನೀತಿ ನಿಯಮಗಳನ್ನು ರೂಪಿಸಲು ಅಗತ್ಯ ಸಲಹೆ ಸೂಚನೆಗಳನ್ನು ಪಡೆಯಲು ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯನ್ನು ರಚಿಸಲಾಗಿರುತ್ತದೆ.

ಗ್ರಾಮ ಸಭೆಯನ್ನು ಸಂವಿಧಾನ ಆಶಯಕ್ಕನುಗುಣವಾಗಿ ನಡೆಸಲು ಹಾಗೂ ಅವುಗಳ ನಿರ್ಣಯವನ್ನು ಆದ್ಯತೆಯ ಮೇಲೆ ಪರಿಗಣಿಸಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದ ಈಗಾಗಲೇ ಈ ಸಂಬಂಧವಾಗಿ ನಿಯಮಗಳನ್ನು ರೂಪಿಸಿದ್ದು, ಗ್ರಾಮ ಸಭೆಗೆ ಗ್ರಾಮ ಸಭೆಯನ್ನು ಮತ್ತಷ್ಟು ಸಶಕ್ತಗೊಳಿಸಲು ರಾಜ್ಯ ಸರ್ಕಾರವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಸಭೆ ಕರೆಯುವ ಮತ್ತು ನಡೆಸುವ ನಿಯಮಗಳು 2024 ಅನ್ನು ಹೊರಡಿಸಿರುತ್ತದೆ.

ಕೆಲವೊಂದು ವಿಷಯಗಳಿಗೆ ಸಂಬಂಧಿಸಿದಂತೆ ಇತರ ಇಲಾಖೆಗಳ ಅಭಿಪ್ರಾಯ ಹಾಗೂ ಸಲಹೆಗಳನ್ನು ಪಡೆಯಬೇಕಾಗಿರುವುದು ಸರ್ಕಾರದ ನೀತಿ ನಿಯಮಗಳನ್ನಯ ಅನಿವಾರ್ಯವಾಗಿರುತ್ತದೆ.

ಸಂವಿಧಾನದ ಆಶಯದಂತೆ ವಿವಿಧ ಅಭಿವೃದ್ಧಿ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪಂಚಾಯತ್ ರಾಜ್ ಹಂತದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಸಲು ಜವಾಬ್ದಾರಿ ನಕಾಶೆಯನ್ನು ಸಿದ್ಧಪಡಿಸಿ ಇಲಾಖೆಯ ಮುಖಾಂತರ ಅನುಷ್ಠಾನಗೊಳಸಲಾಗುತ್ತಿದೆ. ಪ್ರಸ್ತುತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ, ತೋಟಗಾರಿಕೆ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಜಲಾನಯನ ಅಭಿವೃದ್ಧಿ. ರೇಷ್ಮೆ ಮತ್ತು ಕೃಷಿ ಇಲಾಖೆಗಳಿಗೆ ಸಂಬಂಧಿಸಿದಂತೆ ಜವಾಬ್ದಾರಿ ನಕ್ಷೆಯನ್ನು ಸಿದ್ಧಪಡಿಸಿ ಅಧಿಸೂಚಿಸಲಾಗಿರುತ್ತದೆ ಇನ್ನುಳಿದ ಇಲಾಖೆಗಳಿಗೆ ಜವಾಬ್ದಾರಿ ನಕ್ಷೆಯನ್ನು ಸಿದ್ಧಪಡಿಸಲು ಕ್ರಮ ವಹಿಸಲಾಗುತ್ತಿದ

ಗ್ರಾಮೀಣ ಪ್ರದೇಶದಲ್ಲಿ ಅನುಷ್ಠಾನಗೊಳಸುವ ರಾಜ್ಯ ವಲಯದ ಕಾರ್ಯಕ್ರಮಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳು ಪರಿವೀಕ್ಷಿಸಲು ಹಾಗೂ ಸಲಹೆಗಳನ್ನು ನೀಡಲು ಅನುವಾಗುವಂತೆ ಮಾರ್ಗಸೂಚಿಗಳನ್ನು ಸುತ್ತೋಲೆ ಮುಖಾಂತರ ಹೊರಡಿಸಲಾಗುತ್ತಿರುತ್ತದೆ.

ಗ್ರಾಮೀಣಾಭಿವೃದ್ಧಿಗಾಗಿ ಸರ್ಕಾರಗಳು ಹಮ್ಮಿಕೊಳ್ಳಲಾಗುವ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಅನುಷ್ಠಾನಗೊಳಸಲು ಸುತ್ತೋಲೆಯ ಮುಖಾಂತರ ತಿಳಸಲಾಗುತ್ತಿದೆ. ಸರ್ಕಾರದ ನೀತಿ ನಿರ್ದೇಶನ ಹಾಗೂ ಮಾರ್ಗಸೂಚಿಗಳನ್ನು ಅಧಿಕಾರಿಗಳಿಗೆ ಸುತ್ತೋಲೆಗಳ ಮುಖಾಂತರ ತಿಳಸುವುದು ಸರ್ಕಾರದ ಪ್ರಕ್ರಿಯೆಗಳ ನಿರ್ಧರಿತ ಭಾಗವಾಗಿರುತ್ತದೆ. ಸರ್ಕಾರದ ವಿವಿಧ ಕಾರ್ಯಕ್ರಮಗಳು ಹಾಗೂ ಯೋಜನೆಗಳ ಬಗ್ಗೆ, ಸರ್ಕಾರದ ಇತ್ತೀಚಿನ ನಿಯಮಗಳು, ಆದೇಶ ಮತ್ತು ಸುತ್ತೋಲೆಗಳನ್ನು ಇಲಾಖೆಯ ಮಾಸಿಕ ಪತ್ರಿಕೆಯಾದ ಕರ್ನಾಟಕ ವಿಕಾಸ ಪತ್ರಿಕೆ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗುತ್ತಿದೆ.

ಅಧಿಕಾರಿ ಮತ್ತು ನೌಕರರ ವರ್ಗದಲ್ಲಿ ಅಧಿಕಾರ ದುರುಪಯೋಗವಾಗುವ ಪ್ರಕರಣಗಳನ್ನು ಲೋಕಾಯುಕ್ತ ಹಾಗೂ ಇಲಾಖಾ ವಿಚಾರಣೆ ನಡೆಸಿ, ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ. ಪಂಚಾಯತ್ ರಾಜ್ ಸಂಸ್ಥೆಗಳು ಸಾರ್ವಜನಿಕರಿಗೆ ನೀಡಬೇಕಾದ ಸೇವೆಗಳಲ್ಲಿ ಕುಂದು ಕೊರತೆ ಕಂಡು ಬಂದರೆ ಅವುಗಳನ್ನು ಪರಿಹರಿಸಲು ಕುಂದು ಕೊರತೆ ನಿವಾರಣಾ ಪ್ರಾಧಿಕಾರ ರಚಿಸಲಾಗಿದೆ.

ಗ್ರಾಮ ಪಂಚಾಯತಿ ಹಂತದಲ್ಲಿ ನಾಗರೀಕರಿಗೆ ಬಾಪೂಜಿ ಸೇವಾ ಕೇಂದ್ರ ಮೂಲಕ 81 ಸೇವೆಗಳನ್ನು ನೀಡಲಾಗುತ್ತಿದೆ.

ಕರ್ನಾಟಕ ರಾಜ್ಯವು ಅಧಿಕಾರ ವಿಕೇಂದ್ರಿಕರಣ ಪ್ರಕ್ರಿಯೆಯಲ್ಲಿ ಮಂಚೂಣಿಯಲ್ಲಿರುವುದರಿಂದ ಭಾರತ ಸರ್ಕಾರದ ಸಮೀಕ್ಷೆಯಾದ ವಿಕೇಂದ್ರಿಕರಣ ಸೂಚ್ಯಾಂಕದಲ್ಲಿ ಕರ್ನಾಟಕ ರಾಜ್ಯವು ಪ್ರಥಮ ಸ್ಥಾನ ಪಡೆದಿರುತ್ತದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993, ದಿನಾಂಕ:10-05-1993 ರಿಂದ ಜಾರಿಗೆ ಬಂದಿರುತ್ತದೆ. ಆ ಸಮಯದಲ್ಲಿ ಗ್ರಾಮ ಪಂಚಾಯತಿಯಲ್ಲಿ ರಾಜ್ಯ ಸಿವಿಲ್ ಸೇವೆಗೆ ಸೇರಿದ ಗ್ರಾಮ ಪಂಚಾಯತಿ ಕಾರ್ಯದರ್ಶಿ (ಗ್ರೇಡ್-1/ಗ್ರೇಡ್-2) ವೃಂದದ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದರು.

ಪ್ರಸ್ತುತ ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ ರಾಜ್ಯ ಸಿವಿಲ್ ಸೇವೆಗೆ ಸೇರಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ (ಗ್ರೇಡ್-1/ ಗ್ರೇಡ್-2) ಮತ್ತು ಹೆಚ್ಚಿನ ಆರ್ಥಿಕ ಮತ್ತು ಆಡಳಿತಾತ್ಮಕ ಜವಾಬ್ದಾರಿಯುಳ್ಳ ಗ್ರಾಮ ಪಂಚಾಯತಿಗಳಲ್ಲಿ ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮೇಲ್ಕಂಡ ರಾಜ್ಯ ಸಿವಿಲ್ ಸೇವೆಗೆ ಸೇರಿದ ನೌಕರರ ಜೊತೆಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 112ರಡಿ ಸಿಬ್ಬಂದಿ ವರ್ಗದ ಮಾದರಿಯಲ್ಲಿ ಮಂಜೂರಾಗಿರುವ 1) ಬಿಲ್ ಕಲೆಕ್ಟರ್, 2) ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, 3) ವಾಟರ್ ಆಪರೇಟರ್ 4) ಅಟೆಂಡೆಂಟ್ ಮತ್ತು 5) ಕ್ಲೀನರ್ಸ್ ವೃಂದದಲ್ಲಿ ನೌಕರರು ಗ್ರಾಮ ಪಂಚಾಯತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

ಗ್ರಾಮ ಪಂಚಾಯಿತಿ ಸಿಬ್ಬಂದಿಗಳಾದ 1 ಕರವಸೂಲಿಗಾರರು 2) ಕ್ಲರ್ಕ ಕಂ ಡಾಟಾ ಎಂಟ್ರಿ ಆಪರೇಟರ್ 3) ವಾಟರ್ ಆಪರೇಟರ್ ಹಾಗೂ 4) ಕ್ಲೀನರ್ಸ್ ಹುದ್ದೆಗಳಿಗೆ ಗ್ರಾಮ ಪಂಚಾಯಿತಿಯು ನೇಮಕ ಮಾಡಿಕೊಂಡು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಿಂದ ಈಗಾಗಲೇ ಅನುಮೋದನೆ ಹೊಂದಿ, ನೌಕರರ ವಯೋನಿವೃತ್ತಿಯಿಂದ, ಮುಂಬಡ್ತಿಯಿಂದ ಅಥವಾ ಮರಣ ಹೊಂದಿರುವ ಕಾರಣಗಳಿಂದಾಗಿ ಖಾಲಿಯಾಗಿದ್ದಲ್ಲಿ, ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗದ ಮಾದರಿಯಲ್ಲಿ ಖಾಲಿಯಾದ ಈ ಮೇಲಿನ ನಾಲ್ಕು ವೃಂದದ ಹುದ್ದೆಗಳಲ್ಲಿ ಯಾರೂ ಕಾರ್ಯನಿರ್ವಹಿಸದೇ ಇದ್ದಲ್ಲಿ ಸದರಿ ಹುದ್ದೆಗೆ ಒಬ್ಬ ಸಿಬ್ಬಂದಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಗ್ರಾಅಪ 886 ಗ್ರಾಪಂಕಾ 2016 ದಿನಾಂಕ:29.09 2020ರ ನಿಯಮಗಳಂತೆ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲು ಮತ್ತು ನೇಮಕಾತಿಯ ಮೀಸಲಾತಿಯನ್ನು ಕಡ್ಡಾಯವಾಗಿ ಅನುಸರಿಸಲು ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಪತ್ರ ದಿನಾಂಕ:26-06-2024 ರಲ್ಲಿ ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಲಾಗಿದೆ.

**ಆ) ವಿಷಯ:- ವಿಜಯಪುರ ತಾಲ್ಲೂಕಿನ ಹೆಗಡಿಹಾಳ ಗ್ರಾಮದ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಸಂಪೂರ್ಣ ಕಳಪೆ ಕಾಮಗಾರಿ ನಡೆದಿರುವ ಬಗ್ಗೆ.**

- - - - -

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಪಿ.ಹೆಚ್. ಪೂಜಾರ್‌ರವರು ದಿನಾಂಕ 05.3.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ವಿಜಯಪುರ ಜಿಲ್ಲೆ, ವಿಜಯಪುರ ತಾಲ್ಲೂಕಿನ ಹೆಗಡಿಹಾಳ ಗ್ರಾಮದಲ್ಲಿ ಜಲ ಜೀವನ್ ಮಿಷನ್‌ನಡಿ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಕಾಮಗಾರಿಗಳ ಅನುಷ್ಠಾನವನ್ನು ಜಲ ಜೀವನ್ ಮಿಷನ್ ಬ್ಯಾಚ-1ರಡಿ

ಕೈಗೊಂಡಿದ್ದು, ಇಲಾಖೆಯು ಈ ಮಹತ್ವಕಾಂಕ್ಷೆಯ ಕೇಂದ್ರ ಸರ್ಕಾರದ ಯೋಜನೆಯನ್ನು ಬಾಧ್ಯತೆಯೊಂದಿಗೆ ಕೈಗೆತ್ತಿಕೊಂಡು ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರಿನ ಸಂಪರ್ಕವನ್ನು ಎಲ್ಲಾ ನಿಯಮಗಳನ್ನು ಅನುಸರಿಸಿಕೊಂಡು ಮುಂದುವರೆಸಲಾಗಿರುತ್ತದೆ.

ಈ ಕಾಮಗಾರಿಗಳನ್ನು ಒಪ್ಪಂದ ಪತ್ರಗಳ ನಿಯಮಾನುಸಾರ ಹಾಗೂ ಅವುಗಳ ಮಾನದಂಡದಲ್ಲಿ ಯಾವುದೇ ಲೋಪವಾಗದಂತೆ ನಿರ್ವಹಿಸಲಾಗುತ್ತಿರುತ್ತದೆ. ಹೆಗಡಿಹಾಳ ಗ್ರಾಮದಲ್ಲಿ ಅಂದಾಜು ಪಟ್ಟಿಯಲ್ಲಿ 541 ಕಾರ್ಯಾತ್ಮಕ ನಳಗಳ ಸಂಪರ್ಕ ಯೋಜಿಸಿದಂತೆ 541 ಕಾರ್ಯಾತ್ಮಕ ನಳಗಳನ್ನು ಪೂರ್ಣಗೊಳಿಸಿ ಈಗಾಗಲೇ, ಮಾನದಂಡದನುಸಾರ ಸಾರ್ವಜನಿಕರ ಸಮ್ಮುಖದಲ್ಲಿ ಹರ್ ಘರ್ ಜಲ್ ಎಂದು ಘೋಷಿಸಿ ಈ ನಳಗಳ ಸಂಪರ್ಕ ಜಾಲವನ್ನು ಪಂಚಾಯತಿಗೆ ಹಸ್ತಾಂತರಿಸಿದೆ.

ಅದರಂತೆ ಕತಕನಹಳ್ಳಿ ಗ್ರಾಮದಲ್ಲಿ ಅಂದಾಜು ಪಟ್ಟಿಯಲ್ಲಿ 590 ಕಾರ್ಯಾತ್ಮಕ ನಳಗಳ ಸಂಪರ್ಕ ಯೋಜಿಸಲಾಗಿತ್ತು. ಆದರೆ ಕಾಮಗಾರಿಗೆ ಚಾಲನೆ ಕೊಟ್ಟ ನಂತರ ವಾಸ್ತವಿಕ ಮನೆಗಳ ಸಂಖ್ಯೆಯಂತೆ 673 ಕಾರ್ಯಾತ್ಮಕ ನಳಗಳನ್ನು ಪೂರ್ಣಗೊಳಿಸಿ, ಸಾರ್ವಜನಿಕರ ಸಮ್ಮುಖದಲ್ಲಿ ಹರ್ ಘರ್ ಜಲ್ ಎಂದು ಘೋಷಿಸಿ ಈ ನಳಗಳ ಸಂಪರ್ಕ ಜಾಲವನ್ನು ಪಂಚಾಯತಿಗೆ ಹಸ್ತಾಂತರಿಸಿದೆ.

ಉಕುಮನಾಳ ಗ್ರಾಮದಲ್ಲಿ ಅಂದಾಜು ಪಟ್ಟಿಯಲ್ಲಿ 260 ಕಾರ್ಯಾತ್ಮಕ ನಳಗಳ ಸಂಪರ್ಕ ಯೋಜಿಸಿದಂತೆ 260 ಕಾರ್ಯಾತ್ಮಕ ನಳಗಳನ್ನು ಪೂರ್ಣಗೊಳಿಸಿ ಸಾರ್ವಜನಿಕರ ಸಮ್ಮುಖದಲ್ಲಿ ಹರ್ ಘರ್ ಜಲ್ ಎಂದು ಘೋಷಿಸಿ ಈ ನಳಗಳ ಸಂಪರ್ಕ ಜಾಲವನ್ನು ಪಂಚಾಯತಿಗೆ ಹಸ್ತಾಂತರಿಸಿದೆ.

ಹೆಗಡಿಹಾಳ ಎಲ್.ಟಿ. ಜನವಸತಿಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿಯಲ್ಲಿ 595 ಕಾರ್ಯಾತ್ಮಕ ನಳಗಳ ಸಂಪರ್ಕ ಯೋಜಿಸಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಹೀಗೆ ಪ್ರತಿ ಹಂತದಲ್ಲಿಯೂ JJM ನಿಯಮಾನುಸಾರ ಕ್ರಮ ಕೈಗೊಂಡು, ಪೈಪ್‌ಗಳನ್ನು CIPET ಸಂಸ್ಥೆಯಿಂದ ಪರೀಕ್ಷಿಸಿ, ಕಾಮಗಾರಿಗಳ ಗುಣ ಪರೀಕ್ಷೆಗಳನ್ನು ಇಲಾಖೆಯಿಂದ ಹಾಗೂ ಮೂರನೇ ಹಂತದ ಏಜೆನ್ಸಿಯಿಂದ ಹಾಗೂ ಸ್ವತಂತ್ರ ಸಂಸ್ಥೆಯಿಂದ ಸಹ ಪರಿಶೀಲನೆ ಹಾಗೂ ಪರೀಕ್ಷೆಗೆ ಒಳಪಡಿಸಿ ಖಚಿತಪಡಿಸಿಕೊಂಡು ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೇ ಕಾಮಗಾರಿ ಪೂರ್ಣಗೊಳ್ಳುತ್ತಿದ್ದಂತೆ ಪೈಪಲೈನ್‌ಗಳನ್ನು ಅಳವಡಿಸುತ್ತಿರುವ ಸಂದರ್ಭದಲ್ಲಿ ಅಗೆತಗೊಳಿಸಲಾದ ಕಾಂಕ್ರೀಟ ರಸ್ತೆಯನ್ನು ಮರು ಕಾಂಕ್ರೀಟಗೊಳಿಸಿ ಜನ ಜಾನುವಾರುಗಳ ಚಲನ ವಲನಕ್ಕೆ ಯಾವುದೇ ಅಡತಡೆಯಾಗದಂತೆ ನೋಡಿಕೊಳ್ಳಲಾಗಿದೆ.

ಮುಂದುವರೆಯುತ್ತಾ, ಇಂಥಹ ಉದ್ಭವಿಸಬಹುದಾದ ಕ್ರಮ ಜರುಗಿಸದಾಗಿಯೂ ಲೋಪಗಳನ್ನು ಕೂಡ ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಗ್ರಾಮೀಣ ಮನೆಗಳಿಗೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗೆ ಕ್ರಮಕೈಗೊಳ್ಳಲಾಗಿರುತ್ತದೆ.

**ಇ) ವಿಷಯ:- ರಾಜ್ಯದ ಹೋಟೆಲ್‌ಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವ ಬಗ್ಗೆ.**

- - - -

ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಎನ್. ರವಿಕುಮಾರ್‌ರವರು ದಿನಾಂಕ 05.3.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಆಹಾರ ಸುರಕ್ಷತಾ ವಿಭಾಗವು ಸಾರ್ವಜನಿಕರು ಸೇವಿಸುವ ಆಹಾರದ ಗುಣಮಟ್ಟ ಮತ್ತು ಸುರಕ್ಷತಾ ಅಂಶಗಳನ್ನು ಖಾತರಿಪಡಿಸುವ ಮತ್ತು ಆ ಮೂಲಕ ಸಾರ್ವಜನಿಕರ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಶ್ರಮಿಸುತ್ತಿದೆ.

ಇದಕ್ಕೆ ಸಂಬಂಧಿಸಿದಂತೆ ಮಾರುಕಟ್ಟೆಯ ಮೇಲೆ ಸತತವಾಗಿ ನಿಗಾ ಇರಿಸಿ ಆಹಾರ ಪದಾರ್ಥಗಳನ್ನು ವಿಶ್ಲೇಷಣೆಗೊಳಪಡಿಸಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006, ನಿಯಮಗಳು 2011ರ ಉಲ್ಲಂಘನೆಯ ಪ್ರಕರಣಗಳಲ್ಲಿ ನ್ಯಾಯಾಲಯಗಳಲ್ಲಿ ಮೊಕದ್ದಮ ದಾಖಲಿಸಲಾಗುತ್ತಿದೆ. ಜುಲೈ-2024 ರ ಮಾಹೆಯಲ್ಲಿ ಕಬಾಬ್ ಮತ್ತು ಗೋಬಿ ಮಂಚೂರಿಯ ತಯಾರಿಕೆಯಲ್ಲಿ ಕೃತಕ ಬಣ್ಣಗಳನ್ನು ಬಳಸುತ್ತಿರುವ ಕುರಿತಂತೆ ಗೋಬಿಯ 210 ಮಾದರಿಗಳನ್ನು ಮತ್ತು ಕಬಾಬ್‌ನ 275 ಮಾದರಿಗಳನ್ನು ಪರಿಶೀಲನೆಗೊಳಪಡಿಸಲಾಗಿದ್ದು, ಅವುಗಳಲ್ಲಿ ಕ್ರಮವಾಗಿ ಗೋಬಿಯ 30 ಮತ್ತು ಕಬಾಬ್ 78 ಮಾದರಿಗಳು ಕೃತಕ ಬಣ್ಣಗಳ ಬಳಕೆಯಿಂದಾಗಿ ಅಸುರಕ್ಷಿತ ಎಂದು ವರದಿಯಾಗಿರುತ್ತವೆ. ಇದಕ್ಕೆ ಸಂಬಂಧಿಸಿದಂತೆ ಸದರಿ ಪದಾರ್ಥಗಳ ಬಳಕೆಯಲ್ಲಿ ಕೇಂದ್ರ ಸರ್ಕಾರದ The Food Safety and Standards (Food Products Standards and Food Additives) Regulations, 20110 ನಿಯಮ 16.0 ರನ್ವಯ ಕೃತಕ ಬಣ್ಣಗಳನ್ನು ಬಳಸದಿರುವ ಕುರಿತಂತೆ ಉದ್ದಿಮೆದಾರರ ಮಾಹಿತಿಗಾಗಿಪತ್ರಿಕಾ ಪ್ರಕಟಣೆಗಳನ್ನು (ಅನುಬಂಧ 1 & 2) ನೀಡಲಾಗಿರುವುದಲ್ಲದೆ. ಇಲಾಖಾಧಿಕಾರಿಗಳ ಭೇಟಿ ಸಂದರ್ಭದಲ್ಲೂ ಸಹ ವೈಯಕ್ತಿಕ ಮಟ್ಟದಲ್ಲಿ ಅರಿವು ಮೂಡಿಸಲಾಗುತ್ತಿದೆ.

ಹೋಟೆಲ್‌ಗಳಲ್ಲಿ ಆಹಾರ ಪದಾರ್ಥಗಳನ್ನು ಪ್ಯಾಕ್ ಮಾಡಲು ಮತ್ತು ಇಡ್ಲಿ ತಯಾರಿಕೆಯಲ್ಲಿ ಪ್ಲಾಸ್ಟಿಕ್ ಹಾಳೆಗಳ ಬಳಕೆಯ ಕುರಿತಂತೆ ಸಾರ್ವಜನಿಕರಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ ಫೆಬ್ರವರಿ-2025ರ ಮಾಹೆಯಲ್ಲಿ 694 ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು ಮತ್ತು ಬೀದಿಬದಿಯ ವ್ಯಾಪಾರ ಕೇಂದ್ರಗಳನ್ನು ಪರಿವೀಕ್ಷಣೆ ಮಾಡಲಾಗಿದ್ದು, ಅವುಗಳಲ್ಲಿ 52 ಉದ್ದಿಮೆಗಳಲ್ಲಿ ಇಡ್ಲಿ ತಯಾರಿಕೆಯಲ್ಲಿ ಪ್ಲಾಸ್ಟಿಕ್ ಹಾಳಗಳನ್ನು ಬಳಸುತ್ತಿರುವುದು ಕಂಡುಬಂದಿರುತ್ತದೆ. ಕೇಂದ್ರ ಸರ್ಕಾರದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006, ನಿಯಮಗಳು 2011

ಮತ್ತು Food Safety and Standards (Packaging) Regulations, 2018 (3 ಮತ್ತು 4) ಗಳಲ್ಲಿ ಆಹಾರ ಪದಾರ್ಥಗಳನ್ನು ಪ್ಯಾಕ್ ಮಾಡಲು ಉಪಯೋಗಿಸುವ/ಆಹಾರ ಪದಾರ್ಥಗಳ ಸಂಪರ್ಕಕ್ಕೆ ಬರುವ ಪ್ಯಾಕೇಜಿಂಗ್ ಮೇಟಿರಿಯಲ್‌ಗಳ ಕುರಿತಂತೆ ವಿವರಗಳನ್ನು ಮತ್ತು ಅವುಗಳ ಗುಣಮಟ್ಟಗಳನ್ನು ನೀಡಲಾಗಿರುತ್ತದೆ. ತಯಾರಿಕೆಯಲ್ಲಿ ಬಳಸುವ ಪ್ಲಾಸ್ಟಿಕ್ ಹಾಳೆಗಳ ಗುಣಮಟ್ಟವು ಸದರಿ ನಿಯಮಾವಳಿಗಳನ್ವಯ ಇಲ್ಲದಿರುವ ಹಿನ್ನೆಲೆಯಲ್ಲಿ ಸದರಿ ಉದ್ಯಮಗಳಿಗೆ ನೋಟಿಸ್ ಗಳನ್ನು ಜಾರಿ ಮಾಡಲಾಗಿರುತ್ತದೆ. ಅನುಬಂಧ-3)

ದಿನಾಂಕ 1-3-2025 ರಂದು ಕೇಂದ್ರ ಸರ್ಕಾರದ FSSAI ವಿಭಾಗದವರು ಹೊರಡಿಸಿರುವ ಪತ್ರಿಕಾ ಪ್ರಕಟಣೆಯಲ್ಲಿ "These low-grade plastic can release toxic substances such as bisphenol-A (BPA), phthalates, and other chemicals when exposed to high heat and can leach into food items, potentially causing adverse health effects"

FSSAI emphasizes that the use of food grade materials and hygienic practices are crucial in food preparation The process of steaming idlis should be done as per convention or approved food grade materiais that do not pose a risk of chemical contamination ಎಂದು ತಿಳಿಸಿರುತ್ತಾರೆ.(ಅನುಬಂಧ-4).

ಆಹಾರ ತಯಾರಿಕೆಯಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006, ನಿಯಮಗಳು 2011ಗಳನ್ನು ಪಾಲನೆ ಮಾಡುವುದು ಆಹಾರ ಉದ್ದಿಮೆದಾರರ ಕರ್ತವ್ಯವಾಗಿರುತ್ತದೆ. ಆದರೆ ಬೀದಿಬದಿಯ ವ್ಯಾಪಾರಸ್ಥರು ಮತ್ತು ಸಣ್ಣ ಹೋಟಲ್ ಉದ್ಯಮದಾರರಿಗೆ ಕಾಯ್ದೆಯ ಕುರಿತಂತ ಅರಿವಿನ ಕೊರತೆ ಇರುವುದರಿಂದ ಸದರಿ ಉದ್ದಿಮೆಗಳಿಗೆ ಇಲಾಖಾಧಿಕಾರಿಗಳು ಪರಿಶೀಲನಾ ಭೇಟಿ ನೀಡಿದ ವೇಳೆಯಲ್ಲಿ ವೈಯಕ್ತಿಕ ಮಟ್ಟದಲ್ಲಿ ಅರಿವು ಮೂಡಿಸಲಾಗುತ್ತಿದೆ. ಇದಲ್ಲದೆ ಕಳೆದ ಡಿಸೆಂಬರ್ 2024ರ ಮಾಹಯಲ್ಲಿ ಆಹಾರ ಉದ್ದಿಮೆಗಳ CSR ಕಾರ್ಯಕ್ರಮದಡಿ 1000 ಬೀದಿ ಬದಿ ವ್ಯಾಪಾರಸ್ಥರಿಗೆ ಆಹಾರ ಸುರಕ್ಷತೆ, ಗುಣಮಟ್ಟ ಮತ್ತು ನೈರ್ಮಲ್ಯತೆ ಕುರಿತಾದ Food Safety Training and Certification ತರಬೇತಿಯನ್ನು ನೀಡಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಒಟ್ಟು 8744 ಬೀದಿ ಬದಿಯ ವ್ಯಾಪಾರಸ್ಥರು ಮತ್ತು ಕೇಟರಿಂಗ್ ಉದ್ಯಮದವರು ಸದರಿ ತರಬೇತಿಯನ್ನು ಪಡೆದುಕೊಂಡಿರುತ್ತಾರೆ. ಮುಂದಿನ ದಿನಗಳಲ್ಲೂ ಸಹ ಸದರಿ ಉದ್ಯಮದಾರರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು, ಮತ್ತು ಪರಿಶೀಲನಾ ಭೇಟಿಗಳನ್ನು ಹಮ್ಮಿಕೊಳ್ಳಲಾಗುವುದು.

ಮಾರುಕಟ್ಟೆಯಲ್ಲಿ ಸಾವಿರಾರು ಮಾದರಿಯ ಆಹಾರ ಪದಾರ್ಥಗಳು ಮಾರಾಟವಾಗುವುದರಿಂದ ಮತ್ತು ಆಹಾರ ಉದ್ಯಮದಾರರ ಸಂಖ್ಯೆಯು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದು ಏಕಕಾಲದಲ್ಲಿ ಇವುಗಳೆಲ್ಲದರ ಮೇಲೆ ನಿಗಾವಣೆ ಕಷ್ಟಸಾಧ್ಯವಾಗಿದ್ದರೂ ಸಹ ಇಲಾಖೆಯು ಶಕ್ತಿ ಮೀರಿ ಕಾಲಕಾಲಕ್ಕೆ ಅಗತ್ಯ ಕ್ರಮವಹಿಸಿ ಸಾರ್ವಜನಿಕರು ಸೇವಿಸುವ ಆಹಾರದ ಗುಣಮಟ್ಟ ಮತ್ತು ಸುರಕ್ಷತಾ ಅಂಶಗಳನ್ನು ಖಾತರಿ ಪಡಿಸುವ ಮತ್ತು ಆ ಮೂಲಕ ಸಾರ್ವಜನಿಕರ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಶ್ರಮಿಸುತ್ತಿದೆ.

**ಈ) ವಿಷಯ:- ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಮೊಗಟಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬ್ರಹ್ಮೂರು ಗ್ರಾಮದ ಮಾಸ್ತಿಬೇಣ, ಸೊಪ್ಪರತಿ ಮೂಲಕ ಸ.ಕಿ.ಪ್ರಾ ಶಾಲೆಗೆ ರಸ್ತೆಯನ್ನು ನಿರ್ಮಿಸುವ ಕುರಿತು.**

- - - - -

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಶಾಂತಾರಾಮ ಬುಡ್ನ ಸಿದ್ದಿಯವರು ದಿನಾಂಕ 05.3.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಂಕೋಲ ತಾಲ್ಲೂಕಿನ ಬ್ರಹ್ಮರು ಗ್ರಾಮದ ಬೆಣದಳ್ಳಿ ಮಜರಿಯು ಮೊಗವಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತಿದ್ದು. ಈ ಮಜಿರಿಗೆ ಬ್ರಹ್ಮರು ಮೂಲಕ ರಸ್ತೆ ಸಂಪರ್ಕವಿರುತ್ತದೆ. ಈ ರಸ್ತೆಯು ಬ್ರಹ್ಮರುನಿಂದ ಬೆಣದಳ್ಳಿ ಶಾಲೆವರೆಗೆ 5 ಕಿ.ಮೀ. ಉದ್ದವಿದ್ದು, ರಸ್ತೆಯು ಅರಣ್ಯ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ಹಾದು ಹೋಗಿರುವುದರಿಂದ. ಸರ್ವಋತು ರಸ್ತೆ ನಿರ್ಮಾಣಕ್ಕೆ ಅರಣ್ಯ ಇಲಾಖೆಯ ನಿರ್ಬಂಧವಿರುವುದರಿಂದ ರಸ್ತೆ ನಿರ್ಮಾಣ ಮಾಡಲು ಸಾಧ್ಯವಾಗಿರುವುದಿಲ್ಲ. ಈ ರಸ್ತೆಯ ಚೈನೇಜ್ ಕಿ.ಮೀ. 0.00 ದಿಂದ ಕಿ.ಮೀ 1.10 ವರೆಗೆ ಕಾಂಕ್ರೀಟ್ ರಸ್ತೆ ಮಾಡಲಾಗಿರುತ್ತದೆ.

ರಸ್ತೆ ನಿರ್ಮಾಣದ ಬಗ್ಗೆ ಗ್ರಾಮ ಸಭೆಗಳಲ್ಲಿ ಸಾರ್ವಜನಿಕರು ಬೇಡಿಕೆ ಇಟ್ಟಿದ್ದು, ಅನುದಾನದ ಕೊರತೆಯಿಂದ ಸರ್ವಋತು ರಸ್ತೆ ನಿರ್ಮಾಣ ಮಾಡಲು ಈವರೆಗೆ ಸಾಧ್ಯವಾಗಿರುವುದಿಲ್ಲ. ಮಳೆಗಾಲ ಹೊರತುಪಡಿಸಿ ಪದರಿ ರಸ್ತೆಯನ್ನು ಅತಿವೃಷ್ಟಿ ಮತ್ತು ಇತರೆ ಯೋಜನೆಗಳ ಪ್ರತಿ ವರ್ಷ ದುರಸ್ಥಿ ಕೈಗೊಂಡು. ಸಾರ್ವಜನಿಕರ ಮತ್ತು ವಾಹನ ಸಂಚಾರಕ್ಕೆ ಅನುಕೂಲ ಮಾಡಲಾಗುತ್ತಿದೆ.

ಬೆಣಹಳ್ಳಿ ತಿರುವುನಿಂದ ಬೆಣದಳ್ಳಿ ಶಾಲೆಯವರೆಗೆ ರಸ್ತೆ ನಿರ್ಮಾಣ ಮಾಡಲು (ಚೈನೇಜ್ ಕಿ.ಮೀ. 1.10 ದಿಂದ ಕಿ.ಮೀ 5.00 ರವರೆಗೆ) ಅಂದಾಜು ರೂ.331.00 ಲಕ್ಷ ಅನುದಾನದ ಅವಶ್ಯಕತೆ ಇತ್ತು. ಅರಣ್ಯ ಇಲಾಖೆಯ ಅನುಮತಿ ಹಾಗೂ ಅನುದಾನದ ಲಭ್ಯತೆಯನ್ನಾಧರಿಸಿ ಸರ್ವಋತು ರಸ್ತೆ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಬೇಕಿದೆ.

**ಉ) ವಿಷಯ:- ಚಿಕ್ಕಮಗಳೂರು ತಾಲ್ಲೂಕು ಕಛೇರಿ ಮುಂಭಾಗದಲ್ಲಿರುವ ನಲ್ಲೂರು ಮಠದ ಜಾಗದಲ್ಲಿದ್ದ ಅಂಗಡಿಗಳನ್ನು ನೆಲಸಮ ಮಾಡಿದವರ ವಿರುದ್ಧ ಕ್ರಮ ಕೈಗೊಂಡು ವರ್ತಕರಿಗೆ ರಕ್ಷಣೆ ನೀಡುವ ಬಗ್ಗೆ.**

- - - - -

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಪೌರಾಡಳಿತ ಮತ್ತು ಹಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿಯವರು ದಿನಾಂಕ 05.3.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಯ ಬಸವನಹಳ್ಳಿ ಮುಖ್ಯ ರಸ್ತೆಯಲ್ಲಿರುವ ಮಖಾನ್ ಜಾಗದ ಅಸೆಸ್ಟೆಂಟ್ ನಂಬರ್ 13878/8993, ಶ್ರೀ ದಿವಾಕರ್ ಮತ್ತು ಇತರರು ಹೆಸರಿನಲ್ಲಿನ ಜಾಗದ ಅಸೆಸ್ಟೆಂಟ್ ನಂಬರ್ 2489/2416ರ ಸ್ವತ್ತು ಹಾಗೂ ನಗರಸಭಾ ನಿವೇಶನದ ಅಸೆಸ್ಟೆಂಟ್ ನಂಬರ್ 2747/2437ರ ವಿವಾದಿತ ಸ್ವತ್ತಿನಲ್ಲಿರುವ ಕಟ್ಟಡವನ್ನು ದಿನಾಂಕ: 04/03/2025ರಂದು ಕೆಡವಿ ಹಾಕಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಯು ಈ ಕೆಳಕಂಡಂತಿದೆ:

1. ಮಖಾನ್ ಜಾಗದ ಆಸ್ತಿಯ ಖಾತಾ ನಮೂದು, ಮಠದ ಮನೆ ಜಾಗದ ಆಸ್ತಿಯ ವಿವರ (ಪ್ರಸ್ತುತ ಶ್ರೀ ದಿವಾಕರ್ ಮತ್ತು ಇತರರ ಹೆಸರಲ್ಲಿ ಖಾತಾ ನಮೂದು ಮತ್ತು ನಗರ ಸಭೆಯ ಹೆಸರಿನಲ್ಲಿನ ಖಾತಾ ನಮೂದು ಕುರಿತು ವಿವರದ ತಃಖ್ತೆಯನ್ನು ಅನುಬಂಧ-ಎ ರಲ್ಲಿ ಲಗತ್ತಿಸಿದೆ)

2 ಈ ಹಿಂದೆ ಇದ್ದ ಖಾತೆಯನ್ನು 1948ರ ನಂತರದಲ್ಲಿ ಕೈಬಿಟ್ಟು ಹೋಗಿದ್ದು, ದಾಖಲೆಗಳ ಪರಿಶೀಲನೆ ಮತ್ತು ವಿಚಾರಣೆಯ ನಂತರ ಖಾತೆ ನಮೂದು ಪುನರ್ ಸ್ಥಾಪನೆ ವಿಚಾರದಲ್ಲಿ ಪೌರಾಯುಕ್ತರು ಆದೇಶಮಾಡಿರುತ್ತಾರೆ. (ಅನುಬಂಧ-ಬಿ)

3. ಈ ಆದೇಶದ ವಿರುದ್ಧ ದಿ ಬೋರ್ಡ್ ಆಫ್ ಟ್ರಸ್ಟ್ ಅಂಡ್ ಮುಸ್ಲಿಂ ಎಂಡೋಮೆಂಟ್ಸ್ ಇವರು ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:7096/2022ರಂತೆ ದಾವೆ ದಾಖಲು ಮಾಡಿರುತ್ತಾರೆ. ಈ ದಾವೆಯಲ್ಲಿ

ದಿನಾಂಕ:30.03.2022ರಲ್ಲಿ " Issue emergent notice. The first respondent is restrained from demolishing any of the structures existing in the subject property and the entries in the Property Records shall not be alicnated, if already not changed, till next date of hearing" ಎಂದು ಮಧ್ಯಂತರ ಆದೇಶವಾಗಿರುತ್ತದೆ. (ಅನುಬಂಧ-ಸಿ)

4. ದಿನಾಂಕ:04.03.2025ರಂದು ಕಟ್ಟಡ ಕೆಡವಲಾದ ವಿಚಾರದಲ್ಲಿ ಎರಡು ಪ್ರಥಮ ವರ್ತಮಾನ ವರದಿಗಳು ದಾಖಲಾಗಿರುತ್ತದೆ. (ಅನುಬಂಧ-ಡಿ)

5. ನಗರಸಭೆಯಲ್ಲಿನ ಘಟನಾ ಸ್ಥಳದಲ್ಲಿ ನಗರಸಭೆಗೆ ಸಂಬಂಧಿಸಿದ ಯಾವುದೇ ಕಟ್ಟಡಗಳು ಇರುವುದಿಲ್ಲ. ಆದುದ್ದರಿಂದ ನಗರಸಭೆಯ ಆಸ್ತಿಗೆ ಹಾನಿ ಉಂಟಾಗಿರುವುದಿಲ್ಲ.

ನಗರಸಭೆ, ಚಿಕ್ಕಮಗಳೂರು
CITY MUNICIPAL COUNCIL, CHIKKAMAGALURU.
Office : 08262 - 234032, Commissioner : 08262 - 232272
E-Mail ID:comm_ckg@yahoo.com.

## ಅನುಬಂಧ-ಎ

### 1. ಮಖಾನ್ ಜಾಗದ ಆಸ್ತಿಯ ವಿವರ :

| ಕ್ರ. ಸಂ | ಎಂ.ಎ.ಆರ್ ವಹಿಯ ಸಾಲಿನ ವಿವರ | ಅಸೆಸ್‌ಮೆಂಟ್ ಸಂಖ್ಯೆ | ಸ್ವತ್ತಿನ ಮಾಲೀಕರ ವಿವರ | ಅಳತೆ |
|---|---|---|---|---|
| 01 | 1892- 1893ನೇ ಸಾಲಿನ ಕಡಿಸ್ಟ್ರಿ ವಹಿ ಪುಟ ಸಂಖ್ಯೆ: 12 | 143/139 | ಮಕಾನಿನ ಜಾಗ | 18 ಲಾಂಬಿ x 89 ರುಂದಿ =1602 ಚದರ (ಕಡಿಸ್ಟ್ರಿ ವಹಿಯಲ್ಲಿರುವಂತೆ) |
| 02 | 1924-1925 ನೇ ಸಾಲು ವಹಿಯ ಸಂಖ್ಯೆ:03 ಪುಟ ಸಂಖ್ಯೆ:79 | 2296<br>2297<br>2298 | ಮಕಾನ್<br>ಮಾವಿನ ತೋಪು<br>ಡಿಟೋ ಬಾಬ್ತು<br>ಭಂಡಾರ್<br>ಖಾನಾ ಮಕಾನ್ | ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ |
| 03 | 1936-1937 ನೇ ಸಾಲು ವಹಿಯ ಸಂಖ್ಯೆ:05<br>ಪುಟ ಸಂಖ್ಯೆ:28 | 2380/2296<br>2381/2297<br>2382/2298 | ಮಕಾನ್<br>ಮಾವಿನ ತೋಪು<br>ಡಿಟೋ ಬಾಬ್ತು<br>ಭಂಡಾರ್<br>ಖಾನಾ ಮಕಾನ್ | ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ |
| 04 | 1943-1944 ನೇ ಸಾಲು ವಹಿಯಸಂಖ್ಯೆ: 03ಪುಟ ಸಂಖ್ಯೆ:60 | 2380/2296<br>2381/2297<br>2382/2298 | ಮಕಾನ್<br>ಮಾವಿನ ತೋಪು<br>ಡಿಟೋ ಬಾಬ್ತು<br>ಭಂಡಾರ್<br>ಖಾನಾ ಮಕಾನ್ | ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ |
| 05 | 1952-1953ನೇ ಸಾಲು ವಹಿಯ ಸಂಖ್ಯೆ:06<br>ಪುಟ ಸಂಖ್ಯೆ:40 | 2637/2528<br>2638/2528 | ಮಕಾನ್ ಜಾಗ<br>ಮಕಾನ್ ಜಾಗ | ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ |
| 06 | 1956-1957 ನೇ ಸಾಲು ವಹಿಯ ಸಂಖ್ಯೆ:07<br>ಪುಟ ಸಂಖ್ಯೆ:49 | 3146/2924/2528 | ಮಕಾನ್ ಜಾಗ | ಮಕ್ಕಾನ್ ಮನೆಯ ಅಳತೆ20x15<br>04. ತಾತ್ಕಾಲಿಕ ಖುಲುಮೆಗಳು<br>ಸಿ.ಟಿ. ಅಳತೆ15x12 |
| 07 | 1970-1971 ನೇ ಸಾಲು ವಹಿಯ ಸಂಖ್ಯೆ:12<br>ಪುಟ ಸಂಖ್ಯೆ:02 | 3776/3901/2924<br>3777/3902/2924<br>3778/3903/2924<br>3779/3904/2924 | ಮಕಾನ್ ಜಾಗ<br>ಮಕಾನ್ ಜಾಗ<br>ಮಕಾನ್ ಜಾಗ<br>ಮಕಾನ್ ಜಾಗ | ಅಳತೆ ದಾಖಲಿಸಿರುವುದಿಲ್ಲ<br>ಎಂ.ಟಿ. 45.6x30.6 ಅಡಿ<br>ಎಂ.ಟಿ. 23.6x17 ಅಡಿ<br>ಎಂ.ಟಿ.24x44 ಮತ್ತು 12.6x45 ಅಡಿ |
| 08 | 1988-1989 ನೇ ಸಾಲು ವಹಿಯ ಸಂಖ್ಯೆ:14<br>ಪುಟ ಸಂಖ್ಯೆ:23, 24 ಮತ್ತು 25 | 6267/6267/4522<br>6268/6268/4524<br>6269/6269/4224<br>6270/6270/4523<br>6271/6271/4522<br>6272/6272/4521/1<br>6273/6273/4521<br>6274/6274/4520 | ಮಕಾನ್ ಜಾಗ<br>ಮಕಾನ್ ಜಾಗ<br>ಮಕಾನ್ ಜಾಗ<br>ಮಕಾನ್ ಜಾಗ<br>ಮಕಾನ್ ಜಾಗ<br>ಮಕನ್ ಜಾಗ<br>ಮಕಾನ್ ಜಾಗ<br>ಮಕಾನ್ ಜಾಗ | ಟಿ.ಎ.396+155+41/3x179+129+40+41 +44/5(ಅಡಿ)<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ |
| 09 | 1994-1995 ನೇ ಸಾಲು ವಹಿಯ ಸಂಖ್ಯೆ:05/01<br>ಪುಟ ಸಂಖ್ಯೆ:103, 104 ಮತ್ತು 105 | 8993/6267<br>8994/6268<br>8995/6269<br>8996/6270<br>8997/6271<br>8998/6272<br>8999/6273<br>9000/6274 | ಮಕಾನ್ ಜಾಗ<br>ಮಕಾನ್ ಜಾಗ<br>ಮಕಾನ್ ಜಾಗ<br>ಮಕಾನ್ ಜಾಗ<br>ಮಕಾನ್ ಜಾಗ<br>ಮಕನ್ ಜಾಗ<br>ಮಕಾನ್ ಜಾಗ<br>ಮಕಾನ್ ಜಾಗ | ಟಿ.ಎ.396+155+41/3x179+129+40+41+44/5 ಅಡಿ<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ |

| | | | | |
|---|---|---|---|---|
| 10 | 1999 2000 ನೇ ಸಾಲು ವಹಿಯ ಸಂಖ್ಯೆ 05/03 ಪುಟ ಸಂಖ್ಯೆ 43, 44 ಮತ್ತು 45 | 13878/8993<br>13879/8994<br>13880/8995<br>13881/8996<br>13882/8997<br>13883/8998<br>13884/8999<br>13885/9000 | ಮಕಾನ್ ಜಾಗ<br>ಮಕಾನ್ ಜಾಗ<br>ಮಕಾನ್ ಜಾಗ<br>ಮಕಾನ್ ಜಾಗ<br>ಮಕಾನ್ ಜಾಗ<br>ಮಕನ್ ಜಾಗ<br>ಮಕಾನ್ ಜಾಗ<br>ಮಕಾನ್ ಜಾಗ | 43 [illegible] 396+155+41/3+179+127+40+41+13/ [illegible]<br>ಅಳತೆ ದಾಖಲಿಸಿರುವುದಿಲ್ಲ.<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ.<br>ಅಳತೆ ದಾಖಲಿಸಿರುವುದಿಲ್ಲ.<br>ಅಳತೆ ದಾಖಲಿಸಿರುವುದಿಲ್ಲ.<br>ಅಳತೆ ದಾಖಲಿಸಿರುವುದಿಲ್ಲ<br>ಅಳತೆ ದಾಖಲಿಸಿರುವುದಿಲ್ಲ. |

**2. ಮಠದ ಮನೆ ಜಾಗದ ಆಸ್ತಿಯ ವಿವರ (ಪ್ರಸ್ತುತ ಶ್ರೀ ಹರೀಶ್ ಮತ್ತು ಇತರರ ಜಂಟಿ ಹೆಸರಲ್ಲಿ ಖಾತಾ ನಮೂದು ಇರುತ್ತದೆ)**

| ಕ್ರ. ಸಂ | ಎಂ.ಎ.ಆರ್ ವಹಿಯ ಸಾಲಿನ ವಿವರ | ಅಸೆಸ್‌ಮೆಂಟ್ ಸಂಖ್ಯೆ | ಮಠದ ಮನೆ ಜಾಗದ ವಿವರ | ಅಳತೆ |
|---|---|---|---|---|
| 01 | 1892- 1893ನೇ ಸಾಲಿನ ಕಡಿಸ್ಸಿ ವಹಿ ಪುಟ ಸಂಖ್ಯೆ: 12 | 961/912 | ಮಠದ ಮನೆ ಜಾಗ | 50x20 (ಲಾಂಬಿ xರುಂದಿ) |
| 02 | 1924-25 ನೇ ಸಾಲಿನ ಪುಟ ಸಂಖ್ಯೆ: 84 | 2326 | ಮಠದ ಮನೆ ಜಾಗ | ಅಳತೆ ನಮೂದಾಗಿರುವುದಿಲ್ಲ. |
| 03 | 1936-37 ನೇ ಸಾಲಿನ ಪುಟ ಸಂಖ್ಯೆ: 35 | 416/2326/2327 | ಮಠದ ಮನೆ ಜಾಗ | 2250 (ಸ್ಕ್ವೇರ್ ಯಾರ್ಡ್ ) |
| 04 | 1947-48 ನೇ ಸಾಲಿನ ಪುಟ ಸಂಖ್ಯೆ: 84 | 2489 | ಮಠದ ಮನೆ ಜಾಗ | 120x110 |
| 05 | 1952-53 ನೇ ಸಾಲಿನ ಪುಟ ಸಂಖ್ಯೆ: 51 | 2749/2439 | ಶ್ರೀ ಮಠದ ಮನೆ ಜಾಗ | Mutt Land 120x110 |
| 06 | 2021-22 ನೇಸಾಲಿನ KMF 24 | 2467/2489/3416, 2439/2749/2327/2328, 2749/2327/2328 | ಎಂ.ಎನ್ ಹರೀಶ್ ಮತ್ತು ಇತರರು ಜಂಟಿ | 120x110 |

**3. ನಗರಸಭಾ ಸ್ವತ್ತಿನ ವಿವರ**

| ಕ್ರ. ಸಂ | ಎಂ.ಎ.ಆರ್ ವಹಿಯ ಸಾಲಿನ ವಿವರ | ಅಸೆಸ್‌ಮೆಂಟ್ ಸಂಖ್ಯೆ | ನಗರಸಭೆ ಜಾಗದ ವಿವರ | ಅಳತೆ |
|---|---|---|---|---|
| 01 | 1924-1925 ನೇ ಸಾಲು ವಹಿಯ ಸಂಖ್ಯೆ:03 ಪುಟ ಸಂಖ್ಯೆ:79 | 2299 | ಸರ್ಕಾರಿ ಖಾಲಿ ಜಾಗ | ಅಳತೆ ನಮೂದಾಗಿರುವುದಿಲ್ಲ |
| 02 | 1936-37 ಸಾಲಿನ ವಹಿ ಸಂಖ್ಯೆ 5 ಪುಟ ಸಂಖ್ಯೆ28 | 2383/2299 | ನಗರಸಭೆ ನಿವೇಶನ ಜಾಗ | 140x40 ಅಡಿ |
| 03 | 1943-44 ಸಾಲಿನ ವಹಿ ಸಂಖ್ಯೆ 3 ಪುಟ ಸಂಖ್ಯೆ 61 | 2383/2299 | ಸರ್ಕಾರಿ ಖಾಲಿ ಜಾಗ | ಅಳತೆ ನಮೂದಾಗಿರುವುದಿಲ್ಲ |
| 04 | 1952-53 ಸಾಲಿನ ವಹಿ ಸಂಖ್ಯೆ6 ಪುಟ ಸಂಖ್ಯೆ 40 | 2636/2527 | ನಗರಸಭೆ ನಿವೇಶನ ಜಾಗ | 28.50x140 ಅಡಿ |
| 05 | 1956-57 ಸಾಲಿನ ವಹಿ ಸಂಖ್ಯೆ7 ಪುಟ ಸಂಖ್ಯೆ 49 | 3145/2923 | ನಗರಸಭೆ ನಿವೇಶನ ಜಾಗ | 28.50x140 ಅಡಿ |
| 06 | 1988-89 ನೇ ಸಾಲಿನ ವಹಿ 14 ಪುಟ ಸಂಖ್ಯೆ: 22 | 6266/6266/4521/4 | ನಗರಸಭೆ ನಿವೇಶನ ಜಾಗ | 40+46/2x70+27/2 ಅಡಿ |
| 07 | 1994-95 ನೇ ಸಾಲಿನ ವಹಿ 05/1 ಪುಟ ಸಂಖ್ಯೆ: 102 | 8992/6266 | ನಗರಸಭೆ ನಿವೇಶನ ಜಾಗ | 40+46/2x70+27/2 ಅಡಿ |
| 08 | 1999-2000 ನೇ ಸಾಲಿನ ವಹಿ 05/3 ಪುಟ ಸಂಖ್ಯೆ: 43 | 13877/8992 | ನಗರಸಭೆ ನಿವೇಶನ ಜಾಗ | 40+46/2x70+27/2 ಅಡಿ |

ಅನುಬಂಧ - ೨. 631

::ಪೌರಾಯುಕ್ತರು, ನಗರಸಭೆ, ಚಿಕ್ಕಮಗಳೂರು ಇವರ ಕಚೇರಿ ನಡವಳಿಗಳು::

ವಿಷಯ: ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಯ ವಾರ್ಡ್ ನಂ:26ರಲ್ಲಿನ ಮು.ಅ.ನಂ: 2467/2489/3416, 2439/2749/2327/2328, 2749/2327/2328 ರಲ್ಲಿನ ಒಟ್ಟು 110*120 ಗಜ (330*360ಅಡಿ) ಅಳತೆಯ ಸ್ವತ್ತಿನ ಖಾತೆಯನ್ನು ಪುನರ್‌ಸ್ಥಾಪಿಸುವ ಕುರಿತು.

ಉಲ್ಲೇಖ:
1. ಶ್ರೀ ಎನ್. ಎಂ. ದಿವಾಕರ್ ಬಿನ್ ಲೇಟ್ ಮಹಾದೇವಯ್ಯ, ನಲ್ಲೂರು ಗ್ರಾಮ ಚಿಕ್ಕಮಗಳೂರು ಇವರ ಮನವಿ ದಿನಾಂಕ:19.07.2021, 05.08.2021, 13.10.2021
2. ಈ ಕಛೇರಿಯಿಂದ ಎನ್.ಎಂ. ದಿವಾಕರ್ ಮತ್ತು ಕಾರ್ಯದರ್ಶಿ, ಜಾಮೀಯಾ ಮಸೀದಿ ಆಡಳಿತ ಸಂಸ್ಥೆ ರವರುಗಳಿಗೆ ನೀಡಿರುವ ತಿಳುವಳಿಕೆ ಪತ್ರ ದಿನಾಂಕ:30.07.2021, 02.09.2021, 01.10.2021, 11.10.2021, 22.02.2022, 19.03.2022,
3. ಕಾರ್ಯದರ್ಶಿ, ಜಾಮೀಯಾ ಮಸೀದಿ ಆಡಳಿತ ಸಂಸ್ಥೆ ಇವರ ಪತ್ರದ ದಿನಾಂಕ: 03.08.2021, 18.08.2021, 07.09.2021, 01.10.2021, 28.03.2022
4. ಕಾರ್ಯದರ್ಶಿ, ಜಾಮೀಯಾ ಮಸೀದಿ, ಆಡಳಿತ ಮಂಡಳಿ ಇವರಿಗೆ ನೀಡಿದ ಈ ಕಛೇರಿಯ 2ನೇ ತಿಳುವಳಿಕೆ ಪತ್ರದ ದಿನಾಂಕ: 16.08.2021

*********

ಪ್ರಸ್ತಾವನೆ:

ಶ್ರೀ ಎನ್.ಎಂ. ದಿವಾಕರ್ ಬಿನ್ ಮಹಾದೇವಯ್ಯ, ನಲ್ಲೂರು ಗ್ರಾಮ ಇವರು ಉಲ್ಲೇಖ(1) ರಂತೆ ಈ ಕಛೇರಿಗೆ ಮನವಿ ಸಲ್ಲಿಸಿ, ಚಿಕ್ಕಮಗಳೂರು ನಗರಸಭಾ ಅಸೆಸ್‌ಮೆಂಟ್ ನಂ: ಮು.ಅ.ನಂ2467/2489/3416, 2439/2749/2327/2328, 2749/2327/2328 ರಲ್ಲಿನ ಒಟ್ಟು 110*120 ಗಜ (330*360ಅಡಿ) ಸ್ವತ್ತು ತಮ್ಮ ಕುಟುಂಬದ ಸ್ವತ್ತಾಗಿದ್ದು, 1952 ರ ನಂತರ ಯಾವುದೇ ಕಾರಣಗಳು ಇಲ್ಲದೆ ನಗರಸಭೆಯಲ್ಲಿ ಖಾತೆ ಕೈಬಿಟ್ಟು ಹೋಗಿರುತ್ತದೆಂದು, ಸ್ವತ್ತಿಗೆ ಸಂಬಂಧಿಸಿದ ದಾಖಲೆ ಹಾಗೂ ಕುಟುಂಬ ಸದಸ್ಯರ ದೃಢೀಕರಣ ಪತ್ರದೊಂದಿಗೆ ಖಾತೆಯನ್ನು ಪುನರ್ ಸ್ಥಾಪನೆ ಮಾಡಿ ಮುಂದುವರಿಸಲು ಕೋರಿ ಮನವಿ ನೀಡಿರುತ್ತಾರೆ.

ಈ ಮನವಿ ಕುರಿತು ಕಛೇರಿ ದಾಖಲಾತಿ ಪರಿಶೀಲಿಸಲಾಗಿದೆ. ಅರ್ಜಿದಾರರು ಹೇಳಿರುವ ಸ್ವತ್ತಿನ ಖಾತೆಯು 1952-53 ರ ಅಸೆಸ್‌ಮೆಂಟ್ ವಹಿಯಲ್ಲಿ ಮಠದ ಮನೆ ಎಂದು ಇದ್ದು, ಈ ಕುರಿತು ಸದರಿ ಸ್ವತ್ತಿನ [illegible] ಹಾಗೂ ಅರ್ಜಿದಾರರಿಗೆ ಉಲ್ಲೇಖ (2) ರ ದಿನಾಂಕ: 30.03.2021 ರಂತೆ ದಾಖಲೆಗಳನ್ನು ಒದಗಿಸಲು ತಿಳುವಳಿಕೆ ನೀಡಲಾಗಿರುತ್ತದೆ.

ನಗರಸಭೆ ಕಾರ್ಯಾಲಯ 30 MAR 2022 ಚಿಕ್ಕಮಗಳೂರು - 577101

1072

30/3/2022

..2

ಉಲ್ಲೇಖ (3) ರ ದಿನಾಂಕ: 03.08.2021 ರ ಪತ್ರದಲ್ಲಿ ಕಾರ್ಯದರ್ಶಿ, [illegible] ಆಡಳಿತ ಮಂಡಳಿ [illegible] ದಾಖಲೆಗಳನ್ನು [illegible].

ಉಲ್ಲೇಖ (1) ರ ದಿನಾಂಕ: 07.08.2021 ರ ಪತ್ರದಲ್ಲಿ ಅರ್ಜಿದಾರರಾದ ಶ್ರೀ ದಿವಾಕರ್ [illegible] ನಮ್ಮ ತಾತ [illegible] ತಂದೆಯ ಕಾಲದಿಂದಲೂ ಸ್ವತ್ತು ನಮ್ಮದೆಂದು [illegible] ಹೊಂದಾಯಿನ ಪತ್ರಗಳನ್ನು ಒದಗಿಸಿರುತ್ತಾರೆ.

ಉಲ್ಲೇಖ (4) ರಂತೆ ಜಾಮೀಯಾ ಮಸೀದಿಯ ಕಾರ್ಯದರ್ಶಿಗಳಿಗೆ ದಿನಾಂಕ 24.08.2021 ರಂದು ದಾಖಲೆ ಸಹಿತ ಹಾಜರಾಗಲು ತಿಳಿಸಲಾಗಿದೆ. ಉಲ್ಲೇಖ (3) ರ ದಿನಾಂಕ: 13.08.2021 ರ [illegible] ಜಾಮೀಯಾ ಮಸೀದಿಯವರು ದಿನಾಂಕ: 03.08.2021 ರ ಪತ್ರದಲ್ಲಿ [illegible] ನೀಡಿರುತ್ತಾರೆ. ದಿನಾಂಕ: 07.09.2021 ರ ಪತ್ರದಲ್ಲಿ ಸ್ವತ್ತಿನ ಅಳತೆ ಮಾಡುವುದಕ್ಕೆ [illegible] ನೀಡಿರುತ್ತಾರೆ.

ಉಲ್ಲೇಖ (2) ರ ದಿನಾಂಕ: 02.09.2021 ರ ತಿಳುವಳಿಕೆ ಪತ್ರದಲ್ಲಿ ದಿನಾಂಕ: 03.09.2021 ರಂದು ಅಳತೆ ಮಾಡಲಾಗುವುದೆಂದು ತಿಳುವಳಿಕೆ ನೀಡಲಾಗಿರುತ್ತದೆ. ಅನಿವಾರ್ಯ ಕಾರಣದಿಂದ [illegible] ನಿಗದಿಸಿದ ದಿನಾಂಕ ಮುಂದೂಡಿ ಉಲ್ಲೇಖ (2) ರ ದಿನಾಂಕ: 19.03.2022 ರಂದು ತಿಳುವಳಿಕೆ ನೀಡಿ ದಿನಾಂಕ: 29.03.2022 ರಂದು ಸ್ವತ್ತಿನ ಅಳತೆಗೆ ದಿನಾಂಕ ನಿಗದಿಸಲಾಗಿರುತ್ತದೆ.

ಉಲ್ಲೇಖ (3) ರ ದಿನಾಂಕ: 07.09.2021 ರ ಪತ್ರದಲ್ಲಿ ಪ್ರಕರಣ ನ್ಯಾಯಾಲಯದಲ್ಲಿದೆ ಎಂದು ಅಳತೆ ಮಾಡಬಾರದಾಗಿ ಕಾರ್ಯದರ್ಶಿ, ಜಾಮೀಯ ಮಸೀದಿ ಆಡಳಿತ ಮಂಡಳಿ ಇವರು ಕೋರಿರುತ್ತಾರೆ.

ಅರ್ಜಿದಾರರಾದ ಶ್ರೀ ಎನ್.ಎಂ. ದಿವಾಕರ್ ಬಿನ್ ಮಹಾದೇವಯ್ಯ ಇವರು ಸಲ್ಲಿಸಿದ [illegible] ಹಾಗೂ ಒದಗಿಸಿರುವ ದಾಖಲೆಗಳನ್ನು ಪರಿಶೀಲಿಸಿದೆ. ಕಾರ್ಯದರ್ಶಿ, ಜಾಮೀಯ ಮಸೀದಿ ಆಡಳಿತ [illegible] ಇವರು ನೀಡಿರುವ ಮನವಿಗಳನ್ನು ಪರಿಶೀಲಿಸಿದೆ. ನ್ಯಾಯಾಲಯದಲ್ಲಿ ದಾವೆ ಇರುವುದಕ್ಕೆ ಸಂಬಂಧಿಸಿದಂತೆ ದಾವಾ ಅರ್ಜಿ ಪ್ರತಿಯನ್ನಾಗಲೀ, ಆದೇಶದ ಪ್ರತಿಯನ್ನಾಗಲೀ ಒದಗಿಸಿರುವುದಿಲ್ಲ.

ಈ ಕಛೇರಿಯ 1952-53 ನೇ ಸಾಲಿನ ಅಸೆಸ್‌ಮೆಂಟ್ ವಹಿಯ ಅಸೆಸ್‌ಮೆಂಟ್ ನಂ: [illegible] ರಲ್ಲಿ ಶ್ರೀ ಮಠದ ಮನೆ ಜಾಗ ಎಂದು ದಾಖಲು ಇದ್ದು, ಆ ನಂತರದ ದಾಖಲೆಗಳಲ್ಲಿ [illegible] ಹೋಗಿರುತ್ತದೆ. ಸದರಿ ವಹಿಯಲ್ಲಿ ಸ್ವತ್ತಿನ ಅಳತೆ 120*110 ಗಜ ಎಂದು ದಾಖಲಿರುತ್ತದೆ. [illegible] ಕ್ರಮದ ಕುರಿತು ಯಾವುದೇ ಆದೇಶಗಳು ಕಂಡು ಬಂದಿಲ್ಲ. ಖಾತೆ ನಮೂದಿಸುವುದರಿಂದ [illegible] ಯಾವುದೇ ರೀತಿಯ ಸ್ವತ್ತಿನ ಮೇಲಿನ ಹಕ್ಕನ್ನು ತಂದು ಕೊಡುವುದಿಲ್ಲ ಹಾಗೂ [illegible] ಬಿಡಿಸುವುದು ಇಲ್ಲ. ಅಂತೆಯೇ ಒಂದು ಸ್ವತ್ತಿನ ಖಾತೆಯನ್ನು ಸಕಾರಣಗಳಿಲ್ಲದೆ ರದ್ದುಪಡಿಸುವುದು [illegible] ಕ್ರಮವಾಗಿರುವುದಿಲ್ಲ.

30/3/2022

[illegible] 1956-57ನೇ ಸಾಲಿನ [illegible] ರಲ್ಲಿ "[illegible]" ಮಾಲೀಕತ್ವದ ಹೆಸರಿನಲ್ಲಿ 28.50+140 ಎಂಬ ಅಳತೆಯ [illegible] ಮತ್ತು ನಂತರದ ವರ್ಷಗಳಲ್ಲಿ ಕೈಬಿಟ್ಟು ಹೋಗಿರುವುದು ಪ್ರಸ್ತುತ ಕಂಡು ಬರುತ್ತಿದೆ. ಹೀಗೆ ಕೈಬಿಟ್ಟು ಹೋಗಿರುವುದಕ್ಕೆ ಯಾವುದೇ ಕಾರಣಗಳಿರುವುದಿಲ್ಲ. ಹಾಗೂ ಯಾವುದೇ ಆದೇಶಗಳು ಇರುವುದಿಲ್ಲ. ಇದೇ ಸ್ವತ್ತಿನ ಅಳತೆಗೆ "ನಗರಸಭೆ" ಎಂಬ ಹೆಸರಿನಲ್ಲಿ 1999-2000 ನೇ ಸಾಲಿನ ಅಸೆಸ್‌ಮೆಂಟ್ ವಹಿಯಲ್ಲಿನ 13877/8992 ರಲ್ಲಿ 40+46/2+70+27/2 ಅಡಿಗಳ ಅಳತೆಯ ಸ್ವತ್ತಿನ ಖಾತೆ ಇರುತ್ತದೆ. ಈ ಎರಡು ಸ್ವತ್ತುಗಳು ಒಂದೇ ಸ್ಥಳದಲ್ಲೇ ಇರುವುದಾಗಿದೆ. 1956-57 ನೇ ಸಾಲಿನಲ್ಲಿ ದಾಖಲಾಗಿದ್ದು, ನಂತರದ ವರ್ಷಗಳಲ್ಲಿ ದಾಖಲು ಕೈಬಿಟ್ಟು ಹೋದ ಸ್ವತ್ತಿನ ನಮೂದನ್ನು "ನಗರಸಭೆ" ಹೆಸರಿನಲ್ಲಿ ಮುಂದುವರೆಸುವ ಅಗತ್ಯ ಇರುವುದು ಕಂಡು ಬರುತ್ತಿದೆ. ಈ ಸ್ವತ್ತಿಗೆ "ನಗರಸಭೆ"ಯ ಹೊರತಾಗಿ ಇನ್ನಾರು ಮಾಲೀಕರು ಇರುವುದಿಲ್ಲ. ಹೀಗೆ ನಗರಸಭೆಯ ಹೆಸರಿನಲ್ಲಿನ ಕೈಬಿಟ್ಟು ಹೋದ ನಮೂದನ್ನು ಮುಂದುವರೆಸದೇ ಕೈಬಿಡುವುದು ಸೂಕ್ತವಾಗಿರುವುದಿಲ್ಲ.

ಕಾರ್ಯದರ್ಶಿ, ಜಾಮೀಯ ಮಸೀದಿ ಆಡಳಿತ ಮಂಡಳಿ ಇವರು ಶ್ರೀ. ಎನ್.ಎಂ. ದಿವಾಕರ್ ಇವರ ಕೋರಿಕೆಯಂತೆ ಖಾತೆ ದಾಖಲು ಮುಂದುವರಿಸುವ ಕುರಿತು ದಾಖಲೆಗಳ ಸಹಿತ ಸಮರ್ಥನೀಯ ಆಕ್ಷೇಪಣೆ ಸಲ್ಲಿಸಿರುವುದಿಲ್ಲ.

ಪಕ್ಷಗಾರರ ಸ್ವತ್ತಿನ ಸ್ವಾಧೀನ ಹಕ್ಕು ಮತ್ತು ಅಧಿಕಾರ ಹಾಗೂ ಖಾತೆಗಳ ಬಗ್ಗೆ ವಿವಾದ ಇದ್ದಲ್ಲಿ ಅದನ್ನು ಸಂಬಂಧಪಟ್ಟವರು ಸಿವಿಲ್ ನ್ಯಾಯಾಲಯದಲ್ಲಿ ದಾವೆ ದಾಖಲಿಸಿ ಪರಿಹಾರ ಪಡೆದುಕೊಳ್ಳಬೇಕಾಗಿರುತ್ತದೆ.

ಈ ಎಲ್ಲಾ ಕಾರಣಗಳಿಂದ ಉಲ್ಲೇಖ (1) ರ ಕೋರಿಕೆಯಂತೆ, ಕೈಬಿಟ್ಟು ಹೋದ ಖಾತೆಯನ್ನು ಮೂಲ ಖಾತೆದಾರ ಮಠದ ಮನೆ ದಿ॥ ನಂಜಪ್ಪಯ್ಯನವರ ಮಗ ದಿ॥ ನಂಜುಂಡಯ್ಯ ಬಿನ್ ಮಠದ ನಂಜಪ್ಪಯ್ಯ ಇವರ ಮಗ ದಿ॥ ಮಹಾದೇವಯ್ಯ ಇವರ ಎಲ್ಲಾ ವಾರಸುದಾರರ ಮಕ್ಕಳಾದ ಶ್ರೀ ಎನ್.ಎಂ ಪರೀಶ್ ಬಿನ್ ಲೇಟ್ ಮಹಾದೇವಯ್ಯ, ಶ್ರೀಮತಿ ಎನ್.ಎಂ. ಕಮಲಮ್ಮ ಬಿನ್ ಲೇಟ್ ಮಹಾದೇವಯ್ಯ, ಶ್ರೀ ಎನ್.ಎಂ. ರುದ್ರಮೂರ್ತಿ ಬಿನ್ ಲೇಟ್ ಮಹಾದೇವಯ್ಯ, ಶ್ರೀಮತಿ ಎನ್.ಎಂ. ಹೇಮಾವತಿ ಬಿನ್ ಲೇಟ್ ಮಹಾದೇವಯ್ಯ, ಶ್ರೀಮತಿ ದ್ರಾಕ್ಷಾಯಿಣಿ ಬಿನ್ ಲೇಟ್ ಮಹಾದೇವಯ್ಯ, ಶ್ರೀ ಎನ್ ಎಂ ಮಲ್ಲಿಕಾರ್ಜುನ ಬಿನ್ ಲೇಟ್ ಮಹಾದೇವಯ್ಯ, ಎನ್.ಎಂ. ಲಿಂಗಸ್ವಾಮಿ ಬಿನ್ ಲೇಟ್ ಮಹಾದೇವಯ್ಯ, ಶ್ರೀಮತಿ ಲೋಕೇಶ್ವರಿ ಬಿನ್ ಲೇಟ್ ಮಹಾದೇವಯ್ಯ, ಶ್ರೀಮತಿ ಭಾಗ್ಯ ಬಿನ್ ಲೇಟ್ ಮಹಾದೇವಯ್ಯ, ಶ್ರೀ ಎನ್.ಎಂ ದಿವಾಕರ ಬಿನ್ ಲೇಟ್ ಮಹಾದೇವಯ್ಯ ರವರುಗಳ ಹೆಸರಿಗೆ ಜಂಟಿ ಖಾತೆಗೆ ಏಕ ನಿವೇಶನವನ್ನು ಕೈಬಿಟ್ಟು ಹೋದ ಖಾತೆಯನ್ನು ಪುನರ್ ಸ್ಥಾಪಿಸಿ ಮುಂದುವರಿಸುವುದು ಸೂಕ್ತವೆಂದು ಅಭಿಪ್ರಾಯಿಸಿ ಹಾಲಿ ಸ್ಥಳದಲ್ಲಿರುವ ಲಭ್ಯವಿರುವ ಅಳತೆಯಂತೆ ಖಾತೆ ಮುಂದುವರೆಸಲು ಈ ಕೆಳಕಂಡಂತೆ ಆದೇಶಿಸಿದೆ.

(6374)

::ಆದೇಶ::

[illegible]/03/2021-22

[illegible] [illegible] [illegible] [illegible] [illegible]

2439/2749/2327/2328, 2749/2327/2328 ರಲ್ಲಿನ ಖಾತೆ 110-120 [illegible] ([illegible]) [illegible]

ದಿ ಬೋರ್ಡ್ ಆಫ್ ಟ್ರಸ್ಟ್ ಮುಸ್ಲಿಂ ಎಂಡೋಮೆಂಟ್‌ನ ಹೆಸರಿನಲ್ಲಿ [illegible] [illegible] ನಗರಸಭೆಯ ಹೆಸರಿಗೆ ಕಛೇರಿಯ ದಾಖಲೆಯಲ್ಲಿ ಲಭ್ಯವಿರುವ ಸ್ವತ್ತಿನ [illegible] [illegible] ಸ್ಥಳದಲ್ಲಿ ಲಭ್ಯವಿರುವ ವಿಸ್ತೀರ್ಣ 41713 (ನಲವತ್ತೊಂದು ಸಾವಿರದ ಏಳುನೂರ ಹದಿಮೂರು) [illegible] ಸ್ವತ್ತಿನ ಖಾತೆಯನ್ನು ಮಠದ ಮನೆ ಹೆಸರಿಗೆ ಇವರ ಪರವಾಗಿ ಶ್ರೀ ಎನ್.ಎಂ. ಹರೀಶ್ ಬಿನ್ ಲೇಟ್ ಮಹಾದೇವಯ್ಯ, ಶ್ರೀಮತಿ ಎನ್.ಎಂ. ಕಮಲಮ್ಮ ಬಿನ್ ಲೇಟ್ ಮಹಾದೇವಯ್ಯ, ಶ್ರೀ ಎನ್.ಎಂ. ಶಂಕರಮೂರ್ತಿ ಬಿನ್ ಲೇಟ್ ಮಹಾದೇವಯ್ಯ, ಶ್ರೀಮತಿ ಎನ್.ಎಂ. ಹೇಮಾವತಿ ಬಿನ್ ಲೇಟ್ ಮಹಾದೇವಯ್ಯ, ಶ್ರೀಮತಿ ದ್ರಾಕ್ಷಾಯಿಣಿ ಬಿನ್ ಲೇಟ್ ಮಹಾದೇವಯ್ಯ, ಶ್ರೀ ಎನ್ ಎಂ ಮಲ್ಲಿಕಾರ್ಜುನ ಬಿನ್ ಲೇಟ್ ಮಹಾದೇವಯ್ಯ, ಎನ್.ಎಂ. ಲಿಂಗಸ್ವಾಮಿ ಬಿನ್ ಲೇಟ್ ಮಹಾದೇವಯ್ಯ, ಶ್ರೀಮತಿ ಯೋಗೀಶ್ವರಿ ಬಿನ್ ಲೇಟ್ ಮಹಾದೇವಯ್ಯ, ಶ್ರೀಮತಿ ಭಾಗ್ಯ ಬಿನ್ ಲೇಟ್ ಮಹಾದೇವಯ್ಯ, ಶ್ರೀ ಎನ್.ಎಂ ದಿವಾಕರ ಬಿನ್ ಲೇಟ್ ಮಹಾದೇವಯ್ಯ [illegible] [illegible] ಕೈಬಿಟ್ಟು ಹೋದ ಖಾತೆ ದಾಖಲೆಯನ್ನು ಕಛೇರಿಯ ದಾಖಲೆಯಲ್ಲಿ ಮುಂದುವರಿಸಲು [illegible] 1956-[illegible] ನೇ ಸಾಲಿನಲ್ಲಿ ದಾಖಲು ಇರುವ ಅಸೆಸ್‌ಮೆಂಟ್ ನಂ: 3145/2923 ರಲ್ಲಿ ನಗರಸಭೆಯ [illegible] 28 [illegible] ಅಡಿ ಅಳತೆಯ ಸ್ವತ್ತಿನ ಕೈ ನಮೂದು ನಂತರದ ವರ್ಷಗಳಲ್ಲಿ ಕೈಬಿಟ್ಟು ಹೋಗಿರುವುದನ್ನು [illegible] ದಾಖಲು ಮಾಡಲು ಹಾಗೂ ನಗರಸಭೆಯ ಸ್ಥಿರಾಸ್ತಿ ವಹಿಯಲ್ಲಿ ದಾಖಲು ಮಾಡಲು ಆದೇಶಿಸಿದೆ.

(ಸಹಿ) 30/3/2[illegible]
ಪೌರಾಯುಕ್ತರು,
ನಗರಸಭೆ, ಚಿಕ್ಕಮಗಳೂರು

ರವರಿಗೆ,

1. ಮಠದ ಮನೆ ಇವರ ಪರವಾಗಿ
   1) ಶ್ರೀ ಎನ್.ಎಂ ಹರೀಶ್ ಬಿನ್ ಲೇಟ್ ಮಹಾದೇವಯ್ಯ.
   2) ಶ್ರೀಮತಿ ಎನ್.ಎಂ. ಕಮಲಮ್ಮ ಬಿನ್ ಲೇಟ್ ಮಹಾದೇವಯ್ಯ.
   3) ಶ್ರೀ ಎನ್.ಎಂ. ಶಂಕರಮೂರ್ತಿ ಬಿನ್ ಲೇಟ್ ಮಹಾದೇವಯ್ಯ.
   4) ಶ್ರೀಮತಿ ಎನ್.ಎಂ. ಹೇಮಾವತಿ ಬಿನ್ ಲೇಟ್ ಮಹಾದೇವಯ್ಯ.
   5) ಶ್ರೀಮತಿ ದ್ರಾಕ್ಷಾಯಿಣಿ ಬಿನ್ ಲೇಟ್ ಮಹಾದೇವಯ್ಯ.
   6) ಶ್ರೀ ಎನ್ ಎಂ ಮಲ್ಲಿಕಾರ್ಜುನ ಬಿನ್ ಲೇಟ್ ಮಹಾದೇವಯ್ಯ.
   7) ಎನ್.ಎಂ. ಲಿಂಗಸ್ವಾಮಿ ಬಿನ್ ಲೇಟ್ ಮಹಾದೇವಯ್ಯ.
   8) ಶ್ರೀಮತಿ ಯೋಗೀಶ್ವರಿ ಬಿನ್ ಲೇಟ್ ಮಹಾದೇವಯ್ಯ.
   9) ಶ್ರೀಮತಿ ಭಾಗ್ಯ ಬಿನ್ ಲೇಟ್ ಮಹಾದೇವಯ್ಯ.
   10) ಶ್ರೀ ಎನ್.ಎಂ ದಿವಾಕರ ಬಿನ್ ಲೇಟ್ ಮಹಾದೇವಯ್ಯ
   ನಲ್ಲೂರು ಗ್ರಾಮ, ಚಿಕ್ಕಮಗಳೂರು ತಾಲ್ಲೂಕು, ಚಿಕ್ಕಮಗಳೂರು.

ಪ್ರತಿಯನ್ನು:

1. ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ರವರ [illegible]
2. ಮಾನ್ಯ ಅಧ್ಯಕ್ಷರು, ನಗರಸಭೆ, ಚಿಕ್ಕಮಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯದರ್ಶಿ, ದಿ ಬೋರ್ಡ್ ಆಫ್ ಟ್ರಸ್ಟ್ ಮುಸ್ಲಿಂ ಎಂಡೋಮೆಂಟ್ (ರಿ) [illegible] ಚಿಕ್ಕಮಗಳೂರು ರವರಿಗೆ ಸಲ್ಲಿಸಿದೆ
4. ಕಛೇರಿ ಪ್ರತಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಊ) ವಿಷಯ:- ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ಇಲ್ಲಿನ ನಿವೃತ್ತ ನೌಕರರಿಗೆ ಪಿಂಚಣಿ ನೀಡದಿರುವ ಬಗ್ಗೆ.**

- - - - -

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಎಸ್.ವ್ಹಿ. ಸಂಕನೂರರವರು ದಿನಾಂಕ 6.3.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಕರ್ನಾಟಕ ವಿಶ್ವವಿದ್ಯಾಲಯಕ್ಕೆ 2024-25ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಈಗಾಗಲೇ ವಿಶ್ರಾಂತಿ ವೇತನಕ್ಕೆ ರೂ.50.00ಕೋಟಿಗಳನ್ನು ಒದಗಿಸಲಾಗಿದೆ. ಈ ಅನುದಾನವನ್ನು ನಾಲ್ಕು ಕಂತುಗಳನ್ನು ಬಿಡುಗಡೆಗೊಳಿಸಲಾಗಿದ್ದು, ಅದರ ವಿವರ ಕೆಳಕಂಡಂತಿದೆ:-

(ರೂ.ಕೋಟಿಗಳಲ್ಲಿ)

| ಕ್ರ. ಸಂ | ವಿಶ್ವವಿದ್ಯಾಲಯ ಹೆಸರು/ಪ್ರಧಾನ ಶೀರ್ಷಿಕೆ | ಪ್ರಥಮ ಕಂತು ದಿನಾಂಕ: 04.04.2024 | ದ್ವಿತೀಯ ಕಂತು ದಿನಾಂಕ: 25.06.2024 | ತೃತೀಯ ಕಂತು ದಿನಾಂಕ: 05.09.2024 | ನಾಲ್ಕನೇ ಕಂತು ದಿನಾಂಕ: 02.12.2024 |
|---|---|---|---|---|---|
| 1 | ಕರ್ನಾಟಕ ವಿಶ್ವವಿದ್ಯಾಲಯ 2202-03-102-0-02-118-ಸಹಾಯಾನುದಾನ ವಿಶ್ರಾಂತಿ ವೇತನಗಳು | 12.50 | 12.50 | 12.50 | 12.50 |

ಮುಂದುವರೆದು, 2024-25ನೇ ಸಾಲಿಗೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪಿಂಚಣಿ ವೇತನ ಪಾವತಿಗಾಗಿ ಲೆಕ್ಕ ಶೀರ್ಷಿಕೆ:2202-03-102-0-02-118-ಸಹಾಯಾನುದಾನ-ವಿಶ್ರಾಂತಿ ವೇತನಗಳು ಅಡಿಯಲ್ಲಿ ರೂ.20.00 ಕೋಟಿಗಳನ್ನು ಪುನರ್ವಿನಿಯೋಗದ ಮೂಲಕ ಹೆಚ್ಚುವರಿಯಾಗಿ ಒದಗಿಸಿ ಬಿಡುಗಡೆಗೊಳಿಸಿ ದಿನಾಂಕ: 29.11.2024ರಂದು ಆದೇಶಿಸಿದೆ.

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಆಂತರಿಕ ಸಂಪನ್ಮೂಲದ ಶೇ.65%ಕ್ಕೂ ಹೆಚ್ಚು ಮೊತ್ತವನ್ನು (ರೂ.46ಕೋಟಿ) ಅತಿಥಿ ಉಪನ್ಯಾಸಕರು/ಹೊರಗುತ್ತಿಗೆ/ತಾತ್ಕಾಲಿಕ/ಬೋಧಕೇತರ ಸಿಬ್ಬಂದಿಯ ವೇತನ/ಕಛೇರಿ ನಿರ್ವಹಣೆಗಾಗಿ ವೆಚ್ಚ ಮಾಡುತ್ತಿದ್ದು, ಇದು ಅಸಮಾನವಾಗಿ disproportionately high) ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಕರ್ನಾಟಕ ವಿಶ್ವವಿದ್ಯಾಲಯವು ಅಸಮಾನ ವೆಚ್ಚವನ್ನು ತರ್ಕಬದ್ಧಗೊಳಿಸುವ ಅನಗತ್ಯ ವೆಚ್ಚವನ್ನು ನಿಯಂತ್ರಿಸಲು ಮೊದಲಿಗೆ ಜರೂರು ಕ್ರಮವಹಿಸಬೇಕಾಗಿರುತ್ತದೆ.

ಅಲ್ಲದೇ, ಆರ್ಥಿಕ ಇಲಾಖೆಯು ಮಂಗಳೂರು ವಿಶ್ವವಿದ್ಯಾಲಯದ ಹೆಚ್ಚುವರಿ ಪಿಂಚಣಿ ಕೋರಿಕೆಗೆ ಸಂಬಂಧಿಸಿದಂತೆ ನೀಡಿರುವ ಅಭಿಪ್ರಾಯದನ್ವಯ ಕರ್ನಾಟಕ ವಿಶ್ವವಿದ್ಯಾಲಯವು ಅವಶ್ಯಕವಲ್ಲದ ಖರ್ಚುಗಳಿಗೆ ಅನುದಾನ ಪಾವತಿಸುವುದನ್ನು ಹೊರತುಪಡಿಸಿ ಇನ್ನು ಮುಂದೆ ತನ್ನ ಆಂತರಿಕ ಸಂಪನ್ಮೂಲಗಳಿಂದ ಶಾಸನಬದ್ಧ ಹೊಣೆಗಾರಿಕೆಗಳ (ಪಿಂಚಣಿ ಇತ್ಯಾದಿ) ವೆಚ್ಚಗಳನ್ನು ಪಾವತಿಸಲು ಪ್ರಥಮದಲ್ಲಿ ಅವಕಾಶ ಕಲ್ಪಿಸಿಕೊಂಡು, ತದನಂತರವೇ ಶಾಸನಬದ್ಧವಲ್ಲದ/ಇತರೆ ಹೆಚ್ಚುವರಿ ವೆಚ್ಚಗಳಿಗೆ ಅವಕಾಶ ಮಾಡಿಕೊಳ್ಳಬೇಕಾಗಿರುತ್ತದೆ.

**ಖ) ವಿಷಯ:- ಅಕ್ಷರ ದಾಸೋಹ ನೌಕರರಿಗೆ ಗೌರವ ಧನ ಹೆಚ್ಚಿಸುವುದರೊಂದಿಗೆ, ವಿವಿಧ ಬೇಡಿಕೆಗಳನ್ನು ಈಡೇರಿಸುವ ಕುರಿತು.**

- - - - -

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀಮತಿ ಭಾರತಿ ಶೆಟ್ಟಿಯವರು ಮತ್ತು ಶ್ರೀ ಕೆ. ಪ್ರತಾಪಸಿಂಹ ನಾಯಕ್‌ರವರು ದಿನಾಂಕ 6.3.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಉತ್ತರ:**

ಮಧ್ಯಾಹ್ನ ಉಪಹಾರ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಹಾತ್ವಾಕಾಂಕ್ಷೆಯ ಯೋಜನೆಯಾಗಿರುತ್ತದೆ. ಮಧ್ಯಾಹ್ನ ಉಪಹಾರ ಯೋಜನೆಯ ವೆಚ್ಚವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ 60:40 ಅನುಪಾತದಲ್ಲಿ ಭರಿಸಲಾಗುತ್ತಿದೆ. ಮಧ್ಯಾಹ್ನ ಉಪಹಾರ ಯೋಜನೆಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅನುಷ್ಠಾನ ಮಾಡಲಾಗುತ್ತಿದೆ.

ಕೇಂದ್ರ ಸರ್ಕಾರವು ಮಧ್ಯಾಹ್ನ ಉಪಹಾರ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಅಡುಗೆ ಸಹಾಯಕರಿಗೆ ಮಾಸಿಕ ರೂ 1000/- ಗಳ ಗೌರವ ಸಂಭಾವನೆಯನ್ನು ನಿಗದಿಪಡಿಸಿದ್ದು, ಈ ಪೈಕಿ ರೂ 600/-ಗಳನ್ನು ಕೇಂದ್ರ ಸರ್ಕಾರವು ಹಾಗೂ ರೂ 400/-ಗಳನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುತ್ತಿದೆ. ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಸಂಭಾವನೆ ಮೊತ್ತವು ಕಡಿಮೆ ಇರುವ ಕಾರಣ ಕಾಲ ಕಾಲಕ್ಕೆ ಅಡುಗೆ ಸಹಾಯಕೆ ಸಂಭಾವನೆಯನ್ನು ರಾಜ್ಯ ಸರ್ಕಾರದಿಂದ ಹೆಚ್ಚಿಸಲಾಗಿದ್ದು, ಸದರಿ ಹೆಚ್ಚುವರಿ ಸಂಭಾವನೆ ಮೊತ್ತವನ್ನು ರಾಜ್ಯ ಸರ್ಕಾರದಿಂದ ಸಂಪೂರ್ಣವಾಗಿ (ಶೇ 100 ರಷ್ಟು) ಭರಿಸಲಾಗುತ್ತಿದೆ. ಪ್ರಸ್ತುತ ಮಧ್ಯಾಹ್ನ ಉಪಹಾರ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಅಡುಗೆ ಸಹಾಯಕರ ಪೈಕಿ ಮುಖ್ಯ ಅಡುಗೆಯವರಿಗೆ ಮಾಸಿಕ ರೂ 3700/- ರಷ್ಟು ಮತ್ತು ಸಹಾಯಕ ಅಡುಗೆ ಸಿಬ್ಬಂದಿಗೆ ಮಾಸಿಕ ರೂ 3600/- ರಷ್ಟು ಮಾಸಿಕ ಗೌರವ ಸಂಭಾವನೆಯನ್ನು ಪಾವತಿಸಲಾಗುತ್ತಿದೆ.

| ಸಿಬ್ಬಂದಿ ವಿವರ | ಮಾಸಿಕ ಸಂಭಾವನೆಯ ಕೇಂದ್ರದ ಪಾಲು (60%) | ಮಾಸಿಕ ಸಂಭಾವನೆಯ ರಾಜ್ಯದ ಪಾಲು (40%) | ರಾಜ್ಯ ದಿಂದ ನೀಡಲಾಗುತ್ತಿರುವ ಹೆಚ್ಚುವರಿ ಮಾಸಿಕ ಸಂಭಾವನೆಯ ಮೊತ್ತ | ಒಟ್ಟು ಮಾಸಿಕ ಸಂಭಾವನೆಯ ಮೊತ್ತ ರೂಪಾಯಿಗಳಲ್ಲಿ |
|---|---|---|---|---|
| ಮುಖ್ಯ ಅಡುಗೆಯವರು | 600/- | 400/- | 2700/- | **3700/-** |
| ಸಹಾಯಕ ಅಡುಗೆಯವರು | 600/- | 400/- | 2600/- | **3600/-** |

2024-25ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ 44,812 ಮುಖ್ಯ ಅಡುಗೆ ಸಿಬ್ಬಂದಿಗಳು 68,387 ಸಹಾಯಕ ಅಡುಗೆ ಸಿಬ್ಬಂದಿಗಳನ್ನು ಒಳಗೊಂಡಂತೆ ಒಟ್ಟಾರೆ 1,13,199 ಅಡುಗೆ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

2024-25ನೇ ಸಾಲಿನ ಆಯವ್ಯಯದಲ್ಲಿ ಮಧ್ಯಾಹ್ನ ಉಪಹಾರ ಯೋಜನೆ ಮತ್ತು ಕ್ಷೀರಭಾಗ್ಯ ಯೋಜನೆಯನ್ನು ಅನುಷ್ಠಾನ ಮಾಡಲು ರೂ 2356.13 ಕೋಟಿ ಅನುದಾನ ನಿಗದಿಯಾಗಿರುತ್ತದೆ. ಈ ಪೈಕಿ ಅಡುಗೆ ಸಿಬ್ಬಂದಿಗಳ ಗೌರವ ಸಂಭಾವನೆಯನ್ನು ಪಾವತಿಸಲು ರೂ 417.58 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿದ್ದು, ಈ ಅನುದಾನವು ಒಟ್ಟಾರೆ ಮಧ್ಯಾಹ್ನ ಉಪಹಾರ ಯೋಜನೆ ಮತ್ತು ಕ್ಷೀರಭಾಗ್ಯ ಯೋಜನೆಯನ್ನು ಅನುಷ್ಠಾನ ಮಾಡಲು ನಿಗದಿಪಡಿಸಲಾಗಿರುವ ರೂ 2356.13 ಕೋಟಿ ಅನುದಾನದ ಶೇ 17.72 ರಷ್ಟಾಗುತ್ತದೆ.

**ಅಡುಗೆ ಸಿಬ್ಬಂದಿಗಳಿಗೆ ನೀಡಲಾಗಿರುವ ಇತರೆ ಸೌಲಭ್ಯಗಳ ವಿವರ ಕೆಳಕಂಡಂತಿದೆ.**

1)ಅಡುಗೆ ಸಿಬ್ಬಂದಿಯವರು ಅಡುಗೆ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಸುಟ್ಟಗಾಯಗಳಾದಲ್ಲಿ ರೂ.30,000/-, ಶಾಶ್ವತ ಅಂಗವಿಕಲತೆ ಉಂಟಾದಲ್ಲಿ ಗರಿಷ್ಟ ರೂ.75,000/- ಮತ್ತು ಸುಟ್ಟಗಾಯಗಳಾಗಿ ಮರಣ ಹೊಂದಿದ ಸಂದರ್ಭದಲ್ಲಿ ರೂ.1,00,000/-ಗಳ ಪರಿಹಾರವನ್ನು ನೀಡಲಾಗುತ್ತದೆ.

2) ಮಧ್ಯಾಹ್ನ ಉಪಹಾರ ಯೋಜನೆಯಡಿ ಆಯ್ಕೆಗೊಂಡು 60 ವರ್ಷಗಳ ವಯೋಮಾನವನ್ನು ಪೂರ್ಣಗೊಳಿಸಿ ದಿನಾಂಕ: 31.03.2022ಕ್ಕೆ ಅಥವಾ ನಂತರ ಕರ್ತವ್ಯದಿಂದ ಬಿಡುಗಡೆ ಹೊಂದಿದ ಅಡುಗೆ ಸಿಬ್ಬಂದಿಗೆ ಅಂತಿಮವಾಗಿ ಒಂದು ಬಾರಿಯ ಇಡಿಗಂಟು ಸೌಲಭ್ಯವನ್ನು ಕೆಳಕಂಡಂತೆ ನೀಡಲು ಅನುಮತಿ ನೀಡಲಾಗಿದೆ.

| **ಅಡುಗೆ ಸಿಬ್ಬಂದಿಯವರು ಸಲ್ಲಿಸಿದ ಸೇವೆಯ ಅವಧಿ** | **ಅಡುಗೆ ಸಿಬ್ಬಂಗಿಗಳು ಸಲ್ಲಿಸಿದ ಸೇವೆಯನ್ನು ಆಧರಿಸಿ ಒಂದು ಬಾರಿಗೆ ನೀಡಲು ಆದೇಶಿಸಲಾಗಿರುವ ಅಂತಿಮ ಇಡಿಗಂಟಿನ ಮೊತ್ತ** |
|---|---|
| 5 ವರ್ಷಕ್ಕೂ ಮೇಲ್ಪಟ್ಟು ಹಾಗೂ 15 ವರ್ಷಕ್ಕಿಂತ ಕಡಿಮೆ | ರೂ 30,000/-<br>(ಮೂವತ್ತು ಸಾವಿರ ಮಾತ್ರ) |
| 15 ವರ್ಷ ಹಾಗೂ ಅದಕ್ಕೂ ಹೆಚ್ಚು | ರೂ 40,000/-<br>(ನಲವತ್ತು ಸಾವಿರ ಮಾತ್ರ) |

ರಾಜ್ಯ ಸರ್ಕಾರದಿಂದ ಕಾಲಕಾಲಕ್ಕೆ ಅಡುಗೆ ಸಿಬ್ಬಂದಿಗಳಿಗೆ ನೀಡಲಾಗುವ ಮಾಸಿಕ ಗೌರವ ಸಂಭಾವನೆಯನ್ನು ಹೆಚ್ಚಿಸಿ ಅಡುಗೆ ಸಿಬ್ಬಂದಿಗಳಿಗೆ ಜೀವನ ನಿರ್ವಹಣೆಗೆ ತೊಂದರೆಯಾಗದಂತೆ ಕ್ರಮವಹಿಸಲಾಗುತ್ತಿದೆ. ಮಧ್ಯಾಹ್ನದ ಬಿಸಿಯೂಟ ಪ್ರಾರಂಭವಾದಾಗಿನಿಂದ ಇಲ್ಲಿಯವರೆವಿಗೂ ನೀಡಿರುವ ಅಡುಗೆ ಸಿಬ್ಬಂದಿಗಳಿಗೆ ನೀಡಲಾಗಿರುವ ತಲಾ ಮಾಸಿಕ ಗೌರವ ಸಂಭಾವನೆ ವಿವರಗಳನ್ನು ಅನುಬಂಧಿಸಿದೆ.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಮಧ್ಯಾಹ್ನ ಉಪಹಾರ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳಿಗೆ ವರ್ಷದಲ್ಲಿ 10 ತಿಂಗಳ ಅವಧಿಗೆ ಮಾತ್ರ ಗೌರವ ಸಂಭಾವನೆಯನ್ನು ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ಆರ್ಥಿಕ ವರ್ಷದಲ್ಲಿ 10 ತಿಂಗಳ ಅವಧಿಗೆ ಮಾತ್ರ ಶಾಲೆಗಳು ನಡೆಯುತ್ತದೆ. ಬೇಸಿಗೆ ರಜೆ ಅವಧಿಯಲ್ಲಿ ಶಾಲೆಗಳು ನಡೆಯುವುದಿಲ್ಲ. ಆದಕಾರಣ ಪ್ರತಿ ಆರ್ಥಿಕ ವರ್ಷದಲ್ಲಿ ಜೂನ್ ಮಾಹೆಯಿಂದ ಆರ್ಥಿಕ ವರ್ಷದ ಅಂತ್ಯದ ಮಾರ್ಚ್ ಮಾಹೆಯವರೆಗೆ 10 ತಿಂಗಳ ಅವಧಿಗೆ ಮಾತ್ರ ಮಧ್ಯಾಹ್ನ ಬಿಸಿಯೂಟ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳಿಗೆ ಗೌರವ ಸಂಭಾವನೆಯನ್ನು ಪಾವತಿಸಲಾಗುತ್ತದೆ. ಬೇಸಿಗೆ ರಜೆ ಅವಧಿಯಲ್ಲಿ ಶಾಲೆಗಳು ನಡೆಯದ ಕಾರಣ ಅಡುಗೆ ಸಿಬ್ಬಂದಿಗಳಿಗೆ ಗೌರವ ಸಂಭಾವನೆಯನ್ನು ನೀಡಲು ಅವಕಾಶವಿರುವುದಿಲ್ಲ.

ಆದರೆ ಬೇಸಿಗೆ ರಜೆ ಅವಧಿಯಲ್ಲಿ ಬರಪೀಡಿತ ಪ್ರದೇಶಗಳಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ನೀಡುವುದರಿಂದ, ಈ ಅವಧಿಯಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ಸಿದ್ಧಪಡಿಸಲು ಕಾರ್ಯನಿರ್ವಹಿಸುವ ಅಡುಗೆ ಸಿಬ್ಬಂದಿಗಳಿಗೆ ಗೌರವ ಸಂಭಾವನೆಯನ್ನು ನೀಡಲಾಗುತ್ತದೆ.

ಮಧ್ಯಾಹ್ನ ಉಪಹಾರ ಯೋಜನೆಯಡಿ ಅಗತ್ಯವಿರುವ ಅಡುಗೆ ಕೋಣೆಗಳನ್ನು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ್ಯ ಖಾತ್ರಿ ಯೊಜನೆ ಮೂಲಕ ಕೈಗೊಳ್ಳಲಾಗುತ್ತಿದೆ.

ರಾಜ್ಯ ಸರ್ಕಾರದಿಂದ ಆರ್ಥಿಕ ಸ್ಥಿತಿಗತಿಗಳಿಗೆ ಅನುಗುಣವಾಗಿಕಾಲಕಾಲಕ್ಕೆ ಅಡುಗೆ ಸಿಬ್ಬಂದಿಗಳ ಗೌರವ ಸಂಭಾವನೆಯನ್ನು ಹೆಚ್ಚಿಸಲಾಗುತ್ತಿದೆ.

ರಾಜ್ಯದಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳಿಗೆ ಎಷ್ಟು ಗೌರವ ಸಂಭಾವನೆಯನ್ನು ನೀಡಬೇಕು ಎನ್ನುವುದನ್ನು ನಿರ್ಧರಿಸುವುದು ರಾಜ್ಯ ಸರ್ಕಾರದ ನೀತಿಯ ವಿಷಯವಾಗಿರುವುದರಿಂದ, ಇತರೆ ರಾಜ್ಯಗಳಲ್ಲಿನ ಅಡುಗೆ ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ಗೌರವ ಸಂಭಾವನೆಯನ್ನು ರಾಜ್ಯದಲ್ಲಿನ ಅಡುಗೆ ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ಗೌರವ ಸಂಭಾವನೆಗೆ ಹೋಲಿಸಿ ಅನ್ವಯಿಸಲು ಬರುವುದಿಲ್ಲ.

**ಎ) ವಿಷಯ:- ಬೆಳಗಾವಿ ಜಿಲ್ಲೆಯ ಹಿಂಡಲಗಾ ಜೈಲಿನ ಖೈದಿಗಳು ಜೈಲಲ್ಲಿ ಮೊಬೈಲ್ ಫೋನ್ ಬಳಸದಂತೆ ತಡೆಯಲು ಅಳವಡಿಸಲಾದ 5ಜಿ ನೆಟ್ ವರ್ಕ್ ಜಾಮರ್‌ನಿಂದಾಗಿ ಸುತ್ತಮುತ್ತಲಿನ ನಾಗರೀಕರಿಗೆ/ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಕುರಿತು.**

- - - - -

ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಡಾ. ಉಮಾಶ್ರೀಯವರು ದಿನಾಂಕ 06.3.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ರಾಜ್ಯದಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾಲಯಗಳನ್ನು ಒಳಗೊಂಡಂತ ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸನ್ಮಾನ್ಯ ಉಪ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಈ ಬಗ್ಗೆ ಸಭೆ ನಡೆಸಿದ್ದು, ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳೊಂದಿಗೆ ರಾಜ್ಯದಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟ ಹಾಗೂ ಅವರ ಮುಂಬರುವ ಭವಿಷ್ಯದ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ವಿದ್ಯಾರ್ಥಿಗಳಿಗೆ ಗುಣಾತ್ಮಕ ಶೈಕ್ಷಣಿಕ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಕೆಲವು ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿ, ವಿದ್ಯಾರ್ಥಿಗಳ ಪ್ರವೇಶಾತಿ, ಮೂಲಸೌಲಭ್ಯದ ಕೊರತೆ ಮುಂತಾದ ಪ್ರಮುಖ ಅಂಶಗಳ ಕುರಿತು ಮೊದಲ ಸಭೆಯಲ್ಲಿ ಚರ್ಚಿಸಲಾಗಿದ್ದು, ಸಭೆಯಲ್ಲಿ ಸ್ವೀಕೃತವಾದ ಸಲಹೆಗಳನ್ನು ಪರಾಮರ್ಶಿಸಿ ಕೆಲವು ವಿಶ್ವವಿದ್ಯಾಲಯಗಳ ವಿಲೀನ, ಹೆಚ್ಚಿನ ಅನುದಾನದ ಅಗತ್ಯತೆ ಮತ್ತು ಹಂತ-ಹಂತವಾಗಿ ಖಾಲಿ ಹುದ್ದೆಗಳ ಭರ್ತಿ ಸೇರಿದಂತೆ ವಿಶ್ವವಿದ್ಯಾಲಯಗಳ ಬಲವರ್ಧನೆಗಾಗಿ ಉನ್ನತ ಶಿಕ್ಷಣ ಇಲಾಖೆ ಮತ್ತು ಆರ್ಥಿಕ ಇಲಾಖೆಯು ಒಟ್ಟಾರೆ ಸೇರಿ ವಿಸ್ತ್ರತವಾದ ವರದಿ/ಪ್ರಸ್ತಾವನೆಯನ್ನು ಸಚಿವ ಸಂಪುಟಕ್ಕೆ ಮಂಡಿಸಿ ಸೂಕ್ತ ತೀರ್ಮಾನ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

**ಉತ್ತರ :** 2022-23ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದಲ್ಲಿ ಕಾರಾಗೃಹಗಳಲ್ಲಿ ಮೊಬೈಲ್ ಬಳಕೆ ತಡೆಯಲು ಹಾಗೂ ಇನ್ನಿತರೇ ನಿಷೇಧಿತ ವಸ್ತುಗಳ ತಪಾಸಣೆ ಮಾಡಿ ಪತ್ತೆ ಹಚ್ಚಲು ಅತ್ಯಾಧುನಿಕ ಮಾದರಿಯ ಉಪಕರಣಗಳು ಮತ್ತು ಮೊಬೈಲ್ ಜಾಮರ್‌ಗಳನ್ನು ಅಳವಡಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ. ಸದರಿ ಯೋಜನೆಯ ಅನುಷ್ಠಾನಕ್ಕೆ ಸರ್ಕಾರದ ಆದೇಶ ಸಂಖ್ಯೆಃ ಹೆಚ್‌ಡಿ 14 ಪಿಆರ್‌ಎ 2023, ದಿನಾಂಕಃ 14.03.2024 ರಂದು ಆಡಳಿತಾತ್ಮಕ ಅನುಮೋದನೆ ನೀಡಿ, ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.

ಅದರನ್ವಯ, ಕೇಂದ್ರ ಕಾರಾಗೃಹಗಳಾದ ಬೆಂಗಳೂರು, ಮೈಸೂರು, ಕಲಬುರ್ಗಿ, ಬೆಳಗಾವಿ, ಧಾರವಾಡ, ಬಳ್ಳಾರಿ, ಮತ್ತು ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಅಳವಡಿಸಲಾಗಿರುವ 66 ಸಂಖ್ಯೆ ಮೊಬೈಲ್ ಜಾಮರ್ ಉಪಕರಣಗಳನ್ನು ಭಾರತ ಸರ್ಕಾರದ ಅಂಗ ಸಂಸ್ಥೆಯಾದ TCIL ಸಂಸ್ಥೆಯಿಂದ ದುರಸ್ತಿ ಮತ್ತು ಮೇಲ್ದರ್ಜೆಗೆ ಹಾಗೂ 3 ವರ್ಷಗಳ ಸಮಗ್ರ ನಿರ್ವಹಣೆ (CAMC)ಗೆ ಕಾರ್ಯಾದೇಶ ನೀಡಲಾಗಿರುತ್ತದೆ.

| ಕ್ರ. ಸಂ. | ಕಾರಾಗೃಹದ ಹೆಸರು | ಜಾಮರ್‌ಗಳ ಸಂಖ್ಯೆ |
|---|---|---|
| 1 | ಕೇದ್ರ ಕಾರಾಗೃಹ, ಬೆಂಗಳೂರು | 19 ಸಂಖ್ಯೆ |
| 2 | ಕೇಂದ್ರ ಕಾರಾಗೃಹ, ಬೆಳಗಾವಿ | 10 ಸಂಖ್ಯೆ |
| 3 | ಕೇಂದ್ರ ಕಾರಾಗೃಹ, ಬಳ್ಳಾರಿ | 10 ಸಂಖ್ಯೆ |
| 4 | ಕೇಂದ್ರ ಕಾರಾಗೃಹ, ಧಾರವಾಡ | 08 ಸಂಖ್ಯೆ |
| 5 | ಕೇಂದ್ರ ಕಾರಾಗೃಹ, ಕಲಬುರ್ಗಿ | 10 ಸಂಖ್ಯೆ |
| 6 | ಕೇಂದ್ರ ಕಾರಾಗೃಹ, ಮೈಸೂರು | 04 ಸಂಖ್ಯೆ |
| 7 | ಜಿಲ್ಲಾ ಕಾರಾಗೃಹ, ಮಂಗಳೂರು | 05 ಸಂಖ್ಯೆ |

ರಾಜ್ಯದ ಕೇಂದ್ರ ಕಾರಾಗೃಹಗಳಾದ ಬೆಂಗಳೂರು, ಮೈಸೂರು, ಕಲಬುರ್ಗಿ, ಬೆಳಗಾವಿ, ಧಾರವಾಡ, ಬಳ್ಳಾರಿ, ಮತ್ತು ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಅಳವಡಿಸಲಾಗಿರುವ 66 ಸಂಖ್ಯೆ ಮೊಬೈಲ್ ಜಾಮರ್‌ಗಳು 2ಜಿ ತಂತ್ರಜ್ಞಾನವನ್ನು ಒಳಗೊಂಡಿದ್ದು, ಎಲ್ಲಾ ಜಾಮರ್‌ಗಳು ಕಾರ್ಯನಿರ್ವಹಿಸದೇ ಸ್ಥಗಿತಗೊಂಡಿದ್ದವು. ಕಾರಾಗೃಹಗಳ ಆಡಳಿತ ಮತ್ತು ಭದ್ರತೆಯ ಹಿತದೃಷ್ಟಿಯಿಂದ ಸದರಿ 66 ಸಂಖ್ಯೆ ಜಾಮರ್‌ಗಳನ್ನು ದುರಸ್ತಿ ಮತ್ತು ಮೇಲ್ದರ್ಜೆಗೇರಿಸಲು ಸರ್ಕಾರದ ಆದೇಶ ಸಂಖ್ಯೆಃ ಹೆಚ್‌ಡಿ 14 ಪಿಆರ್‌ಎ 2023, ದಿನಾಂಕಃ 14.03.2024ರಲ್ಲಿ ಆದೇಶಿಸಿ ಅನುದಾನ ಬಿಡುಗಡೆಗೊಳಿಸಿರುತ್ತದೆ. ಅದರನ್ವಯ, ಬೆಂಗಳೂರು ಮತ್ತು ಬೆಳಗಾವಿ ಕೇಂದ್ರ ಕಾರಾಗೃಹಗಳಲ್ಲಿ ಜಾಮರ್‌ಗಳ ದುರಸ್ತಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ ಮುಕ್ತಾಯಗೊಂಡಿದ್ದು, ಇನ್ನುಳಿದ ಕಾರಾಗೃಹಗಳಲ್ಲಿನ ಜಾಮರ್‌ಗಳ ದುರಸ್ತಿ ಮತ್ತು ಮೇಲ್ದರ್ಜೆ ಕಾರ್ಯ ಪ್ರಗತಿಯಲ್ಲಿರುತ್ತದೆ.

ಅದರಂತೆ, ಬೆಳಗಾವಿ ಕೇಂದ್ರ ಕಾರಾಗೃಹದಲ್ಲಿನ 10 ಸಂಖ್ಯೆ ಮೊಬೈಲ್ ಜಾಮರ್‌ಗಳ ದುರಸ್ತಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ Testing and Recalibration ಹಂತದಲ್ಲಿದ್ದು ಜಾಮರ್ ಅಳವಡಿಕೆಯಿಂದ ಉಂಟಾಗುವ ಸಾಧಕ-ಬಾಧಕಗಳನ್ನು ಪರಿಶೀಲಿಸಲಾಗುತ್ತಿದ್ದು, ಪರಿಶೀಲನಾ ಹಂತದಲ್ಲಿ ನೆಟ್‌ವರ್ಕ್ ಕುರಿತಂತೆ ಉಂಟಾಗುವ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸಲು ಸಂಬಂಧಪಟ್ಟ ಸಂಸ್ಥೆಯವರಿಗೆ ಈಗಾಗಲೇ ಸೂಚಿಸಲಾಗಿದೆ.

ಮುಂದುವರೆದು, ಬೆಳಗಾವಿ ಕೇಂದ್ರ ಕಾರಾಗೃಹದಲ್ಲಿ ಮೊಬೈಲ್ ಜಾಮರ್ ಅನ್ನು ದುರಸ್ತಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ ಕೈಗೊಂಡಿರುವ M/s. Telecommunications Consultations India Limited ರವರಿಗೆ ಜಾಮರ್‌ಗಳ Frequency ಯನ್ನು Recalibration ಮಾಡಿ ಕಾರಾಗೃಹದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಮತ್ತು ಕಾರಾಗೃಹದ ಭದ್ರತೆಗೆ ತೊಂದರೆಯಾಗದಂತೆ ಕ್ರಮಕೈಗೊಳ್ಳುವಂತೆ ಪತ್ರ ಮುಖೇನ ವ್ಯವಹರಿಸಲಾಗಿದೆ.

ಸಾರ್ವಜನಿಕರಿಗೆ ಮೊಬೈಲ್ ನೆಟ್‌ವರ್ಕ್ ಸಿಗದೇ ತೊಂದರೆ ಆಗುತ್ತಿರುವ ಬಗ್ಗೆ ಚರ್ಚಿಸಲು M/s. Telecommunications Consultations India Limited , ಎಲ್ಲಾ 04 Service Providers (Airtel, BSNL, VI and JIO) ಗಳ ಅಧಿಕಾರಿಗಳು ಮತ್ತು Department of Telecommunications (DOT) ಅಧಿಕಾರಿಗಳೊಂದಿಗೆ ದಿನಾಂಕ: 04.03.2025 ರಂದು ಮಹಾನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ ಕಾರಾಗೃಹಗಳಲ್ಲಿ ಮೊಬೈಲ್ ಸಿಗ್ನಲ್ ದೊರೆಯದಂತೆ ಜಾಮರ್‌ಗಳು ಸಂಪೂರ್ಣ ಕಾರ್ಯಕ್ಷಮತೆ ಹೊಂದಿರಬೇಕು ಹಾಗೂ ಸಾರ್ವಜನಿಕರಿಗೆ ಜಾಮರ್‌ಗಳಿಂದಾಗಿ ತೊಂದರೆ ಉಂಟಾಗಬಾರದು ಎಂದು ಸಂಬಂಧಪಟ್ಟವರಿಗೆ ಸೂಚಿಸಲಾಗಿರುತ್ತದೆ.

**ಏ) ವಿಷಯ:- ಕೊಡಗು ಜಿಲ್ಲೆಯ ವಿಶ್ವವಿದ್ಯಾನಿಲಯವನ್ನು ವಿಲೀನಗೊಳಿಸದೇ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸೂಕ್ತ ಅನುದಾನ ಒದಗಿಸುವ ಕುರಿತು.**

- - - - -

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಎಂ.ಪಿ. ಸುಜಾ ಕುಶಾಲಪ್ಪನವರು ದಿನಾಂಕ 06.3.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ರಾಜ್ಯದಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾಲಯಗಳನ್ನು ಒಳಗೊಂಡಂತ ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸನ್ಮಾನ್ಯ ಉಪ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಈ ಬಗ್ಗೆ ಸಭೆ ನಡೆಸಿದ್ದು, ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳೊಂದಿಗೆ ರಾಜ್ಯದಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟ ಹಾಗೂ ಅವರ ಮುಂಬರುವ ಭವಿಷ್ಯದ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ವಿದ್ಯಾರ್ಥಿಗಳಿಗೆ ಗುಣಾತ್ಮಕ ಶೈಕ್ಷಣಿಕ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಕೆಲವು ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿ, ವಿದ್ಯಾರ್ಥಿಗಳ ಪ್ರವೇಶಾತಿ, ಮೂಲಸೌಲಭ್ಯದ ಕೊರತೆ ಮುಂತಾದ ಪ್ರಮುಖ ಅಂಶಗಳ ಕುರಿತು ಮೊದಲ ಸಭೆಯಲ್ಲಿ ಚರ್ಚಿಸಲಾಗಿದ್ದು, ಸಭೆಯಲ್ಲಿ ಸ್ವೀಕೃತವಾದ ಸಲಹೆಗಳನ್ನು ಪರಾಮರ್ಶಿಸಿ ಕೆಲವು ವಿಶ್ವವಿದ್ಯಾಲಯಗಳ ವಿಲೀನ, ಹೆಚ್ಚಿನ ಅನುದಾನದ ಅಗತ್ಯತೆ ಮತ್ತು ಹಂತ-ಹಂತವಾಗಿ ಖಾಲಿ ಹುದ್ದೆಗಳ ಭರ್ತಿ ಸೇರಿದಂತೆ ವಿಶ್ವವಿದ್ಯಾಲಯಗಳ ಬಲವರ್ಧನೆಗಾಗಿ ಉನ್ನತ ಶಿಕ್ಷಣ ಇಲಾಖೆ ಮತ್ತು ಆರ್ಥಿಕ ಇಲಾಖೆಯು ಒಟ್ಟಾರೆ ಸೇರಿ ವಿಸ್ತ್ರತವಾದ ವರದಿ/ಪ್ರಸ್ತಾವನೆಯನ್ನು ಸಚಿವ ಸಂಪುಟಕ್ಕೆ ಮಂಡಿಸಿ ಸೂಕ್ತ ತೀರ್ಮಾನ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

**ಐ) ವಿಷಯ:- ಯಾದಗಿರಿ ಜಿಲ್ಲೆಯಲ್ಲಿ ನೀರಿನ ಸಮಸ್ಯೆ ಬಗೆಹರಿಸಲು ಶಾಶ್ವತ ಪರಿಹಾರ ಒದಗಿಸುವ ಬಗ್ಗೆ.**

- - - - -

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಬಿ.ಜಿ. ಪಾಟೀಲರು ದಿನಾಂಕ 06.3.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಯಾದಗಿರಿ ಜಿಲ್ಲೆಯಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗಬಹುದಾದ ಸುಮಾರು 272 ಹಳ್ಳಿಗಳನ್ನು ಗುರುತಿಸಲಾಗಿದ್ದು ಸಮಸ್ಯೆಯನ್ನು ಬಗೆಹರಿಸಲು ಈಗಾಗಲೇ 10 ಖಾಸಗಿ ಬೋರ್‌ವೆಲ್‌ಗಳಿಂದ ಹಾಗೂ 2 ಖಾಸಗಿ ಟ್ಯಾಂಕರ್‌ಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಸಮಸ್ಯಾತ್ಮಕ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಅಭಾವವನ್ನು ಕೂಲಂಕುಷವಾಗಿ ಗಮನಿಸಿ ಕೊಳವೆ ಬಾವಿಗಳು ಬತ್ತಿ ಹೋದಲ್ಲಿ ಪ್ರಥಮ ಆದ್ಯತೆ ಮೇರೆಗೆ ಬಾಡಿಗೆ ಆಧಾರದ ಮೇಲೆ ಕೊಳವೆ ಬಾವಿಗಳನ್ನು ಪಡೆಯಲು, ಇದು ಲಭ್ಯವಿಲ್ಲದಿದ್ದಲ್ಲಿ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡಲು, ಕೊಳವೆ ಬಾವಿಗಳನ್ನು ಫ್ಲಷಿಂಗ್ (Flushing) ಮಾಡಿ ಮತ್ತು ಆಳಗೊಳಿಸುವುದರೊಂದಿಗೆ (Deepening) ನೀರಿನ ಸಮಸ್ಯೆಗಳನ್ನು ಬಗೆಹರಿಸಲು, ಮುಂದುವರೆದು ಅನಿವಾರ್ಯ ಸಂದರ್ಭದಲ್ಲಿ ಸಂಬಂಧಪಟ್ಟ ಭೂವಿಜ್ಞಾನಿಯವರ ವರದಿಯನುಸಾರ ಹೊಸದಾಗಿ ಬೋರ್‌ವೆಲ್ ಕೊರೆಯಿಸಲು ಕ್ರಮವಹಿಸಿ ತುರ್ತು ಕಾಮಗಾರಿಗಳ ಕ್ರಿಯಾ ಯೋಜನೆ(Contingency Action Plan)ಯನ್ನು ರೂ. 360.00 ಲಕ್ಷಗಳಲ್ಲಿ ತಯಾರಿಸಲಾಗಿದೆ.

ಯಕ್ತಾಪೂರ ಗ್ರಾಮ ಪಂಚಾಯತಿಯು ಒಟ್ಟು 13 ಹಳ್ಳಿಗಳನ್ನು ಒಳಗೊಂಡಿದ್ದು ಪ್ರಸ್ತುತ ಯಕ್ತಾಪೂರ ಆಶ್ರಯ ಕಾಲೋನಿಯಲ್ಲಿ ನೀರಿನ ಸಮಸ್ಯೆ ಉಂಟಾಗಿದ್ದು ಸದರಿ ಗ್ರಾಮಕ್ಕೆ ಪ್ರತಿ ದಿನ 6 ಟ್ರಿಪ್ ಗಳಂತೆ ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಇನ್ನುಳಿದ ಹಳ್ಳಿಗಳಲ್ಲಿ ಮುಂಬರುವ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಗ್ರಾಮಗಳಿಗೆ ಖಾಸಗಿ ಬೋರ್‌ವೆಲ್‌ಗಳಿಂದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುವುದು.

ಯಾದಗಿರಿ ಜಿಲ್ಲೆಯ 6 ತಾಲ್ಲೂಕುಗಳ 465 ಗ್ರಾಮಗಳ 710 ಜನವಸತಿಗಳಿಗೆ ಶಾಶ್ವತ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯು ಅಂದಾಜು ಮೊತ್ತ ರೂ.2004.00 ಕೋಟಿಗಳಲ್ಲಿ ನಾರಾಯಣಪುರ ಜಲಾಶಯದಿಂದ ಪ್ರತಿ ಮನೆಗೆ 55 LPCD ಯಂತೆ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲು ಕಾಮಗಾರಿ ಕೈಗೆತ್ತಿಕೊಂಡಿದ್ದು, ಕಾಮಗಾರಿ ಪ್ರಗತಿಯ ಹಂತದಲ್ಲಿದ್ದು, ಮುಕ್ತಾಯದ ನಂತರ ಜಿಲ್ಲೆಯ ಎಲ್ಲಾ ಗ್ರಾಮೀಣ ಜನವಸತಿಗಳಿಗೆ ಶಾಶ್ವತ ಕುಡಿಯುವ ನೀರಿನ ಪರಿಹಾರ ಸಿಗಲಿದೆ.

**ಒ) ವಿಷಯ:- ಹೊಸಕೋಟೆ ಹೆದ್ದಾರಿ ಬದಿಯಲ್ಲಿ ಕೆ.ಐ.ಎ.ಡಿ.ಬಿ ಕೈಗಾರಿಕಾ ಅಭಿವೃದ್ಧಿ ಮಂಡಳಿಗೆ ಸೇರಿದ ಜಾಗದಲ್ಲಿ ಸುರಿದಿರುವ ಕಸದ ರಾಶಿಯಿಂದ ಸುತ್ತಮುತ್ತಲಿನ ಜನರಿಗೆ ಅನಾರೋಗ್ಯ ಉಂಟಾಗುತ್ತಿರುವ ಕುರಿತು.**

– – – – –

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಎಂ. ನಾಗರಾಜುರವರು ದಿನಾಂಕ 06.3.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಚಿಕ್ಕಹುಲ್ಲೂರು ಗ್ರಾಮದ ಸರ್ವೆ ನಂ.25 ರಲ್ಲಿ ಒಟ್ಟು 176-16 ಎಕರೆ ಜಮೀನಿಗೆ ದಿನಾಂಕ: 14.06.2010 ರಂದು ಕಲಂ 28 (1) ರ ಸರ್ಕಾರದ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸದರಿ ಜಮೀನಿನ ಪೈಕಿ ಸರ್ಕಾರಿ ಜಮೀನು 167.04 ಎಕರೆಗಳನ್ನು ದಿನಾಂಕ: 08.05.2015 ರಂದು ಕಲಂ 28 (8)ರಡಿಯಲ್ಲಿ ಮಂಡಳಿಗೆ ಹಸ್ತಾಂತರಿಸಲಾಗಿರುತ್ತದೆ.

ಆದಾಗ್ಯೂ, ಗ್ರಾಮಸ್ಥರು ಸದರಿ ಜಮೀನಿನಲ್ಲಿ ಭೂ ಮಂಜೂರಾತಿಗಾಗಿ Form 50, 53 ರಲ್ಲಿ ಅರ್ಜಿ ಸಲ್ಲಿಸಿದ್ದು, ಇದರ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರುವುದರಿಂದ ಮಂಡಳಿ ವತಿಯಿಂದ ಸದರಿ ಪ್ರದೇಶವನ್ನು ಭೌತಿಕವಾಗಿ ಸ್ವಾಧೀನ ಪಡೆಯಲು ಸಾಧ್ಯವಾಗಿರುವುದಿಲ್ಲ.

ಇನ್ನು ಈ ಪ್ರದೇಶವು ಕೆಐಎಡಿಬಿಯ ಸ್ವಾಧೀನದಲ್ಲಿ ಇಲ್ಲದೇ ಇರುವುದರಿಂದ ಸದರಿ ಪ್ರದೇಶದಲ್ಲಿ ತ್ಯಾಜ್ಯವನ್ನು ಅಕ್ರಮವಾಗಿ ರಾತ್ರಿ ಸಮಯದಲ್ಲಿ ಸುರಿಯುತ್ತಿರುವ ಬಗ್ಗೆ ಕ್ರಮ ಕೈಗೊಳ್ಳಲು ಮಂಡಳಿಯು ಸೂಕ್ತ ಪ್ರಾಧಿಕಾರವಾಗಿರುವುದಿಲ್ಲ. ಸ್ಥಳೀಯ ಸಂಸ್ಥೆಗಳಾದ ಚಿಕ್ಕಹುಲ್ಲೂರು ಗ್ರಾಮ ಪಂಚಾಯಿತಿ ಹಾಗೂ ಪೊಲೀಸ್ ಠಾಣಾಧಿಕಾರಿಗಳು ಕ್ರಮ ವಹಿಸಬೇಕಾಗಿದ್ದು, ಈ ಬಗ್ಗೆ, ಮಂಡಳಿಯ ವತಿಯಿಂದಲೂ ಅಗತ್ಯ ಕ್ರಮ ವಹಿಸಲಾಗುವುದು.

**ಓ) ವಿಷಯ:- ರಾಜ್ಯ/ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳಲ್ಲಿ ಉಂಟಾದ ಶಿಕ್ಷಕರ ಕೊರತೆಯಿಂದ ನೇಮಕಗೊಂಡ ಅತಿಥಿ ಶಿಕ್ಷಕರಿಗೆ ಕಾಲಕಾಲಕ್ಕೆ ವೇತನ ಪಾವತಿಸದೇ ಇರುವ ಕುರಿತು.**

– – – – –

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ):-**

ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಶಶೀಲ್ ಜಿ. ನಮೋಶಿಯವರು ದಿನಾಂಕ 06.3.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ರಾಜ್ಯದ ಸರ್ಕಾರಿ ಪ್ರಾಥಮಿಕ/ ಪ್ರೌಢಶಾಲೆಗಳಲ್ಲಿ ಮಂಜೂರಾದ ಬೋಧಕ ವೃಂದದ ಖಾಲಿ ಹುದ್ದೆಗಳಿಗೆ ಎದುರಾಗಿ ಕೆಳಕಂಡಂತೆ ನೇಮಕಾತಿ ಮಾಡಿಕೊಳ್ಳಲಾಗಿದೆ.

| ಕ್ರಮ ಸಂಖ್ಯೆ | ಶಾಲೆಗಳ ವಿಧ | ಪ್ರಥಮ ಹಂತ ಅತಿಥಿ ಶಿಕ್ಷಕರ ನೇಮಕ | ಬಿಡುಗಡೆ ಯಾದ ಅನುದಾನ ರೂ ಲಕ್ಷಗಳಲ್ಲಿ | 2ನೇ ಹಂತ ಅತಿಥಿ ಶಿಕ್ಷಕರ ನೇಮಕ | ಬಿಡುಗಡೆಯಾದ ಅನುದಾನ ರೂ ಲಕ್ಷಗಳಲ್ಲಿ |
|---|---|---|---|---|---|
| 1. | ಸರ್ಕಾರಿ ಪ್ರಾಥಮಿಕ ಶಾಲೆಗಳು | 34192 | 24941.25 | 808 | 8697.09 |
| 2. | ಸರ್ಕಾರಿ ಪ್ರೌಢಶಾಲೆಗಳು | 8954 | 2820.51 | 144 | 6732.51 |
| | ಒಟ್ಟು | 43146 | 27761.76 | 952 | 15429.6 |

ಅತಿಥಿ ಶಿಕ್ಷಕರ ಗೌರವ ಸಂಭಾವನೆಯನ್ನು ಪಾವತಿಸಲು ಆರ್ಥಿಕ ಇಲಾಖೆಯಿಂದ ನೇರವಾಗಿ ಸಂಬಂಧಪಟ್ಟ ತಾಲ್ಲೂಕು ಪಂಚಾಯ್ತಿಗಳಿಗೆ ಈಗಾಗಲೇ ಬಿಡುಗಡೆಯಾಗಿರುತ್ತದೆ. ಅದರಂತೆ ಈಗಾಗಲೇ ಅತಿಥಿ ಶಿಕ್ಷಕರ ಗೌರವ ಸಂಭಾವನೆಯನ್ನು ಕೆ-2 ಮೂಲಕ ಫೆಬ್ರವರಿ -2025 ರವರೆಗೆ ಅತಿಥಿ ಶಿಕ್ಷಕರ ಬ್ಯಾಂಕ್ ಖಾತೆ ಜಮಾ ಮಾಡಲು ಕ್ರಮವಹಿಸಲಾಗುತ್ತಿದೆ.

ಸರ್ಕಾರ ಆದೇಶ ಸಂಖ್ಯೆ ಆಇ 2 ಬಿಪಿಇ 2025 ದಿನಾಂಕ 27.02.2025 ಆದೇಶಾನುಸಾರ 2025 ನೇ ಸಾಲಿಗೆ ಸಂಬಂಧಿಸಿದಂತೆ ಗೌರವ ಸಂಭಾವನೆ ಬಿಲ್ಲನ್ನು ಏಪ್ರಿಲ್ 2025 ಮಾಹೆಯಲ್ಲಿ ತೀರುವಳಿಗೊಳಿಸಿ ಸೂಚಿಸಿರುವಂತೆ ಪಾವತಿಸಲು ಕ್ರಮವಹಿಸಲಾಗುತ್ತಿದೆ.

**5) ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕ.ವಿ.ಪ:-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕ, 2025ನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

**ಉಪ ಸಭಾಪತಿಯವರು:-** ಮಂಡಿಸಲಾಯಿತು.

**6) ಅಭಿನಂದನೆ**

**ವಿಷಯ: ಚಾಂಪಿಯನ್ಸ್ ಟ್ರೋಫಿ-2025 ಅನ್ನು ಮೂರನೇ ಬಾರಿಗೆ ನಮ್ಮ ಭಾರತ ತಂಡ ಗೆದ್ದಿರುವ ಬಗ್ಗೆ.**

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ನಿನ್ನೆ ದಿವಸ ಭಾರತ ದೇಶಕ್ಕೆ ಮತ್ತೊಂದು ಕಿರೀಟ. International Cricket Council ನ ಚಾಂಪಿಯನ್ಸ್ ಟ್ರೋಫಿ-2025ರಲ್ಲಿ ನಮ್ಮ ಭಾರತ ದೇಶದ ಆಟಗಾರರು ಅದ್ಭುತವಾಗಿ ಆಡಿರುವ ಕಾರಣಕ್ಕೆ ಚಾಂಪಿಯನ್ಸ್ ಟ್ರೋಫಿ-2025 ಅನ್ನು ಮೂರನೇ ಬಾರಿಗೆ ನಮ್ಮ ದೇಶ ಗೆದ್ದಿದೆ.

**(ಈ ಹಂತದಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು ಮೇಜು ಕುಟ್ಟುವ ಮೂಲಕ ಹರ್ಷಿಸಿದರು)**

ಅದಕ್ಕೆ ಇಡೀ ನಮ್ಮ Indian Cricket Team ಗೆ ಅಭಿನಂದನೆಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರೊಳಗೆ ಬಹಳ ವಿಶೇಷವಾಗಿ ಕರ್ನಾಟಕದ ಆಟಗಾರರಾದ ಶ್ರೀ ಕೆ.ಎಲ್. ರಾಹುಲ್‌ರವರು ಫೈನಲ್ಸ್‌ನಲ್ಲಿಯೂ ಅದ್ಭುತವಾದಂತಹ ಆಟವಾಡಿದ್ದಾರೆ, ಅವರಿಗೂ ಕೂಡ ಅಭಿನಂದನೆಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ವಿಧಾನ ಪರಿಷತ್ತಿನ ಪರವಾಗಿ ಇಡೀ ಭಾರತ ತಂಡಕ್ಕೆ ಅಭಿನಂದನೆಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**ಉಪ ಸಭಾಪತಿಯವರು:-** ಆಯಿತು.

**7) ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾಪ.**

**ವಿಷಯ:- ರಾಜ್ಯದಲ್ಲಿ ಹೆಚ್ಚುತ್ತಿರುವ ಕೊಲೆ, ಅತ್ಯಾಚಾರ, ಗಲಭೆಗಳಿಂದ ಜನಸಾಮಾನ್ಯದಲ್ಲಿ ಅಭದ್ರತೆಯ ವಾತಾವರಣ ನಿರ್ಮಾಣವಾಗಿರುವ ಕುರಿತು.**

- - - -

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 59ನೇ ನಿಯಮದ ಮೇರೆಗೆ ಪ್ರಸಕ್ತ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಪ್ರಸ್ತಾಪಿಸಲು ಈ ಕೆಳಕಂಡ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಮ್ಮ ನಿಲುವಳಿ ಸೂಚನೆಯನ್ನು ಓದಿದ್ದೇನೆ. ನಿಯಮ 68ರಡಿಯಲ್ಲಿ ಇದಕ್ಕೆ ನಿಮಗೆ ಅವಕಾಶ ಮಾಡಿಕೊಡುತ್ತೇನೆ. ನೀವು ಕೊಟ್ಟಿರುವ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ನಿಯಮ 68ರೊಳಗೆ ಚರ್ಚಿಸಲು ಇದನ್ನು ಜೋಡಿಸಿಕೊಂಡಿದ್ದೇವೆ. ಅದಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ. ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3 ಗಂಟೆ 15 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

**(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1 ಗಂಟೆ 55 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

(168) 10.03.2025/ 3.30/ ಪಿಕೆ:ವಿಕೆ

**(ಸದನವು ಭೋಜನ ವಿರಾಮದ ನಂತರ 3 ಗಂಟೆ 32 ನಿಮಿಷಕ್ಕೆ ಪ್ರಾರಂಭವಾಯಿತು)**
**(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು)**

**8) ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಬಗ್ಗೆ ವಿಶೇಷ ಚರ್ಚೆ.**

......

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೇ, ಇಡೀ ಪ್ರಪಂಚದಲ್ಲಿ ಭಾರತ ದೇಶ ಆಕರ್ಷಣೀಯ ದೇಶವಾಗಿದೆ. ಪ್ರಪಂಚದ ಬೇರೆ ಬೇರೆ ಭಾಗಗಳಿಂದಲೂ ಕೂಡ, ನಾವು ಬುದ್ಧಿವಂತರು ಎನ್ನುವ ಶ್ಲಾಘನೆಗೆ ಒಳಗಾಗಿದ್ದೇವೆ. ನಮ್ಮ ದೇಶ ಆಧುನಿಕ ತಂತ್ರಜ್ಞಾನ, ವಿಜ್ಞಾನದಲ್ಲಿ ಮುಂದಿದೆ. ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ನಮ್ಮ ದೇಶದ ಇಂಜಿನಿಯರ್‌ಗಳು, ವೈದ್ಯರು, ವಿಜ್ಞಾನಿಗಳಿದ್ದಾರೆ. ಪ್ರಪಂಚದಲ್ಲೇ ಏಕ ಕಾಲದಲ್ಲಿ ವಾಯು, ಜಲ, ನೆಲಗಳಿಂದ ಕ್ಷಿಪಣಿ ಉಡಾಯಿಸಿದ ಪ್ರಪ್ರಥಮ ದೇಶ ಭಾರತ. ಆದರೂ ಕೂಡ ನಮ್ಮ ದೇಶ ಪ್ರಗತಿಪರ ರಾಷ್ಟ್ರವಾಗುವುದಕ್ಕೆ ಅನೇಕ ತೊಡಕುಗಳಿವೆ. ಅದರಲ್ಲಿ, ಹದಿಹರೆಯದ ಸಮಸ್ಯೆಗಳು ಇವೆ. ಮಾನ್ಯ ಸಭಾಪತಿಗಳೇ, ಇವತ್ತು ಈ ಒಂದು ಸಮಸ್ಯೆಯನ್ನು ಯಾವರೀತಿ ಪರಿಹಾರ ಮಾಡಬೇಕು ಎನ್ನುವುದರ ಬಗ್ಗೆ, ಹದಿಹರೆಯದ ಮಕ್ಕಳ ಸಮಸ್ಯೆ ಬಗ್ಗೆ ಈ ಚಿಂತಕರ ಚಾವಡಿಯಾದ ಮೇಲ್ಮನೆಯಲ್ಲಿ ನಾವು ಚರ್ಚೆ ಮಾಡುತ್ತಿದ್ದೇವೆ. ಬಹುಶಃ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಈ ವಿಷಯ ಬರಬೇಕಾಗಿತ್ತು. ಆದರೆ ಆಗ ಬರಲಿಲ್ಲ. ಈ ಅಧಿವೇಶನ ಪ್ರಾರಂಭವಾದಾಗಿನಿಂದಲೂ ಈ ವಿಷಯ ಅಜೆಂಡಾದಲ್ಲಿ ಬರುತ್ತಿತ್ತು. ಆದರೆ ಇವತ್ತು ಅದಕ್ಕೆ ಸದಾವಕಾಶವನ್ನು ಕಲ್ಪಿಸಿದಕ್ಕಾಗಿ ಅಭಿನಂದನೆ ಮತ್ತು ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಮನುಷ್ಯನ ಜೀವನದ ಪ್ರತಿ ಹಂತಗಳೂ ಪ್ರಾಮುಖ್ಯತೆಯಿಂದ ಕೂಡಿರುತ್ತದೆ. ಅದರಲ್ಲಿ ಈ ಹದಿಹರೆಯದ ವಯಸ್ಸು ಎನ್ನುವುದು ಬಹಳ ಸೂಕ್ಷ್ಮವಾಗಿರುವಂಥದ್ದು, ಮಕ್ಕಳು ತಮ್ಮ ಬಾಲ್ಯವನ್ನು ಮರೆತು, ಪ್ರೌಢತೆಯನ್ನು ಪ್ರವೇಶ ಮಾಡುವ ಈ ಅವಧಿ ಬಹಳ ಚಂಚಲತೆಯಿಂದ ಕೂಡಿರುತ್ತದೆ. ಇದು ಪ್ರತಿಯೊಬ್ಬ ಮನುಷ್ಯನ ಟರ್ನಿಂಗ್ ಪಾಯಿಂಟ್ ಆಗಿರುತ್ತದೆ. 13-19ರ ವಯಸ್ಸನ್ನು ಟೀನೇಜ್ ಎಂದು ಹೇಳುತ್ತೇವೆ. ಇದು ಹಿಂದಿನ ಕಾಲದಲ್ಲಾಗಿತ್ತು. ಆದರೆ ಈಗ ನಮ್ಮ ಪ್ರಕೃತಿಯ ಮತ್ತು ಆಹಾರ ಪದ್ಧತಿಯಿಂದ ಮೆಚ್ಯೂರ್ಡ್ ಆಗುವಂಥದ್ದು 11 ವರ್ಷಕ್ಕೆಯೇ ಪ್ರಾರಂಭವಾಗುತ್ತದೆ. ನಾವು ಈ ಹದಿಹರೆಯದ ವಯಸ್ಸನ್ನು ಮೂರು ಹಂತವೆಂದು ವಿಂಗಡಿಸುವುದಾದರೆ, 11 ರಿಂದ 14 ವರ್ಷದವರೆಗೆ ಒಂದು ಹಂತ,

14 ವರ್ಷದಿಂದ 17 ವರ್ಷದವರೆಗೆ ಎರಡನೆ ಹಂತ, 17 ವರ್ಷದಿಂದ 21-22ರವರೆಗಿನ ಅವಧಿಯನ್ನು 3 ನೇ ಹಂತವೆಂದು ಹೇಳಬಹುದು. ಮೊದಲಿನ ಮತ್ತು ಕೊನೆಯ ಹಂತದ ಬಗ್ಗೆ ಅಷ್ಟು ಚಿಂತೆ ಮಾಡುವಂಥದ್ದಿಲ್ಲ. 14 ರಿಂದ 17ರವರೆಗಿನ ವಯಸ್ಸಿನ ಅವಧಿಯನ್ನು ಬಹಳ ಸೂಕ್ಷ್ಮವಾಗಿ ಗಮನಿಸಬೇಕಾಗಿದೆ. ಬಹುಶಃ ಎಲ್ಲಿಯಾದರೂ ಈ ವಯಸ್ಸಿನಲ್ಲಿ ಎಡವಿದರೆ ನಂತರ ಮೇಲೇಳುವುದು ಬಹಳ ಕಷ್ಟವಾಗುತ್ತದೆ; ಪಾತಾಳಕ್ಕೆ ಬೀಳುವಂತಹ ವ್ಯವಸ್ಥೆಯನ್ನು ಕೂಡ ನಮ್ಮ ಸಮಾಜದಲ್ಲಿ ನೋಡಿದ್ದೇವೆ. ಈ ವಯಸ್ಸಿನಲ್ಲಿ ಮಕ್ಕಳು, ಸಾವಿರ ವೋಲ್ಟೇಜಿನ ವಿದ್ಯುತ್ ತಂತಿಯನ್ನು ಮುಟ್ಟಿದರೆ ಹೇಗಿರುತ್ತದೆಯೋ ಹಾಗೆ ಇರುತ್ತಾರೆ ಎಂದು ಹಿಂದೆ ಹೇಳುತ್ತಿದ್ದರು. ಅದನ್ನು ನಾಜೂಕಾಗಿ ಹೊರಗೆ ತರಬೇಕಾಗುತ್ತದೆ. ನಾವೆಲ್ಲಾ ಆ ವಯಸ್ಸನ್ನು ಮೀರಿ ಬಂದಿದ್ದೇವೆ. ಆ ವಯಸ್ಸಿನಲ್ಲಿ, ಪ್ರಪಂಚದಲ್ಲಿರುವುದು ಎಲ್ಲಾ ನಮಗೆ ಗೊತ್ತು, ಪ್ರಪಂಚವನ್ನೇ ನಾವು ಗೆಲ್ಲುತ್ತೇವೆ ಅಥವಾ ನಾನು ದೊಡ್ಡವನಾಗಿದ್ದೇವೆ, ತಂದೆ-ತಾಯಿ ಹೇಳಿದ್ದು ಅಥವಾ ದೊಡ್ಡವರು ಏನಾದರೂ ಹೇಳಿದರೆ, ನಿಮಗೇನು ಗೊತ್ತು; ಇದು ನಿಮ್ಮ ಕಾಲವಲ್ಲ ಎಂದು ಹೇಳುತ್ತಾರೆ. ಅಂತಹ ವಯಸ್ಸನ್ನು ದಾಟಿದವರು ನಾವೆಲ್ಲರೂ ಇದನ್ನು ಅನುಭವಿಸಿದ್ದೇವೆ. ಹಿಂದಿನ ಕಾಲದಲ್ಲಿ, ಹೆಣ್ಣು ದೊಡ್ಡವಳಾದಳು ಎಂದ ಕೂಡಲೇ ಮದುವೆ ಮಾಡಿ ಮುಗಿಸುತ್ತಿದ್ದರು. ಹೆಣ್ಣು ಮಕ್ಕಳನ್ನು ಇಟ್ಟುಕೊಂಡರೆ ಮಡಿಲಲ್ಲಿ ಕೆಂಡ ಇಟ್ಟುಕೊಂಡ ಹಾಗೆ ಎಂದು ಹೇಳುತ್ತಿದ್ದರು. ಆದರೆ ಇಂದಿನ ಸಮಾಜದಲ್ಲಿ ಗಂಡು ಮತ್ತು ಹೆಣ್ಣು ಸಮಾನವಾಗಿ ನಡೆಯುವುದನ್ನು ಕಾಣುತ್ತೇವೆ. ಹದಿಹರೆಯದ ವಯಸ್ಸು ಎಂದು ನಾವೇನು ಹೇಳುತ್ತೇವೆಯೋ ಇದು ಹುಚ್ಚು ಕೋಡಿ ಮನಸ್ಸು ಎಂದು ಹೇಳುತ್ತಾರೆ. ಈ ವಯಸ್ಸಿನಲ್ಲಿ ಅವರೇನು 10ನೇ ತರಗತಿ, ಮೊದಲನೆ ಪಿಯುಸಿ, ಎರಡನೆ ಪಿಯುಸಿ ಓದುತ್ತಿರುತ್ತಾರೋ ಬಹುಶಃ ಇದು ಅವರು ಆಯ್ಕೆ ಮಾಡಿಕೊಳ್ಳುವಂತಹ ಭವಿಷ್ಯ ಅಥವಾ ಮುಂದಿನ ವೃತ್ತಿಯನ್ನೂ ಕೂಡ ಅವಲಂಬಿಸಿರುತ್ತದೆ. ಈ ವಯಸ್ಸಿನಲ್ಲಿ, ಈ ಕಾಲಘಟ್ಟದಲ್ಲಿ ಮಾನಸಿಕವಾಗಿ, ದೈಹಿಕವಾಗಿ ಬಹಳಷ್ಟು ಬದಲಾವಣೆಯನ್ನು ಕಾಣುತ್ತಾರೆ; ದೇಹದಲ್ಲಿ ಹಾರ್ಮೋನುಗಳು ಬದಲಾವಣೆ ಆಗುತ್ತದೆ. ಅಂತಹ ಸ್ಥಿತಿಯ ಮಕ್ಕಳ ಸ್ವಾಭಿಮಾನ ಮತ್ತು ದೇಹದ ಚಿತ್ರಣ, ಒತ್ತಡ, ಬೆದರಿಸುವಿಕೆ, ಖಿನ್ನತೆ, ಸೈಬರ್ ವ್ಯಸನ, ಮದ್ಯಪಾನ ಮತ್ತು ಧೂಮಪಾನ, ಹದಿಹರೆಯದ ವಯಸ್ಸಿನಲ್ಲಿ ಗರ್ಭಧಾರಣೆ, ಅಪ್ರಾಪ್ತ ವಯಸ್ಕರ ಲೈಂಗಿಕತೆ, ಪ್ರತಿಭಟನೆಯ ನಡವಳಿಕೆಗಳು, ಸಮಾನಸ್ಕರ ಒತ್ತಡ ಮತ್ತು ಸ್ಪರ್ಧೆ ಇವೆಲ್ಲದರಿಂದ ಕೂಡಿರುತ್ತದೆ. ಇವತ್ತಿನ ದಿವಸ ಮಕ್ಕಳಲ್ಲಿ ಸೈಬರ್ ವ್ಯಸನ ಎನ್ನುವುದನ್ನು ಕಾಣುತ್ತೇವೆ. ಹಿಂದೆ ನಾವೇನಾದರೂ ವಿಷಯವನ್ನು ತಿಳಿದುಕೊಳ್ಳಬೇಕು, ಓದಬೇಕು, ಕಲಿಯಬೇಕು ಎಂದಾದರೆ ಸೈಬರ್‌ಗೆ ಹೋಗುತ್ತಿದ್ದೆವು. ಆದರೆ ಈಗ ಸೈಬರ್ ಮನೆಯಲ್ಲಿಯೇ ಬಂದು ಕುಳಿತಿದೆ. ಲ್ಯಾಪ್‌ಟಾಪ್, ಮೊಬೈಲ್‌ನಲ್ಲಿ ಒಂದು ಬಟನ್ ಒತ್ತಿದರೆ ಏನು ಬೇಕು, ಏನು ಬೇಡ ಎಲ್ಲವೂ

ಬಂದುಬಿಡುತ್ತದೆ. ಹದಿಹರೆಯದ ವಯಸ್ಸಿನವರು ದಾರಿ ತಪ್ಪುವುದು ಇಲ್ಲಿಂದಲೇ ಶುರು ಆಗುತ್ತದೆ. ಹಿಂದೆಲ್ಲಾ ನಾವು ಬಹಳ ಆಟ ಆಡುತ್ತಿದ್ದೆವು. ಮಕ್ಕಳಿಗೆ ದೈಹಿಕ ಶಿಕ್ಷಣ ಕೊಡುವುದು ಒಳ್ಳೆಯದು ಎಂದು ಹೇಳುತ್ತಿದ್ದೆವು. ಶಾಲೆಗಳಲ್ಲಿ ಪಾಠ, ಪಾಠ, ಪಾಠ. ಮನೆಗೆ ಬಂದರೆ ಆಟ, ಆಟ, ಆಟ ಇರುತ್ತಿತ್ತು. ಆದರೆ ಈಗ ಕ್ರಿಕೆಟ್, ಲುಡೋ, ಟೆನ್ನಿಸ್ ಈ ಎಲ್ಲಾ ಆಟಗಳನ್ನು ಮೊಬೈಲ್ ಇಟ್ಟುಕೊಂಡು, ಬೆರಳುಗಳನ್ನು ಆಕಡೆ ಈಕಡೆ ಮಾಡುತ್ತಾ ಕುಳಿತಲ್ಲೇ ಎಲ್ಲಾ ಆಟಗಳನ್ನು ಆಡುತ್ತಾರೆ. ಆದ್ದರಿಂದ ಶಾರೀರಿಕವಾಗಿ ಮತ್ತು ಬೌದ್ಧಿಕವಾಗಿ ಅವರ ಬೆಳವಣಿಗೆ ಕುಗ್ಗುತ್ತಾ ಬರುತ್ತದೆ. ಸೈಬರ್‌ನಿಂದ ಅನೇಕ ಚಟಗಳಿಗೆ ಬಲಿಯಾಗುತ್ತಿದ್ದಾರೆ. (ಮುಂದು)

(169) 10-3-2025 3.40 ಡಿಎಸ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಭಾರತಿ ಶೆಟ್ಟಿ (ಮುಂದು):-**

ಅದರಿಂದ ಬೇಡದ ಗೇಮ್‌ಗಳನ್ನು ಕಲಿಯುತ್ತಾರೆ, ಗ್ಯಾಬ್ಲಿಂಗ್ ಅನ್ನು ಕಲಿಯುತ್ತಾರೆ. ಅದೇ ರೀತಿ ಇವತ್ತು ಹಳ್ಳಿ ಹಳ್ಳಿಗಳಲ್ಲಿ ಪಾನ್ ಶಾಪ್‌ಗಳಲ್ಲಿಯೂ ಕೂಡ ಮದ್ಯಪಾನ ಮತ್ತು ಗಾಂಜಾ ಸಿಗುವಂತಹ ವ್ಯವಸ್ಥೆಯಾಗಿರುತ್ತದೆ. ಈ ಸ್ಥಳೀಯ ಪೋಲೀಸರಿಗೆ ಮತ್ತು ಅಂಗಡಿಯ ಮಾಲೀಕರಿಗೆ ಲಿಂಕ್ ಇರುತ್ತದೆ. ನಾವೇನಾದರೂ ದೂರನ್ನು ಕೊಟ್ಟರೆ ಅವರಲ್ಲಿಯೇ ಅಡ್ಜಸ್ಟ್‌ಮೆಂಟ್ ಆಗುತ್ತದೆ. ಇದರಿಂದ ಬಹಳಷ್ಟು ಮಕ್ಕಳು ತೊಂದರೆ ಹಾಗೂ ಹಾನಿಗೆ ಈಡಾಗುತ್ತಿದ್ದಾರೆ. ಮೊನ್ನೆ ನಡೆದಂತಹ ಘಟನೆಯಲ್ಲಿ ನಾವು ನೋಡಿದ್ದೇವೆ, ಕುಡಿದ ಮತ್ತಿನಲ್ಲಿ ಅತ್ಯಾಚಾರ ಮಾಡಿದ್ದಾರೆ. 21-22 ವರ್ಷದ ವಯಸ್ಸಿನವರು ಅರೆಸ್ಟ್ ಆಗಿದ್ದಾರೆ. ಆದ್ದರಿಂದ ಇವತ್ತು ಅವರನ್ನು ಸಮಾಜದಲ್ಲಿ ನೋಡಬೇಕಾದವರು ಪೋಷಕರು ಮತ್ತು ಗುರುಗಳು. ಸಮಾಜದಲ್ಲಿ ಈ ಮಕ್ಕಳನ್ನು ಯಾವ ರೀತಿ ನೋಡುತ್ತಿದ್ದಾರೆ? ಚುನಾವಣಾ ಪ್ರಚಾರಕ್ಕಾಗಿ ನಾನು ಹಳ್ಳಿಗೆ ಹೋಗಿದ್ದೆ, ಆಗ ಗ್ಯಾರಂಟಿ ಯೋಜನೆಗಳೆಲ್ಲಾ ಇರಲಿಲ್ಲ. ಅನೇಕ ಹಳ್ಳಿಗಳಲ್ಲಿ ಒಬ್ಬ ತಾಯಿ ನನ್ನ ಹತ್ತಿರ ಕಣ್ಣೀರು ಹಾಕಿ ಕೇಳುತ್ತಿದ್ದರು, ಅವರ 10ನೇ ಕ್ಲಾಸ್‌ನಲ್ಲಿ ಓದುತ್ತಿರುವ ಮಗ ಕುಡಿದು ಮನೆಯಲ್ಲಿ ಮಲಗಿದ್ದ. ಅಲ್ಲೇ ಒಂದು ಪಾನ್ ಅಂಗಡಿಯಲ್ಲಿ ಹೆಂಡ ಸಿಗುತ್ತದೆ. ಮೊದಲು ಇಲ್ಲಿ ಹೆಂಡ ಮಾರುವುದನ್ನು ನಿಲ್ಲಿಸಿ, ಆಮೇಲೆ ಓಟು ಕೇಳುವುದಕ್ಕೆ ಬನ್ನಿ ಎಂದು ಹೇಳಿದರು. ಇಂತಹ ಪ್ರಕರಣಗಳು ಅನೇಕ ಗ್ರಾಮೀಣ ಪ್ರದೇಶದ ಹಳ್ಳಿಗಳಲ್ಲಿ ಇವೆ. ಆದ್ದರಿಂದ ಇವತ್ತಿಗೂ ನಾವು ಅದನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವುದೇ ಸರ್ಕಾರ ಬರಲಿ, ಅವರು ಇರಲಿ, ನಾವು ಇರಲಿ, ಇವತ್ತಿಗೂ ಕೂಡ ಅದಕ್ಕೆ ಸರಿಯಾದ ಶಿಕ್ಷೆಯನ್ನು ಕೊಡುವುದಕ್ಕೆ, ಸರಿಯಾದ ದಾರಿಯಲ್ಲಿ ಈ ವ್ಯವಸ್ಥೆಯನ್ನು ತರುವುದಕ್ಕೆ ನಮಗೆ ಆಗಲಿಲ್ಲ. ಇದಕ್ಕೆ ಕಾರಣ ಯಾರು?

ನನಗೆ ಆಶ್ಚರ್ಯವಾಗುತ್ತದೆ, ಟಿ.ವಿ.ಯಲ್ಲಿ ಒಂದು ಜಾಹೀರಾತು ಬರುತ್ತದೆ, ಆ ಜಾಹೀರಾತಿನಲ್ಲಿ Dart Board ನಲ್ಲಿ ನಂಬರ್ ಹಾಕಿರುತ್ತಾರೆ. ಒಂದು ಪಾಯಿಂಟ್‌ಗೆ ಬಿಲ್ಲನ್ನು ತೆಗೆದು ಹೊಡೆಯಬೇಕು, ಅದು ಔಟ್‌ಲೈನ್‌ಗೆ ಬಂದಾಗ ಒಂದು ಜ್ಯೂಸ್ ಕುಡಿಯುತ್ತಾನೆ, ಅದು ಹೊರಗಿನ ಸುತ್ತಿಗೆ ಬಂದು ಬೀಳುತ್ತದೆ. ಇನ್ನೊಂದು ಜ್ಯೂಸ್ ಕೊಡುತ್ತಾರೆ, ಅದು ಎರಡನೇ ಸುತ್ತಿಗೆ ಬಂದು ಬೀಳುತ್ತದೆ. ಆಮೇಲೆ ಬಿಯರ್ ಗ್ಲಾಸ್‌ನ್ನು ತಂದು ಇಟ್ಟುಬಿಡುತ್ತಾನೆ, ಬಿಯರ್ ಗ್ಲಾಸ್‌ನ್ನು ತೆಗೆದುಕೊಂಡು ಗಟಗಟ ಕುಡಿಯುತ್ತಾನೆ, ಹೀಗೆ ಹೊಡೆದಾಗ ಅದು ಜೀರೊ ಪಾಯಿಂಟ್‌ಗೆ ಹೋಗಿ ಬೀಳುತ್ತದೆ. ಈ ಒಂದು ಜಾಹೀರಾತನ್ನು ನೋಡಿ ಅನೇಕ ಮಕ್ಕಳಿಗೆ ಅದನ್ನು ಕುಡಿದರೆ ಏನಾಗುತ್ತದೆ ಎನ್ನುವ ಕಲ್ಪನೆ ಬರುತ್ತದೆ. ಚಲನಚಿತ್ರ, ಮಾಧ್ಯಮ, ಸಮಾಜ, ನಾವು ಶಾಸಕಾಂಗ ಮಾಡುವಂಥವರು. ಇವರೆಲ್ಲರೂ ಕಾರಣಕರ್ತರಾಗಿರುತ್ತಾರೆ. ಇದೆಲ್ಲಾ ನಾವು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಈ ಸಿನಿಮಾಗಳಲ್ಲಿ ನಾವು ಹಾಡುಗಳನ್ನು ಸಹ ನೋಡುತ್ತಿದ್ದೇವೆ. ನಾನು ಅನೇಕ ಹಾಡುಗಳನ್ನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. "ಇದೇನು ಸಭ್ಯತೆ, ಇದೇನು ಸಂಸ್ಕೃತಿ, ನಮ್ಮ ತಾಯಿ ಭಾರತಿ" ಎನ್ನುವ ಹಾಡು ಇದೆ. ಆ ಹಾಡನ್ನು ಯಾರು ಕೇಳುವುದಿಲ್ಲ. ಆದರೆ, "ಅಪ್ಪ ಲೂಸಾ, ಅಮ್ಮ ಲೂಸಾ" ಎನ್ನುವ ಹಾಡನ್ನು ಕೇಳುತ್ತಾರೆ. ಇಷ್ಟು ಕೆಟ್ಟ ಸಾಹಿತ್ಯವನ್ನು, ಅಪ್ಪ-ಅಮ್ಮನನ್ನು ಲೂಸ್ ಎಂದು ಹೇಳುವ ಸಾಹಿತ್ಯಕ್ಕೆ ಚಪ್ಪಾಳೆ ಹೊಡೆದು ಸಿನಿಮಾ ನೋಡಿ ಬರುತ್ತೇವೆಯಲ್ಲಾ ಅದಕ್ಕೆ ಟೀಕೆ ಮಾಡುವುದಿಲ್ಲ, ಅದನ್ನು ನಿಲ್ಲಿಸುವುದಿಲ್ಲ, ಅದರ ಮೇಲೆ ಕೇಸ್ ಹಾಕುವುದಿಲ್ಲ, ಇವತ್ತು ನಾವು ಶಾಸಕಾಂಗದಲ್ಲಿ ಕುಳಿತಿದ್ದೇವೆ, ನಾವೇನು ಮಾಡುತ್ತಿದ್ದೇವೆ ಎನ್ನುವ ಕಲ್ಪನೆಯನ್ನು ನಾವು ಮಾಡಬೇಕಾಗಿದೆ. ಇನ್ನು ಅನೇಕ ಸಮಸ್ಯೆಗಳ ಬಗ್ಗೆ ಹೇಳುವುದಿದೆ. ಆದರೆ ಇನ್ನು ಅನೇಕ ಸದಸ್ಯರು ಮಾತನಾಡುವವರಿದ್ದಾರೆ. ಅಪ್ರಾಪ್ತ ವಯಸ್ಕರ ಲೈಂಗಿಕತೆಯ ಬಗ್ಗೆ ಹೇಳುವುದಾದರೆ, ಹಿಂದೆ ಆ ವಯಸ್ಸಿನ ಮಕ್ಕಳಿಗೆ ಏನಾದರು ಹೇಳಬೇಕೆಂದರೆ ಅದಕ್ಕೆ ಕಿವಿ ಬೇಕು. ಕಿವಿ ಕೊಡುವುದಕ್ಕೆ ಆಗ ಒಬ್ಬೊಬ್ಬರ ಮನೆಯಲ್ಲಿ 6-7 ಜನ ಮಕ್ಕಳು ಇರುತ್ತಿದ್ದರು. ಮನೆ ತುಂಬಾ ಮಕ್ಕಳು ಇರುತ್ತಿದ್ದರು. ಅವರ ಮನಸ್ಸಿನ ಅನಿಸಿಕೆ, ಅಂದರೆ ಅವರ ಬದುಕಿನ ಮುಂದೆ ಯಾವುದು ಕೆಟ್ಟದು, ಯಾವುದು ಒಳ್ಳೆಯದು ಎಂದು ಗೊತ್ತಿರುವುದಿಲ್ಲ. ಅವರಿಗೆ ಎಲ್ಲಾ ಚೆನ್ನಾಗಿ ಕಾಣುತ್ತದೆ. ಅವರ ಮಾತನ್ನು ಕೇಳುವ ಕಿವಿಗಳು ಇವತ್ತು ದೊಡ್ಡ ಪ್ರಮಾಣದಲ್ಲಿ ಕೊರತೆ ಕಾಣುತ್ತಿದೆ. ಮುಂಚೆ ಕುಟುಂಬ ದೊಡ್ಡದಿತ್ತು, ಅವರ ಅನಿಸಿಕೆಗಳನ್ನು ಅಕ್ಕ, ತಂಗಿಯ ಹತ್ತಿರ, ಸ್ನೇಹಿತರ ಹತ್ತಿರ ಹೇಳಿಕೊಳ್ಳುತ್ತಿದ್ದರು. ಈಗ ಯಾರು ಸ್ನೇಹಿತರಿಲ್ಲ, ನಮಗಿಬ್ಬರು, ನಮಗೊಬ್ಬರು ಮಕ್ಕಳು, ಒಬ್ಬೊಬ್ಬರೆ ಮಕ್ಕಳು ಇರುತ್ತಾರೆ. ತಂದೆ-ತಾಯಿ ಕೆಲಸ ಮಾಡುತ್ತಾರೆ, ಮನೆಯಲ್ಲಿ ಅವರ ಮಾತನ್ನು ಕೇಳುವ ವ್ಯವಸ್ಥೆ ಇಲ್ಲ. ಒಂದು ಕಾಲದಲ್ಲಿ ಮಕ್ಕಳೇ ಆಸ್ತಿ ಎಂದು ತಿಳಿದು

ಸಾಕುತ್ತಿದ್ದರು. ಈ ಕಲಿಯುಗದಲ್ಲಿ ಅಪ್ಪ, ಅಮ್ಮ ಇಬ್ಬರು ದುಡಿಯಲೇಬೇಕು. ಮಕ್ಕಳ ಖರ್ಚು ವೆಚ್ಚವನ್ನು ನಿಭಾಯಿಸುವುದಕ್ಕೆ ದುಡಿಯುತ್ತಾರೆ. ಅವರು ಮಕ್ಕಳಿಗೆ ಆಸ್ತಿಯನ್ನು ಮಾಡುತ್ತಾರೆ. ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡುವ ಚಿಂತನೆ ಈ ಸಮಾಜದ ವ್ಯವಸ್ಥೆಯಲ್ಲಿ ಬಹಳ ಕಡಿಮೆಯಾಗಿದೆ. ಆದ್ದರಿಂದ ಇವತ್ತು ಲೈಂಗಿಕತೆಯ ಬಗ್ಗೆ ಅರಿವನ್ನು ಮೂಡಿಸಬೇಕಾಗುತ್ತದೆ. ಮುಂಚೆ ಹೆಣ್ಣುಮಕ್ಕಳಿಗೆ, ಗಂಡು ಮಕ್ಕಳಿಗೆ ನಿಮ್ಮ ಹೀರೋ ಯಾರು ಎಂದು ಕೇಳಿದರೆ ನನ್ನ ಅಪ್ಪ-ಅಮ್ಮನೇ ಹೀರೋ ಎಂದು ಹೇಳುತ್ತಿದ್ದರು. ಆದರೆ ಈಗ ಆ ರೀತಿ ಇಲ್ಲ. ಈಗ ಆ ವಯಸ್ಸಿನಲ್ಲಿ ಅಪ್ಪ-ಅಮ್ಮ ಹೀರೋ ಆಗಿ ಕಾಣುವುದಿಲ್ಲ. ವಿಲನ್ ಆಗಿ ಕಾಣುತ್ತಾರೆ. ಆ ವಯಸ್ಸಿನಲ್ಲಿ ಯಾರು ಪ್ರೀತಿಯಿಂದ ಮಾತನಾಡುತ್ತಾರೆ ಅವರು ಇಷ್ಟವಾಗುತ್ತಾರೆ. ನಾನು ಮೊನ್ನೆ ಒಂದು ಹುಡುಗಿಯನ್ನು ನೋಡಿದೆ, ನಾನು ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ಎಳನೀರು ಮಾರುವವನ ಜೊತೆ ಆ ಹುಡುಗಿಗೆ ಪ್ರೀತಿ ಹುಟ್ಟಿದೆ, ಅವರಿಬ್ಬರು ಒಪ್ಪಿಕೊಂಡು ಓಡಿ ಹೋದರು. ಎಳನೀರು ಮಾರುವವನ ಜೊತೆ ಪ್ರೀತಿ ಬರಬಾರದು ಎಂದು ನಾನು ಹೇಳುವುದಿಲ್ಲ. ಆ ವಯಸ್ಸಿನಲ್ಲಿ, ಮುಗ್ಧತೆಯಲ್ಲಿ ಯಾರು ನಮ್ಮನ್ನು ಚೆನ್ನಾಗಿ ಮಾತನಾಡಿಸುತ್ತಾರೋ, ಅವರಿಗೆ ಒಳ್ಳೆಯದು, ಕೆಟ್ಟದು ಯಾವುದು ಎಂದು ಗೊತ್ತಿರುವುದಿಲ್ಲ. ಒಪ್ಪಿಕೊಂಡು ಹೋಗಿರುವಂತಹ ವ್ಯವಸ್ಥೆ ಇದೆ. ಬಾಂಬೆಯ ರೆಡ್‌ಲೈಟ್ ಏರಿಯಾಕ್ಕೆ ಹೋದರೆ, ಅದರ ಮಾಹಿತಿಯನ್ನು ತೆಗೆದುಕೊಂಡರೆ ಅಲ್ಲಿರುವಂತಹ ಹೆಣ್ಣುಮಕ್ಕಳಲ್ಲಿ ಸುಮಾರು ಶೇಕಡ 99 ರಷ್ಟು ಅಪ್ರಾಪ್ತ ಹೆಣ್ಣುಮಕ್ಕಳು ಓಡಿಹೋಗಿ ಅಲ್ಲಿ ಸೇರಿಕೊಂಡಿದ್ದಾರೆ. ನನ್ನ ಹತ್ತಿರ ಮಾಹಿತಿ ಇದೆ. ಏಕೆಂದರೆ, ಆ ವಯಸ್ಸಿನಲ್ಲಿ ಗೊತ್ತಿರುವುದಿಲ್ಲ, ಓಡಿ ಹೋಗಿರುತ್ತಾರೆ. ಲೈಂಗಿಕತೆಯ ಬಗ್ಗೆ ತಿಳುವಳಿಕೆ ನೀಡುವ ಯಾವ ವ್ಯವಸ್ಥೆಯೂ ಕೂಡ ಇಲ್ಲ. ಕೋರ್ಟ್ ಹೇಳುತ್ತದೆ ಆ ತಿಳುವಳಿಕೆ ಕೊಡಬೇಕೆಂದು. ಮಾನ್ಯ ಶಿಕ್ಷಣ ಸಚಿವರು ಸದನದಲ್ಲಿ ಕುಳಿತಿದ್ದಾರೆ. ನಾವು ನೀವು ಬೊಬ್ಬೆ ಹಾಕಿದ್ದೇವೆ. ಮಾರಲ್ ಸೈನ್ಸ್ ಅನ್ನು ಕಡ್ಡಾಯವಾಗಿ ತೆಗೆದುಕೊಂಡು ಬನ್ನಿ ಎಂದು ನಾನು ಬಹಳಷ್ಟು ಸಲ ಹೇಳಿದ್ದೇನೆ. ಮಾರಲ್ ಸೈನ್ಸ್‌ನಲ್ಲಿ ಕಥೆಯನ್ನು ಹೇಳಿಸಿ, ಮಾರಲ್ ಸೈನ್ಸ್ ಅನ್ನು ತೆಗೆದುಕೊಂಡು ಬನ್ನಿ ಎಂದು ಆ ಕಡೆ ಇರುವಾಗಲೂ ಹೇಳಿದ್ದೆ, ಇಲ್ಲಿರುವಾಗಲೂ ಹೇಳಿದ್ದೆ, ನಾನು ಪ್ರತಿ ಸರ್ಕಾರ ಬಂದಾಗಲೂ ಹೇಳುತ್ತಿರುತ್ತೇನೆ. ಇದು ಯಾವಾಗ ಅಂತ್ಯವಾಗುತ್ತದೆ? ಏಕೆಂದರೆ, ಈ ಹದಿಹರೆಯದ ಮಕ್ಕಳ ಸಮಸ್ಯೆಯನ್ನು ಬಗೆಹರಿಸುವಂತಹ ಬಹಳ ದೊಡ್ಡ ಜವಾಬ್ದಾರಿ ಇದೆ. ಅವರು ತಪ್ಪು ಮಾಡಿದ್ದರೆ ತಪ್ಪು ಅವರದಲ್ಲ. ಆ ತಪ್ಪನ್ನು ಮಾಡುವುದಕ್ಕೆ ಸಮಾಜ ವ್ಯವಸ್ಥೆಯನ್ನು ಮಾಡಿಕೊಟ್ಟಿರುವಂತಹ ನಾವು ಕೂಡ ಒಬ್ಬ ಅಪರಾಧಿಗಳು ಎಂದು ಹೇಳಿದರೆ ತಪ್ಪಾಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೇ, ಹಿಂದೆ ವಾರಕ್ಕೊಮ್ಮೆ moral education period ಎಂದು ಇರುತ್ತಿತ್ತು. 8 ರಿಂದ 10ನೇ ತರಗತಿಯವರೆಗೆ ವಾರದಲ್ಲಿ ಒಂದು period moral education ಗಾಗಿ ವ್ಯವಸ್ಥೆ ಮಾಡಿ. ಮಾನ್ಯ ಸದಸ್ಯರು ಹೇಳುವುದು ಸರಿಯಿದೆ. ನಾನಿದ್ದಾಗ ಅದನ್ನು ಮಾಡಿದ್ದೆ. Moral education ಈಗಿನ ಕಾಲಕ್ಕೆ ಬೇಕಾಗುತ್ತದೆ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವರ್ಷದಿಂದ ಪ್ರಾರಂಭ ಮಾಡುವುದಕ್ಕೆ ತುಂಬಾ ಹತ್ತಿರವಾಗಿಬಿಟ್ಟಿದೆ. ಅದನ್ನು introduce ಮಾಡಬೇಕಾದರೆ ಪರಿಸರ, ಸ್ವಾಭಾವಿಕವಾಗಿ ಟ್ರಾಫಿಕ್ ಸೆನ್ಸ್ ಇರಬಹುದು, ಇನ್ನು ಕೆಲವು ವಿಚಾರಗಳನ್ನು ಸೇರಿಸಿ compel ಮಾಡಿ ವಾರದಲ್ಲಿ ಒಂದು ವಿಷಯ ತರಬೇಕು ಅಂದುಕೊಂಡಿದ್ದೇವೆ. ಅದನ್ನು ಈ ರಜಾ ದಿನಗಳಲ್ಲಿ ನಮ್ಮ ಟೆಕ್ನಿಕಲ್ ಟೀಮ್ ಜೊತೆಗೆ ಮಾತನಾಡುತ್ತೇನೆ. ಇದು ಬಹಳ ಅವಶ್ಯಕತೆ ಇದೆ. ನಾವೆಲ್ಲಾ ಶಾಲೆಗಳಲ್ಲಿ ಓದಬೇಕಾದರೆ ಮಾರಲ್ ಸೈನ್ಸ್, ಜನರಲ್ ನಾಲೆಡ್ಜ್ ಎಲ್ಲಾ ಇತ್ತು. ಈಗ ಅದು ಇಲ್ಲ, ಈಗ ಅದನ್ನು ತರುವಂತಹ ಅವಶ್ಯಕತೆ ಇದೆ. ಅದರ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ವಾರಕ್ಕೆ ಒಂದು ಸಲ ಮಾರಲ್ ಸೈನ್ಸ್‌ನಲ್ಲಿ ವಿಷಯವನ್ನು ಇಟ್ಟು ಅದಕ್ಕೆ ಪರೀಕ್ಷೆಯನ್ನು ಇಡಬೇಕು.

**ಸಭಾಪತಿಯವರು:-** Moral education ಎಂದರೆ ನಿರ್ದಿಷ್ಟವಾದ ಶಿಕ್ಷಕರೇ ಪಾಠ ಮಾಡಬೇಕು ಎಂದೇನೂ ಇಲ್ಲ. ಎಲ್ಲ ಶಿಕ್ಷಕರೂ ಆ ಕುರಿತು ಪಾಠ ಮಾಡಬಹುದು. ಉದಾಹರಣೆಗೆ, ಶ್ರವಣ ಕುಮಾರ ಯಾರು, ತಂದೆ-ತಾಯಿ, ಋಣ ಎಂದರೆ ಏನು? ಹಿಂದೆ ಅದನ್ನು ಮಾಡಿದ್ದೆ. ಕಡತ ತೆಗೆದು ನೋಡಿ. ವಾರಕ್ಕೆ ಒಂದು ಪಿರಿಯಡ್ ಇಟ್ಟರೆ ಒಳ್ಳೆಯದಾಗುತ್ತದೆ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಅದನ್ನು ನೋಡಿ ಮಾಡುತ್ತೇವೆ.

**ಶ್ರೀ ಐವನ್ ಡಿ’ಸೋಜಾ:-** ಮಾನ್ಯ ಸಭಾಪತಿಯವರೇ, ನಾವು ಹಿಂದೆ ಮಕ್ಕಳ ಹಕ್ಕಿಗಾಗಿ ಶಾಸಕರ ವೇದಿಕೆ ಎಂದು ಮಾಡಿದಾಗ ತಾವು ಕೂಡ ಆ ಸಭೆಗೆ ಬಂದಿದ್ದೀರಿ. Counsellor ಗಳನ್ನು ನೇಮಕ ಮಾಡಿಕೊಳ್ಳಬೇಕು. ಪ್ರತಿ ಶಾಲೆಯಲ್ಲೂ ಒಬ್ಬರು ಕೌನ್ಸಿಲಿಂಗ್ ಮಾಡುವವರು ಇರಬೇಕು, ಹದಿಹರೆಯದ ಮಕ್ಕಳೊಂದಿಗೆ ಮಾತನಾಡುವ ವ್ಯವಸ್ಥೆ ಇರಬೇಕೆಂದು ಹೇಳಿದ್ದರು. ಪದವಿ ವಿಶ್ವವಿದ್ಯಾಲಯಗಳಲ್ಲಿ ಇದೆ. ಆದರೆ ಪ್ರಾಥಮಿಕ ಶಾಲೆಗಳಲ್ಲಿ ಈ ವ್ಯವಸ್ಥೆ ಜಾರಿಯಲಿಲ್ಲ. ಅದನ್ನು ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತಿದ್ದೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮಾರಲ್ ಸೈನ್ಸ್‌ಗೆ ಪರೀಕ್ಷೆಯನ್ನು ಇಡಲಾಗುತ್ತಿತ್ತು. ಅದರಲ್ಲಿ ದೊಡ್ಡ ಅಂಕಗಳೇನು ತೆಗೆದುಕೊಳ್ಳುತ್ತಿರಲಿಲ್ಲ. ಆದರೆ ಅದರಲ್ಲಿ ನೀತಿ ಕಥೆಯನ್ನು ನಾವು ಓದುತ್ತಿದ್ದೆವು. ಪರೀಕ್ಷೆಯ ಕೊನೆ ದಿವಸ ಮಾರಲ್ ಸೈನ್ಸ್ ಪರೀಕ್ಷೆಯೂ ಇರುತ್ತಿತ್ತು. ಸುಮ್ಮನೆ ವಿಷಯವನ್ನು ಇಟ್ಟರೆ ಅದು ಲಾಗೂ ಆಗುವುದಿಲ್ಲ. ಲೈಂಗಿಕತೆಯ ಬಗ್ಗೆ ಮಾಹಿತಿಯನ್ನು ಕೊಡುವಂಥದ್ದು, ಪ್ರತಿ ಶಾಲೆಯಲ್ಲೂ ಕೌನ್ಸಿಲಿಂಗ್ ಕೊಡಬೇಕು. ಅದು ಆಗುವುದಿಲ್ಲ. ನಾನು ಅನೇಕ ಶಾಲೆಗಳಲ್ಲಿ ಹೋಗಿ ಕೇಳಿದೆ. ಕಳೆದ ಸಲ ಉತ್ತರ ಕೊಡುವಾಗ ಅದನ್ನು ಪ್ರಾರಂಭ ಮಾಡಿದ್ದೇವೆ, ಅವರಿಗೆ ಸೆಮಿನಾರ್ ಮಾಡುತ್ತೇವೆ, ಅದು ಇದು ಮಾಡುತ್ತೇವೆಂದು ಹೇಳಿದ್ದಾರೆ. ನಾನು ಅನೇಕ ಶಾಲೆಗಳಿಗೆ ಹೋಗಿದ್ದೇನೆ. ಏಕೆಂದರೆ, ನಾನು ಮಾತನಾಡುವಾಗ ಸುಮ್ಮನೆ ಮಾತನಾಡುವುದಿಲ್ಲ. ಇವತ್ತು ನಾನು ಅರಣ್ಯದ ಬಗ್ಗೆ ಮಾತನಾಡಬೇಕಾದರೆ ನಾನು ಅರಣ್ಯದೊಳಗೆ ಹೋಗಿ ಬಂದೇ ಮಾತನಾಡಿದ್ದೇನೆ. ನಾನು ಅನೇಕ ಶಾಲೆಗಳಿಗೆ ಹೋಗಿದ್ದೇನೆ. ಬಹಳಷ್ಟು ಶಾಲೆಗಳಲ್ಲಿ ಕೌನ್ಸಿಲಿಂಗ್ ಇಲ್ಲ, ಲೈಂಗಿಕತೆಯ ಬಗ್ಗೆ ಹೆಣ್ಣುಮಕ್ಕಳಿಗಾಗಲಿ, ಗಂಡು ಮಕ್ಕಳಿಗಾಗಲಿ ವಿಚಾರವನ್ನು ಹೇಳುತ್ತಿಲ್ಲ. ಹದಿಹರೆಯದ ವಯಸ್ಸಿನಲ್ಲಿ ಗರ್ಭಧಾರಣೆ ಮಾಡಿದಂತಹ ಹೆಣ್ಣುಮಕ್ಕಳ ಸಂಖ್ಯೆ ಕಳೆದ ಎರಡು ವರ್ಷಗಳಲ್ಲಿ 33,000 ಸಿಕ್ಕಿವೆ. ಅದಕ್ಕಿಂತ ಬಹಳ ದೊಡ್ಡ ಪ್ರಮಾಣದಲ್ಲಿದೆ. ಈಗ 33,000 ಪ್ರಕರಣಗಳ ಮಾಹಿತಿ ಸಿಕ್ಕಿವೆ. ಅಂದರೆ, ಎಷ್ಟು ಪ್ರಮಾಣದಲ್ಲಿ ಆಗಿರಬಹುದು, ನಾವು ಅವರಿಗೆ ಎಷ್ಟು ತಿಳುವಳಿಕೆಯನ್ನು ನೀಡಿರಬಹುದು? ಆದ್ದರಿಂದ ನಾವು ಇದರ ಬಗ್ಗೆಯೂ ಕೂಡ ಯೋಚನೆ ಮಾಡಬೇಕಾಗಿದೆ.

(ಮುಂದು)

(170) 10/03/2025 3:50 ಎಸ್‌ಪಿಆರ್/ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಭಾರತಿ ಶೆಟ್ಟಿ (ಮುಂದು):-**

ಹದಿಹರೆಯದ ವಯಸ್ಸಿನಲ್ಲಿ ಜಾರಿ ಹೋದರೆ ಹೆಣ್ಣು ಮಕ್ಕಳು ಬಹಳ ದೊಡ್ಡ ಹೊಡೆತವನ್ನು ತೆಗೆದುಕೊಳ್ಳುತ್ತಾರೆ. ತಮ್ಮ ತಾಯಿಯವರು ಒಂದು ಮಾತನ್ನು ಹೇಳುತ್ತಿದ್ದರು. ಗಂಡು ಮಕ್ಕಳು ಕೆಸರಿನಲ್ಲಿ ಕಾಲು ಹಾಕಿದರೆ ಮನೆಗೆ ಬಂದು ಕಾಲನ್ನು ತೊಳೆದುಕೊಳ್ಳುತ್ತಾರೆ. ಆದರೆ, ಹೆಣ್ಣು ಮಕ್ಕಳು ಹಾಗೆ ಅಲ್ಲ. ಕೆಸರಿಗೆ ಅವರ ಕಾಲು ಬಿದ್ದರೆ, ಅದನ್ನು ಉಜ್ಜಿ ತೊಳೆಯುವುದಕ್ಕೆ ಆಗುವುದಿಲ್ಲ. ಇಂತಹ ವ್ಯವಸ್ಥೆಯು ಶಾರೀರಿಕವಾಗಿ ಹಾಗೂ ಸಮಾಜಿಕವಾಗಿ ಆಗುತ್ತದೆ. ಇಂತಹವರಿಗೆ ಸಮಾಜದಲ್ಲಿ "ಛೀ, ಥೂ" ಎನ್ನುವ ವ್ಯವಸ್ಥೆಯು ಇದೆ. ಆದ್ದರಿಂದ ಹೆಣ್ಣು ಮಕ್ಕಳ ಬದುಕು ಬಹಳ ಹುಷಾರಾಗಿರಬೇಕು. ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಇಬ್ಬರೂ ಎಡವುತ್ತಾರೆ. ಆದರೆ ಹೆಣ್ಣಿಗೆ

ಮಾತ್ರವೇ ಶಿಕ್ಷೆಯಾಗುತ್ತದೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಈ ಸಂದರ್ಭದಲ್ಲಿ ಇಲ್ಲಿರುವ ಅನೇಕ ಸ್ತ್ರೀ ಸದಸ್ಯರು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಬಗ್ಗೆ ಮಾತನಾಡಬೇಕಾಗಿತ್ತು. ಆದರೆ ಅದು ನಮಗೆ ಆಗಲಿಲ್ಲ. ಇವತ್ತಿನ ದಿವಸ ಒಬ್ಬ ಹೆಣ್ಣು ಮಗಳಿಗೆ ನೀಡುವ ಅತೀ ದೊಡ್ಡ ಉಡುಗೊರೆ ಏನು ಎಂದರೆ, ಅದು ಅವಳಿಗೆ ನೀಡುವ ಗೌರವವಾಗಿದೆ. ಅವಳಿಗೆ ನೀಡುವ ಗೌರವ, ಮರ್ಯಾದೆಗಳು ಅವಳ ಬದುಕಿನ ಅತೀ ದೊಡ್ಡ ಉಡುಗೊರೆ ಎಂದು ಹೇಳುತ್ತಾರೆ. ಒಬ್ಬ ಗಂಡಸು ಹೆಣ್ಣು ಮಕ್ಕಳ ಬಗ್ಗೆ ಬಹಳ ಚೆನ್ನಾಗಿ ಹೇಳುತ್ತಾನೆ: ನಾನು ಯಾವಾಗ ಈ ಪ್ರಪಂಚದಲ್ಲಿ ಹುಟ್ಟಿದ್ದೇನೆಯೋ, ಯಾವಾಗ ಕಣ್ಣು ಬಿಟ್ಟೇನೋ, ನನ್ನನ್ನು ಮಡಿಲಲ್ಲಿ ಹಾಕಿಕೊಂಡು, ಹಾಲುಣಿಸಿ, ಸಾಕಿ ನನ್ನ ಬದುಕಿನಲ್ಲಿ ಬಂದಂತಹ ಮೊದಲ ಹೆಣ್ಣೇ ನನ್ನ ತಾಯಿ ಎಂದು ಹೇಳುತ್ತಾನೆ. ಆ ನಂತರ ನಾನು ಬೆಳೆದು ದೊಡ್ಡವನಾದ ಮೇಲೆ ನನ್ನೊಂದಿಗೆ ಯಾರಾದರೂ ಆಟವಾಡುವುದಕ್ಕೆ ಬೇಕೆಂದು ಅನ್ನಿಸಿದಾಗ, ನನ್ನ ಬಾಳಿನ ಬದುಕಿನಲ್ಲಿ ಬಂದಂತಹ ಹೆಣ್ಣೆ ನನ್ನ ಸಹೋದರಿ. ನಾನು ಇನ್ನೂ ದೊಡ್ಡವನಾಗಿ ಬೆಳೆದಾಗ, ನನಗೆ ವಿದ್ಯಾಭ್ಯಾಸ ನೀಡಬೇಕೆಂದು ಹೇಳಿ ನನ್ನನ್ನು ಶಾಲೆಗೆ ಕಳುಹಿಸಿದಾಗ, ನನಗೆ ಪಾಠವನ್ನು ಹೇಳಿ ವಿದ್ಯೆಯನ್ನು ಕಲಿಸಿಕೊಟ್ಟು ನನ್ನ ಬದುಕಿನಲ್ಲಿ ಬಂದ ಹೆಣ್ಣೆ ನನ್ನ ಶಿಕ್ಷಕಿ. ಪುನಃ ನಾನು ದೊಡ್ಡವನಾದಾಗ ನನಗೆ ಬಾಳ ಸಂಗಾತಿ ಬೇಕೆಂದು ಅನ್ನಿಸಿದಾಗ ನನಗೆ ಮದುವೆಯನ್ನು ಮಾಡಿಸಿದಾಗ ನನ್ನ ಬದುಕಿನಲ್ಲಿ ಬಂದಂತಹ ಹೆಣ್ಣೆ ನನ್ನ ಹೆಂಡತಿ. ಆ ನಂತರ ನಾನು ಆ ಬದುಕಿನ ಸಂಸಾರದ ಜಂಜಾಟದಲ್ಲಿ ಬಳಲಿ, ಬಹಳ ಬೆಂಡಾಗಿ ಬಹಳ ಒತ್ತಡದಲ್ಲಿದಾಗ ನನ್ನನ್ನು ಸಮಾಧಾನಪಡಿಸಿ ನನ್ನ ಬದುಕಿನಲ್ಲಿ ಬಂದ ಹೆಣ್ಣೆ ನನ್ನ ಮಗಳು. ಆ ನಂತರ ನನ್ನ ಅವಸಾನವಾದಾಗ ನನ್ನನ್ನು ತನ್ನ ಮಡಿಲಿನಲ್ಲಿ ಕೊಂಡೋದ ಹೆಣ್ಣೆ ಭಾರತ ಮಾತೆ ನನ್ನ ತಾಯಿ ಎಂಬುದಾಗಿ ಅವನು ಹೇಳುತ್ತಾನೆ. ಈ ರೀತಿಯಾಗಿ ಹೆಣ್ಣನ್ನು ಪ್ರತಿಯೊಬ್ಬರೂ ಗೌರವಿಸಬೇಕು ಅದರಲ್ಲೂ ಗಂಡು ಮಕ್ಕಳು ಹೆಚ್ಚಾಗಿ ಗೌರವಿಸಬೇಕು. ನಾವು ಹೆಣ್ಣಾದರೆ ನಾವು ಹೆಮ್ಮೆ ಪಡಬೇಕೆಂದು ಹಿರಿಯರು ಹೇಳುತ್ತಾರೆ. ಆ ರೀತಿಯಾಗಿ ಗೌರವಿಸುವಂತಹ ವ್ಯವಸ್ಥೆಯನ್ನು ನಮ್ಮ ಶಾಲೆಗಳಲ್ಲಿ, ಮನೆಗಳಲ್ಲಿ, ಶಿಕ್ಷಣದಲ್ಲಿ ಮತ್ತು ಸಮಾಜದಲ್ಲಿ ಮಾಡಿದರೆ, ಬಹುಶಃ ಈ ಸಮಾಜದಲ್ಲಿ ಹದಿಹರೆಯದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾವು ಕೂಡ ಒಂದು ಮೆಟ್ಟಿಲನ್ನು ಹಾಕಿದಂತಾಗುತ್ತದೆ ಎಂಬ ವಿನಂತಿಯನ್ನು ಮಾಡಿಕೊಳ್ಳುತ್ತಾ, ಈ ಚರ್ಚೆಗೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ನನ್ನ ಸಹೋದರರನಾದ ಶ್ರೀ ಐವನ್ ಡಿ'ಸೋಜಾ ರವರು ಈ ವಿಷಯವನ್ನು ಪ್ರಸ್ತಾಪಿಸಿಸಬೇಕೆಂದು ಬಹಳವಾಗಿ ನನಗೆ ಬೆನ್ನತ್ತಿ ಈ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಅವರು ಒಬ್ಬ

ಸಹೋದರನಾಗಿ ಹೆಣ್ಣು ಮಕ್ಕಳ ಹದಿಹರೆಯದ ಸಮಸ್ಯೆಯ ಬಗ್ಗೆ ಇಷ್ಟು ಮುತುವರ್ಜಿಯನ್ನು ವಹಿಸಿದ್ದಾರೆ. ಹಾಗಾಗಿ ಅವರಿಗೂ ಸಹ ನಾನು ವಂದನೆಗಳನ್ನು ಸಲ್ಲಿಸುತ್ತೇನೆ.

**ಡಾ॥ ಡಿ. ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು ಈ ವಿಷಯದ ಬಗ್ಗೆ ಈಗಾಗಲೇ ಬಹಳಷ್ಟು ಸದಸ್ಯರು ಮಾತನಾಡಿದ್ದಾರೆ. ಆದರೆ, ನಾನು ಕೆಲವು ವಿಷಯಗಳ ಕುರಿತಾಗಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಸಾಂಪ್ರದಾಯಿಕವಾಗಿ ಸೌಂದರ್ಯ, ಮಾನದಂಡಗಳಗನುಗುಣವಾಗಿರಲು ಸಾಮಾಜಿಕ ಒತ್ತಡ ಹದಿಹರೆಯದ ಮಕ್ಕಳಲ್ಲಿ ಬಹಳಷ್ಟಿರುತ್ತದೆ. ಆದರೆ, ಸಾಮಾಜಿಕ ಮಾಧ್ಯಮಗಳ ಪ್ರಭಾವದ ಇಂದಿನ ದಿನಗಳಲ್ಲಿ ಇನ್‌ಸ್ಟಾಗ್ರಾಂ, ಫೇಸ್‌ಬುಕ್, ಟಿ.ವಿ.ಯಲ್ಲಿ ಪ್ರಸಾರವಾಗುವ ಧಾರಾವಾಹಿಗಳು ಇಂತಹವುಗಳೇ ಸಾಕಷ್ಟು ಆಗಿವೆ. ಇಂತಹ ಪ್ರಸಂಗಗಳು ನಗರ ಪ್ರದೇಶಗಳಲ್ಲಾದರೆ, ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಬಡ, ಅನಾಥ, ಅವಿದ್ಯಾವಂತರ ಮತ್ತು ಅಲೆಮಾರಿ ಜನಾಂಗದ ಮಕ್ಕಳ ಪರಿಸ್ಥಿತಿಗಳು ಬೇರೆ ರೀತಿಯದ್ದಾಗಿರುತ್ತವೆ. ಇವತ್ತಿನ ದಿವಸ ಎಲ್ಲಾ ರೀತಿಯ ಆಧುನಿಕತೆ ಮತ್ತು ಸಮಾಜದಲ್ಲಿರುವ ಎಲ್ಲಾ ರೀತಿಯ ಸವಲತ್ತುಗಳನ್ನು ಪಡೆದುಕೊಂಡಿರುವ ನಗರ ಪ್ರದೇಶದ ಮಕ್ಕಳ ಪರಿಸ್ಥಿತಿಯು ಒಂದು ರೀತಿಯದ್ದಾದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಊಟ-ತಿಂಡಿಗಳಿಲ್ಲದೆ, ಬಟ್ಟೆ-ಬರೆಗಳಿಲ್ಲದೇ ಮತ್ತು ಆಶ್ರಯವಿಲ್ಲದೇ ಅಲೆಮಾರಿಗಳಂತೆ ಇರುವ ಆ ಮಕ್ಕಳ ಪರಿಸ್ಥಿತಿಯು ಬೇರೆ ರೀತಿಯದ್ದೇ ಆಗಿರುತ್ತವೆ. ಹೀಗಾಗಿ ನಾವು ಎರಡೂ ಕೋನಗಳಲ್ಲಿ ಇವುಗಳನ್ನು ನೋಡಬೇಕಾಗುತ್ತದೆ. ಇವತ್ತಿನ ದಿವಸ, ದೇಹದ ಚರ್ಮ ಮತ್ತು ಬಣ್ಣದ ಮೇಲೆ ಎಲ್ಲವೂ ಸೌಂದರ್ಯ, ಸೌಂದರ್ಯವರ್ಧಕ ಮತ್ತಿತರೆ ವಸ್ತುಗಳ ಬಗ್ಗೆ ಬಹಳಷ್ಟು ಆಸಕ್ತಿ ಹೊಂದಿರುವುದನ್ನು ನಗರ ಪ್ರದೇಶಗಳಲ್ಲಿ ನಾವು ಕಾಣುತ್ತೇವೆ. ಪ್ರತಿಯೊಬ್ಬರೂ ತಾವು ಹುಟ್ಟುವಾಗ ಎಲ್ಲಿ ಮತ್ತು ಹೇಗೆ ಹುಟ್ಟಬೇಕು, ಸುಂದರವಾಗಿ ಹುಟ್ಟಬೇಕೋ ಅಥವಾ ಕುರೂಪವಾಗಿ ಹುಟ್ಟಬೇಕೋ ಎನ್ನುವುದು ನನ್ನ ಕೈಯ್ಯಲ್ಲಿ ಇರುವುದಿಲ್ಲ. ಆದರೆ ಸೃಷ್ಟಿಯಲ್ಲಿ ಬಂದಿದ್ದರೂ ಸಹ, ಇವತ್ತಿನ ದಿವಸ ಎಷ್ಟರ ಮಟ್ಟಿಗೆ ನಾಗರಿಕತೆ ಮತ್ತು ವಿದ್ಯೆಯ ಮಟ್ಟ ಬೆಳೆಯುತ್ತದೆಯೋ ಅಷ್ಟರ ಮಟ್ಟಕ್ಕೆ ನಾವು ನಮ್ಮ ದೇಹದ ಆರೋಗ್ಯ ಮತ್ತು ಸೌಂದರ್ಯದ ಬಗ್ಗೆ ಆದ್ಯತೆಯನ್ನು ನೀಡುವುದು ಸಾಮಾಜಿಕ ಸ್ವಭಾವವಾಗಿದೆ. ನಾನು ಈಗಾಗಲೇ ಪ್ರಸ್ತಾಪಿಸಿದಂತೆ, ಇವತ್ತಿನ ಪರಿಸ್ಥಿತಿಯಲ್ಲಿ ಯಾವುದೇ ಒಂದು ಅನುಕೂಲವಿಲ್ಲದಿರುವ ಕುಟುಂಬದಲ್ಲಿ ಜನಿಸಿದ ಮಕ್ಕಳಿಗೆ ತಮ್ಮ ದೇಹದ ಬಣ್ಣದ ಬಗ್ಗೆ ಯಾವುದೇ ಕಲ್ಪನೆ ಇರುವುದಿಲ್ಲ. ಹುಟ್ಟುವಾಗಲೇ ಕಪ್ಪಾಗಿ, ಕುಳ್ಳರಾಗಿ, ದಪ್ಪರಾಗಿ ಹುಟ್ಟಬಹುದು. ಇದೆಲ್ಲವೂ ಪ್ರಕೃತಿದತ್ತವಾಗಿ ಬಂದಿರುತ್ತವೆ. ಆದರೆ, ಇವತ್ತಿನ

ದಿವಸದಲ್ಲಿ ಎಲ್ಲರೂ ಸಹ ಎಲ್ಲಿ ವಿದ್ಯೆಯನ್ನು ಕಲಿತಿದ್ದಾರೆ, ಎಲ್ಲಿ ನಗರ ಪ್ರದೇಶಗಳಲ್ಲಿ ಇದ್ದಾರೆಯೋ ಅಲ್ಲೆಲ್ಲಾ ಜಾಸ್ತಿ ಸೌಂದರ್ಯ ಮತ್ತು ಸೌಂದರ್ಯವರ್ಧಕಕ್ಕೆ ಹೆಚ್ಚು ಒತ್ತನ್ನು ನೀಡುತ್ತಿದ್ದೇವೆ. ಇದಕ್ಕೆ ನಾವು ಎಷ್ಟು ಒತ್ತನ್ನು ನೀಡುತ್ತೇವೆಯೋ, ಅಷ್ಟೂ ಸಹ ಮಕ್ಕಳಿಗೆ ಒಂದಿಲ್ಲ ಒಂದು ರೀತಿಯಲ್ಲಿ ಅದು ಅಪಾಯಕಾರಿಯಾಗಿರುವುದನ್ನು ನಾವು ನೋಡಬಹುದು. ಏಕೆಂದರೆ, ಇವತ್ತಿನ ದಿವಸ ನಮ್ಮ ಸಮಾಜವು ಎಷ್ಟರ ಮಟ್ಟಿಗೆ ಕೆಟ್ಟಿದೆ ಎಂದು ಹೇಳಿದರೆ, ಅದನ್ನು ಊಹಿಸಿಕೊಳ್ಳಲೂ ಸಹ ಸಾಧ್ಯವಿಲ್ಲ. ಮುಂದುವರೆದು ನಾನು ಹೆಣ್ಣು ಮಕ್ಕಳ ಬಾಲ್ಯ ವಿವಾಹದ ಬಗ್ಗೆ ಹೇಳಲಿಚ್ಛಿಸುತ್ತೇನೆ. ರಾಜ್ಯದಾದ್ಯಂತ ಕಳೆದ ಮೂರು ವರ್ಷಗಳಲ್ಲಾದ ಬಾಲ್ಯ ವಿವಾಹದ ಮಾಹಿತಿಯ ಬಗ್ಗೆ ಹೇಳುವುದಾದರೆ, 33,621 ಮಕ್ಕಳು ಬಾಲ್ಯ ವಿವಾಹಕ್ಕೊಳಪಟ್ಟಿದ್ದಾರೆ. ಇದರಲ್ಲಿನ ಬಹಳ ಶೋಚನೀಯವಾದ ಸಂಗತಿ ಏನೆಂದರೆ, ಬೆಂಗಳೂರು ನಗರದಲ್ಲಿಯೇ ಬಾಲ್ಯ ವಿವಾಹದ ಸಂಖ್ಯೆ ಜಾಸ್ತಿ ಇದೆ. ಬೆಂಗಳೂರು ನಗರದಲ್ಲಿ 4,324 ಪ್ರಕರಣಗಳು ದಾಖಲಾಗಿವೆ. ವಿಜಯನಗರ ಜಿಲ್ಲೆಯಲ್ಲಿ 2,468 ಪ್ರಕರಣಗಳಾಗಿದ್ದು, ಬಳ್ಳಾರಿಯಲ್ಲಿ 2,283, ಬೆಳಗಾವಿಯಲ್ಲಿ 2,224 ಮತ್ತು ಮೈಸೂರು ಜಿಲ್ಲೆಯಲ್ಲಿ 1,900 ಪ್ರಕರಣಗಳಾಗಿವೆ. ಹೀಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ಬಾಲ್ಯ ವಿವಾಹದ ಪ್ರಕರಣಗಳಾಗಿವೆ. ಮಾಹಿತಿ ಪಡೆದುಕೊಂಡಾಗ ಇಷ್ಟು ಸಂಖ್ಯೆಗಳು ದೊರೆತಿವೆ. ಬಾಲ್ಯ ವಿವಾಹದ ನಂತರ ಮುಂದುವರೆದು ಅಪ್ರಾಪ್ತ ವಯಸ್ಸಿನ ಮಕ್ಕಳ ಬಗ್ಗೆ ನೋಡುವುದಾದರೆ, ಕಳೆದ ಮೂರು ವರ್ಷಗಳಲ್ಲಿ 49,000 ಅಪ್ರಾಪ್ತ ವಯಸ್ಸಿನ ಗರ್ಭಿಣಿಯರಿಗೆ ಹೆರಿಗೆಯಾಗಿದೆ. ಈ ಅಂಕಿ ಅಂಶಗಳನ್ನು ನಾವು ದಾಖಲೆಗಳಲ್ಲಿ ನೋಡಬಹುದು. 49,000 ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಹೆರಿಗೆಯಾಗಿದೆ. 33,621 ಮದುವೆಗಳು ಅಧಿಕೃತವಾಗಿ ಘೋಷಣೆಯಾಗಿವೆ. ಈ ಎರಡೂ ಅಂಶಗಳನ್ನು ನೋಡಿದಾಗ, 49,000 ಸಂಖ್ಯೆಯಲ್ಲಿ ಕೇವಲ 33,621 ಮದುವೆಗಳು ಅಧಿಕೃತವಾಗಿ ಇದ್ದರೆ, ಸುಮಾರು 17,000 ಮದುವೆಗಳು ಎಲ್ಲಿಯೂ ಸಹ ದಾಖಲಾಗಿಲ್ಲ. ಇವರುಗಳು ಎಲ್ಲಿಯೂ ಸಹ ಅಧಿಕೃತವಾಗಿ ಘೋಷಣೆ ಮಾಡಿಕೊಂಡಿಲ್ಲ, ಆದರೂ ಸಹ ಮಕ್ಕಳಾಗಿವೆ. ಹೀಗಾಗಿ ಇಲ್ಲಿ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳಿಗೆ ಹೆರಿಗೆಯಾಗಿರುವುದನ್ನು ನಾವು ನೋಡಬಹುದು. ಇದು ಬಹಳ ಶೋಚನೀಯವಾದ ಪರಿಸ್ಥಿತಿಯಾಗಿದೆ. ನಾವು ಎಷ್ಟೇ ಹೇಳಿದರೂ ಸಹ ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ದುರುಪಯೋಗ ಮಾಡುವಂತಹದ್ದು ಕಾಣುತ್ತೇವೆ. ಇಲ್ಲಿ ಕುಟುಂಬದ ಅಥವಾ ಸಮಾಜದ ಮೇಲೆ ಬಹಳಷ್ಟು ಜವಾಬ್ದಾರಿ ಇರುತ್ತದೆ. ಅವರುಗಳು ಬೆಳೆದು ಬಂದ ಪರಿಸರವು ಬಹಳಷ್ಟು ಮುಖ್ಯವಾಗಿರುತ್ತದೆ. ಆದ್ದರಿಂದ ಅಲ್ಲಿನ ಪರಿಸರ, ವಿದ್ಯಾವಂತರು, ಅವಿದ್ಯಾವಂತರು ಈ ಎಲ್ಲಾ ಅಂಶಗಳು ಒಂದೆಡೆಯಾದರೆ, ಅಲೆಮಾರಿ ಜನ ಅಂದರೆ ಆಶ್ರಯವಿಲ್ಲದಿರುವ ಎಷ್ಟೋ ಕುಟುಂಬಗಳು ಎಲ್ಲಿಯೋ ರೈಲು ಮತ್ತು ಬಸ್ ನಿಲ್ದಾಣಗಳಲ್ಲಿ, ಸಾರ್ವಜನಿಕ

ಶೌಚಾಲಯ, ಪಾರ್ಕ್ ಇತ್ಯಾದಿ ಕಡೆಗಳಲ್ಲಿ ವಾಸ ಮಾಡುತ್ತಿರುತ್ತಾರೆ. ಅದೇ ರೀತಿಯಾಗಿ ಎಷ್ಟೋ ಸಂಖ್ಯೆಯ ಮಕ್ಕಳು ಅಲ್ಲಿದ್ದಾರೆ. ಇಂತಹ ಸುಮಾರು 17,000 ಮಕ್ಕಳ ಸಂಖ್ಯೆಯು ಎಲ್ಲಿಯೂ ಸಹ ದಾಖಲಾಗಿಲ್ಲ. ಇಂತಹ ಕಡೆಗಳಲ್ಲಿ ನಾವು ಗಮನವನ್ನು ಹರಿಸಬೇಕಾಗುತ್ತದೆ.

ಮಕ್ಕಳ ಮೇಲಿನ ದೌರ್ಜನ್ಯ ಮತ್ತು ಭಿಕ್ಷಾಟನೆಗಳಾಗುತ್ತಿದ್ದು, ಇವುಗಳ ಬಗ್ಗೆ ನಾವು ನೋಡುವುದಾದರೆ, ವಿಶ್ವದಲ್ಲಿಯೇ ಅತಿ ಹೆಚ್ಚು ಬಾಲ ಕಾರ್ಮಿಕರು ನಮ್ಮ ಭಾರತ ದೇಶದಲ್ಲಿದ್ದಾರೆ. 5 ರಿಂದ 14 ವಯೋಮಾನದ 1.26 ಕೋಟಿ ಮಕ್ಕಳು ನಮ್ಮ ದೇಶದಲ್ಲಿದ್ದಾರೆ. ಅವರು ಬಾಲ ಕಾರ್ಮಿಕರಾಗಿ ನೋಂದಾಯಿಸಿದ ಮಕ್ಕಳು ಆಗಿದ್ದಾರೆ. ಇದನ್ನೂ ಸಹ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. (ಮುಂದು)

(171) 10/03/2025 4:00 ಬಿಕೆಪಿ/ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಡಾ॥ ಡಿ.ತಿಮ್ಮಯ್ಯ (ಮುಂದು):-**

ಇದರಲ್ಲಿ ಬೀದಿ ಮಕ್ಕಳು, ಚಿಂದಿ ಆಯುವ ಮಕ್ಕಳು ಸೇರಿಕೊಂಡಿರುತ್ತಾರೆ. ಟ್ರಾಫಿಕ್‌ನಲ್ಲಿ ಜೀವನ ಮಾಡುವ ಮಕ್ಕಳೂ ಸಹ ಸೇರಿರುತ್ತಾರೆ. ಕೊಳಗೇರಿಗಳಲ್ಲಿ, ರೈಲ್ವೆ ನಿಲ್ದಾಣಗಳಲ್ಲಿ, ಡಂಪ್ ಯಾರ್ಡ್‌ಗಳಲ್ಲಿ ವಾಸಿಸುವವರ ಮಕ್ಕಳೆಲ್ಲರು ಇಲ್ಲಿ ಸೇರಿರುತ್ತಾರೆ. ಅವರ ಬಗ್ಗೆ ನಾವು ಯಾವ ರೀತಿಯ ಕಾರ್ಯಕ್ರಮಗಳನ್ನು ಹೇಗೆ ಹಾಕಿಕೊಳ್ಳಬೇಕು ಎಂಬ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲನೆ ಮಾಡಬೇಕಾಗುತ್ತದೆ. ಮಕ್ಕಳ ಮೇಲೆ ದೌರ್ಜನ್ಯದ ಬಗ್ಗೆ ಹೇಳುವುದಾದರೆ, ದಿನಪತ್ರಿಕೆಗಳಲ್ಲಿ ನೋಡಿದ ಹಾಗೆ, ಸುಮಾರು ಶೇಕಡ 90 ರಷ್ಟು ಹೆಣ್ಣು ಮಕ್ಕಳಿಗೆ ಒಂದಲ್ಲ ಒಂದು ರೀತಿಯ ದೌರ್ಜನ್ಯವನ್ನು ಈ ಅನಾಥ, ಅಪ್ರಾಪ್ತ ವಯಸ್ಸಿನ ಮಕ್ಕಳಲ್ಲಿ ರಿಜಿಸ್ಟರ್ ಆಗಿರುವುದನ್ನು ನಾವು ನೋಡಬಹುದು. ಇದರಲ್ಲಿ ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳು, ತಂದೆ ತಾಯಿಗಳು ಭಿಕ್ಷೆಯಲ್ಲಿ ತೊಡಗಿರುವವರ ಮಕ್ಕಳು ಇವುಗಳೆಲ್ಲದರ ಬಗ್ಗೆ ನಾವು ನೋಡಿದಾಗ ನಾವು ಯಾವುದೇ ಕಾರ್ಯಕ್ರಮಗಳನ್ನು ರೂಪಿಸಿದಾಗ, ಎಲ್ಲಾ ಅನುಕೂಲಗಳು ಇರುವ ಮಕ್ಕಳಲ್ಲಿ, ಪ್ರದೇಶಗಳಲ್ಲಿ, ವಿದ್ಯಾವಂತ ಮಕ್ಕಳು, ವಿದ್ಯಾವಂತ ಕುಟುಂಬಗಳು, ನಾಗರಿಕತೆ ಕುಟುಂಬಗಳು ನಗರ ಪ್ರದೇಶಗಳಲ್ಲಿ ಇರುವುದು ಒಂದು ಕಡೆಯಾದರೆ, ಇಲ್ಲಿ ನಾಗರಿಕತೆ ಅರಿಯದೇ ಇರುವವರು, ಬಡತನ ಮತ್ತು ಗ್ರಾಮಾಂತರ ಮತ್ತು ಸ್ಲಂ ಪ್ರದೇಶಗಳಲ್ಲಿ ಇರತಕ್ಕ ಮಕ್ಕಳನ್ನು ಇವರು ವಿಧಿಯಿಲ್ಲದೇ, ಇವರಿಗೆ ಬೇರೆ

ದಾರಿಯೇ ಇಲ್ಲದಂ ತಹ ಸಮಯದಲ್ಲಿ ಮಧ್ಯವರ್ತಿಗಳ ಸಹವಾಸದಿಂದ bullying ಎಂದು ಏನು ಹೇಳುತ್ತೇವೆಯೋ, ಅವರ ಮುಖಾಂತರ ದೌರ್ಜನ್ಯಕ್ಕೊಳಪಡುವುದನ್ನು ನಾವು ನೋಡುತ್ತೇವೆ. ಏಕೆಂದರೆ ಬಹಳಷ್ಟು ಮಧ್ಯವರ್ತಿಗಳು ಕೆಲವು ಏಜೆನ್ಸಿಗಳು ಇಲ್ಲಿ ಕೆಲಸ ಮಾಡಿ ಈ ಅನಾಥ ಮಕ್ಕಳನ್ನು ಮತ್ತು ಕಷ್ಟದಲ್ಲಿರುವ ಮಕ್ಕಳನ್ನು ದುರುಪಯೋಗ ಮಾಡಿಕೊಂಡು, ಅವರನ್ನು ತಪ್ಪು ದಾರಿಗೆ ಎಳೆಯುತ್ತಾರೆ, ಬಹಳಷ್ಟು ಸಂಘಟಿತ ಏಜೆನ್ಸಿಗಳು ಈ ಎಲ್ಲಾ ಮಕ್ಕಳನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಚೋದನೆ ಮಾಡುತ್ತಿದ್ದಾರೆ.

ಇಷ್ಟು ಹೇಳುವುದರ ಜೊತೆಗೆ ಹದಿಹರೆಯದ ವಯಸ್ಸಿನಲ್ಲಿ ಗರ್ಭಧಾರಣೆಯ ಬಗ್ಗೆ ನಾನು ಈಗಾಗಲೇ ಮಾತನಾಡಿದ್ದೇನೆ. ಇದರಲ್ಲಿ ಕೇವಲ ಒಂದು ಇಲಾಖೆ ಮನಸ್ಸು ಮಾಡಿದರೆ ಆಗುವುದಿಲ್ಲ. ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆರೋಗ್ಯ ಇಲಾಖೆಗಳು ಇದರಲ್ಲಿ ಒಳಗೊಂಡಿವೆ. ಸಮಾಜದ ಜನಕ್ಕೆ ಒಂದು ಒಳ್ಳೆಯ ಶಿಕ್ಷಣ ಅಥವಾ ಅರಿವನ್ನು ಮೂಡಿಸಬೇಕಾಗುತ್ತದೆ. ಇದರಲ್ಲಿ ವಿದ್ಯಾವಂತರನ್ನು, ಅವಿದ್ಯಾವಂತರನ್ನು, ಗ್ರಾಮಾಂತರ ಪ್ರದೇಶದವರನ್ನು, ಅನಾಗರೀಕರನ್ನು, ಹಳ್ಳಿಗಳಲ್ಲಿರುವ ಬಡವರನ್ನು, ಹಾಗೂ ಸ್ಲಂನಲ್ಲಿರುವ ಜನರನ್ನು ಸೇರಿಸಬೇಕಾಗುತ್ತದೆ. ಬಡತನ ಒಂದು ರೀತಿಯ ಕಾರಣವಾದರೆ, ಇನ್ನೊಂದು ಕಡೆ ವಿದ್ಯಾವಂತರಿಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ನೀಡಿದ್ದರೂ ಸಹ ಇವತ್ತಿನ ದಿವಸ ಇರುವ ಆಧುನಿಕ ಮಾಧ್ಯಮಗಳ ಮುಖಾಂತರ ಮಕ್ಕಳ exploitation ಮಾಡುವುದು ಹಾಗೂ ತಪ್ಪು ದಾರಿಗೆ ತೆಗೆದುಕೊಂಡು ಹೋಗುವುದು ಬಹಳಷ್ಟು ಇದೆ. ಈ ವಿಚಾರಗಳಲ್ಲಿ ಸುಧಾರಣೆಗಳನ್ನು ತರುವುದಕ್ಕೋಸ್ಕರ ಮಕ್ಕಳಿಗೆ, ಕುಟುಂಬವರಿಗೆ ಮತ್ತು ಎಲ್ಲರಿಗೂ ಜವಾಬ್ದಾರಿಯನ್ನು ಕೊಟ್ಟು ಒಳ್ಳೆಯ ಶಿಕ್ಷಣವನ್ನು ನೀಡಿ, ಇದನ್ನು ಕಾರ್ಯಗತ ಮಾಡಬೇಕಾಗುತ್ತದೆ. ಹದಿಹರೆಯದ ಮಕ್ಕಳಿಗೆ ಬೇಕಾದಷ್ಟು ತೊಂದರೆಗಳು ಬರುತ್ತವೆ; ಇವುಗಳನ್ನು ನಿವಾರಣೆ ಮಾಡುವುದಕ್ಕಾಗಿ ಸರ್ಕಾರ, ಸಮಾಜ ಮತ್ತು ತಂದೆ ತಾಯಿಗಳು, ಕುಟುಂಬದವರೆಲ್ಲೂ ಜವಾಬ್ದಾರಿಯನ್ನು ತೆಗೆದುಕೊಂಡು ಮಕ್ಕಳ ಭವಿಷ್ಯವನ್ನು ರೂಪಿಸಬೇಕಾಗುತ್ತದೆ ಎಂದು ಹೇಳಲಿಚ್ಛಿಸುತ್ತೇನೆ. ನಮಸ್ಕಾರ.

**೯) ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು(ಮುಖ್ಯ ಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ರ ಬೆಂಗಳೂರು ಅರಮನೆ(ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು(ಮುಖ್ಯ ಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಇದು ಅತ್ಯಂತ ವಿಸ್ತೃತವಾಗಿ ಚರ್ಚೆಯಾಗಿರುವಂತಹ ವಿಷಯವಾಗಿದೆ. ನಾನು ಸನ್ಮಾನ್ಯ ಸದಸ್ಯರುಗಳಿಗೆ ವಿನಂತಿ ಮಾಡುವುದೇನೆಂದರೆ, ಇದರ ಇತಿಹಾಸವನ್ನು ನಮ್ಮ ಈ legislation ಬಗ್ಗೆ ನಾವು ಏನು ಪೀಠಿಕೆಯನ್ನು ಬರೆದಿದ್ದೇವೆ, ಅದನ್ನು ತಾವು ದಯವಿಟ್ಟು ಗಂಭೀರವಾಗಿ ಗಮನಿಸಿದಿರಿ ಎಂದರೆ ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ 1996 ರಲ್ಲಿ ಇದರ ಕಾನೂನು ಆಯಿತು. ಬಹುಶಃ ತಮಗೆ ನೆನಪಿರಬಹುದು, ಅಂದು ನಮ್ಮ ಜೊತೆಯಲ್ಲಿ ಇದ್ದವರು, ಈ ಸದನದಲ್ಲಿ ಮತ್ತೆ ಯಾರು ಇಲ್ಲ. ತಾವು ಮತ್ತು ನಾನು ಇಬ್ಬರು ಇದ್ದೆವು. ಕೆಳಮನೆಯಲ್ಲಿ ಇದರ ಬಗ್ಗೆ ಚರ್ಚೆಯಾಗುವಾಗ ಕೆಲವು ಮುಜುಗರಗಳನ್ನು ಕೆಲವು ಶಾಸಕರುಗಳು ಅನುಭವಿಸುತ್ತಿದ್ದರು. ಹಲವಾರು ಕಾರಣಗಳಿಂದ ಒಂದು ರೀತಿಯ ಭಾವನಾತ್ಮಕ ಕಾರಣಗಳಿಂದ ಅಂದಿನ ಗಣರಾಜ್ಯ, ಪ್ರಜಾರಾಜ್ಯ ರಾಜರ ಆಸ್ತಿಗಳಲ್ಲ, ಪ್ರಜೆಗಳ ಆಸ್ತಿ ಎಂದು ಹೇಳಿ ಬಹಳ ಎತ್ತರದ ಧ್ವನಿಯಲ್ಲಿ ಶ್ರೀಮಾನ್ ಜೆ.ಹೆಚ್. ಪಟೇಲ್‌ರವರ ನೇತೃತ್ವದ ಸರ್ಕಾರದಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿದ್ದಂತಹ ಸನ್ಮಾನ್ಯ ಎಂ.ಸಿ. ನಾಣಯ್ಯನವರು ಈ ಬಿಲ್ ಅನ್ನು ಇಲ್ಲಿ ಮಂಡಿಸಿದ್ದರು. 1996 ರಲ್ಲಿ ಆಗಿರುವಂತಹ ಕಾನೂನು ಇದಾಗಿದೆ. ಆ ಬಿಲ್‌ನ ಮೂಲಕ, ಆ ಕಾನೂನಿನ ಮೂಲಕ ನಾವು ಅರಮನೆಯ

472 ಎಕರೆಗಳು ಮತ್ತು 16 ಗುಂಟೆಗಳ ಪ್ರದೇಶವನ್ನು ಸರ್ಕಾರ ಆರ್ಜನೆ ಮಾಡಿಕೊಂಡಿದೆ. ಅಂದು ಅದಕ್ಕೆ ಮೌಲ್ಯವನ್ನು ಸಹಿತ ಸರ್ಕಾರ ನಿರ್ಧರಿಸಿತು. ಅದು 11 ಕೋಟಿ ರೂಪಾಯಿಗಳು ಎಂದು ಹೇಳಿ ನಿಗದಿ ಮಾಡಿತು. ಆ ಕಾನೂನು ಪಾಸಾಯಿತು, ಎಲ್ಲಾ assent ಆಯಿತು, ಎಲ್ಲವೂ ಆಯಿತು. ಆದಾದಮೇಲೆ ಅರಮನೆ ಪ್ರದೇಶದ ವಾರಸುದಾರರು ಹೈಕೋರ್ಟ್‌ಗೆ ಹೋದರು. ಇದನ್ನು ಕಾನೂನು ಮಾಡಲಿಕ್ಕೆ ಬರುವುದಿಲ್ಲ. ಸರ್ಕಾರದ ನೀತಿ ಸರಿಯಾದುದು ಅಲ್ಲ, ಇದು ನಮಗೆ ಖಾಸಗಿಗೆ ಬಿಟ್ಟುಕೊಡಬೇಕು, ಮೌಲ್ಯ ಸರಿಯಿಲ್ಲ ಎಂದು ಹೇಳಿ ಹೈಕೋರ್ಟ್‌ಗೆ ಹೋದರು. ಹೈಕೋರ್ಟ್‌ನಲ್ಲಿ ಸರ್ಕಾರ ಮಾಡಿದ್ದು ಸರಿ ಇದೆ, ಅದರ ಇತಿಮಿತಿಯೊಳಗೆ ಅವರಿಗೆ ಆ ಒಂದು ಅಧಿಕಾರ ಇದೆ. ಅದನ್ನು ಮಾಡಿದ್ದನ್ನು ಎತ್ತಿ ಹಿಡಿಯಿತು. The Hon'ble High Court upheld the law that was enacted by our both Houses. ಆದಾದ ಮೇಲೆ ಅವರು ಸುಪ್ರೀಂ ಕೋರ್ಟ್‌ಗೆ ಹೋದರು. ಅಲ್ಲಿ ಒಂದು ಹಂತದಲ್ಲಿ ಅವರನ್ನು ಕೇಳಿದರು. The Hon'ble Supreme Court did not stay the Act, But it ordered 'status quo'. 1996 ರಿಂದ ಸರ್ಕಾರದ ಒಂದಿಷ್ಟು ಮೌಲ್ಯಯುತವಾಗಿರುವಂತಹ ಜಮೀನು, ಆಸ್ತಿ. ಸಾರ್ವಜನಕರಿಗೆ ಅತ್ಯಂತ ಉಪಯುಕ್ತವಾಗಿರುವಂತಹದ್ದು ಸುಮಾರು 28 ವರ್ಷಗಳಿಂದ ಸುಪ್ರೀಂ ಕೋರ್ಟ್‌ನಲ್ಲಿ ಹೇಗೆ ಇತ್ತೋ ಹಾಗೆಯೇ ಇದೆ. ನಾವು ಸರ್ಕಾರದವರು ನೋಡಿ, ಅರಮನೆ ಪರವಾಗಿದೆ. ಅಲ್ಲೊಂದು, ಇಲ್ಲೊಂದು ಕಟ್ಟಡಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ, ಅದಕ್ಕೆ ಅವರ ಮೇಲೆ contempt ಮಾಡಬೇಕೆಂದು ಹೇಳಿ, 'Contempt Petition' ಹಾಕಿದರು. Even our Contempt Petition is before the Hon'ble Supreme Court.

**(ಮುಂದು)**

(172) 10.03.2025 04.10 ಎಸ್‌ವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ಕೆ.ಪಾಟೀಲ್ (ಮುಂದು):-**

ಏತನ್ಮಧ್ಯೆ, ನಮ್ಮ ರಾಜ್ಯ ಸರ್ಕಾರದ ಆಡಳಿತದ ಹಿಂದಿನ ಸರ್ಕಾರದವರು ಒಂದು ರಸ್ತೆಯನ್ನು ಅಲ್ಲಿ ಮಾಡಬೇಕು, flyover ಅನ್ನು ಮಾಡಬೇಕು. ಅದಕ್ಕಾಗಿ ಆ ಅರಮನೆಯ ಭೂಮಿ ನಮಗೆ ಬೇಕಾಗುತ್ತದೆ ಎಂದು ಹೇಳಿ ಅದನ್ನು ತೆಗೆದುಕೊಳ್ಳಲು ಆಲೋಚನೆ ಮಾಡಿದರು. ಆಲೋಚನೆ ಮಾಡಿದ ತಕ್ಷಣ ಅವರು ಸುಪ್ರೀಂ ಕೋರ್ಟ್‌ಗೆ ಹೋದರು. ಸುಪ್ರೀಂ ಕೋರ್ಟ್‌ನವರು ಇಷ್ಟು ದುಡ್ಡು ಕೊಡಬೇಕಾಗುತ್ತದೆ ಎಂದು ಹೇಳಿದರು. ಆಮೇಲೆ ಅಷ್ಟು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಅಂತಿಮವಾಗಿ ನಮ್ಮ ಅಧಿಕಾರಿಗಳು internal notes ಗಳಲ್ಲಿನ ಬೆಲೆಯನ್ನು

ಏನು ನಿಗದಿ ಪಡಿಸಲಾಗಿರುತ್ತದೆ. ಆ ನಿಗದಿ ಪಡಿಸಿರುವಂಥದ್ದನ್ನು ಇಷ್ಟು ಆಗಬಹುದು, ನಿಮಗೆ ಹಣ ಕೊಡಲಿಕ್ಕಾಗಲಿಲ್ಲ ಎಂದರೆ TDR (Transferable Development Rights) ಕೊಡಿ, ಟಿಡಿಆರ್‌ಗಾಗಿ 1,400 ಕೋಟಿ ರೂಪಾಯಿಗಳನ್ನು ಕೊಡಬಹುದು ಎಂದು ಹೇಳಿ ನಿಮ್ಮ ಕಡತಗಳಲ್ಲಿಯೇ ಇದೆ, ನಿಮ್ಮ ಅಧಿಕಾರಿಗಳೇ ಹೇಳಿದ್ದಾರೆ ಎಂದು ಕೋರ್ಟ್‌ನಲ್ಲಿ ಅದು ದೊಡ್ಡ ವ್ಯಾಜ್ಯವಾಯಿತು. ಸುಪ್ರೀಂ ಕೋರ್ಟ್‌ನವರು ನೀವು ಅದನ್ನು ರಸ್ತೆ ಮಾಡುತ್ತೇವೆಂದು ಹೇಳಿದ್ದೀರಿ. ಆ ರಸ್ತೆಯನ್ನು ಮಾಡಿ; ಅವರಿಗೆ ರೂ.1,400 ಕೋಟಿಗಳು ಎನ್ನುವ ಲೆಕ್ಕಾಚಾರದ ಪ್ರಕಾರ ರೂ.3,000 ಕೋಟಿಗಳಷ್ಟು TDR ಕೊಡಿ ಎಂದು ಸೂಚನೆಯನ್ನು ಕೊಟ್ಟರು. ಅದಕ್ಕೆ ನಾವು ಒಪ್ಪಲಿಲ್ಲ. ಕೇವಲ ನಾವು ಒಪ್ಪಲಿಲ್ಲವಷ್ಟೇ ಅಲ್ಲ, ನಿಮ್ಮ ಸರ್ಕಾರ ಇದ್ದಾಗಲೂ ನೀವೂ ಅದಕ್ಕೆ ಒಪ್ಪಲಿಲ್ಲ. 'We will not go ahead with the project', ಎಂದು ನಿಮ್ಮ ಸರ್ಕಾರವು ಸಹ ಹೇಳಿತ್ತು. ನಾವು ಇದು ಸಾಧ್ಯವೇ ಇಲ್ಲ ಎಂದು ಹೇಳಿದೆವು. ಸರ್ಕಾರಗಳಾಗಿ ಇವತ್ತು ಸುಪ್ರೀಂ ಕೋರ್ಟ್‌ನಲ್ಲಿ ಇಂತಹ ದೊಡ್ಡ ಪ್ರಕರಣಗಳಲ್ಲಿ ಏನೇನು ಬಡಿದಾಡಬೇಕಾಗಿ ಬರುತ್ತದೆ. What types of litigation we are facing as both the Government and the State? I will just read the first paragraph of the ***'THE BANGALORE PALACE (UTILIZATION AND REGULATION OF LAND) BILL, 2025',*** which reads as follows;

> *"A Bill to determine the utilization and regulation of land of the Bangalore Palace which has been acquired under the Bangalore Palace (Acquisition and Transfer) Act, 1996 (Karnataka Act 18 of 1996) and under which the land relating to the Bangalore Palace now vests with the State of Karnataka;…."*

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಭೋಜೇಗೌಡರು ಮತ್ತು ಶ್ರೀ ಶರವಣ ಅವರು ತಮಗೆ ಕನ್ನಡದ ಬಿಲ್ ಪ್ರತಿ ಕೊಟ್ಟು ಇಂಗ್ಲಿಷ್‌ನಲ್ಲಿ ಓದುತ್ತಿದ್ದೀರಿ ಎಂದು ತಮ್ಮ ಸ್ಥಾನದಲ್ಲಿ ಕುಳಿತು ಹೇಳಿದರು)**

ತಾವು ವಕೀಲರು, ಇಂಗ್ಲಿಷ್‌ನಲ್ಲಿ ಹೇಳಿದರೆ ತಕ್ಷಣ ಅರ್ಥವಾಗುತ್ತದೆ ನಿಮಗೆ ಕನ್ನಡದಲ್ಲಿ ಬೇಕಾದರೆ ಓದುತ್ತೇನೆ. 'Vests' ಎನ್ನುವುದನ್ನು ಕನ್ನಡದಲ್ಲಿ ಹೇಳಬೇಕಾದರೆ ಮತ್ತೆ ನಾವು explanation ಕೊಡಬೇಕಾಗುತ್ತದೆ. 'The property vests with me' ಅಂದರೆ, it does not require any explanation.

ಆದ್ದರಿಂದ ನಾನು ಇಷ್ಟೇ ಹೇಳಬಯಸುತ್ತೇನೆ. ಈ ಜಮೀನು ತೋಟಗಾರಿಕೆ, ಸಂಗ್ರಹಾಲಯ, ಸಸ್ಯ ಸಂಗ್ರಹಾಲಯ, ಉದ್ಯಾನ ಮತ್ತು ವೃಕ್ಷೋದ್ಯಾನವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಉಪಯೋಗ ಮಾಡಬೇಕು ಎನ್ನುವುದಕ್ಕಾಗಿ ನಾವು ಬಹಳ ವಿಸ್ತೃತವಾಗಿ ಚರ್ಚೆ ಮಾಡಿದ್ದೇವೆ. ಅದಕ್ಕೆ ಈ ಸಂದರ್ಭದಲ್ಲಿ ಹೋಗುವುದಿಲ್ಲ. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಸರ್ಕಾರ ಈ ಬೆಲೆಯಿಂದ ಅಂದರೆ, about Rs. 3000 crore TDR for 15 acres of land ಕೊಡಿ ಎಂದು ಸುಪ್ರೀಂ ಕೋರ್ಟ್‌ನವರು ಒಂದು ಸಲಹೆಯನ್ನು ಕೊಡುತ್ತಿದ್ದಾರೆ. ಅದು ನಮ್ಮಿಂದ ಸಾಧ್ಯವಾಗುವುದಿಲ್ಲ. We will not be able to give this much money.

**(ಈ ಹಂತದಲ್ಲಿ ಮಾನ್ಯ ಸಿ.ಟಿ.ರವಿಯವರು ತಮ್ಮ ಸ್ಥಾನದಲ್ಲಿ ಕುಳಿತುಕೊಂಡು Guidance Value ಎಷ್ಟು ಎಂದು ಕೇಳಿದರು)**

Hon'ble Member, I will come to that point. Whatever the guidance value may be, Mr. Ravi, you are aware of that, ಉದ್ಯಾನವನ, ಸಸ್ಯ ಸಂಗ್ರಹಾಲಯ, ಸಸ್ಯೋದ್ಯಾನ ಇವುಗಳಿಗೆ guidance value ಇದೆಯೇ? Is there any guidance value for this? Indeed, these are the questions asked by the lawyers who are pleading against us, and even the Courts may be asking these questions. These are the type of questions that are now coming before the public domain.

ಮಾನ್ಯ ಶರವಣ ಅವರೆ, ಬಂಗಾರಕ್ಕೆ ಒಂದು ತೊಲೆಗೆ ರೂ.89,000 ಬದಲು ರೂ.8 ಲಕ್ಷ ಕೊಡುವಂತೆ ಹೇಳಿದರೆ ಯಾರಾದರೂ ಕೊಡುವುದಕ್ಕಾಗುತ್ತದೆಯೇ? ಈಗ ನಡೆದಿರುವ ಲೆಕ್ಕಾಚಾರದ ಪ್ರಕಾರ Rs. 200 crore per acre ಎಂದಿದೆ. Hypothetically, ನಿಮ್ಮ ಸರ್ಕಾರ ಒಪ್ಪಿಬಿಟ್ಟಿತ್ತು ಅಥವಾ ಅದೇ ರೀತಿಯಾದ ಸನ್ನಿವೇಶ ಇದ್ದು ನಾವು ಒಪ್ಪಿಬಿಟ್ಟಿದ್ದೇವೆಂದು ತಿಳಿದುಕೊಳ್ಳಿ, ಇದನ್ನು ಸುಮ್ಮನೆ ಬಿಡುತ್ತಾರೇನು? ಮುಂದೆ ಯಾರು ಯಾರು ಜಾಗ ಹೋಗುತ್ತದೆಯೋ ಅವರು ಈ ಬೆಲೆಗೆ ಕೇಳುತ್ತಾರೆ. ಈ ಬೆಲೆ ಕೇಳಿದರೆ ಯಾವುದೇ ಸರ್ಕಾರ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ? ಬೆಂಗಳೂರನ್ನು ಅಭಿವೃದ್ಧಿ ಮಾಡುವುದಕ್ಕಾಗುತ್ತದೆಯೇ? ಕರ್ನಾಟಕವನ್ನು ಅಭಿವೃದ್ಧಿ

ಮಾಡುವುದಕ್ಕಾಗುತ್ತದೆಯೇ? ಒಂದು ಎಕರೆಗೆ ರೂ.200 ಕೋಟಿ ಕೊಟ್ಟರಿ ಎಂದರೆ ನಾಳೆ ನಮ್ಮ ಆಲಮಟ್ಟಿಯ ಮುಳುಗಡೆ ಸಂತ್ರಸ್ತರು ಅವರ ಬೆಲೆ ರೂ.50 ಲಕ್ಷ ತಗೋಬೇಕೊ, ರೂ.20 ಲಕ್ಷ ತಗೊಬೇಕೊ, ರೂ. 25 ಲಕ್ಷ ತಗೊಬೇಕೊ ಎಕರೆಗೆ ಯಾವ ಮಾನದಂಡದಲ್ಲಿ ನೀವು ಹೋಗುತ್ತೀರಿ? The development will come to a grinding halt. ನಮಗೆ ಏನು ಕೇಳುತ್ತಾರೆಂದರೆ ಮೊದಲು ಏಕೆ ಮಾಡುತ್ತೀವೆಂದಿರಿ, ಈಗ ಏಕೆ ಮಾಡುವುದಿಲ್ಲ. ಹೌದು, ಮಾಡುತ್ತೇವೆನ್ನುವ ಆಲೋಚನೆ ಇತ್ತು. ಆ ಆಲೋಚನೆ ಪ್ರಕ್ರಿಯೆಯೊಳಗೆ ಬದಲಾವಣೆ ಬೇಡವೆ? ಅದಕ್ಕಾಗಿ Contempt Petition ಅಸ್ತ್ರನೂ ಬಂದಿತು. ಆ Contempt Petition ಅಸ್ತ್ರ purge ಮಾಡಬೇಕು. ಜನರ ಹಿತ ಕಾಪಾಡಬೇಕು. ನಮಗೆ ಬೇಕಾದಷ್ಟು ನಾವು ರೋಡ್ ಮಾಡಿಕೊಳ್ಳಬೇಕು. ನಮಗೆ ಬೇಕಾದರೆ ಮಾಡಬೇಕು, ಬೇಡವಾದರೆ ಬಿಡಬೇಕು. ಇಷ್ಟು ಬೆಲೆಯನ್ನು ನಾವು ಕೊಡುವುದಕ್ಕೆ ಸಾಧ್ಯವಿಲ್ಲ. ಇದನ್ನು ಕೋರ್ಟ್‌ಗೆ ತಿಳಿಸಲೇಬೇಕು. ಇದೆಲ್ಲಾ ಆಗಬೇಕು ಎಂದರೆ ನಾವು ನಮ್ಮ ಎರಡೂ ಸದನಗಳ ಮೂಲಕ ಸರ್ಕಾರ ಈ ಒಂದು ordinance ಅನ್ನು ಮಾಡಿದ್ದು, ಅದನ್ನು ಈಗಾಗಲೇ present ಮಾಡಿದ್ದೇವೆ. Ordinance replacement Bill ಅನ್ನು ತಮ್ಮೆದುರಿಗೆ ತಂದಿದ್ದೇವೆ. ಈ ಒಂದು ಬಿಲ್ ಅನ್ನು approve ಮಾಡಿ ಸರ್ಕಾರಕ್ಕೆ ಸುಪ್ರೀಂ ಕೋರ್ಟ್‌ನಲ್ಲಿ ಇರಬಹುದು, ಮತ್ತೊಂದು ಕಡೆ ಇರಬಹುದು; ಅನುಕೂಲ ಮತ್ತು ಬಲ ಕೊಡುವುದರ ಜೊತೆಗೆ ಸಾರ್ವಜನಿಕ ಆಸ್ತಿಯನ್ನು ಅದರ ಬೆಲೆಗಿಂತ ಹೆಚ್ಚು ಯಾವ ಕಾರಣಕ್ಕೂ ಯಾವ ಕಾಲದಲ್ಲೂ ಹೋಗಕೂಡದು. For what reason, can a poor State like Karnataka afford to give Rs. 200 crore per acre? Suppose if we give Rs. 200 crore per acre, this road will be the costliest road in the World. ಮುಂಬೈನ ಹೋಟೆಲ್ ಒಬೆರಾಯ್ ಪಕ್ಕದ ಜಮೀನಿಗೂ ಇಷ್ಟು ಕಿಮ್ಮತ್ತಿಲ್ಲ. ಅದನ್ನು ಕೊಡುವುದು ಸಾಧ್ಯವಿಲ್ಲ. ಸರ್ಕಾರಕ್ಕೆ ಬಲ ತುಂಬಿಸುವುದಕ್ಕೆಂದು ಈ ಕಾನೂನನ್ನು ಮಾಡಿಕೊಡಬೇಕು. ಕೆಳಮನೆಯೊಳಗೂ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಚರ್ಚೆಯ ನಂತರ ಸಹಕರಿಸಿದ್ದಾರೆ. ತಾವೂ ಈ ಕಾನೂನನ್ನು ಮಾಡಿಕೊಡಬೇಕು ಎಂದು ತಮ್ಮಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕ 2025ರ ಬಗ್ಗೆ ಕೆಳಮನೆಯಲ್ಲಿ ನಡೆದಂತಹ discussion ಬಗ್ಗೆ ಮತ್ತು ಕೋರ್ಟ್‌ನಲ್ಲಿ pending ಇರುವಂತಹ ವಿಚಾರ ಮತ್ತು it is the suggestion of the Court ಎಂದು

ನೀವು ಹೇಳಿದಿರಿ. ತಾವು ಹೇಳಿದ ಹಾಗೆ ನನಗೆ ಜ್ಞಾಪಕವಿದೆ. It is not the Court's order. ಇದು suggestion ಎಂದು ಹೇಳಿದಿರಿ. **(ಮುಂದು)**

(173) 10-03-2025/4.20/ಎಂವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):-**

ಇಂತಹ ಒಂದು ಸಂದರ್ಭದಲ್ಲಿ ಯಾವುದೇ ವಿಧೇಯಕಗಳು ಸಾರ್ವಜನಿಕವಾಗಿ ಹೊರಗಡೆ ಬರಬೇಕಾದರೆ, ಅದು ಸಾರ್ವಜನಿಕವಾಗಿ ಉಪಯೋಗಕ್ಕೆ ಬರಬೇಕೆಂದು, ಅದನ್ನು ಬೇಕಾದಷ್ಟು ಬಾರಿ we can amend the Constitution also. The Constitution of India has been amended more than 100 times. ಇಂತಹ ವಿಧೇಯಕಗಳು ಬರುವಾಗ, ಅದು ಚರ್ಚೆಯಾಗದೇ ಹೊರಗಡೆಗೆ ಹೋಗಬಾರದು. ಇದರ ಬಗ್ಗೆ ಚರ್ಚೆ ಅಗಲೇಬೇಕು. ಆ ಚರ್ಚೆ ಆರೋಗ್ಯಪೂರ್ಣವಾಗಿ ಇರಬೇಕು ಎನ್ನುವುದು ಇಲ್ಲಿರತಕ್ಕಂತಹ ಎಲ್ಲಾ legislators ಗಳ ಅಭಿಪ್ರಾಯ. ಅದರ ಜೊತೆಗೆ ಇಂತಹ ವಿಧೇಯಕಗಳನ್ನು ತರುವಾಗ, ನೂರಕ್ಕೆ ನೂರರಷ್ಟು ಸಾರ್ವಜನಿಕ ಹಿತದೃಷ್ಟಿಯಿಂದ ತರಬೇಕಾದಂಥದ್ದು ನಮ್ಮೆಲ್ಲರ ಕರ್ತವ್ಯ ಮತ್ತು ಧರ್ಮ ಕೂಡ ಇದೆ. It is a constitution. ಅಂತಹ ಸಂದರ್ಭದಲ್ಲಿ ಬಹಳ ಗಹನವಾದ ವಿಚಾರ ಇಲ್ಲಿ ಚರ್ಚೆಯಾಗುವಂತಹ ಸಂದರ್ಭದಲ್ಲಿ ಇದು ಯಾರಿಗೆ ಸಂಬಂಧಪಟ್ಟಂತಹ ಜಮೀನು? ಮತ್ತೆ ಸರ್ಕಾರದ ನಡುವೆ ಇರತಕ್ಕಂತಹ ಸಂಬಂಧ, ಇವೆಲ್ಲವನ್ನೂ ಕೂಡ ನಾವು ಮಾತನಾಡಬೇಕಾಗುತ್ತದೆ. ಇಲ್ಲಿ ಎಲ್ಲೋ ಒಂದು ಕಡೆ ಅನೇಕ ವರ್ಷಗಳ ಕಾಲ ನಮ್ಮನ್ನು ಆಳಿದ ಮಹಾರಾಜರಿಗೆ ಸಂಬಂಧಪಟ್ಟಂತಹ ವಿಚಾರವಿರುವುದರಿಂದ, sentimental ವಿಚಾರ ಕೂಡ ಬರುತ್ತದೆ. ಸಂಬಂಧಗಳು ಬೇಕಾಗುತ್ತವೆ. ನಾನು ಅನೇಕ ಬಾರಿ ಹೇಳಿದ್ದೇನೆ. ಈಗ ಸಂಬಂಧಗಳು ಉಳಿಯದೇ ಇದ್ದರೆ, ಏನೂ ಉಳಿಯುವುದೇ ಇಲ್ಲವೆಂದು. ಕೆಲವು ಬಾರಿ ಸಂಬಂಧಗಳ ಅಡಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಕೆಲವು ಬಾರಿ ಸಂಬಂಧಗಳನ್ನು ಮೀರಿ ಕೆಲಸ ಮಾಡಬೇಕಾಗುತ್ತದೆ. ಅಂತಹ ಸಂದರ್ಭ ಬಂದಾಗ, ಆಯಾ ಕಾಲಕ್ಕೆ ತಕ್ಕಂತೆ ನ್ಯಾಯಯುತವಾದ ಮತ್ತು ಸಾರ್ವಜನಿಕವಾಗಿ ಒಪ್ಪುವ ರೀತಿಯಲ್ಲಿ ನಾವು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲಿ ಯಾರ prestige ಕೂಡ ಇಲ್ಲ. ಈ ನಾಡಿಗೆ ಮಹಾರಾಜರ ಕೊಡುಗೆಯನ್ನು, it cannot be explained in words. ಅಂತಹ ಬಹುದೊಡ್ಡ ಕಾಣಿಕೆಯನ್ನು ನಮ್ಮ ನಾಡಿಗೆ ಕೊಟ್ಟಿದ್ದಾರೆ. ನಾವು ಸದನದಲ್ಲಿ ಮಹಾರಾಜರ ಫೋಟೋವನ್ನು ಸಹ ಹಾಕಿಕೊಂಡಿದ್ದೇವೆ. ಇಲ್ಲಿ ಮಹಾರಾಜರ ಫೋಟೋ ರಾರಾಜಿಸುತ್ತಿದೆ. ಬೆಳಗ್ಗೆ ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರು ಮಾತನಾಡುವಾಗ ಮಾನ್ಯ ಶಿಕ್ಷಣ

ಸಚಿವರಿಗೆ ಏನು ಹೇಳಿದರು ಎಂದರೆ, ಮಹಾರಾಜರು ಮಾಡಿದಂತಹ ಕೆಲಸಗಳು ಮತ್ತು ವಿಚಾರಧಾರೆಗಳನ್ನು ನಮ್ಮ ಮುಂದಿನ ಪೀಳಿಗೆಗೆ ಅವರು ಕೊಟ್ಟಂತಹ ಕೊಡುಗೆಗಳನ್ನು ಪಠ್ಯಪುಸ್ತಕಗಳಲ್ಲಿ ಮಕ್ಕಳಿಗೆ ಓದಿಸುವ ಮುಖಾಂತರ ಅದೆಲ್ಲವನ್ನು ಗಮನಕ್ಕೆ ತರಬೇಕೆಂದು ತಿಳಿಸಿದರು. ನಾವು ಒಂದು ಕಡೆ ಈ ರೀತಿ ಮಾತನಾಡುತ್ತೇವೆ. ಮತ್ತೊಂದು ಕಡೆ ಅದೇ ಕುಟುಂಬದ ವಿಚಾರ ಬಂದಾಗ, ಬಹಳಷ್ಟು ಸಾರ್ವಜನಿಕವಾಗಿ ಮಾತನಾಡಿರತಕ್ಕಂಥದ್ದು. ಸಾರ್ವಜನಿಕರು ಇಲ್ಲಿ ಯಾವುದೋ government politics ಏನೂ ಇಲ್ಲ. ಮಹಾರಾಜರ property ಮೇಲೆ ಊರುಸೀಮೆಯ ಯಾರ್‍ಯಾರೋ ಒಂದೊಂದು ಪೆಂಡಾಲ್ ಹಾಕಿಕೊಂಡು ಅವರಿಗೆ ದೌಡಿಗೆ ಮಾಡಿಕೊಂಡು ಬಾಡಿಗೆ ಪಡೆಯುತ್ತಿದ್ದಾರೆ. ಅದು ಮಹಾರಾಜರಿಗೆ ಸರಿಯಾಗಿ ಸಿಗುತ್ತದೆಯೋ ಇಲ್ಲವೋ ಎಂದು ಸಾರ್ವಜನಿಕರು ಮಾತನಾಡುತ್ತಾರೆ. ಈಗ ಹೇಳಬೇಕೆಂದರೆ, ಅವರಿಗೆ ಶೇಕಡಾ 5ರಷ್ಟು ಸಹ ಸಿಗುತ್ತಿಲ್ಲ. ಈಗ ಏನೇನು ಆಗುತ್ತದೆ. ಆ ವಿಷಯ ಬಿಟ್ಟುಬಿಡಿ. ಸಾರ್ವಜನಿಕವಾಗಿ ಕೆಲವರು ರೌಡಿಸಂ ಮತ್ತೊಂದು ಮಾಡಿ, ಅದನ್ನು occupy ಮಾಡಿಕೊಂಡಂತಹವರು ಅದರೊಳಗಡೆ ನೂರಾರು ಜನರು ಇದ್ದಾರೆ. I am not going to blame any Government. Neither the present Government, nor the previous Government. ಅದರಲ್ಲಿ ಎಲ್ಲರದೂ ಪಾತ್ರವಿದೆ. ಹಾಗಾಗಿ, ಅವರೆಲ್ಲರನ್ನೂ ಸಹ forthwith vacate ಮಾಡಿಸುವುದಕ್ಕೆ ಸರ್ಕಾರ ಮನಸ್ಸು ಮಾಡಿ, ಇದು ಮಹಾರಾಜರದ್ದು, ನಮಗೆ ಮಹಾರಾಜರ ಕೊಡುಗೆ ವಿಶ್ವೇಶ್ವರಯ್ಯ ಐರನ್ ಮತ್ತು ಸ್ಟೀಲ್ ಕಾರ್ಖಾನೆ, ಕಾಗದ ಕಾರ್ಖಾನೆ, ಕನ್ನಂಬಾಡಿ ಅಣೆಕಟ್ಟು, ಸೂಳೆ ಕೆರೆ, ಶಿವನಸಮುದ್ರ ಮತ್ತು ಜೋಗ್‌ಫಾಲ್ಸ್ ಇಂತಹ ಅನೇಕ ಸಮಾಜಮುಖಿಯಾಗಿ ಕೆಲಸ ಮಾಡಿರತಕ್ಕಂತಹ ಮಹಾರಾಜರಿಗೆ ನಾವು ರಕ್ಷಣೆಯಾಗಿ ನಿಲ್ಲಬೇಕು ಎನ್ನುವಂಥದ್ದರಲ್ಲಿ ನಮ್ಮ ಧರ್ಮವಿದೆ. If it is not the order and it is only a suggestion of the Supreme Court, then why have you not approached the court to convince regarding the price? ಇದರ ಬೆಲೆ ಅಷ್ಟಿಲ್ಲ, ಇಷ್ಟಿಲ್ಲವೆಂದು ಏಕೆ convince ಮಾಡುವುದಕ್ಕೆ ಆಗಿಲ್ಲ? You please try for that. Suppose, if you fail there, then you come for the final decision. ಇದು final ಆಗಿಲ್ಲವಲ್ಲ? ಆ ರೀತಿ ಏನೂ ಆಗಿಲ್ಲವಲ್ಲ? ಕೋರ್ಟ್‌ಗೆ convince ಮಾಡುವ ಪ್ರಯತ್ನ ಮಾಡಬೇಕು. ಅಂದರೆ, ಕೋರ್ಟ್‌ಗೆ ಆ ರೀತಿ ಇದೆ ಮತ್ತು ಈ ರೀತಿ ಇಲ್ಲವೆಂದು. ಆದರೆ, ಇದು ನನಗೆ ಗೊತ್ತಿಲ್ಲ. I hail from Chikkamagaluru district. Born and bought up in a village. ನಾನು ಇನ್ನೂ ಅಲ್ಲೇ ಇದ್ದೇನೆ. ವಸಂತನಗರದಲ್ಲಿ ನನ್ನದೊಂದು ಸಣ್ಣ ಮನೆ ಇದೆ. ಈಗ ಸದಾಶಿವನಗರದಲ್ಲಿ ಒಂದು ಅಡಿ ಜಾಗಕ್ಕೆ

ರೂ.50,000/- ಇದೆ ಎಂಬುದನ್ನು ಕೇಳಿದ್ದೇನೆ. ಇಂತಹ ವಿಷಯಗಳನ್ನು ಕೋರ್ಟ್‌ನ ಗಮನಕ್ಕೆ ತಂದಿರಬಹುದು. ಒಂದು ಎಕರೆಗೆ 200 ಕೋಟಿ ರೂಪಾಯಿ ಹೇಗೆ ಆಯಿತು ಎಂದು ಕೇಳಿದಾಗ, ಸದಾಶಿವನಗರದಲ್ಲಿ ಒಂದು ಅಡಿಗೆ ಜಾಗಕ್ಕೆ ರೂ.50,000/- ಇದೆ ಎಂಬುದನ್ನು ಸದಾಶಿವನಗರದಲ್ಲಿ ಮನೆ ಇರುವಂತಹವರು ಅದನ್ನು ಹೇಳಬೇಕು. ಮಾನ್ಯ ಸಚಿವರಾದ ಶ್ರೀ ಎಂ.ಬಿ.ಪಾಟೀಲ್‌ರವರ ಮನೆ ಇದೆ. ಅವರು ಅದನ್ನು ಹೇಳಬೇಕಾಗುತ್ತದೆ. ಅಲ್ಲಿ ಅಷ್ಟು ಇರುವುದು ಸತ್ಯ. ಈಗ ಇಂದಿರಾನಗರದಲ್ಲಿ ಒಂದು ಅಡಿ ಜಾಗಕ್ಕೆ ರೂ.50,000/- ಇದೆ ಎಂದು ಕೇಳಿದ್ದೇನೆ. ಈಗ ಒಂದು ಅಡಿ ಜಾಗಕ್ಕೆ ರೂ.50,000/- ಎಂದು ಹೇಳಿದರೆ, ಒಂದು ಎಕರೆ ಎಂದು ಹೇಳಿದಾಗ, ಅಲ್ಲಿ ಅದಕ್ಕೆ 200 ಕೋಟಿ ರೂಪಾಯಿ ಆಗಿಯೇ ಆಗುತ್ತದೆ. ಅದನ್ನು convince ಮಾಡಿ, ಅದರ ಜೊತೆಗೆ ಆ ಕುಟುಂಬದ ಜೊತೆಯಲ್ಲಿಯೂ ಸಹ ಒಂದು ಸಭೆಯನ್ನು ಮಾಡಲಿ. ಇದರಿಂದ ಏನೂ ತಪ್ಪಿಲ್ಲ. ಇದಕ್ಕೆ ಸಭೆ ಮಾಡಿ, this Bill has been bought particularly for this land. ಇದು ಒಂದು ಲ್ಯಾಂಡ್‌ಗೆ ಎಂದು ಹೇಳುವಾಗ, ಎಲ್ಲೋ ಒಂದು ಕಡೆಯಲ್ಲಿ ನೋವಾಗುತ್ತದೆ. ಮತ್ತೆ ಎಲ್ಲೋ ಒಂದು ಕಡೆ prick ಆಗುತ್ತದೆ. ನಾವು ಈ ಸಮಯದಲ್ಲಿ ಮಹಾರಾಜರಂತಹವರ ಸಹಾಯಕ್ಕೆ ನಿಲ್ಲಬೇಕು. ಆ ಸಹಾಯಕ್ಕೆ ನಿಲ್ಲುವಂತಹ ಸಂದರ್ಭದಲ್ಲಿ ಇಂತಹ ವಿಧೇಯಕವನ್ನು ತಂದು, ಇದನ್ನು ಮಾಡುವಂಥದ್ದು ಏನೂ ದೊಡ್ಡ ವಿಚಾರವಲ್ಲ. ಸರ್ಕಾರದಲ್ಲಿ ಬಹುಮತವಿರುವುದರಿಂದ ವಿಧೇಯಕ ಪಾಸ್ ಆಗಿ ಹೋಗುತ್ತದೆ ಎಂಬುದು ವಿಚಾರವಲ್ಲ. ಆದರೆ, ಇಂತಹ ಒಂದು ಕೆಲಸ ಈ ಸರ್ಕಾರದಲ್ಲಿ ಆಯಿತು, ಇನ್ನು ಕಾಲಕಾಲಕ್ಕೆ ನಮ್ಮ ಮುಂದಿನ ಪೀಳಿಗೆಯವರು ಮಾತನಾಡತಕ್ಕಂಥದ್ದು ಬರುತ್ತದೆ. ಹಾಗಾಗಿ, ಇಂತಹ ವಿಧೇಯಕಗಳನ್ನು ತರುವಂಥದ್ದು ಸಹಜವಾದ ಕ್ರಿಯೆ. ಮತ್ತೆ ಸಾರ್ವಜನಿಕ ಹಿತದೃಷ್ಟಿಯಿಂದ ನೂರಕ್ಕೆ ನೂರು ಉಪಯೋಗ ಆಗುತ್ತದೆ. Rs.3,000 crore is a big amount. ಅದರಲ್ಲಿ ಎರಡು ಮಾತಿಲ್ಲ. ಆ 3,000/- ಕೋಟಿ ರೂಪಾಯಿಗಳಿಗೆ ತಕ್ಕಂತೆ ನಾವು ಅಲ್ಲಿ ತೆಗೆದುಕೊಳ್ಳುತ್ತಿದ್ದೇವೆಯಲ್ಲ. ಆ ರೀತಿ ತೆಗೆದುಕೊಳ್ಳಬೇಕಾದರೆ, ಅದಕ್ಕೆ convince ಮಾಡತಕ್ಕಂಥದ್ದು. ಅವರ ಕುಟುಂಬದವರಿಗೂ convince ಮಾಡಬೇಕು. ಮತ್ತೆ ಕೋರ್ಟ್‌ಗೂ ಸಹ convince ಮಾಡಬೇಕು. ಅಂತಹ ಕೆಲಸವನ್ನು ಮಾಡಿದಾಗ ಮಾತ್ರ ಅದು ಸರಿಯಾಗುತ್ತದೆ. ಹಾಗಾಗಿ, ಅನೇಕ ಪಾರಂಪರಿಕ ಕಟ್ಟಡಗಳನ್ನು ಮಾಡಿಕೊಟ್ಟಿರತಕ್ಕಂಥದ್ದು. ಇವೆಲ್ಲವನ್ನೂ ನಾವು ಎಲ್ಲೋ ಒಂದು ಕಡೆ ನೋಡಿ ತೀರ್ಮಾನ ತೆಗೆದುಕೊಳ್ಳತಕ್ಕಂಥದ್ದು. ಈ ವಿಧೇಯಕವನ್ನು ತಂದಿರುವಂಥದ್ದು ಸಮಂಜಸವಲ್ಲ. Why I am telling this is, because it is not the order of the court. Court has only suggested for the TDR. So much of amount is there, ಅದನ್ನು ನೀವು

ಕಟ್ಟಿ ಎಂದು ಕೇಳಿದ್ದಾರೆ. ಇದನ್ನು ಕೋರ್ಟ್‌ಗೆ convince ಮಾಡುವಂತಹ ಶಕ್ತಿ ಸರ್ಕಾರಕ್ಕೆ ಇದೆ. ಉತ್ತಮವಾದ Attorney General, Advocate General and Solicitor General ಗಳು ಇದ್ದಾರೆ. ಅವರಿಗೆ ಮನವರಿಕೆ ಮಾಡಿಕೊಡಬೇಕು. ನನ್ನ ಸಲಹೆ ಏನೆಂದರೆ, ಮಹಾರಾಜರ ಕುಟುಂಬದವರ ಜೊತೆ ಚರ್ಚೆ ಮಾಡಿ, ನಂತರ ಅವರಿಗೂ ಒಂದು ಆರೋಗ್ಯಪೂರ್ಣವಾಗಿ ನಮ್ಮ ಸರ್ಕಾರ ನಿಮ್ಮ ಜೊತೆ ನಿಂತಿದೆ. ಇಷ್ಟು ವರ್ಷ ನಮ್ಮ ಹಿರಿಯರು ಮಾಡಿದ್ದಕ್ಕೆ, ನಮ್ಮ ಜೊತೆ ನಿಂತಿದೆ ಎಂಬ ಭಾವನೆ ಬರಲಿ. ಎಲ್ಲೋ ಒಂದು ಕಡೆ ಜನಗಳ ಭಾವನೆಯಲ್ಲಿ ಸೇಡಿನ ವಿಚಾರ ಮಾಡಿದರು ಎಂಬುದು ಆ ಕುಟುಂಬದ ಮನಸ್ಸಿನಲ್ಲಿ ಬರಬಾರದು ಎಂಬುದು ನನ್ನ ಅಭಿಪ್ರಾಯ. ಮತ್ತೊಂದು ಬಾರಿ ಅವರು ಮಾತನಾಡಿ, ತೀರ್ಮಾನವನ್ನು ತೆಗೆದುಕೊಳ್ಳಲಿ ಎಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಶರವಣ ಟಿ.ಎ. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರು ಹೇಳಿದ ಹಾಗೆ, ನಮ್ಮ ರಾಜ್ಯಕ್ಕೆ ಮಹಾರಾಜರ ಕೊಡುಗೆ ಅಪಾರವಾದುದು. ಅದರ ಬಗ್ಗೆ ಎಷ್ಟೇ ಚರ್ಚೆ ಮಾಡಿದರೂ ಸಹ ಸಾಲದು. ಆದರೆ, ಇವತ್ತು ಅವರು ಬಿ.ಜೆ.ಪಿ. ಪಕ್ಷದ ಸಂಸದರಾಗಿರಬಹುದು. ಅವರು ಕಾಂಗ್ರೆಸ್ ಪಕ್ಷಕ್ಕೆ ವಿರೋಧ ಮಾಡುತ್ತಾ ರಾಜಕಾರಣ ಮಾಡಿಕೊಂಡು ಬಂದಿಲ್ಲ. ಇವತ್ತು ಅವರು ಸಂಸದರಾಗಿದ್ದಾರೆ. ಆ ಕುಟುಂಬದ ಸದಸ್ಯರು ಈ ಹಿಂದೆ ಕಾಂಗ್ರೆಸ್ ಪಕ್ಷದಲ್ಲಿಯೂ ಕೂಡ ಇದ್ದರು. ಇವತ್ತು ಘನತೆವೆತ್ತ ರಾಜ್ಯಪಾಲರು ಈಗಾಗಲೇ ಸುಗ್ರೀವಾಜ್ಞೆಗೆ ಸಹಿ ಮಾಡಿದ್ದಾರೆ. ಅವರು ಇವತ್ತು ಸದನದಲ್ಲಿ ಈ ವಿಧೇಯಕವನ್ನು ತಂದಿದ್ದಾರೆ. ಬಹುಶಃ ಬೆಂಗಳೂರು ನಗರಕ್ಕೆ ಒಂದೊಂದು ವಿಚಾರಕ್ಕೆ ಒಂದೊಂದು ವಿಧೇಯಕವನ್ನು ತರುವುದಕ್ಕೆ ಸಾಧ್ಯವಿಲ್ಲ. ಇವತ್ತು ಈ ಭೂಮಿಯ ಬಳಕೆ ಇರಬಹುದು. ಅದಕ್ಕೆ ಪರಿಹಾರವನ್ನು ಯಾವ ರೀತಿ ನಿಗದಿಪಡಿಸುತ್ತಾರೆ ಎಂಬುದಕ್ಕೆ ಒಂದು ಮಾನದಂಡವನ್ನು ತರಬೇಕಾಗುತ್ತದೆ. ಅಂದರೆ, ಅದಕ್ಕೆ ಒಂದು ಪಾಲಿಸಿಯನ್ನು ತಂದು, ಆಮೇಲೆ ಯಾವುದು ಆಗಬೇಕು, ಯಾವುದು ಆಗಬಾರದು ಮತ್ತು ಯಾವುದಕ್ಕೆ ಅಗಬೇಕು ಎಂಬುದರ ಬಗ್ಗೆ ಸ್ಪಷ್ಟನೆ ಸಿಗುತ್ತದೆ. ಅವರು ಜನರ ಹಿತಾಸಕ್ತಿಯನ್ನು ಕಾಪಾಡುವುದಕ್ಕೋಸ್ಕರ ಈ ಭೂಮಿಯನ್ನು ಉಳಿಸುತ್ತಿದ್ದೇವೆ ಎಂದು ಹೇಳಬಹುದು. ನಾನು ಅದನ್ನು ಇಲ್ಲವೆಂದು ಹೇಳುವುದಿಲ್ಲ. (ಮುಂದು)

(174) 10.03.2025 04.30 LL-MD (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶರವಣ ಟಿ.ಎ. (ಮುಂದು):-**

ಆದರೆ, ಇವೊತ್ತಿನ ದಿವಸ ನಾವು ಮಾತನಾಡುತ್ತಿರುವಂಥದ್ದು ಮತ್ತು ಈ ವಿಧೇಯಕದ ಉದ್ದೇಶ ಬೆಂಗಳೂರಿನಲ್ಲಿ prime location ನಲ್ಲಿ ಇರುವಂಥದ್ದು ಬೆಂಗಳೂರು ಅರಮನೆ ವಿಚಾರದ ಬಗ್ಗೆ. ಇವೊತ್ತಿನ ದಿವಸ ಸರ್ಕಾರಕ್ಕೆ ಬಹುಮತ ಇದೆ. ಅದಕ್ಕಾಗಿ ಸರ್ಕಾರ ಈ ವಿಧೇಯಕದ ಮೇಲಿನ ತಿದ್ದುಪಡಿಯನ್ನು ಪಾಸ್ ಮಾಡಿಕೊಳ್ಳಬಹುದು. ನಾನು ಇಲ್ಲವೆಂದು ಹೇಳುತ್ತಿಲ್ಲ. ಈಗಾಗಲೇ ಈ ವಿಧೇಯಕದ ಮೇಲಿನ ತಿದ್ದುಪಡಿ ಕೆಳಮನೆಯಲ್ಲಿ ಪಾಸ್ ಆಗಿದ್ದು, ಮೇಲ್ಮನೆಯಲ್ಲಿಯೂ ಸಹ ಪಾಸ್ ಆಗುತ್ತದೆ. ಅದೆಲ್ಲದರ ಬಗ್ಗೆ ಈಗ ಚರ್ಚೆ ಬೇಡ. ಅದನ್ನು ಬಿಟ್ಟು ಇವೊತ್ತಿನ ದಿವಸ ಅವರ ಕುಟುಂಬದವರು ಯಾರಿದ್ದಾರೆ, ಅವರ ಜೊತೆಯಲ್ಲಿ ಒಂದು ಮಾತುಕತೆಗೆ ಸರ್ಕಾರ ಪ್ರಯತ್ನಪಡಬೇಕು. ಆ ನಂತರ, ಸರ್ಕಾರಕ್ಕೆ ಈ ದಾರಿ ಇದ್ದೇ ಇದೆ. ಕೊನೆಯ ಕ್ಷಣದಲ್ಲಿ ಸರ್ಕಾರ ಏನು ಬೇಕಾದರೂ ತೀರ್ಮಾನ ತೆಗೆದುಕೊಳ್ಳಬಹುದು. ಇಲ್ಲವೆಂದು ಅಲ್ಲ. ಒಂದು ಪ್ರಯತ್ನ ಮಾಡಿದರೆ ಏನಾಗುತ್ತದೆ? ಅದು ತಪ್ಪೇ? ಸರ್ಕಾರ ಏತಕ್ಕಾಗಿ ಆ ಪ್ರಯತ್ನವನ್ನು ಮಾಡಬಾರದು ಎನ್ನುವುದು ನನ್ನ ಪ್ರಶ್ನೆ. ಜೊತೆಗೆ, ಸಾರ್ವಜನಿಕವಾಗಿ ಇವೊತ್ತಿನ ದಿವಸ ವಿರೋಧಿಗಳನ್ನು ಎಲ್ಲಿಯೋ ಒಂದು ಕಡೆ ದಮನ ಮಾಡುವಂತಹ ಕೆಲಸ ಸರ್ಕಾರ ಮಾಡುತ್ತಿದೆ ಎನ್ನುವಂತಹ ಸಂದೇಶ ಹೋಗಬಾರದು. ನಾನು ಅದಕ್ಕೋಸ್ಕರ ಹೇಳುತ್ತಿರುವುದೇನೆಂದರೆ, ಮಾನ್ಯ ಕಾನೂನು ಸಚಿವರು ಹಿರಿಯರಿದ್ದಾರೆ, ಬಹಳ ಅನುಭವಸ್ಥರಿದ್ದಾರೆ ಹಾಗೂ ಅವರ ಬಗ್ಗೆ ನಮಗೆ ಅಪಾರವಾದ ಗೌರವವಿದೆ. ಹಾಗಾಗಿ, ಸರ್ಕಾರ ಆಡಳಿತ ಯಂತ್ರವನ್ನು ದುರುಪಯೋಗ ಮಾಡಿಕೊಂಡು ಇಂತಹ ಕೆಲಸಕ್ಕೆ ಕೈ ಹಾಕಿದೆ ಎನ್ನುವುದನ್ನು ಜನರು ಯಾರು ಕೂಡ ಭಾವಿಸಬಾರದು. ಅದಕ್ಕಾಗಿ ಮಹಾರಾಜರ ಕುಟುಂಬದವರ ಜೊತೆ ಮಾತುಕತೆ ನಡೆಸುವಂತಹ ಒಂದು ಪ್ರಯತ್ನವನ್ನು ಸರ್ಕಾರ ಮಾಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ನೀಡುವುದಕ್ಕೆ ಬಯಸುತ್ತಿದ್ದೇನೆ. ಜೊತೆಗೆ, ಇವೊತ್ತಿನ ದಿವಸ ತಿದ್ದುಪಡಿಗೆ ತಂದಿರುವಂತಹ ವಿಧೇಯಕವನ್ನು ನಾನು ವಿರೋಧ ಮಾಡುತ್ತಿದ್ದೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ಈ ತಿದ್ದುಪಡಿ ವಿಧೇಯಕದ ಬಗ್ಗೆ ವಿವರಣೆ ಕೊಟ್ಟಾಗ, ನಾನು ಅದನ್ನು ಬಹಳ ಸೂಕ್ಷ್ಮವಾಗಿ ಗಮನಿಸಿದ್ದೇನೆ. ಅವರು ಹೇಳುವ ರೀತಿಯಲ್ಲಿ ಬೆಂಗಳೂರು ಅರಮನೆಯ ಒಟ್ಟು 15 ಎಕರೆ ಜಾಗವನ್ನು ಅಭಿವೃದ್ಧಿಗಾಗಿ ಅಂದರೆ, ರಸ್ತೆ ನಿರ್ಮಾಣಕ್ಕಾಗಿ; ಫ್ಲೈ ಓವರ್ ಮಾಡುವುದಕ್ಕಾಗಿ ಅಥವಾ ಜನರಿಗಾಗಿ ಬಳಸತಕ್ಕಂತಹ ರೀತಿಯಲ್ಲಿ ಅದರ ಉಪಯೋಗವನ್ನು ಪಡೆಯುವಂಥದ್ದು, ಮಾನ್ಯ ಕಾನೂನು ಸಚಿವರು ವಿವರಣೆ ಕೊಟ್ಟಿರುವಂಥದ್ದಾಗಿದೆ. ಅಲ್ಲದೇ, ಈ ವಿಚಾರದಲ್ಲಿ ಮಾನ್ಯ ನ್ಯಾಯಾಲಯವು ಕೂಡ ಆದೇಶ ಕೊಟ್ಟಿಲ್ಲ. ಆದರೆ,

ಸಲಹೆ ಕೊಟ್ಟಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ, ಈ ವಿಚಾರದಲ್ಲಿ 1996 ರಿಂದ ಈಗಲೂ ಸಹ ಈ ವಿಷಯಕ್ಕೆ ಸಂಬಂಧಪಟ್ಟ ಪ್ರಕರಣ ವಿಚಾರಣೆಗೆ ಬಾಕಿ ಇದೆ. ಸರ್ಕಾರವು ಅದನ್ನು ಪರಿಶೀಲಿಸಿ ಮಾನ್ಯ ನ್ಯಾಯಾಲಯದಲ್ಲಿ ಅಗತ್ಯ ಹೋರಾಟ ಮಾಡಿದ್ದರೆ, ಬಹುಶಃ ಇಷ್ಟೊತ್ತಿಗೆ ಈ ಪ್ರಕರಣ ಮುಗಿಯಬಹುದಾಗಿತ್ತು. ಅದು ಏನೇ ಇರಲಿ. ಅಂದಿನಿಂದ ಮಾನ್ಯ ನ್ಯಾಯಾಲಯದಲ್ಲಿ ಈ ಪ್ರಕರಣ ವಿಚಾರಣೆ ಬಾಕಿ ಇರುವುದರಿಂದ, ಮಾನ್ಯ ನ್ಯಾಯಾಲಯವು ಕೂಡ ವಾರಸುದಾರರಿಗೆ ಟಿಡಿಆರ್ ಕೊಡಬೇಕೆಂದು ಹೇಳಿದೆ. ಮೊದಲನೆಯದಾಗಿ, ಆ ರಾಜ ಮನೆತನದ ಮೇಲೆ ಕರ್ನಾಟಕ ರಾಜ್ಯದ ಜನರಿಗೆ ಒಂದು ಗೌರವ ಇದೆ. ಇವೊತ್ತಿನ ದಿವಸ ಕೆಆರ್‌ಎಸ್ ನಿಂದ ಹಿಡಿದು ಈ ಪ್ರಾಂತ್ಯದ ಜನರಾದ ನಾವು ಅವರ ಋಣದಲ್ಲಿದ್ದೇವೆ. ಈ ದೇಶದಲ್ಲಿ ಮೀಸಲಾತಿ ಬರುವುದಕ್ಕೆ ಮುಂಚೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಯಾರಾದರೂ ಮೀಸಲಾತಿ ಕೊಟ್ಟಿದ್ದರೆ, ಅದು ಆ ರಾಜ ಮನೆತನದವರು. ಆ ಕಾಲದಲ್ಲಿ ಹಾಸ್ಟೆಲ್‌ಗಳು ಇರಲಿಲ್ಲ. ಆದರೆ, ಶ್ರ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್‌ರವರ ಹೆಸರಿನಲ್ಲಿ ವಿದ್ಯಾರ್ಥಿನಿಲಯಗಳನ್ನು ಮತ್ತು ಶಾಲೆಗಳನ್ನು ಸ್ಥಾಪನೆ ಮಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೂ ಕೂಡ ವಿದ್ಯೆಯನ್ನು ಆ ರಾಜಮನೆತನದವರು ಕೊಟ್ಟಿದ್ದಾರೆ. ಆದುದರಿಂದ, ನಾವೆಲ್ಲರೂ ಅವರ ಋಣದಲ್ಲಿದ್ದೇವೆ ಎಂದು ರಾಜ್ಯದ ಜನರು ಭಾವಿಸುತ್ತಾರೆ. ಅಂದ ತಕ್ಷಣ ಸರ್ಕಾರ ಮಾಡುತ್ತಿರುವುದು ಸರಿಯಿಲ್ಲ, ಬಹಳ ತಪ್ಪು ಎಂದು ನಾನು ಹೇಳುತ್ತಿಲ್ಲ. ಇದು ಯಾರದ್ದೋ ಸ್ವಾರ್ಥಕ್ಕಾಗಿ ಮಾಡುತ್ತಿರುವ ಕೆಲಸ ಎಂದು ನಾನು ಹೇಳುತ್ತಿಲ್ಲ. ಈ ಕೆಲಸ ಜನತೆಗಾಗಿ ಮಾಡುತ್ತಿರುವುದು. ಒಂದು ಕಡೆಗೆ ಬೆಂಗಳೂರು ಅರಮನೆ ಮೈದಾನ ಇದೆ, ಇನ್ನೊಂದು ಕಡೆಗೆ ಸದಾಶಿವನಗರ ಬರುತ್ತದೆ. ಇವೊತ್ತಿನ ದಿವಸ ಸದಾಶಿವನಗರದ ಕಡೆ ಕೇವಲ 10 ಅಡಿಗಳಷ್ಟು ಜಮೀನು ಸ್ವಾಧೀನ ಮಾಡಬೇಕೆಂದರೆ ಎಷ್ಟು ಪರಿಹಾರ ಕೇಳುತ್ತಾರೆಂಬುದನ್ನು ಸರ್ಕಾರ ಯೋಚನೆ ಮಾಡಬೇಕು. ಅಂದರೆ, ಸುಮಾರು 10 ಅಡಿ ಜಮೀನು ರಸ್ತೆ ಅಭಿವೃದ್ಧಿಗಾಗಿ ಬೇಕಾಗಿದ್ದು, ವಾರಸುದಾರರು ಅದಕ್ಕೆ ಎಷ್ಟು ಪರಿಹಾರ ಕೇಳಬಹುದು ನೋಡೋಣ. ಸರ್ಕಾರ ಒಂದು ಪ್ರಯತ್ನ ಮಾಡಿ ನೋಡಲಿ. ಅಂದರೆ, ಆ ಮಾರುಕಟ್ಟೆ ದರವನ್ನು ಆಧರಿಸಿ ವಾರಸುದಾರರ ವಕೀಲರು ಮಾನ್ಯ ನ್ಯಾಯಾಲಯದಲ್ಲಿ ಏನು ಬೇಡಿಕೆ ಇಟ್ಟಿರುತ್ತಾರೋ, ಅದನ್ನು ಮಾನ್ಯ ನ್ಯಾಯಾಲಯ ಬಹುಶಃ ಪರಿಗಣಿಸಿರಬಹುದು. ನಾನು ಅದನ್ನು ಕೂಡ ಹೇಳುವುದಿಲ್ಲ. ಆದರೆ, ಇವೊತ್ತಿನ ದಿವಸ ಆ ಕುಟುಂಬದ ಜೊತೆಯಲ್ಲಿ ಸರ್ಕಾರದಿಂದ ಯಾರು ಕೂಡ ಚರ್ಚೆ ಮಾಡುವುದಿಲ್ಲ. ಆದರೆ, ಆ ಜಮೀನು ಸರ್ಕಾರದ ಸುಪರ್ದಿಯಲ್ಲಿದೆ ಎಂದು ಮಾನ್ಯ ಸಚಿವರು ಹೇಳಿರುತ್ತಾರೆ. ಇಲ್ಲ, ಒಂದು ವೇಳೆ ಆ ಜಮೀನು ಸರ್ಕಾರದ ಸುಪರ್ದಿಯಲ್ಲಿ ಇದ್ದಿದ್ದರೆ, ಇವೊತ್ತಿನ ದಿವಸ ಸರ್ಕಾರ ಆ ಜಮೀನನ್ನು ಕಬ್ಜ ಮಾಡಬಹುದಾಗಿತ್ತು. ಅದು

ಸಂಪೂರ್ಣವಾಗಿ ರಾಜ ಮನೆತನದವರ ಸುಪರ್ದಿಯಲ್ಲಿಯೇ ಇದೆ. ಆ ಜಮೀನಿನಲ್ಲಿ ಯಾವುದೇ ಕಟ್ಟಡಗಳು ಬಂದಿರುವುದಿಲ್ಲ. ಅಲ್ಲಿ ತಾತ್ಕಾಲಿಕವಾದ ಶೆಡ್‌ಗಳನ್ನು ಹಾಕಿರುತ್ತಾರೆ. ಏಕೆಂದರೆ, ಯಥಾಸ್ಥಿತಿ ಕಾಪಾಡಬೇಕೆಂದು ಮಾನ್ಯ ನ್ಯಾಯಾಲಯ ಹೇಳಿರುತ್ತದೆ. ಇದರಲ್ಲಿ ಒಂದು ವಿಷಯವನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು. ಈ ವಿಚಾರದಲ್ಲಿ ಟಿಡಿಆರ್ ಕೊಡಬೇಕೆಂದು ಮಾನ್ಯ ನ್ಯಾಯಾಲಯ ಹೇಳಿದರೆ, ಅದರ ಅರ್ಥ ಏನೆಂದರೆ, ಸದರಿ ಜಮೀನಿಗೆ ಅವರೇ ವಾರಸುದಾರರು. ಆದರೆ, ನಾನು ಹೇಳುವಂಥದ್ದು ಏನೆಂದರೆ, ಟಿಡಿಆರ್ ಕೊಡುವುದೆಂದರೆ, ಅದು ಹಣ ಅಲ್ಲ. ಸರ್ಕಾರ ಹಣ ಕೊಡುತ್ತಿಲ್ಲ. ಒಂದು ವೇಳೆ ಆ ಹಣವನ್ನು ಕಡಿಮೆ ಮಾಡಬೇಕೆಂದರೆ, ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ಹಾಕಿ, ಮನವಿ ಸಲ್ಲಿಸಬೇಕು. ಆ ರೀತಿ ಅಷ್ಟು ಹಣ ಕೊಡುವುದಕ್ಕೆ ಆಗುವುದಿಲ್ಲ. ಹಾಗಾಗಿ, ಆ ಹಣವನ್ನು ಕಡಿಮೆ ಮಾಡಬೇಕೆಂದು ಕೇಳಿಕೊಳ್ಳಬೇಕು. ಈ ವಿಚಾರದಲ್ಲಿ ಸರ್ಕಾರಕ್ಕೆ ಒಂದು ಅನುಮಾನವಿದೆ. ಅದೇನೆಂದರೆ, ಟಿಡಿಆರ್‌ಗೆ ಒಪ್ಪಿಕೊಂಡರೆ ಆ ಜಮೀನು ರಾಜ ಮನೆತನದವರದ್ದೇ ಆಗುತ್ತದೆ. ಹಾಗಾಗಿ, ಮುಂದಿನ ದಿನಗಳಲ್ಲಿ ಈ ವಿಚಾರದಲ್ಲಿ ಫೈಟ್ ಮಾಡುವುದು ಕಷ್ಟವಾಗುತ್ತದೆ ಎಂಬ ಉದ್ದೇಶ ಇರಬಹುದು. ನಾನು ಈ ವಿಷಯವನ್ನು ಅಲ್ಲಗಳೆಯುವುದಿಲ್ಲ. ಸರ್ಕಾರ ಹೋರಾಟ ಮಾಡುವಾಗ ಅದನ್ನು ಚಿಂತನೆ ಮಾಡಬೇಕಾಗುತ್ತದೆ. ಅದನ್ನು ಸರ್ಕಾರ ಮಾಡಿದೆ. ಹಾಗಾಗಿ, ಇದು ಸರಿಯಿದೆ. ಆದರೆ, ಅದನ್ನು ಮಾಡಬೇಕಾದರೆ ವಾರಸುದಾರರಿಗೂ ಸಹ ಅನ್ಯಾಯವಾಗಬಾರದು. ರಾಜಪ್ರಭುತ್ವವನ್ನು ಅಳಿಸಿ, ಪ್ರಜಾಪ್ರಭುತ್ವವನ್ನು ತಂದಿರತಕ್ಕಂತಹ ದೇಶ ಇದು. ಆ ಕಾಲದಲ್ಲಿಯೇ ಯಾವ ಯಾವ ರಾಜಮನೆತನದಲ್ಲಿ ಏನೇನು ಇತ್ತು, ಆ ಕಾಲದಲ್ಲಿಯೇ ಅವುಗಳನ್ನು ತೆಗೆದುಕೊಂಡು ಆಗಿ ಹೋಗಿದೆ. ಹಾಗಾದರೆ, ಆ ಕಾಲದಲ್ಲಿ ಈ ಆಸ್ತಿಯನ್ನು ಕೈಬಿಟ್ಟಿದ್ದು ಏತಕ್ಕೆ? ಅಂದರೆ, ರಾಜ ಮನೆತನದವರು ಬದುಕಬೇಕು ಎಂಬ ಕಾರಣಕ್ಕಾಗಿ. ನಮಗೂ ಆಸ್ತಿ ಬೇಕು ಎನ್ನುವ ಕಾರಣಕ್ಕೆ ರಾಜ ಮನೆತನದವರು ಕ್ಲೇಮು ಮಾಡುತ್ತಿದ್ದಾರೆ. ಈ ಆಸ್ತಿ ನಮ್ಮದು ಎಂದು ಅವರು ಹೇಳುತ್ತಿದ್ದಾರೆ. ಸರ್ಕಾರ ಕೂಡ ನಮಗೂ ಈ ಆಸ್ತಿ ಬೇಕು ಎಂದು ಕೇಳುತ್ತಿದೆ. ಆ ಜಾಗದಲ್ಲಿ ಗಿಡ ನೆಡುತ್ತಾರೆ, ಮರ ಹಾಕುತ್ತಾರೆ ಅಥವಾ ಗಾರ್ಡನ್ ಮಾಡುತ್ತಾರೆ ಎನ್ನುವುದು ಪ್ರಶ್ನೆ ಅಲ್ಲ. The value of the land is most important. ರಾಜ ಮನೆತನದವರು ಆ ಜಮೀನನ್ನು ಸರ್ಕಾರಕ್ಕೆ ಕೊಡಬೇಕಾದರೆ, land value ಕೇಳುತ್ತಾರೆಯೇ ಹೊರತು, ಯಾರು ಕೂಡ ಗಿಡಗಳ value ಕೇಳುವುದಿಲ್ಲ. ಆ ಕಾರಣದಿಂದ ಇದು ಒಂದು ರೀತಿಯಲ್ಲಿ ಮಾನ್ಯ ಶರವಣರವರು ಮಾತನಾಡುತ್ತಾ, "ರಾಜಕೀಯ ದ್ವೇಷದಿಂದ ಈ ರೀತಿ ಮಾಡುತ್ತಿದ್ದಾರೆ. ಅವರು ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದು, ಈಗ ಬಿಜೆಪಿಯಲ್ಲಿ ಇದ್ದಾರೆ" ಎಂದು ಅವರು ಹೇಳಿರುತ್ತಾರೆ. ಇದು ಬೇರೆಯೇ ವಿಷಯ. ಇದನ್ನು ಜನರು ಮಾತನಾಡುತ್ತಾರೆ. ಅದನ್ನೆಲ್ಲಾ ನಾವು ಇಲ್ಲಿ

ಮಾತನಾಡಬೇಕೆಂದು ಇಲ್ಲ. ಅವೆಲ್ಲವೂ ಸಹ ರಾಜಕೀಯ ತೀರ್ಮಾನಗಳು. ಯಾವ ಪಕ್ಷದಲ್ಲಿ ನಾನು ಇರಬೇಕೆಂದು ತೀರ್ಮಾನ ಮಾಡುತ್ತಾನೋ, ಅದು ಅವರವರ ವೈಯಕ್ತಿಕ ತೀರ್ಮಾನಗಳು. ನಾವು ಅದೇ ಕಾರಣಕ್ಕೆ ಇದು ಆಗಿದೆ ಎಂದು ಹೇಳುವುದಿಲ್ಲ. ಆದರೆ, ಒಂದು ಬಾರಿ ರಾಜ ಮನೆತನದವರನ್ನು ಕರೆಯಿಸಿ, ಈ ಕಾರಣಕ್ಕಾಗಿ ನಮಗೆ ಜಮೀನು ಅವಶ್ಯಕವಾಗಿದೆ. ಅದಕ್ಕೆ ತಾವು ಸಹಕಾರ ನೀಡಬೇಕು. ಈ ರೀತಿ ಅವರ ಜೊತೆ ಮಾತುಕತೆ ಆಗಿದೆಯೇ? ಅದು ಆಗಿರುವುದಿಲ್ಲ. ಅದು ಹೋಗಲಿ. ಇವೊತ್ತಿನ ದಿವಸ ಆ ಜಮೀನಿಗೆ 200 ಕೋಟಿ ರೂಪಾಯಿ ಬೆಲೆ ಕಟ್ಟಿ, ಒಂದು ಸಲಹೆಯನ್ನು ಮಾನ್ಯ ನ್ಯಾಯಾಲಯ ಕೊಟ್ಟಿದೆ. ಒಂದು ವೇಳೆ ಆ ಹಣವನ್ನು ಕಡಿಮೆ ಮಾಡಿಸಬೇಕೆಂದರೆ, ಸರ್ಕಾರ ಪುನಃ ಮಾನ್ಯ ನ್ಯಾಯಾಲಯದಲ್ಲಿ ಮನವಿ ಸಲ್ಲಿಸಬೇಕು. ಆ ಕೆಲಸವನ್ನಾದರೂ ಸರ್ಕಾರ ಮಾಡಬೇಕಾಗಿರುತ್ತದೆ. ಇದನ್ನು ಮಾಡಿ, ರಾಜಕೀಯ ದ್ವೇಷವನ್ನು ಈ ಸರ್ಕಾರ ರಾಜ ಮನೆತನದವರ ವಿರುದ್ಧ ತಾಳಿದೆ ಎಂದು ಬೇರೆಯವರಿಗೂ ಅನ್ನಿಸಬಾರದು. ಏಕೆಂದರೆ, ಆ ರಾಜ ಮನೆತನದ ಬಗ್ಗೆ ರಾಜ್ಯದ ಜನರಿಗೆ ಗೌರವ ಇದೆ. ಅದಕ್ಕೆ ಧಕ್ಕೆ ಬರಬಾರದು. ಸರ್ಕಾರದ ಕೆಲಸ ಕೂಡ ಆಗಬೇಕು. ಜನಸಾಮಾನ್ಯರು ಕೂಡ ಸಂತುಷ್ಟರಾಗಬೇಕು. ಆ ಕಾರಣದಿಂದ ಸರ್ಕಾರ ಇದನ್ನು ದಯಮಾಡಿ ಮರುಪರಿಶೀಲನೆ ಮಾಡಬೇಕು. ಮಾನ್ಯ ನ್ಯಾಯಾಲಯದಲ್ಲಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಂಥದ್ದು ಸೂಕ್ತ ಎಂದು ನಾನು ಸರ್ಕಾರಕ್ಕೆ ಸಲಹೆ ನೀಡುತ್ತೇನೆ.

(ಮುಂದು)

(176) 10.03.2025/4.40/ಎಸ್‌ಕೆ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ. ರವಿ (ಮುಂದು):-**

ಏಕೆಂದರೆ, ತನ್ನ ಒಡವೆಯನ್ನು ಒತ್ತೆ ಇಟ್ಟು ಕನ್ನಂಬಾಡಿ ಅಣೆಕಟ್ಟನ್ನು ಕಟ್ಟಿದವರು. ನೀವು via-media ಚರ್ಚೆ ಮಾಡಿದರೆ, ಅವರು ನಿರಾಕರಿಸುತ್ತಿದ್ದರು ಎಂಬ ಬಗ್ಗೆ ನನಗೆ ಅನಿಸುವುದಿಲ್ಲ. ತಕ್ಷಣವೇ 3,000 ಕೋಟಿ ಎಂದಾಗ ಒಂದು ಸಾರಿ ಎದೆ ಬಡಿದಂತಾಗುತ್ತದೆ. ಇದಕ್ಕೆ 3,000 ಕೋಟಿ ಕೊಡಬೇಕಾ ಎನಿಸುತ್ತದೆ. ಆದರೆ 15 ಎಕರೆ ಎಂದಾಗ, 15 ಎಕರೆಗೆ ಸದಾಶಿವನಗರದಲ್ಲಿ ಅಡಿಗೆ ಇವತ್ತಿನ ಮಾರುಕಟ್ಟೆಯ ಬೆಲೆ ರೂ. 50,000/- ಇದೆ. ..... ಇಲ್ಲಿಯೇ ಬೆಲೆ ಜಾಸ್ತಿ ಇರಬಹುದು. ....ಬಹುಶಃ 35,000 Guidance Value ನೇ ಇದೆ. As per the Land Acquisition Act, ಎರಡು ಪಟ್ಟು ಎಂದು ಹೇಳಿದರೆ, ರೂ.35,000/- Guidance Value ಇದ್ದರೆ, ರೂ. 70,000 ಆಗಿ ಹೋಯಿತು. ಹಾಗಾಗಿ ನೀವು ಒಂದು ಬಿಲ್ ತರಬೇಕೆಂದರೆ, ಇಡೀ ಬೆಂಗಳೂರಿಗೆ ಅಪ್ಲೈ ಆಗುವಂತೆ ತರುತ್ತೇವೆಂದು ಹೇಳುತ್ತೀರಿ. ಒಂದೇ ರಾಜ ಮನೆತನಕ್ಕಲ್ಲ ಎಂದು ಹೇಳಿ, ಇಡೀ ಬೆಂಗಳೂರಿಗೆ ಎಂದು

ಆಗ ನಾವು ಒಪ್ಪಿಕೊಳ್ಳಬಹುದು. ಒಂದು ಕುಟುಂಬವನ್ನು target ಮಾಡುತ್ತಿದ್ದೀರಿ ಎನ್ನುವ ಭಾವನೆ ಬರಬಾರದು. ಬ್ರಿಟಿಷರು ಐದು ನೂರಕ್ಕೂ ಹೆಚ್ಚು ಸಂಸ್ಥಾನಗಳಿಗೆ Privy Purse ನ್ನು declare ಮಾಡಿದ್ದರು. ಅಂದರೆ, ಇನ್ನು 525 ಕ್ಕೂ ಹೆಚ್ಚು ಸಂಸ್ಥಾನಗಳನ್ನು ಸ್ವಾತಂತ್ರ್ಯರು ಎಂದು ಘೋಷಣೆ ಮಾಡಿ ಹೋದರು. ನೀವು ಸ್ವತಂತ್ರರಾಗಿಯೂ ಇರಬಹುದು. ಭಾರತದ ಜೊತೆಗಾದರೂ ಹೋಗಬಹುದು. ಪಾಕಿಸ್ತಾನದ ಜೊತೆಗಾದರೂ ಹೋಗಬಹುದು ಎನ್ನುವ ಬಗ್ಗೆ ಆಯ್ಕೆಯನ್ನು ಅವರಿಗೆ ಕುತಂತ್ರವಾದಿ ಕೊಟ್ಟರು. ಕೆಲವೊಂದು ಕಡೆ ಮಾತ್ರ ಬಲಪ್ರಯೋಗ ಮಾಡಿದ್ದು. ಉಳಿದೆಲ್ಲಾ ಕಡೆಗಳಲ್ಲಿ ಸರ್ಕಾರದ ಜೊತೆ ಸಹಮತವನ್ನು ಒಪ್ಪಿಕೊಂಡರು. ಎಲ್ಲಾ ರಾಜ್ಯಗಳು ಒಪ್ಪಿಕೊಳ್ಳದೇ ಸಂಘಟಿತವಾಗಿ ವಿರೋಧ ಮಾಡಿದ್ದರೆ, ನಮಗೆ ಅವೊತ್ತು ಸಾಮರ್ಥ್ಯವಿರಲಿಲ್ಲ. ಇವತ್ತಿನ ಭಾರತದ ಭೂಪಟವನ್ನು ನೋಡುವುದಕ್ಕಾಗುತ್ತಿರಲಿಲ್ಲ. ಇದಕ್ಕೆ ಅವರ ಕೊಡುಗೆಯೂ ಇದೆ. ಹಾಗಾಗಿ, ನಾವು ಅವರಿಗೆ ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು, ಯಾವ ಸಂದರ್ಭದಲ್ಲಿ ಬಿಲ್ ತಂದಿದ್ದೇವೆ? ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ Review Petition file ಆದ ಮೇಲೆ ಬಿಲ್ ತಂದಿದ್ದೇವೆ. ಜನರಿಗೆ ಏನು message ಹೋಗುತ್ತದೆ? ಹಾಗಿದ್ದರೆ, ನಾವು ವಾಸ್ತವಿಕ ಅಂಶವನ್ನು ನ್ಯಾಯ ಪೀಠಕ್ಕೆ ಮನವರಿಕೆ ಮಾಡಿಕೊಡುವುದರೊಳಗೆ ಸರ್ಕಾರ ವಿಫಲವಾಗಿದೆಯೇ? ಇವರಿಗೆ ನಾಳೆ ಮಾತ್ರ ಏತಕ್ಕೆ ತಂದಿದ್ದೀರಿ ಎಂದರೆ ಏನು ಹೇಳಿದರೆ, ಇದು ಸಮಾನತೆಗೆ ಎಲ್ಲಿ ಅರ್ಥವಿರುತ್ತದೆಯೇ? ಉದಾಹರಣೆಗೆ ಹೇಳುವುದಾದರೆ, ಸಿ.ಟಿ. ರವಿಯವರ ಜಾಗವಿದೆ. ನೀವು Guidance Value ಕೊಡುತ್ತೀರಿ? ಎರಡು ತಪ್ಪು ಕೊಡುತ್ತೀರಿ? ಭೋಜೇಗೌಡರಿಗೆ ಕೊಡುವುದಿಲ್ಲ. ಹಾಗಾದರೆ, ಏನು message ಹೋಗುತ್ತದೆ? ಆಗ ನಿಮಗೆ ನ್ಯಾಯ ನಿಲ್ಲುತ್ತದೆಯೇ? ಒಬ್ಬರಿಗೆ ಕೊಡುತ್ತೇವೆ ಎಂದು ಹೇಳಿದ ಮೇಲೆ ಇನ್ನೊಬ್ಬರಿಗೂ ಕೊಡಬೇಕು. ಕೊಡುವುದಿಲ್ಲ ಎಂದರೆ, ಎಲ್ಲರಿಗೂ ಇಲ್ಲ. ಭೂ ಸುಧಾರಣ ಕಾಯ್ದೆಯನ್ನು ತಂದು, ಉಳುವವನೇ ಭೂಮಿಯ ಒಡೆಯ ಎಂದು ಮಾಡಿದ್ದೇವೆ. ಇನಾಂ ರದ್ಧತಿ ಕಾಯಿದೆ ಪ್ರಕಾರ ದೇವಸ್ಥಾನದ ಹೆಸರಿನಲ್ಲಿದ್ದ ಜಮೀನುಗಳನ್ನು ರದ್ದುಪಡಿಸುವಂತಹ ಕೆಲಸವನ್ನು ಮಾಡಿದರು. ಇನ್ನೊಂದು ಯಾವುದಾದರೊಂದು ಕಾಯಿದೆ ತನ್ನಿ. ಯಾವ ಭೂಮಿಗೂ ಪರಿಹಾರ ಕೊಡುವುದಿಲ್ಲ ಎಂದು ಸಾರ್ವಜನಿಕ್ಕೆ ಉದ್ದೇಶಕ್ಕೆ ಕಾಯಿದೆಯನ್ನು ತನ್ನಿ. ಆಗ universal ಆಗುತ್ತದೆ. ಆಗ ತಂದ ಮೇಲೆ ಈಗಾಗಲೇ ಎರಡು ಪಟ್ಟು Guidance Value ನಗರದಲ್ಲಿ ಕೊಡಬೇಕೆಂದು Act ಅನ್ನು ಯಾವ ಸಂದರ್ಭದಲ್ಲಿ ಯಾವ ಸರ್ಕಾರ ತಂದಿದ್ದು? ಕಾಂಗ್ರೆಸ್ ಸರ್ಕಾರವಿದ್ದಾಗಲೇ ತಂದಿದ್ದು.

**ಡಾ॥ ಶರಣ ಪ್ರಕಾಶ ಆರ್. ಪಾಟೀಲ (ವೈದ್ಯಕೀಯ ಶಿಕ್ಷಣ ಸಚಿವರು):-** ಹೌದು. ರೈತರ ಆಸ್ತಿಗಳು…

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ತಾವು ಹೇಳಿರುವುದು ಸರಿ. ನಾನು ಹೇಳುವುದಾದರೆ, ಹಿಂದೆ ಇನಾಂ ರದ್ಧತಿ ಕಾಯಿದೆಯನ್ನು ತಂದು, ಒಂದೇ ಹೆಸರಿನಲ್ಲಿರುವ ದೇವಸ್ಥಾನಗಳೆಲ್ಲಾ ...ದೀಪದ ಎಣ್ಣೆಗೂ ಬತ್ತಿಗೂ ದುಡ್ಡಿಲ್ಲ ಇಲ್ಲದಾಗೇ ಮಾಡುವ ಸ್ಥಿತಿಗೆ ತರಲಿಲ್ಲವೇ? ಅದಕ್ಕೆ ನಾನು ಹೇಳುವುದೇನೆಂದರೆ, ಈ ಕಾಯಿದೆ ಪಕ್ಷಪಾತದಿಂದ ಕೂಡಿದೆ ಎಂದು ಮೇಲ್ನೋಟಕ್ಕೆ ಅನಿಸುತ್ತಿದೆ. ಕೇವಲ ಒಂದು ಕುಟುಂಬವನ್ನು ಗುರಿಯಾಗಿಟ್ಟುಕೊಂಡು ಬಿಲ್ ತಂದಿದ್ದೀರಿ ಎಂದು ಮೇಲ್ನೋಟಕ್ಕೆ ಅನಿಸುತ್ತಿದೆ. ನೀವು ಇದಕ್ಕೆ ಸಿಮೀತವಾಗಿ ತಂದಿರುವುದರಿಂದ ತಪ್ಪು ಅರ್ಥಕ್ಕೂ ಕಾರಣವಾಗುತ್ತಿದೆ. ಈ 3,000 ಕೋಟಿ ಏನಪ್ಪಾ ಎಂದು ನನಗೂ ಕೂಡ ಅನಿಸುತ್ತಿದೆ. ನೀವು ಹಿನ್ನೆಲೆಯಾಗಿ ಏನು ಕೆಲಸ ಮಾಡಿದ್ದೀರಿ? Guidance Value ಏನಿದೆ? ಇದನ್ನು ಹೇಳಿ. ಉದ್ಯಾನವನಕ್ಕೆ Guidance Value ಎಲ್ಲಿದೆ ಎಂದು ನೀವು ಹೇಳಿದ್ದೀರಿ. Property rights ಯಾರ ಹತ್ತಿರ ಇದೆ? ಹಕ್ಕು ಯಾರದು? ... 'Still not proved' ಎನ್ನುವುದಾದರೆ, why do you worry? ಅದು ಎಲ್ಲಿಯವರೆಗೆ? ಈ ಮನೆಯೇ ನಾಳೆ ಕಾನೂನು.

**ಶ್ರೀ ಎಚ್. ಕೆ. ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಿ.ಟಿ. ರವಿಯವರೇ, ಅಲ್ಲ. ನಾನು ಈ ಸಂದರ್ಭದಲ್ಲಿ ಕಠಿಣ ಭಾಷೆಯನ್ನು ಬಳಸುವಿಕೆಯಾಗಲೀ ಅಥವಾ ಸಣ್ಣ ಸಣ್ಣ ವಿಷಯಗಳಿಗೂ ಉತ್ತರ ಕೊಡುವುದರ ಮೂಲಕ ತಪ್ಪು ಸಂದೇಶ ಹೋಗಬಾರದು ಎಂದು ಹೇಳಿ, ನಾನು ಈ ವಿಧೇಯಕವನ್ನು ಅತ್ಯಂತ ಗೌರವಯುತವಾಗಿ ತಮ್ಮ ಮುಂದೆ ಮಂಡನೆ ಮಾಡಿದ್ದೇನೆ. ನೀವು ಇದನ್ನು ಪದೇ ಪದೇ ಕೇಳುತ್ತಿದ್ದೀರಿ. With whom the property right is vested? Yes, the property right is vested with the government and you are also aware of it. ಬಿ.ಜೆ.ಪಿ.ಯವರು ಪ್ಯಾಲೇಸ್ ಗ್ರೌಂಡ್‌ನಲ್ಲಿ ಸಮ್ಮೇಳನ ಮಾಡಬೇಕೆಂದು ನೀವು ತಿಳಿದುಕೊಳ್ಳಿ. Who is going to give them the permission? It is our DPAR which gives the permission. What it means? Does it not mean that it is the government's property? It's a government property.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಚಿವರೇ, ಹಾಗಾದರೆ ಈ ಬಿಲ್‌ನ ಅವಶ್ಯಕತೆ ಇಲ್ಲ. Government property ಗೆ ಬಿಲ್ ಏತಕ್ಕೆ ತರುತ್ತೀರಿ? ಯಾರಿಗೆ T.D.R. ಏತಕ್ಕೆ ಕೊಡಬೇಕು? Property rights declare ಆಗುವವರೆಗೂ ಈ ಬಿಲ್‌ನ ಅವಶ್ಯಕತೆ ಇಲ್ಲ. ಯಾರಿಗೋಸ್ಕರ ಈ ಬಿಲ್ ತರುತ್ತೀರಿ? ಆ ಜಾಗ ಸರ್ಕಾರದ್ದು ಆದಲ್ಲಿ ನೀವು ಯಾರಿಗೋಸ್ಕರ ಬಿಲ್ ತರುತ್ತಿದ್ದೀರಿ?

**ಶ್ರೀ ಎಚ್. ಕೆ. ಪಾಟೀಲ್:-** ಸುಮಾರು 28 ವರ್ಷದಿಂದ ನಮ್ಮ ಆಸ್ತಿ ನಮ್ಮದು ಎಂದು ಹೇಳಿ ಸರ್ಕಾರಕ್ಕೆ ಕೊಡುವುದನ್ನು ನಿರಾಕರಿಸುವ ಪ್ರಕರಣ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಅವರ ಸರ್ಕಾರ ಕೂಡ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಎಚ್.ಕೆ. ಪಾಟೀಲ್:-** ಸರ್ಕಾರ ನಮ್ಮದಾದರೇನು, ನಿಮ್ಮದಾದರೇನು? ಕರ್ನಾಟಕ ರಾಜ್ಯಕ್ಕೆ ಸೇರಿದ್ದು. ಸುಮಾರು ಇಪ್ಪತ್ತೆಂಟು ವರ್ಷಗಳ ಕಾಲ ಅದರ ಕಡೆಗೆ ಗಮನಹರಿಸುವುದಿಲ್ಲ. As if we have brought it just like this. No. Your government also took the same stand.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ...

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಮಾನ್ಯ ಸಿ.ಟಿ. ರವಿಯವರ ಮಾತು ಮುಗಿಯಲಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಲು ಮಾನ್ಯ ಸಿ.ಟಿ. ರವಿಯವರನ್ನು ಕೇಳಿಕೊಂಡಿದ್ದೇನೆ. **(ಗೊಂದಲ)** ನಾನು ಮಾತನಾಡಿರುವುದು ಮಾನ್ಯ ಸಭಾಪತಿಯವರಿಗೂ ಗೊತ್ತು. ಮತ್ತು ಮಾನ್ಯ ಸಿ.ಟಿ. ರವಿಯವರನ್ನು just ಕೇಳಿಕೊಂಡಿದ್ದೇನೆ. ಮಾನ್ಯ ಸಿ.ಟಿ. ರವಿಯವರೇ, ಒಂದು ನಿಮಿಷ yield ಆಗಿ.

**ಸಭಾಪತಿಯವರು:-** ಮಾನ್ಯ ಸಿ.ಟಿ. ರವಿಯವರೇ ತಾವು yield ಆಗಿದ್ದೀರಿ. ತಾವು ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ನಮ್ಮೆಲ್ಲರ vested interest ಇದೆ. ಏನೆಂದರೆ, ನಮ್ಮ ರಾಜ್ಯದ ಜನರಿಗೆ ಯಾವುದೇ ತಪ್ಪು ಅಭಿಪ್ರಾಯಗಳು ಹೋಗಬಾರದು. ಯಾವುದೋ ಒಂದು ಮನಸ್ಸಿನಲ್ಲಿಟ್ಟುಕೊಂಡು, ಇದನ್ನು vengeance ಇಟ್ಟುಕೊಂಡು ಮಾಡಿದ್ದಾರೆ ಎನ್ನುವುದು ಹೋಗಬಾರದು ಎಂಬ ನಮ್ಮೆಲ್ಲರ ಅಭಿಪ್ರಾಯವಾಗಿದೆ. ಮಾನ್ಯ ಕಾನೂನು ಸಚಿವರು veteran leader ಮತ್ತು ಅವರು ಹಿರಿಯ ವಕೀಲರು. ಇದರಲ್ಲಿ ಒಂದು ಹೇಳಿದ್ದೀರಿ. Who is the custodian of this property? Of course, ಸರ್ಕಾರದ ಮುಖ್ಯ ಕಾರ್ಯದರ್ಶಿಯವರೇ, ಯಾರಾದರೂ ಇದನ್ನು ಬಾಡಿಗೆ ಕೇಳಿದರೆ ಮತ್ತೊಂದು ಕೇಳಿದರೆ ಕೊಡಬೇಕೆಂಬ ಬಗ್ಗೆ ವಿಚಾರವಿತ್ತು. Then why has the Supreme Court given this suggestion?

Why has it given this suggestion? That means, 'the government has failed to convince the court' ಎಂತಾ ಆಯಿತು. When the government has failed to convince the court, the government has brought this Bill here. ಆದ್ದರಿಂದ ನಾವೆಲ್ಲರೂ ಸೇರಿ ಹೇಳುತ್ತಿದ್ದೆವೆ. ಕಾಲ ಮಿಂಚಿಲ್ಲ. ಇನ್ನೂ ಒಂದು ಸಾರಿ ಕುಳಿತುಕೊಂಡು ಮಾತನಾಡಿ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದು clarification ಇದೆ. ಏಕೆಂದರೆ, ಎಲ್ಲಾ ಸರ್ಕಾರಗಳು ಈ ಭೂಮಿಯನ್ನು ಸರ್ಕಾರದ ವಶದಲ್ಲಿ ಇಟ್ಟುಕೊಳ್ಳಬೇಕೆಂಬ ಬಗ್ಗೆ ಪ್ರಯತ್ನ ನಡೆಸಿರುವಂತಹದ್ದು. ಕಾನೂನು ಕೂಡ ಆಗಿದೆ. ಆ 11 ಕೋಟಿ ರೂಪಾಯಿಗಳಿಗೆ ಬೆಂಗಳೂರಿನ ಇಡೀ ಪ್ಯಾಲೇಸಿನ ಆವರಣದ ಜಾಗವನ್ನು acquire ಮಾಡಿರುವಂತಹದ್ದು, ಕಾನೂನು ಪ್ರಕಾರ ಆಗಿರುವಂತಹದ್ದು. ಅದು ಇದುವರೆವಿಗೂ stay ಆಗಿಲ್ಲ ಎಂದು ಹೇಳಿದ್ದಾರೆ. ೩,೦೦೦ ಕೋಟಿ ರೂಪಾಯಿಗಳು ನ್ಯಾಯಯುತವಾದಂತಹ T.D.R. ಎಂದು ಮಾನ್ಯ ರವಿಯವರು ಮತ್ತು ನೀವೆಲ್ಲರೂ ಮಂಡಿಸುತ್ತಿದ್ದೀರಾ? ... ಮಾನ್ಯ ರವಿಯವರೇ, ಒಂದು ನಿಮಿಷ ತಾವು ಹೇಳುತ್ತಿರುವುದು. ೩,೦೦೦ ಕೋಟಿ ರೂಪಾಯಿ ಇರಬಹುದು. ಇಡೀ ಬೆಂಗಳೂರಿಗೆ ಒಂದು ಕಾನೂನು ಮಾಡಿ. ಇದು ಸರಿಯಾಗಿದೆ ಎನ್ನುವ ರೀತಿಯಲ್ಲಿ ಹೇಳಿರುವಂತಹದೊಂದು. ಎರಡನೆಯದಾಗಿ, ದ್ವೇಷದಿಂದ ಮಾಡುತ್ತಿದ್ದೀರಿ. ಮಾನ್ಯ ಸಭಾಪತಿಯವರೇ, ಇದೇ ಸದನ. ಇಲ್ಲಿರುವಂತಹ ನಮ್ಮ ಸರ್ಕಾರವೇ ಈ ಜಾಗವೆಲ್ಲಾ ನಮ್ಮದು ಎಂದು ಹೇಳಿ, ಒಂದು ಕಾನೂನನ್ನು ಮಾಡಿ ಒಂದು ತೀರ್ಮಾನಕ್ಕೆ ಬಂದ ನಂತರ ತಾವು ಆ stand ನಿಂದ ಹಿಂದಕ್ಕೆ ಹೋಗಬೇಕೆಂಬ ಬಗ್ಗೆ ತಾವೇನಾದರೂ ಪ್ರಸ್ತಾಪ ಮಾಡಿದರೆ, ಆ stand ಗೆ ಹೋಗಬೇಕಾ ಎಂದು ನಾವು ಚರ್ಚೆ ಮಾಡುತ್ತೇವೆ. ಈ ಭೂಮಿ ನಮಗೆ ಬೇಡ ಎಂದು ನಾವು ತೀರ್ಮಾನಕ್ಕೆ ಬರಬೇಕಾ. ನಮ್ಮ ಭೂಮಿ ನಮ್ಮ ಕಾನೂನು ಕೂಡ ಆ Act ಕೂಡ ರದ್ದಾಗಿಲ್ಲ. ಇಲ್ಲದೇ ಹೋಗಿದ್ದರೆ, ಈಗಾಗಲೇ ಅವರು land conversion ಮಾಡಿಕೊಳ್ಳಬೇಕಾಗಿತ್ತು. Plan sanction ಮಾಡಿಸಿಕೊಳ್ಳಬೇಕಾಗಿತ್ತು. ಹತ್ತಾರು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಅದನ್ನು ಅಭಿವೃದ್ಧಿ ಮಾಡಿಕೊಳ್ಳಬೇಕಾಗಿತು. ಇದರಲ್ಲಿ dispute ಇದೆ. ಈ dispute ಮಧ್ಯೆದಲ್ಲಿ ಇರುವುದಕ್ಕೋಸ್ಕರನೇ ಇಷ್ಟೊಂದು ಆಗಿರವುದರ ಬಗ್ಗೆ ಅರ್ಥ ಮಾಡಿಕೊಳ್ಳಿ. ಬಿಲ್‌ನ್ನು ಏತಕ್ಕೆ ತರುತ್ತಿದ್ದೇವೆ. ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ ಮುಂದೆ ಹೋಗುವುದಕ್ಕೆ ಇನ್ನೂ ತೀರ್ಮಾನವಾಗಿಲ್ಲ. ಇದನ್ನು ಉಳಿಸಿಕೊಳ್ಳಬೇಕು ಎಂಬ ಬಗ್ಗೆ ನಮ್ಮ ಹೋರಾಟ

ಇರುವಂತಹದ್ದು. ಇದಕ್ಕೆ ಏನಾದರೂ ಮಾಡಿಬಿಟ್ಟಿದ್ದೇವೆ. ನಿಮ್ಮ stand ನ ವಿರುದ್ಧ ಹೋಗಿದ್ದರೆ, ನೀವು ಅದನ್ನು ಸ್ಪಷ್ಟವಾಗಿ ಹೇಳಿಬಿಡಿ. ಇಲ್ಲಿಗೆ ಚರ್ಚೆಯನ್ನು ಮುಗಿಸಿ ಬಿಡೋಣ.

(ಮುಂದು)

(177) 10.03.2025/5.00/ಟಿಸಿಹೆಚ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, 1996ನೇ ಇಸವಿಯಲ್ಲಿ ರೂ. 11 ಕೋಟಿ compensation ಸರ್ಕಾರದ ಕಡೆಯಿಂದ declare ಮಾಡಿದ್ದೇವೆಂದು ಹೇಳಿದ್ದಾರೆ. Ownership ಸರ್ಕಾರದ್ದು ಆದಲ್ಲಿ declare ಯಾರಿಗೆ ಮಾಡಿದ್ದಾರೆ? Compensation ಯಾರಿಗೆ ಕೊಟ್ಟಿದ್ದಾರೆ? ಸರ್ಕಾರ ಯಾರಿಗೆ compensation ಕೊಡುವುದಕ್ಕೆ ರೂ. 11 ಕೋಟಿ compensation declare ಮಾಡಿದ್ದಾರೆ? ಅಂದರೆ absolute owner ಸರ್ಕಾರ ಎಂದು ಹೇಳುವುದಕ್ಕೆ ಯಾವತ್ತೂ ಕೂಡ claim ಮಾಡಿಲ್ಲ. 1996ರಲ್ಲೂ ಕೂಡ government is the absolute owner ಎಂದು claim ಮಾಡಿಲ್ಲ. ಅದಕ್ಕೆ ಸಂಬಂಧಪಟ್ಟಂತೆ ವ್ಯಾಜ್ಯ ಇನ್ನೂ ನ್ಯಾಯಾಲಯದಲ್ಲಿದೆ. ಅಂತಿಮ ತೀರ್ಪು ಇನ್ನೂ ಬಂದಿಲ್ಲ. ಹಾಗಾಗಿ, ಅಂತಿಮ ತೀರ್ಪು ಬರದೇ ಇರುವುದರಿಂದ ಈ ವಿಧೇಯಕನ್ನು ತರುತ್ತಿದ್ದೇವೆಂದು ಹೇಳುತ್ತಿದ್ದಾರೆ. ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಸರ್ಕಾರಕ್ಕೆ ವಿಶ್ವಾಸವಿದೆ ಎನ್ನುವುದಾದರೆ ನಾವು ಯಾರಿಗೂ compensation ಕೊಡಬೇಕಾದ ಅವಶ್ಯಕತೆ ಇಲ್ಲ. ಆದರೆ ಸರ್ಕಾರದ್ದು ಒಡೆತನ ಇದೆಯೇ. ರಾಜಮನೆತನದ ಹಕ್ಕು ಇದೆ ಎನ್ನುವುದಾದರೆ ರಾಜಮನೆತನದವರನ್ನು ಮಾತುಕತೆಗೆ ಕರೆದು ಗೌರವಯುತವಾಗಿ ಬಗೆಹರಿಸಬೇಕು ಎಂದು ನನ್ನ ವಿನಂತಿ. ಈ ವಿಧೇಯಕದ ಮೂಲಕ ಅಲ್ಲ. ಅಕಸ್ಮಾತ್ ನೀವು ಈ ವಿಧೇಯಕವನ್ನು ತರಲೇಬೇಕೆಂದರೆ ಬೆಂಗಳೂರಿಗೆ ಎಂದು ವಿಧೇಯಕವನ್ನು ತೆಗೆದುಕೊಂಡು ಬನ್ನಿ. ಬೆಂಗಳೂರಿಗೆ ಎಂದು policy ಯನ್ನು ತೆಗೆದುಕೊಂಡು ಬನ್ನಿ. ಬರೀ ಒಂದು case ಗೋಸ್ಕರ ಒಂದು property ಗೆ ಮಾತ್ರ ವಿಧೇಯಕವನ್ನು ತರುವುದು ಅದು ಇಡೀ ಸದನದ sanctity ಯನ್ನು ಗೌರವಿಸುತ್ತದೆ ಎಂದು ನನಗೆ ಅನಿಸುವುದಿಲ್ಲ. ಹಾಗಾಗಿ, ನೀವು ವಿಧೇಯಕವನ್ನು ತರಬೇಕೆಂದರೆ, ಇಡೀ ಬೆಂಗಳೂರಿಗೆ ತೆಗೆದುಕೊಂಡು ಬನ್ನಿ. ಆಗ ನೀವು ಸಮಾನತೆಯನ್ನು ಎತ್ತಿ ಹಿಡಿದಂತಾಗುತ್ತದೆ. ನೀವು ಇನ್ನೊಬ್ಬರಿಗೆ Guidance Value ಕೊಡುತ್ತೀರಿ, ಆದರೆ ಇವರಿಗೆ ಕೊಡುವುದಿಲ್ಲವೆಂದರೆ ಅದು wrong massage ಹೋಗುತ್ತದೆ.

**ಸಭಾಪತಿಯವರು:-** ಶ್ರೀ ಪ್ರತಾಪ್ ಸಿಂಹ ನಾಯಕ್ ರವರೇ, ತಾವು ಮಾತನಾಡಿ. ಇನ್ನೂ 12 ಜನ ಮಾನ್ಯ ಸದಸ್ಯರು ಮಾತನಾಡಲು ಹೆಸರು ಕೊಟ್ಟಿದ್ದಾರೆ.

**ಶ್ರೀ ಪ್ರತಾಪ್ ಸಿಂಹ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಇದರ ಬಗ್ಗೆ ಮಾನ್ಯ ಸದಸ್ಯರು ವಿವರಣೆಯನ್ನು ಕೊಟ್ಟಿದ್ದಾರೆ. ಬಹುಶಃ ಕಾನೂನು ಸಚಿವರು ಮಾತನಾಡುವಾಗ ಈ ವಿಧೇಯಕವನ್ನು ತಂದಾಗ ಈ ಸದನದಲ್ಲಿ ಯಾರು ಇದ್ದರು ಎಂದು ಹುಡುಕುವ ಪ್ರಯತ್ನವನ್ನು ಮಾಡಿದ್ದರು.

**ಸಭಾಪತಿಯವರು:-** ಶ್ರೀ ಪ್ರತಾಪ್ ಸಿಂಹ ನಾಯಕ್‌ರವರೇ, ಬರೀ 5 ನಿಮಿಷದಲ್ಲಿ subject ಮೇಲೆ ಮಾತನಾಡಿ. ಅವರೆಲ್ಲಾ ಮಾತನಾಡಿದ್ದು ಬಿಟ್ಟು ಮಾತನಾಡಿ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:-** ಮಾನ್ಯ ಸಭಾಪತಿಯವರೇ, ಬೇರೆಯವರು ಮಾತನಾಡಿದ್ದನ್ನು ನಾನು ಮಾತನಾಡುವುದಿಲ್ಲ. ನಮಗೆ ಸಿಕ್ಕಿರುವಂಥದ್ದು ಇಬ್ಬರು. ಮಾನ್ಯ ಸಭಾಪತಿಯವರು ಮತ್ತು ನೀವು. ಅಂದರೆ ಇದರ ಪ್ರಯತ್ನ ಪ್ರಾರಂಭವಾಗಿ ಒಂದು generation ದಾಟಿದೆ. ನಾನು ಮೊದಲ ಎರಡು ಪ್ಯಾರಾಗಳನ್ನು ಮಾತ್ರ ಓದುತ್ತೇನೆ. ಈಗ ಕರ್ನಾಟಕ ರಾಜ್ಯದೊಂದಿಗೆ ನಿಹಿತವಾಗಿರುವ ಭೂಮಿಯ ನಷ್ಟ ಪರಿಹಾರವನ್ನು ನಿರ್ಧರಿಸಲು ಒಂದು ವಿಧೇಯಕ.1996 (1996ರ ಕರ್ನಾಟಕ ಅಧಿನಿಯಮ 18)ರ 8 ಮತ್ತು 9ನೇ ಪ್ರಕರಣಗಳ ಅನುಸಾರವಾಗಿ ಹನ್ನೊಂದು ಕೋಟಿ ರೂಪಾಯಿಗಳೆಂದು ನಿರ್ಧರಿಸಲಾಗಿರುವುದರಿಂದ ಎಂದು ಹೇಳಿದ್ದೀರಿ. 1996ರಲ್ಲಿ ಈ ನಿರ್ಣಯ ಮಾಡಿದಾಗ, ಈ ನಿರ್ಣಯವನ್ನು ಒಪ್ಪದೇ ಅವರು ಹೋಗಿರುತ್ತಾರೆ. ಈಗ ಅದು ಸುಪ್ರೀಂ ಕೋರ್ಟ್‌ನಲ್ಲಿದೆ. ಬಾಬಾ ಸಾಹೇಬ್ ಡಾಕ್ಟರ್ ಬಿ.ಆರ್.ಅಂಬೇಡ್ಕರ್ ರವರು "Democracy is not merely a form of Government" ಎಂದು ಹೇಳಿದ್ದಾರೆ. ಸರ್ಕಾರ ಎಂದರೆ, ಪ್ರಜಾಪ್ರಭುತ್ವದ ಒಂದು ವಿಧ ಮಾತ್ರವಲ್ಲ, it is essentially an attitude of respect and reverence towards fellowmen. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವಂತಹ ಒಂದು ದೊಡ್ಡ ಜವಾಬ್ದಾರಿ ಸರ್ಕಾರಕ್ಕೆ ಇದೆ. 1996 ರಲ್ಲಿ ಹನ್ನೊಂದು ಕೋಟಿ ರೂಪಾಯಿಗಳೆಂದು ನಿರ್ಧರಿಸಲಾಗಿತ್ತು. ಆದರೆ ಸುಮಾರು 28 ವರ್ಷಗಳ ನಂತರ ಇವತ್ತು ನಾವು ಚರ್ಚೆ ಮಾಡುತ್ತಿದ್ದೇವೆಂದರೆ, ಇದು ಸುಮಾರು 28 ವರ್ಷಗಳ ಕಾಲ ಇದು ಚರ್ಚೆಯಾಗಿದೆ. ಈಗ ಅದು ಕೋರ್ಟ್‌ನಲ್ಲಿದೆ. ಆ ಕಾಲಕ್ಕೆ ಸರ್ಕಾರಕ್ಕೆ ಈ ಭೂಮಿ ಬೇಕು ಎಂದು ಹೇಳುವ ದೃಷ್ಟಿಯಲ್ಲಿ ಅವರು ತೆಗೆದುಕೊಂಡರು ಎಂದು ಹೇಳುವುದನ್ನು ಇಲ್ಲಿ ಯಾರೂ ವಿರೋಧಿಸುತ್ತಿಲ್ಲ. ಇಲ್ಲಿ ನಾವು ಕೂಡ ವಿರೋಧಿಸುತ್ತಿಲ್ಲ. ಇಲ್ಲಿ ಪ್ರಶ್ನೆ ಇರುವಂಥದ್ದು ಏನೆಂದರೆ, ನ್ಯಾಯಾಲಯದಲ್ಲಾದರೂ ಕೂಡ ತೀರ್ಪು ಹೇಗೆ ಕೊಡುತ್ತಾರೆ? ಈಗ ನಾವು ಜನತಾ ನ್ಯಾಯಾಲಯ ಎಂದು ಏಕೆ ಮಾಡಿದ್ದೇವೆ? ಯಾವುದೇ ಸಮಸ್ಯೆಗೆ ಪರಿಹಾರ ಹೇಗೆಂದರೆ ಸಂಬಂಧಪಟ್ಟ ವ್ಯಕ್ತಿಗಳ ಜೊತೆಗೆ ಕುಳಿತು ಮಾತನಾಡುವಂಥದ್ದು. ಇಲ್ಲವೇ ಕೋರ್ಟಿನ ನಿರ್ಣಯಕ್ಕೆ ನಾವು ಬದ್ಧರಾಗುವಂಥದ್ದು. ಇವೆರಡೇ ದಾರಿ ಇರುವಂಥದ್ದು. ಆಗಿನ ಕಾಲದಲ್ಲಿ ಅವರು ಹನ್ನೊಂದು ಕೋಟಿಗಳಿಗೆ ಒಪ್ಪಲಿಲ್ಲ. ಇವತ್ತು ಅದರ ಬಗ್ಗೆ ಚರ್ಚೆಯಾಗಿ ಬಂದು ಅವರು ಸುಪ್ರೀಂಕೋರ್ಟಿನವರೆಗೆ ಹೋಗಿದ್ದಾರೆ. ಈಗ ಯಾರು ಲ್ಯಾಂಡ್ ಬಿಡುತ್ತಾರೆ? ಈಗ ರಸ್ತೆ ಮಾಡುವುದಕ್ಕೆ ಲ್ಯಾಂಡ್ acquire ಮಾಡುವಾಗ ಒಂದು ಕಾನೂನು ತಂದಿದ್ದೇವೆಂದು ಹೇಳಿದರು. ನಮ್ಮ ಭೂಮಿಯ ಮೇಲೆ National Highway ರಸ್ತೆ ಹೋಗಲಿ ಎಂದು ಅಪೇಕ್ಷೆಪಡುತ್ತಾರೆ. ಏಕೆಂದರೆ ಅಷ್ಟು ಪರಿಹಾರ ಅವರಿಗೆ ಸಿಗುತ್ತದೆ. ಲ್ಯಾಂಡ್ ಲಾರ್ಡ್ ಎಂದು ಹೇಳುವಂಥದ್ದು ಈಗ ಲಾರ್ಡ್‌ಗಳೆಲ್ಲಾ ಲ್ಯಾಂಡ್ ಇಲ್ಲದವರೇ ಆಗಿದ್ದಾರೆ. ಒಂದು ಕಾಲದಲ್ಲಿ ಇತ್ತು. ನಾವು ಇಲ್ಲಿ ಮತ್ತೆ ಮತ್ತೆ ಒತ್ತಾಯ ಮಾಡುವುದೇನೆಂದರೆ, ಆ ಕುಟುಂಬದ ಬಗ್ಗೆ ಹೇಳುವಾಗ ಅದರ ಹಿಂದೆ ಒಂದು ಭಾವನೆ ಇದೆ. ಯಾವುದೇ ಕಾರಣಕ್ಕೂ ಕೂಡ ನಾವು ಅದನ್ನು ಹಗುರವಾಗಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಹಿಂದೆ ತೀರ್ಮಾನ ಆಗದೇ ಇರಬಹುದು. ಆದರೆ ಈಗ ಏಕೆ ಕುಳಿತು ಮಾತನಾಡಬಾರದು? ಅವರು ಈ ಹಿಂದೆ

ಒಪ್ಪದಿದ್ದರೆ, ಈಗ ಏಕೆ ಒಪ್ಪಬಾರದು? Generation ದಾಟಿ ಹೋದಂತೆ ತಂದೆಯ ಅಜ್ಜನವರ ಕಾಲದಲ್ಲಿ ಆಗದೇ ಇರತಕ್ಕಂಥ ಎಷ್ಟೋ ವ್ಯಾಜ್ಯಗಳ ನಿರ್ಣಯಗಳು ಈಗಿನ ಹೊಸ Generation ಜೊತೆ ಇತ್ಯರ್ಥ ಆಗುತ್ತದೆ. ಅದನ್ನು ಸರ್ಕಾರ ತೋರಿಸಿಕೊಳ್ಳಬೇಕಲ್ಲವೇ? ಆ ಅರಮನೆಗೆ ಅಥವಾ ಆ ಕುಟುಂಬ ಕೊಟ್ಟಂತಹ ಒಂದು ಕೊಡುಗೆಯನ್ನು ನಾವು ಗೌರವಿಸುತ್ತೇವೆ. ನಾವು ಮತ್ತು ಅವರೆಲ್ಲಾ ಕುಳಿತುಕೊಂಡು ಇದರ ಬಗ್ಗೆ ಮಾತನಾಡುತ್ತೇವೆ. ಬರೀ ರಸ್ತೆಯ ಬಗ್ಗೆ ಮಾತ್ರ ಮಾತನಾಡುತ್ತೇವೆಂದರೆ, ಇಲ್ಲಿ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಸಾರ್ವಜನಿಕ ಹಿತಾಸಕ್ತಿಯಿಂದ ಅಲ್ಲಿ ರಸ್ತೆ ಮಾಡಬೇಕು ಎಂದು ಹೇಳುವುದರಲ್ಲಿ ಎರಡು ಮಾತಿಲ್ಲ. ಹಾಗೆಂದು ನಾವು ಕಾನೂನು ತರುತ್ತೇವೆ, ನಾವು ಅದನ್ನು ಹಾಗೆಯೇ ಮಾಡುತ್ತೇವೆಂದು ಹೇಳಿಕೊಂಡು ಒಂದು ರೀತಿಯಲ್ಲಿ ನಾವು ಎಲ್ಲಯವರೆಗೆ ನೇರವಾಗಿ ಹೋಗುವಂಥದ್ದು. ನಾವು ಮಾತನಾಡಿದರೆ ಅದು ರಾಜಕೀಯ ಆಗುತ್ತದೆ. 5 ಎಕರೆ ಜಮೀನು ಹೋದರೆ, ಎಲ್ಲೋ ಒಂದು ಕಡೆ 14 ಸೈಟ್‌ಗಳು ಬೇಕೆಂದು ನಾವು ಕೂಡ ಕೇಳುತ್ತೇವೆ. ನಮ್ಮ land acquire ಮಾಡಿಕೊಂಡ ಮೇಲೆ ಒಳ್ಳೆಯ ಬೆಲೆ ಬಾಳುವ ಜಾಗದಲ್ಲಿಯೇ ನಮಗೆ 14 ಸೈಟ್‌ಗಳು ಬೇಕು. ಯಾರಿಗೆ ಬೇಕೆಂದರೆ, ಎಲ್ಲರಿಗೂ ಬೇಕು. ಹಾಗಿದ್ದಲ್ಲಿ ಒಂದು ರಾಜಮನೆತನದವರು ನಮ್ಮ ಜಾಗಕ್ಕೆ ನ್ಯಾಯವಾದಂತಹ ಬೆಲೆ ಸಿಗಬೇಕೆಂದು ಕೇಳುವುದರಲ್ಲಿ ಏನು ತಪ್ಪಿದೆ? ಅದು ಕೂಡ ಆ ಸ್ಥಾನಮಾನಕ್ಕೆ ಸರಿಯಾಗಿ ಅವರು ತಮ್ಮ ಬದುಕು ನಡೆಸುವುದಕ್ಕೆ ಎಷ್ಟು ಕಷ್ಟಪಡುತ್ತಿದ್ದಾರೋ ಯಾರಿಗೆ ಗೊತ್ತು. ಈ ದೃಷ್ಟಿಯಲ್ಲಿ ಅದು ಸರ್ಕಾರದ್ದೇ ಜಾಗ ಎಂದು ಹೇಳಿದರೆ, ನಾವೆಲ್ಲಾ ಇಷ್ಟು ಚರ್ಚೆ ಮಾಡುವ ಪ್ರಶ್ನೆಯೇ ಇಲ್ಲ. ಹಾಗಾಗಿ, ಆ ದೃಷ್ಟಿಯಲ್ಲಿ ನಾನು ಈಗಲೂ ಕೂಡ ಸರ್ಕಾರವನ್ನು ಒತ್ತಾಯಿಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರು ಹೇಳಿದಂತೆ, ಸರ್ಕಾರ ಬಿಲ್ ತರುವುದಿದ್ದರೆ ಎಲ್ಲರಿಗೂ ಅನ್ವಯವಾಗುವಂತೆ ತರಲಿ, ಆಗ ಏನೂ ಸಮಸ್ಯೆ ಆಗುವುದಿಲ್ಲ. ಆದರೆ ಈಗ ಈ ರೀತಿ ತರುವಂತಹ ಪ್ರಯತ್ನ ಕೇವಲ ಒಂದು ಕುಟುಂಬಕ್ಕೆ ತರುತ್ತಿದೆ ಎಂದು ಹೇಳುವಂತಹ ಸಂದೇಶ ಹೋಗುತ್ತದೆ. ಇಡೀ ನಮ್ಮ ಕರ್ನಾಟಕದಲ್ಲಿ ಆ ಮನೆತನದ ಬಗ್ಗೆ, ಅವರ ಕೊಟ್ಟ ಕೊಡುಗೆಗಳ ಬಗ್ಗೆ ಗೌರವವಿದೆ. ಹಾಗಾಗಿ, ಅವರನ್ನು ಗೌರವಯುತವಾಗಿ ನಡೆಸಿಕೊಳ್ಳುವುದರಿಂದ ಸರ್ಕಾರ ಸಣ್ಣವರಾಗುವುದಿಲ್ಲ. ಈ ರೀತಿ ವಿಧೇಯಕವನ್ನು ತರುವುದಕ್ಕಿಂತ, ಈಗಲೂ ಕೂಡ ಅವರನ್ನು ಕರೆದು ಮಾತನಾಡಬಹುದು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

**ಸಭಾಪತಿಯವರು:-** ಶ್ರೀ ಎಂ.ನಾಗರಾಜು ರವರೇ, ತಾವು ಮಾತನಾಡಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾತನಾಡುತ್ತೇನೆ. ಕ್ಷಮೆ ಇರಲಿ.

**ಸಭಾಪತಿಯವರು:-** ಶ್ರೀ ಎನ್.ರವಿಕುಮಾರ್ ರವರೇ ತಾವು ಮಾತನಾಡಿ. ನಿಮ್ಮ ಹೆಸರು ಕರೆದಾಗ ತಾವು ತಮ್ಮ ಸ್ಥಾನದಲ್ಲಿ ಇರಬೇಕು. ಆಯಿತು ಮಾತನಾಡಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಬೆಂಗಳೂರು ಅರಮನೆ ಭೂ ಬಳಕೆ ಮತ್ತು ನಿಯಂತ್ರಣ 2025, ಈ ವಿಧೇಯಕವನ್ನು ತಂದಿರತಕ್ಕಂಥ ಈ ಸಂದರ್ಭದಲ್ಲಿ ನಾನು ಈ ಬಿಲ್‌ನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ

ಇಚ್ಛೆಪಡುತ್ತಿದ್ದೇನೆ. ಮಾನ್ಯ ಕಾನೂನು ಸಚಿವರು ಮಾತನಾಡುವಾಗ 1996ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಅದನ್ನು acquire ಮಾಡಿಕೊಂಡು, ಅದಕ್ಕೆ ಹನ್ನೊಂದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿ, acquisition ಕೂಡ ಮಾಡುತ್ತಾರೆ. ಅರಮನೆಯ ಹಕ್ಕನ್ನು ಪ್ರತಿಪಾದನೆ ಮಾಡತಕ್ಕಂಥವರು ಅದನ್ನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ ಸಂದರ್ಭದಲ್ಲಿ ಅದಕ್ಕೆ ಯಾವುದೇ stay order ಕೊಟ್ಟಿರುವುದಿಲ್ಲ. Acquisition ಮಾಡಿರುವುದನ್ನು ಅವರು upheld ಮಾಡುತ್ತಾರೆ. ಸರ್ಕಾರದ ಪರವಾಗಿ ತೀರ್ಮಾನ ಕೊಡುತ್ತಾರೆ. ಇವತ್ತಿನವರೆಗೂ ಕೂಡ ಸುಪ್ರೀಂಕೋರ್ಟ್‌ನಲ್ಲಿ ಆ High Court Order ಅನ್ನು evict ಮಾಡಿಲ್ಲ ಅಥವಾ quash ಮಾಡಲಿಲ್ಲ. ಅಂದರೆ ಅಲ್ಲಿ ಇರತಕ್ಕಂಥ 472 ಎಕರೆ ಜಮೀನು ರಾಜ್ಯ ಸರ್ಕಾರದ ಅಧೀನದಲ್ಲಿದೆ ಎಂದು ನಾನು ಭಾವಿಸಿದ್ದೇನೆ. ಹಾಗಾಗಿ, ಆ ownership ನಮ್ಮದು ಎಂದು ಹೇಳುವುದನ್ನು. . .

**ಶ್ರೀ ಶರವಣ.ಟಿ.ಎ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನಾನು ಮಾತನಾಡುವಾಗ ಅಡಚಣೆ ಮಾಡಬಾರದು ಎಂದು ಮನವಿಯನ್ನು ಮಾಡುತ್ತಿದ್ದೇನೆ. ಅವರು ಮಾತನಾಡುವಾಗ ನಾನು ಮಾತನಾಡನಾಡಿಲ್ಲ.

**ಸಭಾಪತಿಯವರು:-** ಶ್ರೀ ಶರವಣರವರೇ, ತಾವು ಮಾತನಾಡಬೇಡಿ, ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾಗಿರತಕ್ಕಂಥ ವಿಚಾರವಾಗಿದೆ. ಒಂದು ಪ್ರತಿಷ್ಠಿತ ಜಾಗವಾಗಿದೆ. ಅದು ಸದಾಶಿವನಗರ ಇರಬಹುದು, ಇನ್ನೊಂದು ಇರಬಹುದು ಮತ್ತು ಅಲ್ಲಿ ಜಯಮಹಲ್ ಪ್ರಶ್ನೆ ಬರುವುದಿಲ್ಲ. ಅರಮನೆ ಎಂದರೆ ಅದರದೇ ಆದಂತಹ ಐತಿಹಾಸಿಕ ಹಿನ್ನೆಲೆ ಇರತಕ್ಕಂಥ ಜಾಗದಲ್ಲಿ, ಬಹಳ ಪ್ರತಿಷ್ಠಿತ ಜಾಗದಲ್ಲಿ ನಾವು ಸಾರ್ವಜನಿಕ ಉಪಯೋಗಕ್ಕೋಸ್ಕರ 472 ಎಕರೆ ಜಮೀನಿಗೆ ಹನ್ನೊಂದು ಕೋಟಿ ರೂಪಾಯಿಯನ್ನು 1996ರಲ್ಲೇ fix ಮಾಡಿದ್ದರು. ಅದೇ ಅರಮನೆಯ ಮಾಲೀಕರು ಎಂದು ಹೇಳಿಕೊಳ್ಳತಕ್ಕಂಥವರು ಯಾರು ಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದ್ದರೋ; ಅದಕ್ಕೆ ಯಾವುದೇ ರೀತಿಯಾದಂತಹ ಮಾನ್ಯತೆ ಸಿಕ್ಕಿರುವುದಿಲ್ಲ. ಹೈಕೋರ್ಟ್‌ನಲ್ಲಿ ಕೊಟ್ಟಿರತಕ್ಕಂಥ ತೀರ್ಮಾನವನ್ನು upheld ಮಾಡಿರುವುದರಿಂದ, ಸರ್ಕಾರದ ಮಾಲೀಕತ್ವ ಇವತ್ತಿನಗೂ ಇದೆಯೆಂದು ತಿಳಿದುಕೊಂಡಿದ್ದೇನೆ. ಇದರ ಜೊತೆಗೆ ಹೇಳುವುದಾದರೆ, ಯಾವಾಗ ಅವರಿಗೆ compensation ಕೊಟ್ಟಿದ್ದರೋ ಅದನ್ನು ಅವರು receive ಮಾಡಿಕೊಂಡಿರುವುದಿಲ್ಲ ಎನ್ನುವುದು there is a dispute on the matter of compensation ಎಂದು ಹೇಳುತ್ತಿದ್ದೇನೆ. When there is a dispute regarding matter of compensation and matter is pending before the Supreme Court ಎಂದು ಹೇಳುತ್ತಿರುವ ಸಂದರ್ಭದಲ್ಲಿ ಈಗ ಸುಪ್ರೀಂ ಕೋರ್ಟ್ ಕೊಟ್ಟಿರತಕ್ಕಂಥ ತೀರ್ಮಾನವನ್ನು ನೋಡಿದಾಗ, ಸುಮಾರು ರೂ.3,000 ಕೋಟಿಗಳಷ್ಟು TDR ಕೊಡತಕ್ಕಂಥದ್ದು ತೀರ್ಮಾನ ಮಾಡಿದ್ದಾರೆ. ಡಿಸೆಂಬರ್ 10ನೇ ತಾರೀಖು ಒಂದು ಆದೇಶ ಮಾಡಿದ್ದಾರೆ. ಅದು ಖಂಡಿತವಾಗಿಯು ಕೂಡ ನಮ್ಮ ರಾಜ್ಯದ ಬೊಕ್ಕಸಕ್ಕೆ ಹೊರೆಯಾಗತಕ್ಕಂಥ ತೀರ್ಮಾನವಾಗಿರುತ್ತದೆ.

**(ಮುಂದು)**

**ಶ್ರೀ ಎಂ. ನಾಗರಾಜು (ಮುಂದು):-**

ಸಾರ್ವಜನಿಕರ ಹಿತದೃಷ್ಟಿಯಿಂದ ಮಾಡುವ ಈ ಕಾರ್ಯಕ್ರಮ 15 ಎಕರೆ ಜಮೀನಿನ ವಿಚಾರದಲ್ಲಿ ಏನು ಪ್ರಸ್ತಾವ ಮಾಡುವುದಕ್ಕೆ ಹೊರಟಿದ್ದೇವೋ 15 ಎಕರೆ ಮತ್ತು 17 ಗುಂಟೆಗಳ ಬಗ್ಗೆ ರಸ್ತೆ ಮಾಡಬೇಕೆಂದು ಸ್ವಾಧೀನ ಮಾಡುವುದಕ್ಕೆ ಹೊರಟಿದ್ದೇವೋ that comes into 62,475.3 square meters of land. ಅದಕ್ಕೆ ಅವರು ರೂ. 3000/- ಕ್ಕಿಂತ ಹೆಚ್ಚು ಕೋಟಿ ರೂಪಾಯಿಗಳನ್ನು ಟಿ.ಡಿ.ಆರ್. ಕೊಡುವುದಕ್ಕೆ ಹೇಳಿರುವುದು ನ್ಯಾಯಸಮ್ಮತವಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇ ಸಂದರ್ಭದಲ್ಲಿ Hon'ble Supreme Court has passed an order, by fixing 62.8 lakh rupees per square meter on Bellary Road and two lakhs per square meter on Jayamahal road. ಟಿ.ಡಿ.ಆರ್. ಕೊಡುವ ವಿಚಾರಕ್ಕೆ ಎಂದು ಹೇಳುತ್ತಾರೆ. ಇದನ್ನು ರಾಜ್ಯ ಸರ್ಕಾರ ಪ್ರಶ್ನೆ ಮಾಡಿ ರಸ್ತೆ ಮಾಡುವ ಜಾಗದಲ್ಲಿ 3,000/- ಕೋಟಿ ರೂಪಾಯಿಗಳ Tax Payers' ಹಣವನ್ನು ಕೊಡುವುದಕ್ಕಾಗುವುದಿಲ್ಲ ಅದಕ್ಕೋಸ್ಕರವಾಗಿ ಜನವರಿ ತಿಂಗಳನಲ್ಲಿ ಒಂದು Ordinance ತರುತ್ತಾರೆ. Ordinance ತಂದ ನಂತರ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಅದನ್ನು ಮಂಡನೆ ಮಾಡಿ ಅದಕ್ಕೆ ಅನುಮೋದನೆ ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ ವಿಚಾರದಲ್ಲಿ ನಾವೆಲ್ಲರೂ ಕೂಡ ಇದಕ್ಕೆ ಕೈ ಜೋಡಿಸುವ ಕೆಲಸ ಮಾಡಬೇಕಾದರೆ one way you have to set at the exchequer, where there is a public interest ಎಂಬ ಮಾತನ್ನು ಹೇಳುತ್ತಿದ್ದೇನೆ. ಇನ್ನೊಂದು ಕಡೆ public utility ರಸ್ತೆ ಇರುವುದು ಸುಪ್ರೀಂ ಕೋರ್ಟ್‌ನಲ್ಲಿ ಕೂಡ ಯಾವ ಜಮೀನು ರಾಜ್ಯ ಸರ್ಕಾರದ ಅಧೀನದಲ್ಲಿದೆಯೋ ಆ ಜಮೀನಿನ ವಿಚಾರದಲ್ಲಿ contumacy ಇರಬೇಕಾದರೆ... they further fight against the government in the Supreme Court. But they cannot stop government going to conduct public utility programmes such as widening the road. ಹಾಗಾಗಿ ಎಲ್ಲಾ ಕಾರಣಗಳಗೋಸ್ಕರ ಹೇಳುವುದಾದರೆ 62,475 ಚದರ ಮೀಟರ್ ಜಾಗವನ್ನು 3,000/- ಕೋಟಿ ರೂಪಾಯಿಗಳನ್ನು ಕೊಟ್ಟು ಟಿ.ಡಿ.ಆರ್. ಮಾಡಿಕೊಳ್ಳುವುದು ಸಮಂಜಸವಲ್ಲ ಎಂದು ಹೇಳುತ್ತಿದ್ದೇನೆ. ಎಲ್ಲಾ ಕಾರಣಗಳಿಗೆ public utility ಗೋಸ್ಕರ ಸಾರ್ವಜನಿಕ ಹಿತದೃಷ್ಟಿಯಿಂದ ಮಾಡುತ್ತಿರುವಂತಹದ್ದು, ಪ್ರತಿ ದಿನ ತಾವು ನೋಡುತ್ತಿರುವ ಬೆಂಗಳೂರಿನ ಟ್ರಾಫಿಕ್ ಯಾವ ಗತಿಯಾಗುತ್ತಿದೆ ಎಂಬ ವಿಚಾರವನ್ನು ಮತ್ತು pollution rates ಏನಾಗುತ್ತಿದೆ ಎಂದು ನೋಡುತ್ತಿದ್ದೀರಿ. ಈ ಎಲ್ಲಾ ಕಾರಣಗಳಂದಾಗಿ ರಾಜ್ಯದ ಹಾಗೂ ರಾಜಧಾನಿಯ

ಹಿತದೃಷ್ಟಿಯಿಂದಾಗಿ 1.4 ಕೋಟಿ ಜನರು ಬದುಕುತ್ತಿರುವ ಈ ನಗರದಲ್ಲಿ ಇಂತಹ ಕಠಿಣ ನಿರ್ಧಾರಗಳನ್ನು ಸರ್ಕಾರ ತೆಗೆದುಕೊಳ್ಳುತ್ತಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಈಗ ತೆಗೆದುಕೊಂಡಿರುವ ನಿರ್ಣಯಗಳು ಕೂಡ ಸಾರ್ವಜನಿಕ ಹಿತದೃಷ್ಟಿ ಒಂದು ಕಡೆಯಾದರೆ ಕಾನೂನುಬದ್ಧವಾದ ತೀರ್ಮಾನಗಳೇ ಆಗಿವೆ. ಒಂದು ವೇಳೆ ನಾವು ಸುಪ್ರೀಂ ಕೋರ್ಟ್ ಕೊಟ್ಟ ತೀರ್ಮಾನದಲ್ಲಿ ಈ Ordinance ತರದೇ ಇದ್ದರೆ, ವಿಧೇಯಕವನ್ನು ತರದೇ ಇದ್ದರೆ we are bound pay to the party ಎಂಬ ಮಾತನ್ನು ಹೇಳುತ್ತೇನೆ. ಒಂದು ವೇಳೆ ನೀವು ರೂ. 3,000/- ಕೋಟಿ ಕೊಡದೇ ಇದ್ದರೆ ಸುಪ್ರೀಂ ಕೋರ್ಟ್‌ನಲ್ಲಿ Contempt of Court face ಮಾಡಬೇಕಾಗುತ್ತದೆ. ಸುಪ್ರೀಂ ಕೋರ್ಟ್‌ನಲ್ಲಿ Contempt of Court ಆಗಬಾರದು ಎನ್ನುವುದಾದರೆ ಈಗ ತಂದಿರುವ ಬಿಲ್ಲನ್ನು ಸ್ವಾಗತ ಮಾಡಬೇಕಾಗುತ್ತದೆ. ಇದನ್ನು ಮಾಡುತ್ತಿರುವುದು ಸಾರ್ವಜನಿಕ ಹಿತದೃಷ್ಟಿ ಒಂದು ಕಡೆಯಾದರೆ ಇನ್ನೊಂದು ಕಡೆ ನಮ್ಮ ಬೊಕ್ಕಸವನ್ನು ಉಳಿಸುವ ಕೆಲಸವನ್ನು ಮಾಡುವ ಈ ವಿಧೇಯಕವನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತಿದ್ದೇನೆ. ಕೇವಲ 15 ಎಕರೆ 16 ಗುಂಟೆ ಮಾತ್ರವಲ್ಲ ಇರುವಂತಹ 472 ಎಕರೆ ಜಮೀನು ಮತ್ತು 16 ಗುಂಟೆ ಜಮೀನು ಎಲ್ಲವನ್ನೂ ಕೂಡ ಸರ್ಕಾರ ಏನು 1996ರಲ್ಲಿ ಸ್ವಾಧೀನಪಡಿಸಿಕೊಂಡಿತ್ತೋ ಅದನ್ನು ನಾವು ಪಡೆದುಕೊಳ್ಳಲೇಬೇಕಾಗುತ್ತದೆ. ಕೊಡಬೇಕಾದಂತಹ ಪರಿಹಾರಗಳ ಬಗ್ಗೆ ಸುಪ್ರೀಂ ಕೋರ್ಟ್ ಮುಂದಿನ ದಿನಗಳಲ್ಲಿ ತೀರ್ಮಾನ ಮಾಡಲಿ ಎಂದು ಹೇಳುತ್ತೇನೆ. ಯಾವುದೇ ಕಾರಣಕ್ಕೂ ಸಾರ್ವಜನಿಕ ಹಿತದೃಷ್ಟಿಯಿಂದ ಇರುವಂತಹ ಹಾಗೂ ಐತಿಹಾಸಿಕ ಜಾಗವಾಗಿರುವಂತಹದ್ದನ್ನು ಸರ್ಕಾರವೇ ಕಾಪಾಡಿಕೊಂಡು ಹೋಗಬೇಕಾದಂತಹ ಕೆಲಸ ಆಗಬೇಕೆಂದು ಹೇಳುತ್ತೇನೆ. ಸರ್ಕಾರದ ಮಾಲೀಕತ್ವವನ್ನು ಈ ಬಿಲ್‌ನ ಮೂಲಕ ಪ್ರತಿಪಾದನೆ ಮಾಡಿ ಉಳಿಸಿಕೊಳ್ಳುವ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತಾ, ಎಲ್ಲಾ ಮಾನ್ಯ ಸದಸ್ಯರಿಗೂ ಹೇಳುವುದೇನೆಂದರೆ, ಅವರು ಸರ್ಕಾರದ ಜೊತೆ ಕೈ ಜೋಡಿಸುವ ಕೆಲಸವನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಮಾಡಬೇಕೇ ಹೊರತು, ಯಾವುದೇ ಕಾರಣಕ್ಕೂ ಸಂಕುಚಿತವಾಗಿ ಯೋಚನೆ ಮಾಡಬಾರದು ಮತ್ತು ರಾಜಕಾರಣ ದೃಷ್ಟಿಕೋನದಿಂದ ನೋಡಬಾರದು ಮತ್ತು ಅವರು ಬಿ.ಬಿ.ಎಂ.ಪಿ.ಗೆ ಸೇರದಿದ್ದರೂ ಚಿಂತೆಯಿಲ್ಲ ಅವರು ಸಹ ಕರ್ನಾಟಕ ರಾಜ್ಯದ ನಾಗರೀಕರಾದುದರಿಂದ ರಾಜ್ಯಕ್ಕೋಸ್ಕರ, ಬೆಂಗಳೂರು ನಗರಕ್ಕೋಸ್ಕರ ಒಪ್ಪಿಗೆ ಸೂಚಿಸಿ ಕೈ ಜೋಡಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಅನೇಕರು ಮಾತನಾಡಿದಂತೆ ಈ ಬಿಲ್‌ನ 4ನೇ ಪುಟದ 7ನೇ ಪಾಯಿಂಟ್ ಓದುತ್ತೇನೆ.

*"(7) ಯಾವುದೇ ನ್ಯಾಯಾಲಯದ ಯಾವುದೇ ಆದೇಶ ಅಥವಾ ತೀರ್ಪಿಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿಗೆ ವಿರುದ್ಧವಾದುದು ಏನೇ ಇದ್ದರೂ, ಈ ಅಧಿನಿಯಮದೊಂದಿಗೆ ಓದಲಾದಂತೆ ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1957ರ ಕರ್ನಾಟಕ ಅಧಿನಿಯಮ 34)ರ 8ನೇ ಪ್ರಕರಣ ಮತ್ತು 9ನೇ ಪ್ರಕರಣದಲ್ಲಿ ನಿರ್ಧರಿಸಲಾದ ನಷ್ಟ ಪರಿಹಾರವು ಅಂತಿಮವಾಗಿರತಕ್ಕದ್ದು".*

ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸಿ.ಟಿ. ರವಿಯವರು ಹಾಗೂ ಬಹಳಷ್ಟು ಸದಸ್ಯರು ಹೇಳಿದ್ದಾರೆ, ಕರ್ನಾಟಕದಲ್ಲಿ ಮೈಸೂರು ಮಹಾರಾಜರ ಕೊಡುಗೆ ಅತ್ಯಂತ ಅಪಾರವಾದುದು ಮತ್ತು ಅನಂತವಾದುದು. ಅದಕ್ಕೆ ಬೆಲೆ ಕಟ್ಟುವುದಕ್ಕಾಗುವುದಿಲ್ಲ. ವಿಷಯ ಬಂದಿರುವುದೇನೆಂದರೆ, ಅದು ಈಗ ಬಹಳ ಚರ್ಚೆಯಾಗುತ್ತಿದೆ. ಹಿಂದೆ ಅದರ ಬಗ್ಗೆ ಬಹಳ ಚರ್ಚೆಯಾಗಿದೆಯೇ ಎನ್ನುವುದರ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಈಗ ಚರ್ಚೆಯಾಗುತ್ತಿರುವುದರ ಬಗ್ಗೆ ನಮಗೆ ಗೊತ್ತಿದೆ. ಈ ಕಾಲಮಾನಕ್ಕೆ ಬರುವಷ್ಟರಲ್ಲಿ ಅದರ ಬೆಲೆ ಬಹಳ ಹೆಚ್ಚಾಗಿದೆ. ಆ ಕಾಲದಲ್ಲಿ ಬೆಲೆ ಅಷ್ಟು ಹೆಚ್ಚಾಗಿರಲಿಲ್ಲ. ಈಗ ಬೆಲೆ ಬಹಳ ಹೆಚ್ಚಾಗಿದೆ. ಉದಾಹರಣೆಗೆ ದೇಶದಲ್ಲಿ ರಾಷ್ಟ್ರೀಯ ಹೆದ್ದಾರಿ ಎಲ್ಲೆಲ್ಲಿ ಹೋಗುತ್ತಿದೆ ಅಲ್ಲೆಲ್ಲಾ ಬೆಲೆ ಹೆಚ್ಚಾಗುತ್ತಿದೆ. ಎಲ್ಲೆಲ್ಲಿ ಏರ್‌ಪೋರ್ಟ್‌ಗಳಾಗುತ್ತಿದೆಯೋ ಅಲ್ಲೆಲ್ಲಾ ಬೆಲೆ ಹೆಚ್ಚಾಗುತ್ತಿದೆ. ಹಾಗೆ ಈಗ ಬೆಂಗಳೂರು ಅರಮನೆ ಮೈದಾನದಲ್ಲಂತೂ ಬೆಲೆ ಖಂಡಿತವಾಗಿ ಹೆಚ್ಚಾಗಿದೆ. ಆ ಹಿನ್ನೆಲೆಯಲ್ಲಿ ಮಹಾರಾಜರು ಏನು ಕೋರ್ಟ್‌ಗೆ ಹೋಗಿದ್ದಾರೆ ರೂ. 3,000/- ಕೋಟಿ ಎಂದು ಏನು ಒಂದು ಅಂದಾಜಿಗೆ ಬರಲಾಗಿದೆ, 3,000/- ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡುವುದಕ್ಕಾಗುವುದಿಲ್ಲ; 15 ಎಕರೆಗೆ public money, tax payers' money 3,000/- ಕೋಟಿ ರೂಪಾಯಿಗಳನ್ನು ಕೊಡುವುದಕ್ಕಾಗುತ್ತದೆಯೇ ಎಂದು ನಮಗೂ ಅನಿಸುತ್ತದೆ. ಆದರೆ ಮೈಸೂರು ಮಹಾರಾಜರು ಅವತ್ತು ಏನು ಇಷ್ಟೆಲ್ಲಾ ಮಾಡಿ ಹೋಗಿದ್ದಾರೆ, ಅದರ ಬಗ್ಗೆ ಮಹಾರಾಜರು depend ಆಗಿದ್ದಾರೆ. ಅವರ ಬೇರೆ ಆಸ್ತಿ ಏನಿದೆಯೋ ನಮಗೆ ಗೊತ್ತಿಲ್ಲ. ಅವರು depend ಆಗಿದ್ದಾರೆ, ಕೋರ್ಟ್‌ಗೆ ಹೋಗಿದ್ದಾರೆ. ಉದಾಹರಣೆಗೆ 15 ಎಕರೆಗೆ 11 ಕೋಟಿ ರೂಪಾಯಿಗಳೆಂದು ಮಾನ್ಯ ಕಾನೂನು ಸಚಿವರು ಹೇಳಿದರು. ಆ 11 ಕೋಟಿ ರೂಪಾಯಿಗಳನ್ನು ಪ್ರಶ್ನೆ ಮಾಡಿ ಕೋರ್ಟ್‌ಗೆ ಹೋಗಿದ್ದಾರೆ.

**ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು):-** ಇಡೀ 472 ಎಕರೆ ಜಾಗಕ್ಕೂ 11 ಕೋಟಿ ರೂಪಾಯಿಗಳು.

**ಶ್ರೀ ಎನ್. ರವಿಕುಮಾರ್:-** ಅವತ್ತಿನ ಬೆಲೆಗೆ ಅದು ಸರಿ. ಆದರೆ ಇವತ್ತು ಬಹಳಷ್ಟು ಬೆಲೆ ಇದೆ. ಆದ್ದರಿಂದ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರ ಒಂದೇಟಿಗೆ ಕೊನೆಯ ಅಸ್ತ್ರವನ್ನು ಬಳಸಬಾರದು, ಸುಗ್ರೀವಾಜ್ಞೆ ತರಬಾರದು. ಪಂಡಿತ್ ಜವಾಹರಲಾಲ್ ನೆಹರುರವರು ಪ್ರಧಾನ ಮಂತ್ರಿಯಾಗಿದ್ದ ಕಾಲದಲ್ಲಿ ಭೂಮಿ ಪೂಜೆ ಮಾಡಿರುವಂತಹವು ಇನ್ನೂ ಇವೆ. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಬಂದ ಮೇಲೆ ಅದು ಪೂರ್ಣವಾಗಿರುವಂತಹ ಕೆಲಸಗಳೂ ಇವೆ. ನಾನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಸಮಯ ತೆಗೆದುಕೊಳ್ಳಿ, ಮಹಾರಾಜರನ್ನು ಕರೆಯಿರಿ. ಸಮಾಜದ ಗಣ್ಯರನ್ನು ಕೂಡ ಕರೆಯಿರಿ, ಮಾತುಕತೆ ಮಾಡಿ. ಸರ್ಕಾರ ಈ ನಾಡಿಗೆ ಅಪಾರವಾಗಿ ಕೊಡುಗೆ ಕೊಟ್ಟಿರುವಂತಹ ಆ ಮನೆತನದ ವಿರುದ್ಧ ಈ ರೀತಿ ಒಂದೇಟಿಗೆ ನಿರ್ಧಾರಕ್ಕೆ ಬಂದುಬಿಡಬಾರದು. ಅವರದ್ದು ಅಪಾರ ಕೊಡುಗೆ ಇದೆ. ಆದ್ದರಿಂದ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರ ಒಂದು ಸುತ್ತು, ಎರಡು ಸುತ್ತು ಅಥವಾ ಮೂರು ಸುತ್ತಿನ ಮಾತುಕತೆ ಮಾಡಲಿ. ಆ ಮನೆತನದ ಬಗ್ಗೆ ಗೌರವ ಇದ್ದರೆ ಅವರನ್ನು ಕೂರಿಸಿಕೊಂಡು ಮಾತುಕತೆ ನಡೆಸಿ. ಆದ್ದರಿಂದ ಒಂದೇಟಿಗೆ ಅಂತಿಮ ಅಸ್ತ್ರವನ್ನು ಕೈಗೊಳ್ಳಬಾರದು ಎಂದು ವಿನಂತಿ ಮಾಡುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಹಾಗಾದರೆ ನೀವು ಬೆಂಗಳೂರಿನಲ್ಲಿ ಟಿ.ಡಿ.ಆರ್. ಅನ್ನು ಬೇರೆಯವರಿಗೆ ಕೊಟ್ಟಿಲ್ಲವೇ? ಬೇರೆಯವರಿಗೂ ಕೂಡ ಕೊಟ್ಟಿದ್ದೀರಿ. ವಿಷಯ ಬಂದಿರುವುದು 3,000/- ಕೋಟಿ ರೂಪಾಯಿಗಳಾಯಿತು ಎನ್ನುವ ಕಾರಣಕ್ಕೋಸ್ಕರ ಕೊಡುವುದಕ್ಕಾಗುವುದಿಲ್ಲ ಅಷ್ಟು ಹಣವನ್ನು ಹೇಗೆ ಕೊಡುವುದಕ್ಕಾಗುತ್ತದೆ ಎಂದು. ಹಾಗಾದರೆ ಬೇರೆಯವರಿಗೆ ಬೆಲೆ ಸ್ವಲ್ಪ ಜಾಸ್ತಿ ಇದ್ದರೂ ಕೂಡ ಕೊಟ್ಟಿದ್ದೀರಿ. ಅವರಿಗೊಂದು ನೀತಿ ಇವರಿಗೊಂದು ನೀತಿಯೇ? ಆದ್ದರಿಂದ ಹೇಗೆ ಬೇರೆಯವರಿಗು ಕೂಡ ಕೊಟ್ಟಿದ್ದೀರಿ, ಈ ನಾಡಿಗೆ ಅವರ ಕೊಡುಗೆ ಏನು ಎಂಬುದು ಗೊತ್ತಿಲ್ಲ. ಆದರೆ ನಮ್ಮ ಮೈಸೂರು ಮಹಾರಾಜರ ಕೊಡುಗೆಯಂತೂ ಅತ್ಯಂತ ಅಪಾರವಾಗಿದೆ. ಆ ಎಲ್ಲಾ ಹಿನ್ನೆಲೆಯಲ್ಲಿ ರಾಜ ಮನೆತನದ ಜೊತೆಯಲ್ಲಿ ಮಾತನಾಡುವ ಸಂದರ್ಭದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಇನ್ನೂ ಸ್ವಲ್ಪ ಸಮಯವನ್ನು ತೆಗೆದುಕೊಂಡು ಈ ಬಿಲ್ಲನ್ನು ಒಂದೇಟಿಗೆ ಪಾಸ್ ಮಾಡುವುದು, ಸುಗ್ರೀವಾಜ್ಞೆಯನ್ನು ತರುವುದು ಆಗಬಾರದು. ಸುಪ್ರೀಂ ಕೋರ್ಟ್‌ನಲ್ಲಿ ಈ ವಿಷಯ ಇದೆ, ಇನ್ನೂ ಅಂತಿಮ ಆದೇಶ ಬಂದಿಲ್ಲ. ಮೈಸೂರು ಮಹಾರಾಜರ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ಅತ್ಯಂತ

ಗೌರವ ಇರುವುದರಿಂದ ಈ ರೀತಿ ಸುಗ್ರೀವಾಜ್ಞೆ ತರುವುದನ್ನು, ಆ ಮನೆತನದ ವಿರುದ್ಧ ಕಾನೂನನ್ನು ಮಾಡುವುದನ್ನು ಜನ ಇಷ್ಟಪಡುವುದಿಲ್ಲ. (ಮುಂದು)

(179) 10.03.2025 (5.20) ಹೆಚ್‌ವಿ.ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಮೈಸೂರು ವಿಶ್ವವಿದ್ಯಾಲಯ ಇರಬಹುದು, ಬೆಂಗಳೂರಿನ ಕಬ್ಬನ್ ಪಾರ್ಕ್ ಇರಬಹುದು, ಪೇಪರ್ ಮಿಲ್ ಇರಬಹುದು, ಕೆ.ಆರ್.ಎಸ್. ಅಣೆಕಟ್ಟು ಇರಬಹುದು, ಹೀಗೆ ಹತ್ತಾರು ಕೊಡುಗೆಗಳನ್ನು ಮೈಸೂರು ರಾಜ ಮನೆತನದವರು ನೀಡಿದ್ದಾರೆ. ಇವತ್ತಿಗೂ ಸಹ ಕೋಟ್ಯಾಂತರ ಜನರಿಗೆ ಅನ್ನ ಕೊಟ್ಟಿರುವವರು ಮೈಸೂರು ಮಹಾರಾಜರು ಎಂದರೇ ತಪ್ಪಾಗುವುದಿಲ್ಲ. ಸರ್ಕಾರ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಟಿ.ಡಿ.ಆರ್., ರೂಪದಲ್ಲಿ ಕೊಡುವುದಕ್ಕೆ ಆಗುವುದಿಲ್ಲ ಎನ್ನುವ ಹಿನ್ನೆಲೆಯಲ್ಲಿ ಇದೊಂದಕ್ಕೆ ಸುಗ್ರಿವಾಜ್ಞೆ ತರುವುದು ಎಷ್ಟರ ಮಟ್ಟಿಗೆ ಸೂಕ್ತ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ಧರಾಮಯ್ಯನವರು ಮೂಡಾ ವಿಷಯಕ್ಕೆ ಸಂಬಂಧಪಟ್ಟಂತೆ, "ಆಗ ಸುಮಾರು 15-18 ಲಕ್ಷ ಬೆಲೆಬಾಳುವ ನಿವೇಶಕ್ಕೆ ಇವತ್ತು ಸುಮಾರು 62 ಕೋಟಿ ರೂಪಾಯಿಗಳಷ್ಟು ಮಾರುಕಟ್ಟೆ ಬೆಲೆ ಇರುವುದರಿಂದ; ಆ ಹಣವನ್ನು ಕೊಟ್ಟರೇ ನಾನು ಬಿಟ್ಟುಕೊಡುತ್ತೇನೆ" ಎನ್ನುವ ಮಾತನ್ನು ಹೇಳಿದ್ದಾರೆ. ಅದು ಟಿ.ವಿ.,ಯಲ್ಲಿ ಬಂದಿರುವುದನ್ನು ನಾನು ನೋಡಿದ್ದೇನೆ. ಹಾಗಾದರೆ, ಮೈಸೂರು ಮಹಾರಾಜರು ಕೇಳಬಾರದೇ?

**ಡಾ|| ಎಂ.ಆರ್.ಸೀತಾರಾಂ(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಬೇಕು.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಆದ್ದರಿಂದ ಒಂದೇ ಬಾರಿಗೆ ಫೈನಲ್ ಜಡ್ಜ್‌ಮೆಂಟ್ ಬರುವುದಕ್ಕೂ ಮೊದಲು ಸುಗ್ರಿವಾಜ್ಞೆ ತರುವಂತಹ ಕೆಲಸವನ್ನು ಮಾಡಬಾರದೆಂದು ನಾನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ಅರಮನೆಗೆ ಸಂಬಂಧಪಟ್ಟಂತೆ ಅನೇಕ ಜನ ಸದಸ್ಯರು, ಅನೇಕ ವಿಚಾರಗಳನ್ನು ಮಂಡಿಸಿದ್ದಾರೆ. ಮಾನ್ಯ ಹೆಚ್.ಕೆ.ಪಾಟೀಲ್‌ರವರು ಹಿಂದೆ ನಡೆದಂತಹ ವಿದ್ಯಾಮಾನಗಳ ಬಗ್ಗೆ ವಿವರಣೆಯನ್ನು ಕೊಟ್ಟಿದ್ದಾರೆ. 1966ನೇ ಇಸವಿಯಲ್ಲಿಯೇ ಮೈಸೂರು ರಾಜಮನೆತನಕ್ಕೆ ಸೇರಿದಂತಹ ಕೆಲವು ಆಸ್ತಿಗಳ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ಕೆಲವು ಒಡಂಬಡಿಕೆಗಳನ್ನು ಅಂದಿನ ಮಹಾರಾಜರು ಮಾಡಿಕೊಂಡಿದ್ದಾರೆ. ಅವತ್ತಿನ ದಿನಮಾನದಲ್ಲಿ ಇಡೀ ದೇಶದಲ್ಲಿದ್ದ ಬೇರೆಬೇರೆ ರಾಜಮನೆತನದವರು ತಮ್ಮ ಆಸ್ತಿಗಳಲ್ಲಿ ಕೆಲವನ್ನು ಸರ್ಕಾರದ ಸುಪರ್ದಿಗೆ ಕೊಡುವಂತಹ ಮತ್ತು ಕೆಲವನ್ನು ಉಳಿಸಿಕೊಳ್ಳುವುದರ ಬಗ್ಗೆ ಚರ್ಚೆ ಆಗಿರುತ್ತದೆ. ಆ ಸಂದರ್ಭದಲ್ಲಿಯೇ ಮೈಸೂರು ಮಹಾರಾಜರಿಗೆ ಸೇರಿದಂತಹ ಕೆಲವು ಆಸ್ತಿಗಳನ್ನು ಕೇಂದ್ರ ಸರ್ಕಾರದ ಮಧ್ಯಸ್ತಿಕೆಯಲ್ಲಿ ಬಟವಾಡೆ ಮಾಡಿಕೊಳ್ಳುವಂತಹ

ಕೆಲಸವಾಗುತ್ತದೆ. ಕಾರಣಾಂತರಗಳಿಂದ ಆಗಿದಂತಹ ಹೊಂದಾಣಿಕೆ ಮುಂದುವರೆಯುವುದಿಲ್ಲ. 1996ರಲ್ಲಿ ಮಂಡಿಸಿದಂತಹ ಒಂದು ವಿಧೇಯಕದ ಬಗ್ಗೆ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಉಲ್ಲೇಖವನ್ನು ಮಾಡಿದ್ದರು. ಸರ್ಕಾರ ಆ ದಿನ ಆ ಕಾನೂನಿನ ಪ್ರಕಾರ ಮುಂದುವರೆದಿದ್ದರೇ, ಈ ಕಾನೂನು ತರುವಂತಹ ಅಗತ್ಯ ಇರುತ್ತಿರಲಿಲ್ಲ. ಅವತ್ತು ಕಾನೂನಿನ ತೊಡಕು ಇದ್ದ ಹಿನ್ನೆಲೆಯಲ್ಲಿ ಸರ್ಕಾರ ಮುಂದುವರೆಯಲಿಲ್ಲ. ಅಷ್ಟು ದೊಡ್ಡ ಆಸ್ತಿ ಮಹಾರಾಜರಿಗೆ ಸೇರಿದ್ದು ಎಂದು ಹಿಂದೆ ಕೇಂದ್ರ ಸರ್ಕಾರದಲ್ಲಿ ಇದ್ದಂತಹ wealth tax ನ ವ್ಯಾಪ್ತಿಗೆ ಬೆಂಗಳೂರಿನ ಅರಮನೆಯನ್ನು ತರಲಾಯಿತು. ಇದರಿಂದಾಗಿ CBDT (Central Board of Direct Taxes) ರವರು ಇದರ ಮೇಲೆ ಹಕ್ಕನ್ನು ಚಲಾಯಿಸುವ ಕೆಲಸ ಮಾಡುತ್ತಾರೆ ಮತ್ತು ಇಷ್ಟು ಪ್ರಮಾಣದಲ್ಲಿ wealth tax ಕಟ್ಟಬೇಕು, ಆ ಟ್ಯಾಕ್ಸ್‌ನ ಹಣ ಪೂರ್ತಿಯಾಗಿ ಜಮಾ ಆಗುವವರೆಗೆ CBDT ಕಡೆ ಹಕ್ಕು ಇರುತ್ತದೆ ಎನ್ನುವ ವಾದವನ್ನು ಮುಂಡಿಸಿದ ಕಾರಣ ಆವತ್ತಿನ ದಿನಕ್ಕೆ ಕೇವಲ 11 ಕೋಟಿ ರೂಪಾಯಿಗಳಿಗೆ ಸಂಬಂಧಪಟ್ಟಂತೆ ವಿಧೇಯಕವನ್ನು ತರಲಾಯಿತು. ವಿಧೇಯಕವನ್ನು ತರುವ ಮೂಲಕ ಪೂರ್ತಿಯಾದ ಹಕ್ಕನ್ನು ಕೊಡುವಂತಹ ಕೆಲಸ ಮಾಡಲಾಯಿತು. ಅನಂತರ ಈ ವಿಚಾರ ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿತ್ತು. ಸ್ವಾತಂತ್ರ್ಯ ಬಂದ ನಂತರ ಈ ರೀತಿಯಾಗಿರುವ ಪ್ರಯತ್ನ ಎಲ್ಲಿಯೂ ಆಗಿರಲಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ತರಾತುರಿಯಲ್ಲಿ ಏತಕ್ಕೋಸ್ಕರ ಈ ವಿಧೇಯಕವನ್ನು ತಂದಿದೆ ಎಂದರೆ, ಕಳೆದ ವಾರದ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್‌ನಲ್ಲಿ ಮಧ್ಯಂತರ ಆದೇಶವನ್ನು ನೀಡಿ, ಸುಮಾರು 3,400 ಕೋಟಿ ರೂಪಾಯಿಗಳಷ್ಟು ಮೌಲ್ಯದ ಟಿ.ಡಿ.ಆರ್.ಗೆ ಬೇಕಾದಂತಹ ಪತ್ರವನ್ನು ಸರ್ಕಾರ deposit ಮಾಡಬೇಕೆಂದು ಹೇಳಿದ ಹಿನ್ನೆಲೆಯಲ್ಲಿ; ತನ್ನ ಮೇಲೆ ಬರುವಂತಹ ಹೊರೆಯನ್ನು ಕಡಿಮೆ ಮಾಡಿಕೊಳ್ಳುವುದಕ್ಕೋಸ್ಕರ ಅಥವಾ ಪೂರ್ತಿಯಾಗಿ ತನ್ನ ಮೇಲೆ ಹೊರೆಯೇ ಇಲ್ಲದ ರೀತಿಯಲ್ಲಿ ಮಾಡಿಕೊಳ್ಳುವುದಕ್ಕಾಗಿ ಸರ್ಕಾರ ಈ ವಿಧೇಯಕವನ್ನು ತಂದಿದೆ. With all high respect and regard to Sri H.K.Patilji, this is the Bill which is bought on full political vengeance, Because of one reason. ಮೈಸೂರಿನಲ್ಲಿರುವ ಮಾರುಕಟ್ಟೆಗೆ ಮಹಾರಾಜರ ಹೆಸರು ಇಟ್ಟಿರುವುದನ್ನು ಬದಲಾವಣೆ ಮಾಡುವಂತಹ ಪ್ರಯತ್ನದ ವಿರುದ್ಧ ಕೂಗು ಕೇಳಿ ಬಂದಾಗ, ಮಾನ್ಯ ಮುಖ್ಯಮಂತ್ರಿಗಳಾಗಿರುವ ಶ್ರೀ ಸಿದ್ದರಾಮಯ್ಯನವರು "ಅವರ ಮನೆ ದುಡ್ಡು ಹಾಕಿದ್ದಾರೇರ್ರಿ? ಜನರಿಂದ ವಸೂಲಿ ಮಾಡಿರುವ ಹಣದಿಂದ ಇದನ್ನು ಮಾಡಲಾಗಿದೆ" ಎನ್ನುವ ಮಾತನ್ನು ಹೇಳಿದ್ದರು. ಇಲ್ಲಿಯವರೆಗೆ ಮೈಸೂರು ಮಹಾರಾಜರ ಮನೆತನದವರು ನೀಡಿರುವ ಕೊಡುಗೆಯನ್ನು ನಾವು ಸ್ಮರಣೆ ಮಾಡುವುದೇ ಇಲ್ಲವೇ? ಈ ರಾಜ್ಯಕ್ಕೆ ಅನ್ಯಾಯ ಮಾಡಿರುವಂತಹ ರಾಜರ ಜಯಂತಿಗಳನ್ನು ಮಾಡುವಂತಹ ಕಾರ್ಯಕ್ರಮವನ್ನು ಈ ಸರ್ಕಾರ ಮಾಡಿದೆ. ಆದರೆ, ಮೈಸೂರು ಒಡೆಯರು ನಮ್ಮ ರಾಜ್ಯಕ್ಕೆ ಬಹಳಷ್ಟು ಕೊಡುಗೆಗಳನ್ನು ಕೊಟ್ಟಿದ್ದಾರೆ; ಕೆ.ಆರ್.ಎಸ್., ನಿಂದ ಹಿಡಿದು ನಮ್ಮ ಜಿಲ್ಲೆಯಲ್ಲಿರುವ ವಾಣಿವಿಲಾಸ ಸಾಗರದವರೆಗೆ ಕೋಟ್ಯಾಂತರ ಜನ ರೈತರು ಅವರ ಹೆಸರನ್ನು ಹೇಳಿಕೊಂಡು ಬದುಕುತ್ತಿದ್ದಾರೆ. ಬೆಂಗಳೂರಿನಲ್ಲಿ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಕಟ್ಟಿದ್ದಾರೆ. ಇಲ್ಲಿ ಇರುವಂತಹ ಎಲ್ಲ

public undertakings ಗಳಿಗೆ ಜಾಗವನ್ನು ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿರುವ ಬಹು ದೊಡ್ಡ ಜಾಗ ಮಹಾರಾಜರ ಸುಪರ್ದಿಯಲ್ಲಿದೆ ಎನ್ನುವುದು ನಮ್ಮೆಲ್ಲರಿಗೂ ಗೊತ್ತಿದೆ. ಅಂತಹ ಮನೆತನಕ್ಕೆ ಸೇರಿದಂತಹ ಆಸ್ತಿಗೆ ಈ ಸರ್ಕಾರ ಸುಗ್ರಿವಾಜ್ಞೆ ತರುವುದಕ್ಕೆ ಹೊರಟಿದೆ. Public utilization ಗೋಸ್ಕರ ಈ ಸರ್ಕಾರ ಏನು ವಿವರಣೆಯನ್ನು ನೀಡುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಟನಲ್ ರಸ್ತೆಗಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಆಯವ್ಯಯದಲ್ಲಿ ಘೋಷಣೆ ಮಾಡುತ್ತಾರೆ. ಅಲ್ಲಿ ಯಾವುದೋ ರೋಡ್‌ಗೆ ಟನಲ್ ರಸ್ತೆ ಮಾಡುತ್ತಾರೆ. ಬಳ್ಳಾರಿ ರೋಡ್‌ಗೆ ಮಾತ್ರ ಸರ್ಕಾರ, ಇದೇ ಜಾಗ ಬೇಕೆಂದು ಭೂಸ್ವಾಧೀನಪಡಿಸಿಕೊಳ್ಳುತ್ತಿದೆ. ಬೇರೆ via media ಮಾಡಬಹುದಲ್ಲವೇ? ಬೇರೆ revenue sharing ನಲ್ಲಿ ಮಾಡಬಹುದಾಗಿತ್ತು. ಅವರ ಜೊತೆಗೆ ಮಾತುಕತೆ ಮಾಡಿ "ನಮಗೆ ಇಷ್ಟು ಬಿಟ್ಟುಕೊಡಿ" ಎಂದು ಸರ್ಕಾರ ಏತಕ್ಕೋಸ್ಕರ proposal ಕೊಡಲಿಲ್ಲ? ಇಡೀ ರಾಜ್ಯದ ತುಂಬಾ ಹಗರಣವಾಗಿ ಬಟ್ಟಬಯಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, 50:50ರ ಅನುಪಾತದಲ್ಲಿ 15 ಎಕರೆ ಅಥವಾ 30 ಎಕರೆ ಜಾಗವನ್ನು ಕೊಡುತ್ತೇವೆ ಎನ್ನುವ ಪ್ರಸ್ತಾವನೆಯನ್ನು ಮಾಡದೆಯೇ ಒಮ್ಮೆಲೇ ಸುಗ್ರಿವಾಜ್ಞೆಯನ್ನು ತರಲಾಗುತ್ತಿದೆ. ಈ ರಾಜ್ಯವನ್ನು ಆಳಿದಂತಹ; ಬೆಳೆಸಿದಂತಹ ಮಹಾರಾಜರ ಮನೆತನಕ್ಕೆ ಅವಮಾನ ಮಾಡಬೇಕೆನ್ನುವುದು ಇವರ ಉದ್ದೇಶವಾಗಿದೆ. ಸಾರ್ವಜನಿಕರ ಹೆಸರನ್ನು ಹೇಳಿಕೊಂಡು; ಸಾರ್ವಜನಿಕರ ಹಿತಾಸಕ್ತಿಯನ್ನು ಉಲ್ಲೇಖ ಮಾಡಿ, ರಸ್ತೆ ವಿಸ್ತೀರ್ಣ ಮಾಡುತ್ತೇವೆಂದು ರಾಜಮನೆತನಕ್ಕೆ ಸೇರಿದ ಆಸ್ತಿಯನ್ನು ಕೇಳುತ್ತಿದ್ದಾರೆ. ನಾನು ರಸ್ತೆ ಅಗಲೀಕರಣಕ್ಕೆ ವಿರೋಧ ವ್ಯಕ್ತಪಡಿಸುತ್ತಿಲ್ಲ. ಆದರೇ, ಸರ್ಕಾರ ನಡವಳಿಕೆಯನ್ನು ಮಾಡಿ, ಸದನದಲ್ಲಿ ಈ ವಿಧೇಯಕವನ್ನು ಮತ್ತು ಸುಗ್ರಿವಾಜ್ಞೆಯನ್ನು ತಂದಿರುವುದು ಸರಿಯಲ್ಲ.

ಸನ್ಮಾನ್ಯ ಸಭಾಪತಿಯವರೇ, ಸುಪ್ರೀಂ ಕೋರ್ಟ್ 3,400 ಕೋಟಿ ರೂಪಾಯಿಗಳನ್ನು deposit ಮಾಡಿ ಎಂದು ಹೇಳಿದೆ. ಸುಪ್ರೀಂ ಕೋರ್ಟ್‌ನಲ್ಲಿ sub judice ಇರುವಾಗ, ಸರ್ಕಾರ ಈ ರೀತಿಯಾಗಿರುವ ಕಾನೂನು ತರುವುದಕ್ಕೆ ಹೊರಟಿರುವುದನ್ನು ಇಡೀ ರಾಜ್ಯ ಗಮನಿಸುತ್ತಿದೆ. Not at the cost of the Wadiyar's. Not at the cost of the family which has developed our State. ನಮ್ಮ ರಾಜ್ಯವನ್ನು ಆಳಿದಂತಹ ರಾಜ ಮನೆತನಕ್ಕೆ ಇವರು ಮಾಡುತ್ತಿರುವುದು ಸರಿಯಾದುದ್ದಲ್ಲ. ಇದು ಅವರು ಮಾಡುತ್ತಿರುವ ಪಿತ್ತೂರಿಯಾಗಿದೆ. ಆದ್ದರಿಂದ ಈ ವಿಧೇಯಕಕ್ಕೆ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕ ಒಬ್ಬ ವ್ಯಕ್ತಿಯ ವಿರುದ್ಧ ತಂದಿರುವಂತಹ ವಿಧೇಯಕವೆನ್ನುವುದು ಕೆಲವರ ನೋವಾಗಿದೆ. ಈ ರಸ್ತೆಯ ಅವಶ್ಯಕತೆ ಇದೆಯೇ ಎನ್ನುವುದನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಅರಮನೆಯ ಸುತ್ತಮುತ್ತ ಇರುವಂತಹ ಟ್ರಾಫಿಕ್ ನೋಡಿದರೆ, ರಸ್ತೆ ಅಗಲೀಕರಣ ಆಗಬೇಕು ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ದುಡ್ಡು ಇಲ್ಲದೇ ಇರುವ

ಕಾರಣದ ಹಿನ್ನೆಲೆಯಲ್ಲಿ ಬಿ.ಬಿ.ಎಂ.ಪಿ.,ಯವರು ಟಿ.ಡಿ.ಆರ್., ವ್ಯವಸ್ಥೆಯನ್ನು ಜಾರಿಗೆ ತಂದರು. ದುಡ್ಡು ಕೊಡುವುದಕ್ಕೆ ಬದಲಾಗಿ ಈಗ ಇವರು ಟಿ.ಡಿ.ಆರ್., ಬಗ್ಗೆ ಮಾತನಾಡುತ್ತಿದ್ದಾರೆ. ಆದರೇ, ಇವತ್ತು ಬಿ.ಎಂ.ಆರ್.ಸಿ.ಎಲ್.,ಗೆ ಮೆಟ್ರೋ ರೈಲು ಮಾಡುವುದಕ್ಕೆ; ನ್ಯಾಷನಲ್ ಹೈವೇ ಮಾಡುವುದಕ್ಕೆ ಹಣವನ್ನು ಕೊಡುತ್ತಿದ್ದಾರೆ. ಅದು ಒಬ್ಬರಿಗೆ ಹೋಗದೇ ಇರಬಹುದು ಬೇರೆಬೇರೆಯವರಿಗೆ ಹೋಗುತ್ತಿದೆ. ಇಲ್ಲಿ ಮಾತ್ರ ಮಾರ್ಗಸೂಚಿ ಮೌಲ್ಯವನ್ನು ಅನುಸರಿಸುತ್ತಿಲ್ಲ. ಹೆಚ್.ಎಸ್.ಆರ್. ಲೇಔಟ್‌ನಲ್ಲಿ ಸಹ ಮಾರ್ಗಸೂಚಿ ಮೌಲ್ಯವನ್ನು ನೀಡಲಾಗಿದೆ. ಬಿ.ಎಂ.ಆರ್.ಸಿ.ಎಲ್.,ಗೆ ಜಮೀನು ಹೋಗಿರುವುದಕ್ಕಾಗಿ ನನ್ನ ಸ್ವಂತದವರಿಗೆ ಸರ್ಕಾರ ಹಣವನ್ನು ಕೊಟ್ಟಿದೆ. ಅದೇ ರೀತಿಯಲ್ಲಿ ನೆಲ್ಲೂರಿನಿಂದ ಒಂದು ರಾಷ್ಟ್ರೀಯ ಹೆದ್ದಾರಿ ಹಾದು ಹೋಗುತ್ತಿದೆ. ಅಲ್ಲಿ ಒಂದು ಚದುರ ಅಡಿಗೆ 1000 ರೂಪಾಯಿಗಳಂತೆ ಒಂದು ಎಕರೆಗೆ 13 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದನ್ನು ಸಹ ಅವರು ಗಣನೆಗೆ ತೆಗೆದುಕೊಳ್ಳಬೇಕು. ಸಾರ್ವಜನಿಕರ ಉಪಯೋಗಕ್ಕಾಗಿ ರಸ್ತೆ ಬೇಕು ಎನ್ನುವ ನಿರ್ಣಯವನ್ನು ಮಾಡಿದರೆ, ಅದನ್ನು ನಾವು ಅನಿವಾರ್ಯತೆ ಎಂದು ನೋಡಬಾರದು. ಅವಶ್ಯಕತೆ ಮತ್ತು ಅನಿವಾರ್ಯತೆಯನ್ನು ಅರ್ಥ ಮಾಡಿಕೊಂಡು ಇದನ್ನು ಮಾಡಬೇಕಾಗಿದೆ ಎನ್ನುವ ವಿನಂತಿಯನ್ನು ನಾನು ಮಾಡುತ್ತಿದ್ದೇನೆ.

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕದ ಮೇಲೆ ಮಾತನಾಡಲು ನನಗೆ ಅವಕಾಶವನ್ನು ನೀಡಿದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಈ ವಿಧೇಯಕದ ಮೇಲೆ ಸಾಕಷ್ಟು ಜನ ಸದಸ್ಯರು ಮಾತನಾಡಿದ್ದಾರೆ. ಇದನ್ನೇ ಬಳಸಿಕೊಂಡು ಈ ಸರ್ಕಾರ ನನ್ನ ಜಿಲ್ಲೆಗೆ ಅವಶ್ಯಕತೆ ಇರುವಂತಹ ಕೆಲಸವನ್ನು ಮಾಡಲಿಲ್ಲವೆನ್ನುವುದು ನನಗೆ ನೋವಿನ ಸಂಗತಿಯಾಗಿದೆ. ಏಕೆಂದರೆ, ಹಿಂದಿನ ಸರ್ಕಾರ ಅಸ್ತಿತ್ವದಲ್ಲಿದ್ದಾಗಲೂ ನಾವೆಲ್ಲರೂ ಎತ್ತಿನ ಹೊಳೆ ಯೋಜನೆಯ ಬಗ್ಗೆ ಮಾತನಾಡಿದ್ದೆವು. ಇದರ ಬಗ್ಗೆ ಎಲ್ಲರಿಗೂ ತಿಳಿದಿದೆ. ಈ ಯೋಜನೆ ನಾಲ್ಕು ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವಂತಹ ಯೋಜನೆಯಾಗಿದೆ. ದೊಡ್ಡಬಳ್ಳಾಪುರ ಮತ್ತು ಕೊರಟಗೆರೆ ತಾಲ್ಲೂಕುಗಳ ಮಧ್ಯೆ ಬಿಳಿಗುಂಡ್ಲು ಎನ್ನುವ ಸ್ಥಳದಲ್ಲಿ ಸುಮಾರು 3,000 ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಂಡು, ಸುಮಾರು 10 ಟಿ.ಎಂ.ಸಿ., ನೀರನ್ನು ಸಂಗ್ರಹ ಮಾಡಿ ಈ ನಾಲ್ಕು ಜಿಲ್ಲೆಗಳಿಗೆ ಪಂಪ್ ಮಾಡುವ ಒಂದು ದೊಡ್ಡ ಯೋಜನೆ ಇದಾಗಿದೆ. "ಎತ್ತಿನ ಹೊಳೆ"ಯಲ್ಲಿ ನಿರಂತರವಾಗಿ ನೀರು ಹರಿಯುವುದಿಲ್ಲ, ಮಳೆಗಾಲದಲ್ಲಿ ಮಾತ್ರ ನೀರು ಬರುತ್ತದೆ.

(ಮುಂದುವರಿದಿದೆ)

(180) 10.03.2025/5.30/ಪಿಕೆ-ವಿಕೆ **(ಸಭಾಪತಿಗಳ ಉಪಸ್ಥಿತಿ)**

**ಶ್ರೀ ಗೋವಿಂದರಾಜು(ಮುಂದುವರೆದಿದೆ)**

ಅಂತಹ ಸಂದರ್ಭದಲ್ಲಿ ನೀರನ್ನು ಪಂಪ್ ಮಾಡಿ ಸ್ಟಾಕ್ ಮಾಡಿಕೊಂಡು 4 ಜಿಲ್ಲೆಗಳಿಗೂ ನೀರು ಕೊಡಬೇಕೆಂದು ನಿಮ್ಮ ಹಿಂದಿನ ಸರ್ಕಾರದಲ್ಲಿ ಇದಕ್ಕೆ ರೂ.13,000 ಕೋಟಿಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾಲ್ಕು ಜಿಲ್ಲೆಯವರು ಚಿರಋಣಿ ಆಗಿದ್ದಾರೆ. ಆದರೆ ಸಮಸ್ಯೆ ಬಂದಿರುವುದು ಎಲ್ಲೆಂದರೆ, ದೊಡ್ಡಬಳ್ಳಾಪುರ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ್ದು, ಕೊರಟಗೆರೆ ತಾಲ್ಲೂಕು ತುಮಕೂರು ಜಿಲ್ಲೆಗೆ ಸೇರಿದ್ದರಿಂದ ಎರಡೂ ತಾಲ್ಲೂಕುಗಳೂ

ಸೇರಿದಂತೆ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾದಾಗ, ಆ ಕಾಲದಲ್ಲಿ ದೊಡ್ಡಬಳ್ಳಾಪುರದಲ್ಲಿ ತಲಾ ಎಕರೆಗೆ ರೂ.11,00,000ದಂತೆ, ಕೊರಟಗೆರೆಯಲ್ಲಿ ತಲಾ ಎಕರೆಗೆ ಕೇವಲ ರೂ. 4,00,000 ನಿಗದಿ ಮಾಡುತ್ತಾರೆ. ಮಾನ್ಯ ಕಾನೂನು ಮಂತ್ರಿಗಳು ಇದನ್ನೂ ಸಹ ಸರಿ ಮಾಡಬಹುದು. ಈ ವಿಚಾರವನ್ನು ತಿಳಿಸಬೇಕು ಎನ್ನುವ ಉದ್ದೇಶದಿಂದ ಪ್ರಸ್ತುತ ನಾನು ಮಾತನಾಡುತ್ತಿದ್ದೇನೆ. ಇಲ್ಲದಿದ್ದರೆ ನಾನು ಮಾತನಾಡುವುದಕ್ಕೆ ಎದ್ದು ನಿಲ್ಲುತ್ತಿರಲಿಲ್ಲ. ಸದರಿ ಸ್ವಾಧೀನ ಪ್ರಕ್ರಿಯೆಯ ಸಂದರ್ಭದಲ್ಲಿ 1:3 ರಷ್ಟು ಕೊಡಬೇಕು ಎಂದು ಹೇಳಿದಾಗ, ದೊಡ್ಡಬಳ್ಳಾಪುರದವರು ಇದನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಕೊರಟಗೆರೆಯವರು, ಒಂದೇ ಪ್ರಾಜೆಕ್ಟ್‌ಗೆ ಸಂಬಂಧಪಟ್ಟಂತೆ ಜಮೀನು ಸ್ವಾಧೀನಪಡಿಸಿಕೊಳ್ಳುತ್ತಿರುವುದರಿಂದ ಅವರಿಗೆ ರೂ. 11,00,000 ಕೊಡುತ್ತಿದ್ದೀರಿ; ನಮಗೆ ರೂ.4,00,000 ಕೊಡುತ್ತಿದ್ದೀರಿ; ನಾವು ಒಪ್ಪುವುದಿಲ್ಲ ಎಂದು ಹೇಳಿ, ಸಾಕಷ್ಟು ಧರಣಿ, ಗಲಾಟೆಗಳಾಗಿದ್ದರಿಂದ ಇದುವರೆಗೂ ಆ ಜಮೀನುಗಳನ್ನು ವಶಪಡಿಸಿಕೊಳ್ಳುವುದಕ್ಕೆ ಆಗಲಿಲ್ಲ. ಒಂದು ಸ್ಥಳಕ್ಕೋಸ್ಕರ ಈಗೇನು ಒಂದು ವಿಧೇಯಕವನ್ನು ತಂದಿದ್ದೀರೋ ಅದೇರೀತಿ ಅಲ್ಲೂ ಸಹ, ಯಾವ ತಾಲ್ಲೂಕಿನಲ್ಲಿ ಎಷ್ಟು guidance value ಇರುತ್ತದೆಯೋ ಅಷ್ಟೇ value ಕೊಡುವುದಕ್ಕೆ ಸಂಬಂಧಪಟ್ಟಂತೆ ಮಸೂದೆ ತಂದು, ಜಮೀನು ಸ್ವಾಧೀನ ಮಾಡಿಕೊಂಡು ಪ್ರಾಜೆಕ್ಟನ್ನು ಪೂರ್ತಿ ಮಾಡಲಿಲ್ಲ? ನಮಗೆ ಇವತ್ತಿಗೂ ಕೂಡ ಕುಡಿಯುವ ನೀರಿಲ್ಲ. ಆವತ್ತು ನಿಮಗೆ ಇಂತಹ ಯೋಚನೆ ಬರಲಿಲ್ಲವೇ? ಈ 4 ಜಿಲ್ಲೆಗಳ ಪರವಾಗಿ ಸಭಾಪತಿಗಳ ಮೂಲಕ ನಿಮ್ಮನ್ನು ಒತ್ತಾಯ ಮಾಡುತ್ತೇನೆ. ಈಗೇನು ರಸ್ತೆ ಅಗಲೀಕರಣಕ್ಕೆ ಒಂದು ವಿಧೇಯಕವನ್ನು ತಂದಿದ್ದಿರೋ ಇಂಥದ್ದೇ ವಿಧೇಯಕವನ್ನು ತರಬೇಕು. ಈಗ ಒಂದೇ ಕುಟುಂಬದ ವಿರುದ್ಧ ನೀವು ವಿಧೇಯಕವನ್ನು ತಂದಿರುವುದರಿಂದ ಎಲ್ಲರೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಸಾರ್ವಜನಿಕ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಇಂತಹ ಒಂದು ವಿಧೇಯಕವನ್ನು ತಂದರೆ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಬೆಂಗಳೂರು ಅರಮನೆ (ಅರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರಡಿ ಅರ್ಜಿಸಿರುವ ಬೆಂಗಳೂರು ಅರಮನೆಯ ಭೂ ಬಳಕೆ ಮತ್ತು ನಿಯಂತ್ರಣ ಹಾಗೂ ಬೆಂಗಳೂರು ಅರಮನೆಗೆ ಸಂಬಂಧಿಸಿರುವ, ಈಗ ಕರ್ನಾಟಕ ರಾಜ್ಯದೊಂದಿಗೆ ನಿಹಿತವಾಗಿರುವ ಭೂಮಿಯ ನಷ್ಟ ಪರಹಾರವನ್ನು ನಿರ್ಧರಿಸಲು ಒಂದು ವಿಧೇಯಕವನ್ನು ತಂದಿದ್ದಾರೆ. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ವಿಚಾರ ಬಂತು; ಮಹಾರಾಜರ ವಿಚಾರ ಬಂತು. ಮೊಟ್ಟ ಮೊದಲನೆಯದಾಗಿ ಬಹಳ ಗೌರವವನ್ನು ಸಲ್ಲಿಸುವ ಕೆಲವು ವಿಚಾರಗಳನ್ನು ಹೇಳುತ್ತೇನೆ. ಮಾನ್ಯ ಸಭಾಪತಿಗಳೇ, ಇಷ್ಟೆಲ್ಲಾ ಚರ್ಚೆಗಳು ಬೇಕಾಗಿಯೇ ಇರಲಿಲ್ಲ. ನಾನು ತಪ್ಪು ಹೇಳಿದರೆ ಸರಿಮಾಡಬೇಕು. 1907ರಲ್ಲಿ ಪ್ರಜಾಪ್ರತಿನಿಧಿ ಸಭೆ ಪ್ರಾರಂಭವಾಯಿತು. ಈ ಸದನದಲ್ಲಿ, ಜನಸಾಮಾನ್ಯರಿಗೆ ನ್ಯಾಯ ಸಿಗಬೇಕೆಂದು, ಎಲ್ಲಾ ವರ್ಗದವರು ಈ ಕುರಿತು ಚರ್ಚೆ ಮಾಡಬೇಕೆಂದು ಈ ವ್ಯವಸ್ಥೆ ಮಾಡಿದರು. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಬದುಕಿದ್ದರೆ ಕಣ್ಣು ಮುಚ್ಚಿಕೊಂಡು ಆ ಜಾಗವನ್ನು ಕೊಟ್ಟುಬಿಡುತ್ತಿದ್ದರು. ಈ ಜಾಗವನ್ನು ರಿಯಲ್ ಎಸ್ಟೇಟ್ ಬಿಸ್‌ನೆಸ್‌ಗೆಂದು ಕೇಳುತ್ತಿಲ್ಲ ಅಥವಾ ಯಾವುದಾದರೂ ಒಂದು ವಾಣಿಜ್ಯ ಉದ್ದೇಶಕ್ಕೂ ಕೇಳುತ್ತಿಲ್ಲ. ಇಲ್ಲಿ ಎಲ್ಲರೂ, ಸದಾಶಿವನಗರ,

ಸದಾಶಿವನಗರ ಎಂದು ಹೇಳುತ್ತಿದ್ದಾರೆ. ಅದು ಗೇರು ಹಣ್ಣಿನ ತೋಪು ಆಗಿತ್ತು. ನಾನು ಸ್ಯಾಂಕಿ ಟ್ಯಾಂಕ್‌ನಲ್ಲೇ ಈಜು ಕಲಿತೆ. ಆಕಡೆಯಿಂದ ಈಕಡೆಗೆ ಬಂದು ಗೇರು ಹಣ್ಣನ್ನು ತೆಗೆದುಕೊಂಡು ಹೋಗುತ್ತಿದ್ದೆ. ಕೇವಲ ಸದಾಶಿವನಗರದ ಬಗ್ಗೆ ಹೇಳುತ್ತೀರಿ; ಅದರ ಪಕ್ಕಕ್ಕೆ ಮುನಿರೆಡ್ಡಿ ಪಾಳ್ಯ ಇದೆ. ಅಲ್ಲಿ ಒಂದು ಅಡಿ ಜಾಗಕ್ಕೆ ರೂ. 10,000. ಪಕ್ಕದ ಜಯಮಹಲ್ ಎಕ್ಸ್‌ಟೆನ್ಷನ್‌ಲ್ಲಿ ಅಡಿಗೆ ರೂ. 25,000 ಇದೆ. ಬರೀ ಸದಾಶಿವನಗರ ತೋರಿಸಿ ರೂ. 3,000 ಕೋಟಿ ಕೊಡಿ ಎಂದು ಹೇಳಿದರೆ ಹೇಗೆ? ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಬಗ್ಗೆ ನಮಗೆ ಅಪಾರವಾದ ಗೌರವ ಇದೆ. ಇವತ್ತು ನಾನು ಅಥವಾ ವಿರೋಧ ಪಕ್ಷದ ನಾಯಕರಾಗಿರುವ ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು ಅಥವಾ ಲಿಂಗಾಯತರೋ ಅಥವಾ ಒಕ್ಕಲಿಗರು ಇಲ್ಲಿ ನಿಂತು ಮಾತನಾಡುತ್ತಿದ್ದೇವೆ. ಮಿಲ್ಲರ್ ಕಮಿಷನ್ ರಿಪೋರ್ಟ್ ಮಾಡಿ ವರದಿ ಸಲ್ಲಿಸಿ, ಸಂಸ್ಥಾನದಲ್ಲಿ ಎಲ್ಲರಿಗೂ ಅವಕಾಶ ಕೊಡಬೇಕೆಂದು ಹೇಳಿದ ಹಿನ್ನೆಲೆಯಲ್ಲಿ ನಾವೆಲ್ಲರೂ ಇವತ್ತು ಇಲ್ಲಿದ್ದೇವೆ. ಇಲ್ಲದೇ ಇದ್ದರೆ ನಾವು ಹೊರಗಡೆಯೇ ಇರಬೇಕಾಗಿತ್ತು. ಇಂತಹ ಸ್ಥಿತಿಯಲ್ಲಿ ಮಹಾರಾಜರಿಗೆ ಅನ್ಯಾಯ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಯಾರಾದರೂ ಆ ರೀತಿ ತಿಳಿದುಕೊಂಡಿದ್ದರೆ ಅದು ತಪ್ಪು. ಮಾನ್ಯ ಜಯಚಾಮರಾಜೇಂದ್ರ ಒಡೆಯರ್‌ರವರು ನಮ್ಮ ರಾಜ್ಯದ ಮೊದಲ ರಾಜ್ಯಪಾಲರಾಗಿದ್ದರು. ವಿಧಾನಸೌಧ ಹಾಗೂ ಶಾಸಕರ ಭವನದ ಕಟ್ಟಡಗಳನ್ನು ಅವರೇ ಉದ್ಘಾಟನೆ ಮಾಡಿದರು. ಗಾಲ್ಫ್ ಕ್ಲಬ್, ಕಬ್ಬನ್ ಪಾರ್ಕ್, ಬೆಂಗಳೂರು ಕ್ಲಬ್, ರೇಸ್‌ಕೋರ್ಸ್ ಇವುಗಳೆಲ್ಲವನ್ನು ಕೊಟ್ಟರು. ಮಾನ್ಯ ಸಿ.ಟಿ.ರವಿಯವರು ಹೇಳಿದ ಹಾಗೆ, ರಾಜ ಪ್ರಭುತ್ವವಿದ್ದಾಗ ಇಡೀ ದೇಶ ಅವರದ್ದೇ ಅಗಿತ್ತು. ರಾಜಪ್ರಭುತ್ವ ಬರುವುದಕ್ಕೆ ಮೊದಲು ಧರ್ಮಪ್ರಭುತ್ವವಿದ್ದಾಗ ಈ ದೇಶವನ್ನು ಧಾರ್ಮಿಕವಾಗಿ ಆಳುತ್ತಿದ್ದವರದ್ದೇ ಆಗಿತ್ತು. ಈಗ ಪ್ರಜಾಪ್ರಭುತ್ವ ಬಂದಮೇಲೆ ಇದು ಜನರ ಆಸ್ತಿಯಾಗುತ್ತದೆ. "Democracy is a government of the people, by the people, for the people" ಎಂದು ಹೇಳುತ್ತೇವೆ. ಜನರ ಆಸ್ತಿಯನ್ನು ಮೇಲ್ವಿಚಾರಣೆ ಮಾಡುವುದಕ್ಕೆ ನಾವೆಲ್ಲರೂ ಇಲ್ಲಿದ್ದೇವೆ. ಮಾನ್ಯ ನಾರಾಯಣಸ್ವಾಮಿಯವರು, ಯಲಹಂಕದಿಂದ ಇಲ್ಲಿಗೆ ಬರಬೇಕಾದರೆ ಒಂದು ಗಂಟೆ ಬೇಕಾಗುತ್ತದೆ ಎಂದು ಹೇಳಿದರು. ನಾನು ದಿನಾಗಲೂ ಆಕಡೆಯೇ ಓಡಾಡಬೇಕು. ಅಲ್ಲೇನಾದರೂ ನೀವು peak hour ನಲ್ಲಿ ಬಂದರೆ, ಮೇಕ್ರಿ ಸರ್ಕಲ್‌ನಿಂದ ವಿಂಡ್ಸರ್‌ಮ್ಯಾನರ್‌ಗೆ ಬರಬೇಕಾದರೆ ಒಂದೂವರೆ ಗಂಟೆ ಬೇಕಾಗುತ್ತದೆ. ರಸ್ತೆ ಅಗಲೀಕರಣಕ್ಕೆ ಜಾಗ ಕೇಳುತ್ತಿದ್ದಾರೆಯೇ ವಿನಃ ಅಲ್ಲಿ ಯಾವುದಾದರೂ ಬಂಗಲೆ ಕಟ್ಟುವುದಕ್ಕೋ ಅಥವಾ ನಿವೇಶನ ಮಾಡುವುದಕ್ಕೋ ಕೇಳುತ್ತಿಲ್ಲ. ಮಾನ್ಯ ಸಭಾಪತಿಗಳೇ, ಈ ಒಂದು ವಿಧೇಯಕವನ್ನು ಅರಮನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ರಾಜಕೀಯ ದುರುದ್ದೇಶದಿಂದ ತಂದಿದ್ದೀರಿ ಎಂದು ಹೇಳುತ್ತಿದ್ದಾರೆ. 1996ನೇ ಇಸವಿಯಲ್ಲಿ ಮಹಾನ್ ಸಮಾಜವಾದಿ ನಾಯಕರಾದ ಮಾನ್ಯ ಜೆ.ಹೆಚ್.ಪಟೇಲ್‌ರವರು ಈ ವಿಧೇಯಕವನ್ನು ಮಂಡನೆ ಮಾಡಿದರು. ಬೆಂಗಳೂರು ನಗರದಲ್ಲಿ ಮಹಾರಾಜರ ಆಸ್ತಿ ಏನಿದೆ, ಈ ಕುರಿತು ಚರ್ಚೆ ಆಯಿತು. ಈ ಸದನದಲ್ಲಿ ಆಗ ಮಾನ್ಯ ಸಲೀಂ ಅಹ್ಮದ್‌ರವರು ಶಾಸಕರಾಗಿ ಬಂದಿದ್ದರು ಮತ್ತು ಅವರು ಅತಿ ಕಿರಿಯರಾಗಿದ್ದರು. ಆ ಸಂದರ್ಭದಲ್ಲಿ ಮಹಾರಾಜರ ಆಸ್ತಿಯ ಬಗ್ಗೆ ಸುದೀರ್ಘವಾದ ಚರ್ಚೆ ಮಾಡಿ, ಇದು ಸಾರ್ವಜನಿಕರ ಆಸ್ತಿ, ಸಾರ್ವಜನಿಕರ ಉಪಯೋಗಕ್ಕಾಗಿ ಇದು ಬಳಕೆಯಾಗಬೇಕು ಎನ್ನುವ ಮೂಲ ಉದ್ದೇಶದಿಂದ

ಈ ಒಂದು ಅಧಿನಿಯಮವನ್ನು ತಂದರು. ಇದನ್ನು ಕೇವಲ ಬೆಂಗಳೂರು ಅರಮನೆಯನ್ನು ಗಮನದಲ್ಲಿಟ್ಟುಕೊಂಡೇ ಮಾಡಿದರು ಎಂದು ಹೇಳುವುದು ಸರಿಯಲ್ಲ. ನಾನು ಹೆಸರು ಹೇಳುವುದಿಲ್ಲ. ಒಬ್ಬ ದೊಡ್ಡ ಕಂಟ್ರ್ಯಾಕ್ಟರ್, ಮಹಾರಾಜರಿಗೆ ಕಷ್ಟವಾದ ಸಂದರ್ಭದಲ್ಲಿ ಅವರಿಗೆ ಕೈಸಾಲ ಕೊಟ್ಟು ಒಂದಷ್ಟು ಜಾಗವನ್ನು ಬರೆಸಿಕೊಂಡಿದ್ದರು. ಇನ್ನು ಕೆಲವರು ಪಕ್ಕದಲ್ಲೇ ಏನೇನೋ ಮಾಡಿಕೊಂಡಿದ್ದರು. ಅದೆಲ್ಲವನ್ನೂ ನೋಡಿ, ಮಹಾರಾಜರ ಆಸ್ತಿ ಉಳಿಯಬೇಕೆಂದು ಈ ಒಂದು ಅಧಿನಿಯಮ ತಂದು, 'The Bangalore Palace Act' ಎಂದು ಮಾಡಿ, ಅದನ್ನು ಉಪಯೋಗ ಮಾಡಿಕೊಂಡರು.

ಮಾನ್ಯ ಸಭಾಪತಿಗಳೇ, ನ್ಯಾಯಾಂಗದಲ್ಲಿ ಏನೇನು ಆಗುತ್ತಿದೆ ಎನ್ನುವುದನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. 1993ನೇ ಇಸವಿಯಲ್ಲಿ ಕೊಪ್ಪಳದಲ್ಲಿ ರೂ. 5 ಕೋಟಿ ವೆಚ್ಚದಲ್ಲಿ hanging bridge ಎಂದು ಮಾಡಿದರು. ಆದರೆ, ಹೆರಿಟೇಜ್‌ನವರು ಅದಕ್ಕೆ objection ಹಾಕುತ್ತಾರೆ. ಕೆಲಸ ನಿಂತು ಹೋಗುತ್ತದೆ. ಮತ್ತೆ, 2009ರಲ್ಲಿ ಅನುಮತಿ ಇಲ್ಲದೇ ಬ್ರಿಡ್ಜ್ ಕಟ್ಟುವುದಕ್ಕೆ ಹೋದಾಗ ಅದು ಬಿದ್ದು, 4-5 ಜನ ಸಾಯುತ್ತಾರೆ. ಆಗ ಆ ಕಂಟ್ರ್ಯಾಕ್ಟರ್ ಕೋರ್ಟ್‌ಗೆ ಹೋಗುತ್ತಾನೆ. ಐದು ಕೋಟಿ ರೂಪಾಯಿಗಳ ಕೆಲಸಕ್ಕೆ, ರೂ. 5,000 ಕೋಟಿಗಳ ಪರಿಹಾರವನ್ನು ಕೇಳಿದ್ದರು. ಆದರೆ ಸುಮಾರು ರೂ. 2900 ಕೋಟಿ ಕಾಂಪನ್‌ಸೇಷನ್ ಕೊಡಬೇಕು ಎಂದು ಡಿಸ್ಟ್ರಿಕ್ಟ್ ಕೋರ್ಟ್ ಹೇಳಿದೆ. Chief Secretary and PWD Secretary, ಇವರುಗಳ ಮೇಲೆ ಅರೆಸ್ಟ್ ವಾರೆಂಟ್ ಜಾರಿ ಮಾಡಿದೆ. ಈಗ ಅವರು ರೂ. 5,000 ಕೋಟಿ ಕೇಳುತ್ತಿದ್ದಾರೆ. ಅವರಿಗೆ ಕೊಟ್ಟುಬಿಡುತ್ತೀರಾ? ಇದು ಯಾರ ದುಡ್ಡು? ಇದು ಜನರ ತೆರಿಗೆ ಹಣವಾಗಿದೆ. ಸರಿಯಾದ ರೀತಿಯಲ್ಲಿ ನಾವು ಕೆಲಸ ಮಾಡದೇ ಇದ್ದರೆ ಭಾರೀ ಕಷ್ಟವಾಗುತ್ತದೆ. 1996ನೇ ಇಸವಿಯಲ್ಲಿ ಈ ಒಂದು ಪ್ಯಾಲೇಸನ್ನು ಉಳಿಸಿಕೊಳ್ಳಬೇಕು, ಬೇರೆಯವರ ವಶ ಆಗಬಾರದು ಎನ್ನುವ ಒಳ್ಳೆಯ ಉದ್ದೇಶದಿಂದ ಮಾನ್ಯ ಜೆ.ಹೆಚ್.ಪಟೇಲರು ಈ ನಿಟ್ಟಿನಲ್ಲಿ ಮುಂದುವರೆದಿದ್ದರು. ಸನ್ಮಾನ್ಯ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಾಗ ಇದೇ ವಿಚಾರ ಬಂತು. ಆಗ ಬಹಳಷ್ಟು ಜನ ರಿಯಲ್ ಎಸ್ಟೇಟ್‌ನ ಜನ, ಇದು ನಮಗೆ ಉಪಯೋಗವಿಲ್ಲ, ಈ ಜಾಗವೇ ಬೇಡ ಎಂದು ಬರೆದುಕೊಟ್ಟರು. ಏಕೆಂದರೆ ಅವರಿಗೆ ಕಷ್ಟ ಗೊತ್ತಾಗುವುದಿಲ್ಲ. ಮುಂದೆಗಡೆ ಪೈಲೆಟ್ ಇರುತ್ತದೆ, ಪೋಲೀಸ್ ಜೀಪ್ ಬರುತ್ತದೆ; ಅವರು ಆರಾಮವಾಗಿ ಬಂದುಬಿಡುತ್ತಾರೆ. ಆದರೆ ನಾವುಗಳು ಆ ರೀತಿ ಬರುವುದಕ್ಕಾಗುವುದಿಲ್ಲ. ಸದಾಶಿವನಗರ ಪ್ರದೇಶ costly ಇರಬಹುದು.

(ಮುಂದು)

(181) 10-3-2025 5.40 ಡಿಎಸ್-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದು):-**

ಆದರೆ, ಅದೇ ಸದಾಶಿವನಗರದ ಪಕ್ಕಕ್ಕೆ ಹೋದರೆ ಮುನಿರೆಡ್ಡಿಪಾಳ್ಯ, ಜೆ.ಸಿ. ನಗರ ಎಂದು ಇಟ್ಟಿದ್ದಾರೆ, ಜಯಮಹಲ್ extension, ಅವೆಲ್ಲಾ ಅಷ್ಟೆಲ್ಲಾ ಬೆಲೆ ಇರತಕ್ಕಂಥದ್ದಲ್ಲ. ಆದ್ದರಿಂದ ಇದರಲ್ಲಿ ರಾಜಕೀಯ ಬೆರೆಸುವುದು ಬೇಡ. ಲೋಕಸಭೆಯಲ್ಲಿ ನಾನು, ಮಾನ್ಯ ವಿಶ್ವನಾಥ್ ರವರು ಮಹಾರಾಜರ ಜೊತೆಯಲ್ಲೇ ಇದ್ದೆವು. ಆಗ ಮಹಾರಾಜರು

ನಮ್ಮ ಪಕ್ಷದಲ್ಲೇ ಇದ್ದರು. ಅವರ ಮೇಲೆ ನಮಗೆ ಅಪಾರವಾದ ಗೌರವವಿದೆ. ಮೈಸೂರು ಅರಮನೆಯಲ್ಲಿ ಇವತ್ತು ಸಹ ಅವರ ಪೂಜೆಯನ್ನು ಅವರಿಗೆ ಮಾಡುವುದಕ್ಕೆ ಬಿಡುತ್ತೇವೆಯಲ್ಲವೇ? ಆದ್ದರಿಂದ ಪ್ರಜಾಪ್ರಭುತ್ವದಲ್ಲಿ ಇವೆಲ್ಲಾ ಜನಗಳ ಆಸ್ತಿ. It is the property of the State. ಆದ್ದರಿಂದ ಸಂಪೂರ್ಣವಾದ ಹಕ್ಕು ಜನಗಳ ಮೇಲಿದೆ. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಇದ್ದಿದ್ದರೆ ಮೊದಲು ಇದನ್ನು ಬಿಟ್ಟು ಕೊಡುತ್ತಿದ್ದರು. ಗಾಲ್ಫ್ ಕ್ಲಬ್‌ನಲ್ಲಿ ಅಗಲೀಕರಣ ಆಗುತ್ತಿರಲಿಲ್ಲ. ಗಾಲ್ಫ್ ಕ್ಲಬ್‌ನಲ್ಲಿ ಬಹಳ ದೊಡ್ಡದೊಡ್ಡವರು ಇದ್ದಾರೆ, ಅದನ್ನು ಅಗಲೀಕರಣ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದಾಗ ಬೆಂಗಳೂರು ಸಿಟಿ ಕಾರ್ಪೋರೇಶನ್ ಕಮಿಷನರ್ ರವರು ಒಬ್ಬ ಗುತ್ತಿಗೆದಾರರಾಗಿ, ಎಂ.ಎಲ್.ಎ. ಆಗಿ, ಮಂತ್ರಿಗಳಾಗಿ ಇರುತ್ತಾರೆ. ಅವರು ಅಗಲೀಕರಣ ಮಾಡಿದರು. ಅಂದರೆ, ಜನಗಳಿಗೆ ಅನುಕೂಲವಾಗುವಂತಹ ಕೆಲಸ ಮಾಡುವುದಕ್ಕೋಸ್ಕರ ನಾವು ಇದ್ದೇವೆಯೇ ಹೊರತು ಅದರಲ್ಲಿ ಲೋಪದೋಷಗಳನ್ನು ನೋಡಿದರೆ ಅಲ್ಲಿರುವಂತಹ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರ ಈ ಅಧಿನಿಯಮವನ್ನು ತಿದ್ದುಪಡಿಗಾಗಿ ತಂದಿದ್ದಾರೆ, ಇದೇನು ಬೇರೆ ಕಾನೂನು ಅಲ್ಲ, ವಿಧೇಯಕವನ್ನು ತಿದ್ದುಪಡಿ ಮಾಡುವುದಕ್ಕೆ ತಂದಿದ್ದಾರೆ. ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕವನ್ನು ತಿದ್ದುಪಡಿ ಮಾಡುವುದಕ್ಕೆ ತಂದಿದ್ದಾರೆ. ಈ ವಿಧೇಯಕವನ್ನು ತಿದ್ದುಪಡಿ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ಪ್ರತಿಯೊಬ್ಬರಿಗೂ ಕಳಕಳಿಯ ಮನವಿ ಮಾಡುತ್ತೇನೆ. ಏಕೆಂದರೆ, ಆ ರಸ್ತೆಯಲ್ಲಿ ಸಾರ್ವಜನಿಕರು ಬಹಳಷ್ಟು ತೊಂದರೆಗೆ ಈಡಾಗಿದ್ದಾರೆ. ಆದ್ದರಿಂದ ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಎಲ್ಲರಿಗೂ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ಬಹಳಷ್ಟು ಜನರು ಮಾತನಾಡಿದ್ದಾರೆ. ವಿರೋಧ ಪಕ್ಷದ ನಮ್ಮ ಎಲ್ಲಾ ಸ್ನೇಹಿತರು ಈ ವಿಧೇಯಕವನ್ನು ರಾಜಕೀಯ ದೃಷ್ಟಿಕೋನದಿಂದ ನೋಡುತ್ತಿದ್ದಾರೆಯೇ ಹೊರತು ಕಾನೂನಿನ ದೃಷ್ಟಿಕೋನದಿಂದ ನೋಡುತ್ತಿಲ್ಲ. ಈಗ ಎಲ್ಲರೂ ಕೂಡ ಮೈಸೂರು ಮಹಾರಾಜರಿಗೆ ಮತ್ತು ಅವರ ಮನೆತನಕ್ಕೆ ಗೌರವ ಕೊಡುತ್ತಾರೆ. ನಮ್ಮ ಭಾಗದಲ್ಲೂ ಕೂಡ ಆಗ ಒಡೆಯರ್ ರವರ ಆಳ್ವಿಕೆ ಇದ್ದಿದ್ದರೆ ನಮ್ಮ ಭಾಗ ಹಿಂದುಳಿಯುತ್ತಿರಲಿಲ್ಲ ಎಂದು ನಮ್ಮ ಭಾಗದಲ್ಲೂ ಕೂಡ ಬಹಳಷ್ಟು ಜನ ಮಾತನಾಡಿದ್ದಾರೆ. ಹೈದರಾಬಾದ್ ಕರ್ನಾಟಕದವರು ನಿಜಾಮರ ಆಳ್ವಿಕೆಯ ಅಂಚಿನಲ್ಲಿದ್ದೇವೆ, ಕೊನೆ ದಂಡಿಯಲ್ಲಿದ್ದೆವು. ನಮಗೇನೂ ಅಭಿವೃದ್ಧಿ ಆಗಿಲ್ಲ. ಇದರಿಂದಲೇ ಪ್ರಾದೇಶಿಕ ಅಸಮತೋಲನವಾಗುತ್ತಿರುವಂಥದ್ದು. ಇಲ್ಲಿ ಒಳ್ಳೆಯ ಆಳ್ವಿಕೆ ಇತ್ತು, ನಮ್ಮ ಕಡೆ ಇರಲಿಲ್ಲ. ಇಲ್ಲಿ ಹೇಗೆ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಇಲ್ಲಿ ಎಷ್ಟು ಅಭಿವೃದ್ಧಿಯಾಗಿದೆಯೋ ಅದೇ ರೀತಿ ನಮ್ಮ ಭಾಗದಲ್ಲೂ ಅಭಿವೃದ್ಧಿಯಾಗಲಿ ಎಂದು ನಾವು ಆರ್ಟಿಕಲ್ 371 (ಜೆ) ಅನ್ನು ತಂದಿದ್ದೇವೆ. ಎಲ್ಲರೂ ಎದ್ದು ನಿಂತು ನಾವು ಮೈಸೂರು ಸಂಸ್ಥಾನದ ವಿರುದ್ಧ ಇದ್ದೇವೆ, ರಾಜಮನೆತನದ ವಿರುದ್ಧ ಇದ್ದೇವೆ ಎಂದು ಹೇಳುವುದು ಸರಿಯಲ್ಲ. ಯಾರು ಅವರ ವಿರುದ್ಧ ಇಲ್ಲ. ಈಗ ಇದು 1996 ನಿಂದ ನಡೆಯುತ್ತಿದೆ. ಬಿಜೆಪಿ, ಕಾಂಗ್ರೆಸ್, ಜೆಡಿ(ಎಸ್) ಪಕ್ಷಗಳ ಸರ್ಕಾರಗಳು ಇತ್ತು. ಎಲ್ಲರೂ ಕೂಡ ರಾಜ್ಯದ ಜನರ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ

ಮಾಡಿದ್ದೇವೆಯೇ ಹೊರತು ಆ ಮನೆತನದ ವಿರುದ್ಧ ಯಾರು ಮಾಡಿಲ್ಲ. ಅವರೆಲ್ಲರೂ ದಯವಿಟ್ಟು ಇತಿಹಾಸದ ಪುಟವನ್ನು ತೆಗೆದು ನೋಡಿದರೆ, ಅವರು ಕೂಡ ಆದೇಶಗಳನ್ನು ಹಾಗೆಯೇ ಮಾಡಿರುವಂಥದ್ದು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನನ್ನದೊಂದು ಪ್ರಶ್ನೆ ಇದೆ. ಸಹೋದರ ಮಾನ್ಯ ಪ್ರಿಯಾಂಕ್ ಖರ್ಗೆಯವರು ಸಚಿವರಿದ್ದಾರೆ. ಮಾನ್ಯ ಕಾನೂನು ಸಚಿವರು ಹೇಳಿರುವುದು ಅವರಿಗೇನಾದರೂ ಸರಿಯಿಲ್ಲವೆಂದು ಕಾಣಿಸಿದ್ದರೆ ಅವರು ಕೂಡ ಪ್ರಸ್ತಾಪ ಮಾಡಬಹುದು, ತಪ್ಪೇನು ಇಲ್ಲ. ಆದರೆ ಮಾನ್ಯ ಸಚಿವರು ವಿಧೇಯಕವನ್ನು ಮಂಡಿಸಿದ್ದಾರೆ. ಈಗ ಸದಸ್ಯರುಗಳು ಮಾತನಾಡಬೇಕು. ಆದ್ದರಿಂದ ಮಾನ್ಯ ಕಾನೂನು ಸಚಿವರು ಹೇಳಿರುವುದರಲ್ಲಿ ಏನಾದರೂ ದೋಷ ಕಂಡುಹಿಡಿದು ಹೇಳುವುದಿದ್ದರೆ ಮಾನ್ಯ ಪ್ರಿಯಾಂಕ್ ಖರ್ಗೆಯವರು ಹೇಳಲಿ. ಇಲ್ಲದಿದ್ದರೆ....

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, as a Government...

**ಶ್ರೀ ಎಚ್.ಕೆ.ಪಾಟೀಲ್:-** ಸಂಪ್ಲಿಮೆಂಟರಿ ಮಾಡುವುದರ ಹಿಂದೆ ಮಾತನಾಡುವಂತಹ ಪದ್ಧತಿ ಇದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಅವರು ಮಾತನಾಡಬಾರದು ಎಂದು ನಾನು ಹೇಳುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರೇ, ನಿಮಗೆ provoke ಮಾಡುತ್ತಿದ್ದಾರೆ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಇಲ್ಲಿ provoke ಆಗುವ ಪ್ರಶ್ನೆ ಇಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಕಾನೂನು ಸಚಿವರೇ, ವಿಧೇಯಕವನ್ನು ನೀವು ಮಂಡಿಸಿದ್ದೀರಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನಾನು ಅವರ ಬೆಂಬಲ ಕೇಳುತ್ತಿದ್ದೇನೆ ಅಷ್ಟೇ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡುತ್ತಾರೆ. He is part of the Government. He has got the right to speak. **(ಗೊಂದಲ)** ಮಾನ್ಯ ಸಚಿವರು ವಿರೋಧ ಮಾಡುತ್ತಿಲ್ಲ. ಸರ್ಕಾರದ ನಿಲುವನ್ನು ಹೇಳುವುದಕ್ಕೆ ಪ್ರತಿಯೊಂದಕ್ಕೂ ಅವರಿಗೆ ಹಕ್ಕು ಇದೆ. ಮಾನ್ಯ ಛಲವಾದಿ ನಾರಾಯಣಸ್ವಾಮಿಯವರು ವಿರೋಧ ಪಕ್ಷದ ನಾಯಕರಾಗಿದ್ದಾರೆ. ಅವರು ಸ್ವಲ್ಪ ಹಳೆಯದನ್ನು ನೆನಪಿಸಿಕೊಳ್ಳಲಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿಧೇಯಕವನ್ನು ಮಂಡಿಸಿದ ಮೇಲೆ ಅದರ ಬಗ್ಗೆ ನಾವು ಮಾತನಾಡಬೇಕು. ಅವರ ಬೆಂಚ್‌ನಿಂದ ಹೆಚ್ಚು ಮಾತನಾಡುವಂತಹ ಅವಶ್ಯಕತೆ ಇಲ್ಲ. ಏಕೆಂದರೆ, ಅವರು ವಿಧೇಯಕದ ಪರವಾಗಿಯೇ ಇದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾವು ವಿಧೇಯಕದ ಬಗ್ಗೆ ಮಾತ್ರ ಮಾತನಾಡುತ್ತಿದ್ದೇವೆ. ನಾವು ಯಾರು ಕೂಡ ಬೇರೆ ವಿಚಾರದ ಬಗ್ಗೆ ಮಾತನಾಡುತ್ತಿಲ್ಲ. ಅದಕ್ಕೆ ರಾಜಕಾರಣ ಸೇರಿಸುವುದು ಬೇಡ. ನಾವು ಕೂಡ ರಾಜಕಾರಣ ಮಾಡಬೇಕಾಗುತ್ತದೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ರಾಜ ಮನೆತನದ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದೇವೆ. ಅದರಲ್ಲಿ ಪ್ರಜಾಪ್ರಭುತ್ವ ಬರಲಿಲ್ಲ. 1996 ರವರೆಗೆ ಅವಶ್ಯಕತೆ ಇರಲಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ನಿಮಗೆ ಪ್ರಜಾಪ್ರಭುತ್ವದಲ್ಲಿ ಸಂವಿಧಾನದ ಬಗ್ಗೆ ನಂಬಿಕೆ ಇದೆಯೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಇದೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಬಗ್ಗೆ ನಂಬಿಕೆ ಇದೆ. ನಾನು ಹೇಳಬೇಕಾಗಿರುವುದನ್ನು ಅವರೇ ಹೇಳಿದ್ದಾರೆ. ಮಹಾರಾಜರ ಆಳ್ವಿಕೆ ಇದ್ದಿದ್ದರೆ ಅವರು ಬಿಟ್ಟುಬಿಡುತ್ತಿದ್ದರೆಂದು ಅವರೇ ಹೇಳಿದ್ದಾರೆ. **(ಗೊಂದಲ)** ಮಹಾರಾಜರನ್ನು ಅವರು ಬಿಟ್ಟು ಬಿಟ್ಟಿದ್ದಾರೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನಾವೇನಾದರೂ ರಾಜಕೀಯ ಮಾಡುತ್ತಿದ್ದರೆ ಅವರು ಎದ್ದು ನಿಲ್ಲಲಿ. ಇದು 1996 ರಿಂದ ಇದು ನಡೆಯುತ್ತಿದೆ. ಜೆಡಿ(ಎಸ್) ಪಕ್ಷದವರು, ಬಿಜೆಪಿ ಪಕ್ಷದವರು, ಕಾಂಗ್ರೆಸ್ ಪಕ್ಷದವರು ಸರ್ಕಾರವನ್ನು ನಡೆಸಿದ್ದಾರೆ. ಎಲ್ಲರೂ ಕೂಡ ಕನ್ನಡಿಗರ ಪರವಾಗಿ ನಿಂತಿರುವಂಥದ್ದು. ಉದಾಹರಣೆಗೆ, ಅವರು ಕೇಸ್‌ನ್ನು ನಡೆಸಬೇಕಾದರೆ ಮಾನ್ಯ ಶ್ರೀಕಂಠದತ್ತ ಒಡೆಯರ್‌ರವರು ನಮ್ಮ ಪಕ್ಷದಲ್ಲೇ ಇದ್ದರು. ಅವರು ಬಿಜೆಪಿ ಪಕ್ಷಕ್ಕೆ ಹೋದಾಗಲೂ ಕೂಡ ಹೈಕೋರ್ಟ್‌ನಲ್ಲಿ, ಸುಪ್ರೀಂ ಕೋರ್ಟ್‌ನಲ್ಲಿ ಮನವಿಯನ್ನು ಸಲ್ಲಿಸಿದ್ದಾರೆ. ಅದನ್ನು ಇವರು ಮರೆತುಬಿಟ್ಟಿದ್ದಾರೆ. ಈಗ ಮಾನ್ಯ ಸಿ.ಟಿ.ರವಿಯವರು ಇದು ಹೇಗಾಯಿತು ಎಂದು ಕೇಳುತ್ತಿದ್ದರು.

**ಸಭಾಪತಿಯವರು:-** ಮಾನ್ಯ ಪ್ರಿಯಾಂಕ್ ಖರ್ಗೆಯವರೇ, ತಾವು ಉತ್ತರ ಕೊಡಬೇಡಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, T.D.R. ಬಗ್ಗೆ ಮಾತನಾಡಿದರು. ಹಿಂದಿನ ಸರ್ಕಾರದಲ್ಲಿ ಇದು ಬಹಳ ದುಬಾರಿಯಾಗುತ್ತದೆ, ಟಿ.ಡಿ.ಆರ್. ಅನ್ನು ನಾವು ಕೊಡುವುದಕ್ಕಾಗುವುದಿಲ್ಲ, ಇದು ರಾಜ್ಯದ ಜನರ ಹಿತಾಸಕ್ತಿಗೆ ವಿರುದ್ಧವಾಗಿದೆ ಎಂದು ಹೇಳಿ ದಿನಾಂಕ 8-12-2022 ರಲ್ಲಿ ಅವರೇ ಡ್ರಾಪ್ ಮಾಡಿದ್ದಾರೆ. They have dropped the project. ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳನ್ನು ಪರಿಗಣಿಸಿ ಸ್ವತ್ತಿನ ಮಾಲೀಕತ್ವದ ಕುರಿತು ಸಕ್ಷಮ ನ್ಯಾಯಾಲಯಗಳಲ್ಲಿ ಯಾವುದೇ ವಿವಾದ ಇದ್ದಲ್ಲಿ ವಿವಾದವು ಇತ್ಯರ್ಥವಾಗುವವರೆಗೂ ಟಿ.ಡಿ.ಆರ್. ನೀಡಲು ಅವಶ್ಯಕವಾಗಿರುವುದಿಲ್ಲವಾದ್ದರಿಂದ ಮತ್ತು ಇದು ರಾಜ್ಯ ಸರ್ಕಾರದ ಹಿತಾಸಕ್ತಿಗೆ ವಿರುದ್ಧವಾಗಿರುವುದರಿಂದ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬಳಿ ಲಭ್ಯವಿರುವ ಜಾಗದಲ್ಲಿ ರಸ್ತೆಯನ್ನು ವಿಸ್ತರಿಸಲು ಪರ್ಯಾಯ ಮಾರ್ಗೋಪಾಯಗಳನ್ನು ಯೋಜಿಸಿ ಬಿ.ಬಿ.ಎಂ.ಪಿ. ಈಗಾಗಲೇ ಕ್ರಮ ವಹಿಸಿರುವುದರಿಂದ ಪ್ರಶ್ನಿತ ಬೆಂಗಳೂರು ಅರಮನೆ ಮೈದಾನದ ಸ್ವತ್ತಿನ ಭಾಗಶಃ 15 ಎಕರೆ 39 ಗುಂಟೆ ಜಾಗವನ್ನು ಜಯಮಹಲ್ ರಸ್ತೆ ಮತ್ತು ಬಳ್ಳಾರಿ ರಸ್ತೆ ವಿಸ್ತರಣೆಯ ಉದ್ದೇಶಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಶಕ್ಕೆ ಪಡೆಯುವ ಪ್ರಸ್ತಾವನೆಯನ್ನು ಕೈಬಿಟ್ಟು ಆದೇಶಿಸಿದೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ವಿಧೇಯಕವನ್ನು ಮಂಡಿಸಿದ ಮೇಲೆ ಇವರು ಮಾತನಾಡುವ ಅವಶ್ಯಕತೆ ಇಲ್ಲ.

**(ಗೊಂದಲ)**

ಮಾನ್ಯ ಕಾನೂನು ಸಚಿವರು ಇರುವಾಗ ಇವರು ಮಾತನಾಡುವುದು ಸರಿ ಇದೆಯೇ ಎಂಬುದನ್ನು ಹೇಳಿ? ನಾವು ವಿರೋಧ ಮಾಡುತ್ತೇವೆಂದು ಹೇಳಿಲ್ಲ. Negotiate ಮಾಡಿ ಎಂದು ಹೇಳಿರುವಂಥದ್ದು.

**(ಗೊಂದಲ)**

(ಮುಂದು)

(182) 10/03/2025 5:50 ಎಸ್‌ಪಿಆರ್/ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದವರು ಮೈಸೂರು ಸಂಸ್ಥಾನದ ವಿರುದ್ಧ ಮಾಡಿದ ಹಾಗೆ ಆಗುತ್ತದೆ. ಅವರೇ ಕರಡನ್ನು ಸಿದ್ಧಪಡಿಸಿದ್ದು, ಟಿ.ಡಿ.ಆರ್. ಅನ್ನು ಕೊಡುವುದಕ್ಕಾಗುವುದಿಲ್ಲ, ಟಿ.ಡಿ.ಆರ್. ಅನ್ನು ಕೊಡುವುದಿಲ್ಲ. ಏಕೆಂದರೆ ಅದು ಬಹಳ ದುಬಾರಿಯಾಗಿದೆ ಎಂದು ಅವರು ಈ ಹಿಂದೆ ನೀಡಿರುವ ಆದೇಶವಾಗಿದೆ. ಹೀಗಂದರೆ ಅವರೂ ಸಹ ಇದಕ್ಕೆ ವಿರುದ್ಧನಾ? ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿಯೇ ಅವರು ಹೋರಾಡುತ್ತಿರುವುದು ಹಾಗೂ ನಾವು ವಿಧೇಯಕವನ್ನು ತಂದಿರುವುದು.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಇದನ್ನು ಇಲ್ಲವೆಂದು ನಾವು ಹೇಳುತ್ತಿಲ್ಲ.

**(ಗೊಂದಲ)**

**ಶ್ರೀ ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೆ..,

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಸರ್ಕಾರದ ಕಾನೂನು ಸಚಿವರು ಸಮರ್ಥರಿದ್ದಾರೆಯೋ ಅಥವಾ ಇಲ್ಲವೋ ಎನ್ನುವ ಪ್ರಶ್ನೆ ಇಲ್ಲಿ ಉದ್ಭವವಾಗುತ್ತಿದೆ. ಕಾನೂನು ಸಚಿವರು ಸಮರ್ಥರಿದ್ದಾರೋ ಅಥವಾ ಇಲ್ಲವೋ ಎನ್ನುವ ಅನುಮಾನವನ್ನು ಇಲ್ಲಿ ಹುಟ್ಟು ಹಾಕುತ್ತಿದ್ದಾರೆ. **(ಗೊಂದಲ)** ಕಾನೂನು ಸಚಿವರು ಸಮರ್ಥರಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ಅವರು ಸಮರ್ಥರಲ್ಲ ಎನ್ನುವ ರೀತಿಯಲ್ಲಿ ಇಲ್ಲಿ ಚರ್ಚೆ ನಡೆಯುತ್ತಿದೆ. ಹೀಗಾಗಿ ಇಲ್ಲಿ ಅನುಮಾನ ಬರುತ್ತಿದೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೆ, ಅವರು ಏಕೆ ಡ್ರಾಪ್ ಮಾಡಿದರು?

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೆ, ಈಗ ಮಂಡಿಸಿರುವ ವಿಧೇಯಕದ ಬಗ್ಗೆ ನಾವು ಮಾತನಾಡುತ್ತಿದ್ದೇವೆ. We have not invested the money. **(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೆ, ಅವರು ಮಾಡಬೇಕಾದರೆ, ರಾಜ್ಯದಾದ್ಯಂತ…

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ವಿಧೇಯಕದ ಬಗ್ಗೆ ಮಾತನಾಡುವುದನ್ನು ನಾನು ನಿರ್ಬಂಧಿಸುವುದಕ್ಕೆ ಬರುವುದಿಲ್ಲ. ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ನವರೇ, ಅಲ್ಪಾವಧಿಯಲ್ಲಿಯೇ ಮಾತನಾಡಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕ, 2025 ಕುರಿತು ಈಗಾಗಲೇ ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ. ಎಲ್ಲರಿಗೂ ಗೊತ್ತಿರುವ ಹಾಗೆ ಮೈಸೂರು ಮಹಾರಾಜರಿಗೆ ಇರುವ ಗೌರವ, ಅವರು ಈ ದೇಶ ಮತ್ತು ನಾಡಿಗಾಗಿ ನೀಡಿದ ಕೊಡುಗೆಯು ಅಪಾರವಾಗಿದೆ. ಇದನ್ನು ನಾವುಗಳೆಲ್ಲರೂ ಸ್ಮರಣೆ ಮಾಡಬೇಕು. 1996 ನೇ ಇಸವಿಯಲ್ಲಿ ವಿಧೇಯಕವೊಂದನ್ನು ತಂದು ಈ ಆಸ್ತಿಯನ್ನು ತೆಗೆದುಕೊಂಡು, 11 ಕೋಟಿ ರೂಪಾಯಿಗಳನ್ನು ಕೊಡಬೇಕೆಂಬ ವಿಷಯ ಬಂದಾಗ ಆಗಲೂ ಸಹ ಮಹಾರಾಜರು ಇದನ್ನು ವಿರೋಧಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ಹೋದರು. ಸುಮಾರು 28 ವರ್ಷಗಳ ಕಾಲ ಆಡಳಿತದಲ್ಲಿದ್ದ ಯಾವುದೇ ಪಕ್ಷದ ಸರ್ಕಾರಗಳು ಸರ್ವೋಚ್ಚ ನ್ಯಾಯಾಲಯದಲ್ಲಿನ ಪ್ರಕರಣವನ್ನು ಇತ್ಯರ್ಥಗೊಳಿಸದೇ, ಇಲ್ಲಿಯವರೆವಿಗೆ ಕಾಲಹರಣವಾಗಿದೆ. ಈ ಸಂದರ್ಭದಲ್ಲಿ ನ್ಯಾಯಾಲಯವೇ ಪ್ರಕರಣವನ್ನು ಇತ್ಯರ್ಥಗೊಳಿಸಿ, ಭೂಮಿಯನ್ನು ತೆಗೆದುಕೊಳ್ಳಬೇಕೆಂದು ಮಾಡಿರುವ ವಿಚಾರದಲ್ಲಿ ಸರ್ಕಾರ implead ಆಗಿರುವ ಸಂದರ್ಭದಲ್ಲಿ ನ್ಯಾಯಾಲಯವು 3,000 ಕೋಟಿ ರೂಪಾಯಿಗಳನ್ನು ನೀಡಬೇಕೆಂದು ಆದೇಶ ಮಾಡಿದೆ. ಈ 3,000 ಕೋಟಿ ರೂಪಾಯಿಗಳು ಹೆಚ್ಚು ಅಥವಾ ಕಡಿಮೆಯಾಗುತ್ತದೆ ಎಂಬ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಿದಾಗ, 3,000 ಕೋಟಿ ರುಪಾಯಿಗಳು ಜಾಸ್ತಿಯಾಗುತ್ತದೆ ಎಂಬ ಅಂಶವನ್ನೇ ನ್ಯಾಯಾಲಯಕ್ಕೆ ತಿಳಿಸಬೇಕಾಗಿತ್ತು. ಇಷ್ಟು ಮಾರುಕಟ್ಟೆ ಮೊತ್ತವಿಲ್ಲ; ಹೀಗಾಗಿ ಇದನ್ನು ಕಡಿಮೆ ಮಾಡಿ ಎಂದು ನ್ಯಾಯಾಲಯದಲ್ಲಿ ಸರ್ಕಾರವು ವಾದ ಮಾಡಬೇಕಾಗಿತ್ತು. ಭೂ ಸ್ವಾಧೀನ ಪಡಿಸಿಕೊಳ್ಳಲು ಕಾನೂನು ಇದೆ. ಭೂ ಸ್ವಾಧೀನ ಪಡಿಸಿಕೊಳ್ಳಲು ಭೂ ಸ್ವಾಧೀನ ಕಾಯ್ದೆಯು ಜಾರಿಯಲ್ಲಿದೆ. ಸರ್ಕಾರವು ಹೊಸ ಭೂ ಸ್ವಾಧೀನ ಕಾಯ್ದೆಯ ಪ್ರಕಾರ, ಮಾರ್ಗಸೂಚಿ ಮೌಲ್ಯದನ್ವಯ ಭೂಮಿಗೆ ಬೆಲೆ ನೀಡಬೇಕಾಗುತ್ತದೆ. ಹಾಲಿ ಬೆಂಗಳೂರು ನಗರದಲ್ಲಿ ಮಾರ್ಗಸೂಚಿ ಮೌಲ್ಯವು ಎಷ್ಟಿದೆ ಎಂಬುದರ ಬಗ್ಗೆ ಸಚಿವರು ಈಗಾಗಲೇ ಪ್ರಸ್ತಾಪಿಸಿದ್ದಾರೆ. ಪ್ರಸ್ತುತ ಪ್ರತಿ ಅಡಿಗೆ 35,000/- ರೂಪಾಯಿಗಳ ಮಾರ್ಗಸೂಚಿ ಮೌಲ್ಯವು ಇದೆ. ಇದಕ್ಕೆ ಇವತ್ತಿನ ದಿವಸ ಎರಡು ಪಟ್ಟಿನಷ್ಟು ಮೌಲ್ಯವನ್ನು ಕೂಡಿಸಬೇಕಾಗುತ್ತದೆ. ಮುಂದುವರೆದು, ಇದಕ್ಕೆ ಶೇಕಡಾ 100 ರಷ್ಟು solatium ಸೇರಿಸಬೇಕು. ಹಾಗಾಗಿ ಇವತ್ತಿನ ದಿವಸ ಮಾರ್ಗಸೂಚಿ ಮೌಲ್ಯವು 35,000/- ರೂಪಾಯಿಗಳಷ್ಟಿದ್ದರೆ, ಇವತ್ತಿನ ದಿವಸ ಅಲ್ಲಿ ಒಂದು ಚದರ ಅಡಿಗೆ 1,05,000/- ರೂಪಾಯಿಗಳಾಗುತ್ತವೆ. ಇದರ ಮೇಲೆ ನಾವು ಲೆಕ್ಕ ಹಾಕುತ್ತಾ ಹೋದರೆ,

ಪ್ರತಿ ಗುಂಟೆಗೆ 11,40,00,000/- ರೂಪಾಯಿಗಳಾಗುತ್ತವೆ. ಒಂದು ಎಕರೆಗೆ ಲೆಕ್ಕ ಹಾಕಿದಾಗ ಮಾರ್ಗಸೂಚಿ ದರದ ಪ್ರಕಾರ 450 ಕೋಟಿ ರೂಪಾಯಿಗಳಾಗುತ್ತವೆ. ನಾನೇನೂ ಹೊಸದಾಗಿ ಹೇಳುತ್ತಿಲ್ಲ. ನೇರವಾಗಿ ಕಾನೂನನ್ನು ಜಾರಿಗೊಳಿಸಿ, ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳತಕ್ಕದ್ದು ನೈಸರ್ಗಿಕ ನ್ಯಾಯ ತತ್ವಕ್ಕೆ ವಿರುದ್ಧವಾಗಿರುತ್ತದೆ. ಹಾಗಾಗಿ ನಾವು ನೈಸರ್ಗಿಕ ನ್ಯಾಯವನ್ನೂ ಸಹ ಕಾಪಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನಾನು ಇವತ್ತಿನ ದಿವಸ ಈ ವಿಧೇಯಕವನ್ನು ವಿರೋಧಿಸುತ್ತೇನೆ. ಒಂದು ವೇಳೆ ಈ ವಿಧೇಯಕವನ್ನು ಜಾರಿಗೆ ತರುವುದಾದರೆ, ಇಡೀ ಬೆಂಗಳೂರು ನಗರದಲ್ಲಿರುವ ಯಾವ ಯಾವ ಆಸ್ತಿಗಳನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಗಿದೆಯೋ, ಎಲ್ಲದಕ್ಕೂ ಸಹ ಇದೇ ಕಾನೂನನ್ನು ಸರ್ಕಾರವು ಅಳವಡಿಸಬೇಕು. ಮಹಾರಾಜರಿಗೆ ಒಂದು ಕಾನೂನು, ಜನ ಸಾಮಾನ್ಯರಿಗೆ ಒಂದು ಕಾನೂನು ಮಾಡುವುದು ನ್ಯಾಯಸಮ್ಮತವಾಗುವುದಿಲ್ಲ. ಹೀಗೆ ಮಾಡಿದಲ್ಲಿ ರಾಜ್ಯದ ಜನತೆಯು ನಮ್ಮನ್ನು ಕ್ಷಮಿಸುವುದಿಲ್ಲ. ಯಾವುದೇ ಕಾನೂನು ಜಾರಿಗೆ ಬರಬೇಕಾದರೆ, ಅದನ್ನು ಇಡೀ ಬೆಂಗಳೂರು ನಗರಕ್ಕೆ ಜಾರಿಗೆ ತನ್ನಿ. ಇಲ್ಲವೆಂದಾದರೆ, ಅವರಿಗೆ ನ್ಯಾಯಸಮ್ಮತವಾದ ಬೆಲೆಯನ್ನು ಕೊಡಿ. ಸರ್ಕಾರವು ಅವರೊಂದಿಗೆ ಕುಳಿತುಕೊಂಡು ಮಾತನಾಡಬೇಕು. ಕನ್ಸೆಂಟ್ ಅವಾರ್ಡ್ ಮುಖಾಂತರ ಈ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಪ್ರಸ್ತುತ ಸರ್ಕಾರವು ಮಂಡಿಸಿರುವ ವಿಧೇಯಕದ ಬಗ್ಗೆ ಬಹಳ ಜನ ಸ್ನೇಹಿತರು ಪರ ಮತ್ತು ವಿರೋಧವಾಗಿ ಮಾತನಾಡಿದ್ದಾರೆ. ನಾನೂ ಸಹ ಬಹಳ ವರ್ಷಗಳಿಂದ ನೋಡುತ್ತಿದ್ದೇನೆ. ಆಡಳಿತ ಪಕ್ಷದಲ್ಲಿದ್ದಾಗ ಒಂದು ರೀತಿಯಾಗಿ ಮಾತನಾಡುತ್ತೇವೆ; ವಿರೋಧ ಪಕ್ಷದಲ್ಲಿದ್ದಾಗ ಮತ್ತೊಂದು ರೀತಿಯಾಗಿ ಮಾತನಾಡುತ್ತೇವೆ. "One man's food is another man's poison" ಎಂಬ ಆಂಗ್ಲ ನಾಣ್ಣುಡಿಯಂತೆ ಏನು ಹೇಳುತ್ತೇವೆಯೋ, ಅದು ಇಲ್ಲಿ ಪ್ರಾಯೋಗಿಕವಾಗಿ ನಡೆಯುತ್ತದೆ. ಇದು ಒಂದು ತತ್ವ ಸಿದ್ಧಾಂತ ಮತ್ತು ಸಮಾಜ, ಸರ್ಕಾರಗಳು ಸಮ್ಮಿಶ್ರವಾಗಿ ಏನಾದರೊಂದು ನಿರ್ಣಯ ಆಗಬೇಕಾಗುತ್ತದೆ. ಅದರ ಬದಲು ಏಕಾಏಕಿಯಾಗಿ ಸುಗ್ರೀವಾಜ್ಞೆಯನ್ನು ತರುವುದಕ್ಕೆ ಹೋಗುವುದನ್ನು ಯಾರೂ ಸಹ ಒಪ್ಪುವಂತಹದಲ್ಲ. ಸನ್ಮಾನ್ಯ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಭಾವಚಿತ್ರವು ನಮ್ಮ ಸದನದಲ್ಲಿದೆ. ಬಹುಶಃ ಇವರು ಮಾಡಿರುವಷ್ಟು ಜನ ಸೇವೆಯನ್ನು ಭಾರತದ ಯಾವುದೇ ರಾಜ್ಯದ ಇನ್ನಾವುದೇ ಮಹಾರಾಜರು ಮಾಡಲಿಲ್ಲ. ಇವರೊಬ್ಬರೇ ಬಹಳಷ್ಟು ಸೇವೆಯನ್ನು ಮಾಡಿದ್ದಾರೆ. ಬೇರೆ ಮಹಾರಾಜರುಗಳೆಲ್ಲರೂ ಮೋಜು, ಮಜಾಗಳನ್ನು ಮಾಡಿಕೊಂಡು ಅಧಿಕಾರವನ್ನು ಮಾಡಿದವರು. ಆದರೆ, ಇವರು ಈ ರೀತಿಯಾಗಿ ಮಾಡಿಲ್ಲ. ನಮಗೆ ಇವರಲ್ಲಿ ಎಷ್ಟು ಭಕ್ತಿ ಇತ್ತು ಎಂದರೆ, ನಾನು ಚಿಕ್ಕವನಾಗಿದ್ದಾಗ ನಮ್ಮ ತಾತನವರು ಮೈಸೂರು ದಸರಾವನ್ನು ನೋಡಿಕೊಂಡು ಬರಲು ನನ್ನನ್ನು ಅವರ ಹೆಗಲಮೇಲೆ ಕೂಡಿಸಿಕೊಂಡು ಕರೆದುಕೊಂಡು ಹೋಗುತ್ತಿದ್ದರು. ಅಂಬಾರಿ ಬರುವ ಸಮಯದಲ್ಲಿ ಅವರು ಕೈಯನ್ನು ಮುಗಿದು "ಮಹಾರಾಜರು ಈಚೆ ಬಂದುಬಿಟ್ಟರು" ಎಂಬುದಾಗಿ ಹೇಳುತ್ತಿದ್ದರು. ಮಹಾರಾಜರ ಬಗ್ಗೆ ಅವರು ಅಪಾರವಾದ ಗೌರವವನ್ನು

ಹೊಂದಿದ್ದರು. ಆದರೆ ಇವತ್ತಿನ ದಿವಸ ಅವರ ಪರಿಸ್ಥಿತಿ ಹೇಗಿದೆ ಎಂದರೆ,... ನಾನು ಮತ್ತು ಮುಖ್ಯಮಂತ್ರಿಗಳ ಮಗನಾದ ಡಾ॥ ಯತೀಂದ್ರ ಎಸ್ ಇಬ್ಬರೂ ಸಹ ಮೂಲತಃ ಮೈಸೂರಿನವರಾಗಿದ್ದೇವೆ. ಇವತ್ತಿನ ದಿವಸ ಮಹಾರಾಜರ ಅರಮನೆಯ ಪರಿಸ್ಥಿತಿ ಯಾವ ರೀತಿಯಾಗಿದೆ ಎಂದರೆ, ಅವರು ಒಂದು ಖಾಸಗಿ ವಸ್ತು ಸಂಗ್ರಹಾಲಯವನ್ನು ಮಾಡಿಕೊಂಡಿದ್ದಾರೆ. ಅವರಿಗೆ ಹಣಕಾಸಿನ ಬಹಳ ತೊಂದರೆ ಇದೆ. ಅವರು ದಿನನಿತ್ಯದ ವ್ಯವಹಾರವನ್ನು ಮಾಡುವುದು ಕಷ್ಟವಿದೆ. ಖಾಸಗಿ ವಸ್ತು ಸಂಗ್ರಹಾಲಯಕ್ಕೆ 10 ರೂಪಾಯಿಗಳ ಪ್ರವೇಶಾತಿ ಶುಲ್ಕವನ್ನು ನಿಗದಿಪಡಿಸಿದ್ದಾರೆ. "ಇದು ನಮ್ಮ ತಾತ ತೊಟ್ಟಿದ್ದ ಪೇಟ; ಕೋಟು" ಎಂಬುದಾಗಿ ಅವರ ಹಿರಿಯರು ಬಳಸುತ್ತಿದ್ದ ವಸ್ತುಗಳನ್ನು ತೋರಿಸಿಕೊಂಡು, ಇವತ್ತಿನ ದಿವಸ ಅವರು ಹಣ ಪಡೆಯುತ್ತಿದ್ದಾರೆ. It is very pathetic. ಯಾರು ಈ ನಾಡಿಗೆ ಅಕ್ಷರ, ಅನ್ನ, ನೀರು ಮತ್ತು ಉದ್ಯೋಗಗಳನ್ನು ನೀಡಿದ್ದಾರೆಯೋ, ಅವರ ಕುಟುಂಬದವರನ್ನು ಕರೆಸಿ, ಸರ್ಕಾರವು ಅವರೊಂದಿಗೆ ಮಾತನಾಡಬೇಕು. That is the humanity of the Government. ಸರ್ಕಾರವೂ ಇದೆ ಹಾಗೂ ಇವತ್ತಿನ ದಿವಸ ಬೇಕಾದಷ್ಟು ಕಾನೂನುಗಳು ಜಾರಿಯಲ್ಲಿವೆ. ಇವುಗಳು ಒಂದೆಡೆ ಇರಲಿ. ಆದರೆ, ರಾಜ್ಯಕ್ಕೆ ಅವರು ಮಾಡಿರುವ ಸೇವೆಯನ್ನು ಸ್ಮರಣೆ ಮಾಡಬೇಕು. ಹಾಗಾಗಿ ಸರ್ಕಾರವು ಯೋಗ್ಯ ರೀತಿಯಲ್ಲಿ ಸಮಸ್ಯೆಗೆ ಪರಹಾರವನ್ನು ಮಾಡಬೇಕು. ಆ ರೀತಿಯಲ್ಲಿಯೇ ಮಾಡಿಕೊಡುವಂತೆ ನಾವುಗಳೆಲ್ಲರೂ ಕೇಳಿಕೊಳ್ಳುತ್ತಿದ್ದೇವೆಯೇ ಹೊರತು.., ಈಗ ಮಂಡಿಸಿರುವ ವಿಧೇಯಕದ ಬಗ್ಗೆ ಭಾರತೀಯ ಜನತಾ ಪಕ್ಷದ ಸದಸ್ಯರು ವಿರೋಧಿಸಿ ಮಾತನಾಡಿದ್ದಾರೆ. ಜನತಾ ದಳ ಪಕ್ಷದ ಸದಸ್ಯರುಗಳು ಪರ ಮತ್ತು ವಿರೋಧವಾಗಿ ಮಾತನಾಡಿದ್ದಾರೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದವರೂ ಸಹ ವಿಧೇಯಕದ ಬಗ್ಗೆ ಮಾತನಾಡಿದ್ದಾರೆ. ಯಾರಿಗೆ ಹೇಗೆ ಬೇಕೋ ಹಾಗೆ ಭಾಷಣಗಳನ್ನು ಮಾಡಿದ್ದಾರೆ. ಆದರೆ ಯಾವುದೇ ಸಮಸ್ಯೆಗೂ ಸಹ ಪರಿಹಾರ ಸಿಕ್ಕಿಲ್ಲ. ಪ್ರಪಂಚದ ಯಾವುದೇ ದೇಶದಲ್ಲಿ ದೊಡ್ಡ ದೊಡ್ಡ ನೀರಾವರಿ ಕುರಿತಾದ ಸಮಸ್ಯೆಗಳು ಹಾಗೂ ಅಂತರರಾಜ್ಯ ನೀರಾವರಿ ವಿವಾದಗಳಲ್ಲಿ across the table decisions ಆಗಿವೆ. Why not, ಸರ್ಕಾರವು ಏಕೆ ರಾಜ ಪರಿವಾರದವರನ್ನು ಕರೆದು ಈ ವಿಷಯದ ಬಗ್ಗೆ ಮಾತನಾಡಬಾರದು ಎಂದು ನಾನು ಕೇಳುತ್ತೇನೆ. ಈ ಹಿಂದೆ ದಿವಂಗತ ಇಂದಿರಾ ಗಾಂಧಿಯವರ ನೇತೃತ್ವದ ಕಾಂಗ್ರೆಸ್ ಪಕ್ಷದ ಅಧಿಕಾರಾವಧಿಯಲ್ಲಿ Privy Purse ವಿಧೇಯಕವು ದೇಶದಾದ್ಯಂತ ಜಾರಿಗೆ ಬಂದಾಗ, ಮಹಾರಾಜರು ಅದನ್ನು ವಿರೋಧಿಸಲಿಲ್ಲ; ಬದಲಾಗಿ ತಮ್ಮ ಸ್ವತ್ತುಗಳನ್ನು ಬಿಟ್ಟುಕೊಡಲು ಒಪ್ಪಿಕೊಂಡರು. ನಂತರದಲ್ಲಿ ಭೂ ಸುಧಾರಣಾ ಕಾಯ್ದೆಯು ಜಾರಿಗೆ ಬಂದಿತು. ಆಗ "Princely State Lands" (ಅರಮನೆ ಭೂಮಿಗಳು) ಎಂಬುದಾಗಿ ಜಾರಿಗೆ ಬಂದಿದ್ದು, ಆಗಲೂ ಸಹ ರಾಜ ಪರಿವಾರದವರು ಅದನ್ನೂ ಸಹ ಬಿಟ್ಟುಕೊಟ್ಟರು. ಸರ್ಕಾರವು ರಾಜ್ಯದ ಜನರಿಗಾಗಿ ಕಾನೂನು ಮೂಲಕ ಏನೇನು ಪಡೆಯಬೇಕೆಂದು ಅಪೇಕ್ಷಿಸಿತೋ, ಅವುಗಳೆಲ್ಲವನ್ನೂ ಯಾವುದೇ ವಿರೋಧವಿಲ್ಲದೇ, ರಾಜ ಪರಿವಾರದವರು ಬಿಟ್ಟುಕೊಟ್ಟರು. ಆದರೆ, ಇವತ್ತಿನ ದಿವಸ ಅವರ ಪರಿಸ್ಥಿತಿಯು ಬಹಳವಾಗಿ ಕೆಟ್ಟದ್ದಾಗಿದೆ. ನಾವು ಇಲ್ಲಿ ನೋಡುತ್ತಿದ್ದೇವೆ. ಸ್ಟ್ಯಾಂಪ್ ಡ್ಯೂಟಿ ಅಡಿ ಬೆಂಗಳೂರು ನಗರದ ಮಾರ್ಗಸೂಚಿ ಮೌಲ್ಯವು ಎಷ್ಟು ಇದೆ ಎಂದು ಹೇಳಿದರೆ, ಮಾರ್ಗಸೂಚಿ ಮೌಲ್ಯವು ಒಂದು ಅಡಿಗೆ ಸಾವಿರ ರೂಪಾಯಿಯು ಯಾವುದಕ್ಕೂ ಸಹ ಇಲ್ಲ. ಇವತ್ತಿನ

ದಿವಸ ಬೆಂಗಳೂರು ನಗರ ಪ್ರದೇಶದ ಒಂದು ಅಡಿಗೆ ಲಕ್ಷಗಟ್ಟಲೆ ಮೌಲ್ಯವಿದೆ. ಹಾಗಾಗಿ, what I am requesting the Government is to negotiate across the table.

(ಮುಂದು)

**(183) 10-03-2025(6-00) bkp-ks ಸಭಾಪತಿಯವರ ಉಪಸ್ಥಿತಿ**

**ಶ್ರೀ ಅಡಗೂರು ಹೆಚ್. ವಿಶ್ವನಾಥ್(ಮುಂದು..)**

ಅದು ಒಂದು ಗೌರವ ಇತ್ತು. ಮಹಾರಾಜರಿಗೆ ನಾವು ಕೊಡುವಂತಹ ಗೌರವ, ಅವರು ಈ ನಾಡಿಗೆ ಕೊಟ್ಟಂತಹ ಸೇವೆಗೆ ನಮ್ಮ ಶ್ರೀಮಾನ್ ಹೆಚ್.ಕೆ.ಪಾಟೀಲ್‌ರವರು ಒಂದು ದೊಡ್ಡ ರಾಜಕೀಯ ಹಿನ್ನೆಲೆಯ ಕುಟುಂಬದಿಂದ ಬಂದವರು ಮತ್ತು ಅವರ ತಂದೆಯವರು ಸಹಿತ ಅದೇ ರೀತಿಯಲ್ಲಿ ಬಂದಂತಹವರು ಬಹಳ ಜನ ನಮ್ಮ ಕಾಂಗ್ರೆಸ್‌ನಲ್ಲಿ ಇರುವಂತಹ ಮತ್ತು ಇಲ್ಲಿ ಇರುವಂತಹವರು ಬಹಳ ದೊಡ್ಡ ದೊಡ್ಡ ರಾಜಕೀಯ ಹಿನ್ನೆಲೆಯಿಂದ ಬಂದಂತಹವರು, ಅವರ ಪೈಕಿ ನಮ್ಮ ಆರೋಗ್ಯಮಂತ್ರಿ ದಿನೇಶ್ ಗುಂಡೂರವರು ಇರಬಹುದು, ನಮ್ಮ ಪ್ರಿಯಾಂಕ್ ಖರ್ಗೆ ಯವರು ಇರಬಹುದು, ಈ ರೀತಿಯಲ್ಲಿ ಬಹಳ ಜನರು ಇಲ್ಲಿ ಇದ್ದಾರೆ. ಹೀಗಾಗಿ, ನೀವುಗಳೆಲ್ಲರೂ ಒಂದು ಬಾರಿ ಶ್ರೀಮಾನ್ ಹೆಚ್.ಕೆ.ಪಾಟೀಲ್ ರವರು ಸೇರಿದಂತೆ ಎಲ್ಲರೂ ಒಟ್ಟಿಗೆ ಕುಳಿತುಕೊಂಡು ಇದರ ಬಗ್ಗೆ ಮಾತನಾಡುವಂತಹದ್ದು ಒಳ್ಳೆಯದು. ಈಗ ಜನಕ್ಕೆ ಏನಾಗಿದೆ ಎಂದರೆ ನಾವು ಇಲ್ಲಿ ಏನು ಮಾತನಾಡುತ್ತಿದ್ದೇವೆಂದರೆ... ಏನ್ರಿ ಈ ಸಿದ್ದರಾಮಯ್ಯನವರು ಬಂದಾಗ ಬರಿ ಅರಮನೆಯ ವಿಚಾರವನ್ನೇ ಹಾಕಿಕೊಂಡು ಕೆಣಕುತ್ತಾರೆಂದು ಹೇಳಲಾಗುತ್ತದೆ. It is a general talk of the general public. ಏಕೆಂದರೆ, ನಾನು ಮೈಸೂರಿನವನು, ಏತಕ್ಕೆ ಸುಮ್ಮನೆ ಅವರಿಗೂ ಸಹ ಕೆಟ್ಟ ಹೆಸರು? ಮುಖ್ಯಮಂತ್ರಿಗಳಿಗೂ ಕೆಟ್ಟ ಹೆಸರು ಬರುತ್ತದೆ. ಹಾಗಾಗಿ, ತಮ್ಮನ್ನು ಅತ್ಯಂತ ವಿನಿಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಅಲ್ಲೆಲ್ಲಾ, ಅಂದರೆ ಮೈಸೂರಿನಲ್ಲಿ ಇರುವಂತಹ ಹೆಸರುಗಳನ್ನೆಲ್ಲಾ ಬದಲಾವಣೆ ಮಾಡಲಿಕ್ಕೆ ಹೊರಟಿದ್ದೀರಿ. ಅದೆಲ್ಲವನ್ನು ಮಾಡುವುದಲ್ಲ. ಅದು ಸರ್ಕಾರದ ಕೆಲಸವಲ್ಲ. ಹೀಗಾಗಿ, ಅದರಲ್ಲೂ ವಿಶೇಷವಾಗಿ ಅರಮನೆ ವಿಚಾರದಲ್ಲಿ ಅತ್ಯಂತ ಹೆಚ್ಚು ಅನುಭವವುಳ್ಳ ಅತ್ಯಂತ ಹಿರಿಯ ಸಚಿವರಾದ ಶ್ರೀಮಾನ್ ಹೆಚ್.ಕೆ. ಪಾಟೀಲ್ ರವರೆ, you are the senior most minister in the cabinet, well-experienced, and with all your excellence, please negotiate and decide it across the table. Thank you.

**ಡಾ॥ಯತೀಂದ್ರ ಎಸ್( ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕ 2025ರ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ಈಗ ಬಹಳಷ್ಟು ಜನ ವಿರೋಧ ಪಕ್ಷದ ಸದಸ್ಯರೆಲ್ಲರೂ ಮಾತುಗಳನ್ನಾಡಿದ್ದಾರೆ. ಈ ವಿಧೇಯಕ ವಿರುದ್ಧವಾಗಿ ಮಾತನಾಡಿದ್ದಾರೆ. ಅವರು ಮುಖ್ಯವಾಗಿ ಎರಡು ವಿಷಯಗಳನ್ನು ಹೇಳುತ್ತಿದ್ದಾರೆ.

ಈ ವಿಚಾರವಾಗಿ ರಸ್ತೆ ಅಗಲೀಕರಣ ಮಾಡಬೇಕಾದರೆ ಅಥವಾ ಸರ್ಕಾರ ಸ್ವಾಧೀನ ಮಾಡಿಕೊಳ್ಳಬೇಕಾದರೆ ಬೇರೆ ಕಡೆ ಪರಿಹಾರವನ್ನು ಕೊಟ್ಟಿದ್ದಾರೆ. ದೇ ರೀತಿ ಈ ಪ್ರಕರಣದಲ್ಲೂ ಕೂಡ ಇವರು ಕೂಡ ಬೇರೆಯವರಿಗೆ ಪರಿಹಾರ ಕೊಡುವ ರೀತಿಯಲ್ಲಿಯೇ ನಮಗೂ ಕೊಡಿ ಎಂದು ಕೇಳುತ್ತಿದ್ದಾರೆ ಎಂದು ಹೇಳಿದರು. ಆದರೆ, ಬೇರೆ ಕಡೆ rightful owners ಎಂದು ಹೇಳಿ ಈಗಾಗಲೇ ಸಿದ್ಧವಾಗಿರುತ್ತದೆ. Rightful owners ಎಂದು ಹೇಳಿ ಅವರ ಹತ್ತಿರ ದಾಖಲೆಗಳಿರುತ್ತವೆ. ಹಾಗಾಗಿ, ಅವರ ownership ಸಿದ್ಧವಾಗಿರುವುದರಿಂದ ಅವರಿಗೆ ನಾವು ನ್ಯಾಯವಾಗಿ ಪರಿಹಾರವನ್ನು ಕೊಡಬೇಕಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ನಿಜವಾಗಿಯೂ ಮಾಲೀಕರು ಯಾರು ಎನ್ನುವುದು ಇನ್ನೂ ಇತ್ಯರ್ಥವಾಗಿರುವುದಿಲ್ಲ. ಒಂದು ವೇಳೆ ಇವರೇ ಮಾಲೀಕರು ಎಂದು ಇತ್ಯರ್ಥವಾದರೆ ಖಂಡಿತವಾಗಿ ಸರ್ಕಾರ ಅವರಿಗೆ ಕೊಡಬೇಕಾದಂತಹ ಪರಿಹಾರವನ್ನು ಕೊಡಬೇಕಾಗುತ್ತದೆ ಮತ್ತು ಕೋರ್ಟ್ ಏನು ಹೇಳುತ್ತದೆ, ಅದೇ ಆದೇಶವನ್ನು ನಾವು ಪಾಲಿಸಬೇಕಾಗುತ್ತದೆ. ಆದರೆ, ಅದು ಇನ್ನು ಇತ್ಯರ್ಥವೇ ಆಗಿಲ್ಲದಿರುವುದರಿಂದ, ಏತಕ್ಕೆ ನಾವು ಪರಿಹಾರವನ್ನು ಕೊಡಬೇಕೆನ್ನುವುದು ಒಂದು ವಿಷಯವಾಗಿದೆ. ಮತ್ತೆ ಎಲ್ಲರೂ ಹೇಳಿದ ಹಾಗೆ ಇದು ದ್ವೇಷದಿಂದ ಕೂಡಿರುವ ವಿಧೇಯಕ, ದ್ವೇಷಕ್ಕೋಸ್ಕರ ಈ ವಿಧೇಯಕವನ್ನು ತಂದಿದ್ದಾರೆ ಎಂದು ಹೇಳುತ್ತಾರೆ. ಆದರೆ, ಎಲ್ಲರಿಗೂ ಗೊತ್ತಿರುವಂತೆ ಅವರು ಯಾವುದೇ ಪಕ್ಷದವರು ಇರಲಿ, ಮೈಸೂರು ರಾಜ ಮನೆತನದ ಬಗ್ಗೆ ಎಲ್ಲರೂ ಸಹ ಬಹಳ ಗೌರವವನ್ನು ಇಟ್ಟುಕೊಂಡಿರುತ್ತಾರೆ. ರಾಜ್ಯಕ್ಕೆ ಬಹಳಷ್ಟು ಕೊಡುಗೆಯನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರಕ್ಕೂ ಸಹ ಅವರ ಬಗ್ಗೆ ಗೌರವ ಇದೆ. ಇದು ಕೇವಲ ಸಾರ್ವಜನಿಕ ಹಿತಾಸಕ್ತಿಯನ್ನು ಇಟ್ಟುಕೊಂಡು ಮಾತ್ರ ತಂದಿರುವಂತಹ ಒಂದು ವಿಧೇಯಕವಾಗಿದೆ. ಏಕೆಂದರೆ, ಈ ವಿಚಾರ ತಮಗೆ ಗೊತ್ತಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಬಿ.ಕೆ. ಹರಿಪ್ರಸಾದ್‌ರವರು ಹೇಳಿದಂತೆ ಮೆಕ್ರೀ ಸರ್ಕಲ್‌ನಿಂದ ನಮ್ಮ Windsor Manor ಗೆ ಬರುವುದಕ್ಕೆ ಸುಮಾರು ಒಂದು-ಒಂದೂವರೆ ಗಂಟೆ ಬೇಕಾಗುತ್ತದೆ. ಇದರಿಂದ ಜನರಿಗೆ ಬಹಳ ಕಷ್ಟವಾಗುತ್ತಿದೆ. ಆ ರಸ್ತೆಯನ್ನು ಅಗಲೀಕರಣ ಮಾಡಬೇಕಾದ ಅಗತ್ಯತೆ ಬಹಳ ಇದೆ. ಅದರಿಂದ ಜನರಿಗೆ ಬಹಳ ಅನುಕೂಲವಾಗುತ್ತದೆ. ಆ ಉದ್ದೇಶವನ್ನು ಇಟ್ಟುಕೊಂಡು ಇದನ್ನು ತರಲಾಗಿದೆಯೇ ಹೊರತು ಯಾವುದೇ ಒಂದು ಮನೆತನದ ವಿರುದ್ಧ ತರುವಂತಹ ವಿಧೇಯಕ ಆಗಿರುವುದಿಲ್ಲ. ಸಾರ್ವಜನಿಕ ಉದ್ದೇಶವನ್ನಿಟ್ಟುಕೊಂಡು ತರಲಾಗುತ್ತಿದೆ. ಏನಾದರೂ ಕೋರ್ಟ್‌ನಲ್ಲಿ ಈ ವಿಚಾರ ಇತ್ಯರ್ಥವಾದರೆ ಇದರ ಮಾಲೀಕತ್ವ ರಾಜ ಮನೆತನದವರಿಗೆ ಸೇರಬೇಕೆಂದರೆ ಖಂಡಿತವಾಗಿಯೂ ಸರ್ಕಾರ ಕೊಡಬೇಕಾದಂತಹ ಪರಿಹಾರವನ್ನು ಕೊಡಬೇಕಾಗುತ್ತದೆ. ಆದರೆ, ಇದು ಇನ್ನು ಇತ್ಯರ್ಥವಾಗದೇ ಅವರಿಗೆ ಪರಿಹಾರವನ್ನು ಕೊಡಬೇಕೆಂದರೆ ಹೇಗೆ ಕೊಡಲಿಕ್ಕೆ ಸಾಧ್ಯವೆಂದು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಎ. ವಸಂತ ಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಈಗಾಗಲೇ ಸಾಕಷ್ಟು ಜನ ಮಾನ್ಯ ಸದಸ್ಯರು ಈ ವಿಷಯದ ಮೇಲೆ ಮಾತನಾಡಿದ್ದಾರೆ. ಈ ವಿಷಯದ ಬಗ್ಗೆ ಬಹಳಷ್ಟು ಸದಸ್ಯರುಗಳು ತಮ್ಮದೇ ಆದ ಅಭಿಪ್ರಾಯಗಳನ್ನು

ಹೇಳಿದ್ದಾರೆ. ವಿಶೇಷವಾಗಿ ವಿರೋಧ ಪಕ್ಷದ ಹಲವಾರು ಸದಸ್ಯರುಗಳು ಈ ವಿಧೇಯಕದ ಬಗ್ಗೆ ವಿರುದ್ಧವಾಗಿ ಮಾತನಾಡಿದ್ದಾರೆ. ಇಲ್ಲಿ ಪ್ರಶ್ನೆ ಮಾಡುವಂತಹದ್ದು ಏನೆಂದರೆ ಇಲ್ಲಿ ಒಂದು ರಾಜ ಕುಟುಂಬ ಮತ್ತು ಸಾರ್ವಜನಿಕರ ಹಿತಾಸಕ್ತಿ ವಿಷಯಗಳಿವೆ. ಇಲ್ಲಿ ಯಾವುದು ಮುಖ್ಯವಾಗುತ್ತದೆ? ಇಲ್ಲಿ ಸಾರ್ವಜನಿಕರ ಹಿತಾಸಕ್ತಿ ಮುಖ್ಯವೋ ಅಥವಾ ಒಂದು ಮನೆತನದ ಅಥವಾ ಒಂದು ಕುಟುಂಬದ ಹಿತಾಸಕ್ತಿ ಮುಖ್ಯವೋ ಎನ್ನುವಂತಹ ಪ್ರಶ್ನೆ ಇಲ್ಲಿ ಬರುತ್ತದೆ. ಸಾರ್ವಜನಿಕ ಹಿತಾಸಕ್ತಿ ಜನರಿಗೆ ಅನುಕೂಲವಾಗಲಿ ಎನ್ನುವಂತಹ ಸದುದ್ದೇಶದಿಂದ ಈ ಕೆಲಸಗಳನ್ನು ಅಂದು ಮಹಾರಾಜರು ಮಾಡಿದ್ದಾರೆ. ಇವತ್ತು ಕೂಡ ಸರ್ಕಾರ ಈ ವಿಧೇಯಕವನ್ನು ಮುಂದೆ ತಂದಿರುವುದು ಏಕೆಂದರೆ, ಇದರಲ್ಲಿ ಸಾರ್ವಜನಿಕರ ಹಿತಾಸಕ್ತಿ ಅಡಗಿದೆ. ಸಾರ್ವಜನಿಕರಿಗೆ ಅನುಕೂಲ ಆಗಲಿ ಎನ್ನುವ ಒಂದು ಹಿತದೃಷ್ಟಿಯಿಂದ ಈ ವಿಧೇಯಕವನ್ನು ಮಂಡಿಸಿದ್ದಾರೆ. ಈ ವಿಧೇಯಕಕ್ಕೆ ನಾನು ಸಂಪೂರ್ಣವಾಗಿ ಬೆಂಬಲವನ್ನು ಕೊಡುತ್ತೇನೆ. ತಾವು ಎಲ್ಲರೂ ಕೂಡ ಇದು ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವಂತಹ ವಿಧೇಯಕ ಆಗಿರುವುದರಿಂದ ಎಲ್ಲರೂ ಕೂಡ ಒಮ್ಮತದಿಂದ ಪಾಸ್ ಮಾಡಬೇಕೆನ್ನುವಂತಹ ಮನವಿಯನ್ನು ಮಾಡುತ್ತಾ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೇಶವ ಪ್ರಸಾದ್ ಎಸ್(ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಈ ಬಿಲ್ ಅನ್ನು ವಿರೋಧಿಸುತ್ತೇನೆ. ಈ ಅಧಿನಿಯಮ ಬೆಂಗಳೂರಿಗೆ ಅನ್ವಯವಾಗತಕ್ಕದ್ದು ಎಂದು ಇದೆ. ನಾನು ಪೇಪರ್‌ನಲ್ಲಿ ಓದುತ್ತಿದ್ದೆ. KIADB (Karnataka Industrial Area Development Board) ಗೆ ಸಂಬಂಧಪಟ್ಟಂತಹ 45 ಎಕರೆ ಜಾಗಕ್ಕೆ ordinance ಬಂದಿರುವುದಿಲ್ಲ. ಅದನ್ನು metro hub ಮಾಡಬೇಕೆಂದು ನಿರ್ಧಾರ ಆಗಿದೆ. ಅದಕ್ಕೆ BMRCL (Bangalore Metro Rail Corporation Limited) ನವರು ಒಂದು ಎಕರೆಗೆ 12 ಕೋಟಿ ರೂ.ಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಸರ್ಕಾರ ಏನು ಹೇಳುತ್ತಿದೆ ಎಂದರೆ ಖಾಸಗಿಯವರ ಜೊತೆ ಇಲ್ಲಿ ಕುಳಿತುಕೊಂಡು ಮಾತನಾಡಿ settle ಮಾಡಿಕೊಳ್ಳಿ ಎಂದು ಹೇಳುತ್ತಿದೆ. ಏಕೆ? ಅದನ್ನೂ ಕೂಡ ಈ ಬಿಲ್‌ನಲ್ಲಿ ತರಬಹುದಾಗಿತ್ತು ಅಲ್ಲವೇ? BMRCL ನಿಂದ, ಅಷ್ಟು ದೊಡ್ಡ ಮೆಟ್ರೋ ಯೋಜನೆ ಬಂತು ಎಂದರೆ ಬೆಂಗಳೂರಿನಲ್ಲಿ ಆ ಕಡೆಯಿಂದ ಈ ಕಡೆ ಬರುವವರಿಗೆ ತುಂಬಾ ಅನುಕೂಲವಾಗುತ್ತದೆ, ಅದರ ಬಗ್ಗೆ ಸರ್ಕಾರಕ್ಕೆ ಗಮನ ಇರುವುದಿಲ್ಲ. ಹಾಗೆಯೇ ಈ ಹೊಸ ಯೋಜನೆಗಳನ್ನು ತಂದಿರುವಂತಹದ್ದು ಎಲ್ಲಾ ಮೆಟ್ರೋಗಳ ಮೇಲುಗಡೆ double-decker ರಸ್ತೆಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. Double-decker road ಗಳನ್ನು ಮಾಡಿ. ಮಹಾರಾಜರು ಇಷ್ಟೊಂದೆಲ್ಲಾ ಕೊಡುಗೆಗಳನ್ನು ಕೊಟ್ಟಿರುವಾಗ ಜಯಚಾಮ ರಾಜೇಂದ್ರ ಒಡೆಯರ್ ರವರು ಮೊದಲನೆಯ ರಾಜ್ಯಪಾಲರು ಸಹಿತ ಆಗಿರುವಾಗ ಮತ್ತು ರಾಜಮನೆತನದ ಕೊಡುಗೆ ಆಗಿರುವಾಗ, ಬೆಂಗಳೂರಿನಲ್ಲಿ ಯಾರ ಹೆಸರು ಹೇಳಿದರೂ ಸಹಿತ ಅವರ ಹೆಸರೇ ಬರುವುದರಿಂದ ಇಷ್ಟೊಂದು ಜಿದ್ದಾಜಿದ್ದಿಗೆ

ಬಿದ್ದು ಆತುರ-ಆತುರವಾಗಿ ಈ ವಿಧೇಯಕವನ್ನು ತರುವಂತಹ ಅವಶ್ಯಕತೆ ಏನಿತ್ತು ಎಂದು ಹೇಳಿ ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಪ್ರಶ್ನೆ ಈ ವಿಧೇಯಕದ್ದು ಅಲ್ಲ. ಇದು ಬಹಳ ಪ್ರಮುಖವಾದ ವಿಚಾರ. ತಾವು ಸಹ ಇದರ ಬಗ್ಗೆ ಗಮನಹರಿಸಬೇಕು. 28 ವರ್ಷಗಳಾಗಿದೆ. ವಿಧಾನಸಭೆಯಲ್ಲಿ, ವಿಧಾನಮಂಡದಲ್ಲಿ ನಾವು ಇದನ್ನು ಪಾಸ್ ಮಾಡಿ ಕಾನೂನ್ನು ಮಾಡಿದ್ದೇವೆ. 28 ವರ್ಷಗಳಾದರೂ ಕೂಡ ನ್ಯಾಯಾಂಗ ಅದರ ಬಗ್ಗೆ ಏನೂ ತೀರ್ಮಾನ ತೆಗೆದುಕೊಳ್ಳುತ್ತಿಲ್ಲ. ನ್ಯಾಯಾಂಗಕ್ಕೂ ಮತ್ತು ಶಾಸಕಾಂಗಕ್ಕೂ ಈ ಸಂಘರ್ಷ ಆಗಬಾರದು. ಇಂತಹವುಗಳನ್ನು ಹಾಕುವಾಗ ಅದಕ್ಕೋಸ್ಕರವೇ ನಾನು ಕೊಪ್ಪಳದ ಉದಾಹರಣೆಯನ್ನು ಕೊಟ್ಟಿರುವಂತಹದ್ದಾಗಿದೆ. ಶಾಸಕಾಂಗದಲ್ಲಿ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ, ಮತ್ತೆ, ಈ ವಿಚಾರದಲ್ಲಿ ನಮ್ಮ ಮಾನ್ಯ ಹೆಚ್. ವಿಶ್ವನಾಥ್‌ರವರು ಒಂದು ವಿಚಾರವನ್ನು ಇಂಗ್ಲೀಷ್‌ನಲ್ಲಿ ಹೇಳಿದರು. "One man's food is another man's poison" ಎಂದು ಹೇಳಿದರು. ಆದರೆ, "In the hands of the wise, poison is medicine. In the hands of a fool, medicine is a poison." ಎಂದು ಹೇಳುವುದನ್ನು ಮರೆತು ಹೋದರು.

**(ಗೊಂದಲ)**

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೆ, ತಾವು ವಿಶೇಷ ಕೃಪೆ ಮಾಡಿ ಈ ಒಂದು ವಿಧೇಯಕಕ್ಕೆ ಬಹಳಷ್ಟು ವಿಸ್ತೃತವಾಗಿರುವಂತಹ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಸನ್ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರು, ಶ್ರೀ ಎಸ್.ಎಲ್.ಭೋಜೇಗೌಡರು, ಶ್ರೀ ಟಿ.ಎ. ಶರವಣರವರು, ಶ್ರೀ ಐವನ್ ಡಿ'ಸೋಜಾ ರವರು, ಶ್ರೀ ಸಿ.ಟಿ.ರವಿಯವರು, ಶ್ರೀ ಪ್ರತಾಪಸಿಂಹ ನಾಯಕ್‌ರವರು, ಶ್ರೀ ಎಂ. ನಾಗರಾಜ್ ಯಾದವ್‌ರವರು, ಶ್ರೀ ಎನ್.ರವಿಕುಮಾರ್‌ರವರು, ಶ್ರೀ ಕೆ.ಎಸ್. ನವೀನ್‌ರವರು, ಶ್ರೀ ಗೋಪಿನಾಥ್‌ರವರು, ಶ್ರೀ ಗೋವಿಂದರಾಜು ರವರು, ಶ್ರಿ ಬಿ.ಕೆ. ಹರಿಪ್ರಸಾದ್‌ರವರು, ಶ್ರೀ ನಿರಾಣಿ ಹಣಮಂತ್ ರುದ್ರಪ್ಪನವರು, ಹಿರಿಯ ಸದಸ್ಯರಾದ ಅಡಗೂರು ಹೆಚ್. ವಿಶ್ವನಾಥ್‌ರವರು, ಡಾ॥ ಯತೀಂದ್ರ ಎಸ್.ರವರು, ಶ್ರೀ ವಸಂತ ಕುಮಾರ್‌ರವರು, ಶ್ರೀ ಕೇಶವ ಪ್ರಸಾದ್ ಎಸ್. ರವರು ಹೀಗೆ 17 ಜನ ಮಾನ್ಯ ಸದಸ್ಯರು ಈ ಬಿಲ್ ಮೇಲೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಇದನ್ನು ಸ್ವಲ್ಪಮಟ್ಟಿಗೆ ಭಾವನಾತ್ಮಕವಾಗಿ ನೋಡುವುದಕ್ಕೆ ಬಹಳ ಜನರು ಪ್ರಯತ್ನ ಪಟ್ಟರು. ಭಾವನಾತ್ಮಕವಾಗಿ ನಮ್ಮ ಸಂಬಂಧಗಳನ್ನೆಲ್ಲಾ ನೆನಪು ಮಾಡಿಕೊಂಡು ರಾಜಮನೆತನದವರು, ರಾಜ್ಯಕ್ಕೆ ಮಾಡಿರುವಂತಹ ಸೇವೆ ಇತ್ಯಾದಿಗಳನ್ನು ನೆನಪು ಮಾಡಿಕೊಂಡರೆ ಅದರ ಬಗ್ಗೆ ನಾನು ಕೊನೆಯಲ್ಲಿ ಬರುತ್ತೇನೆ.

**(ಮುಂದು.)**

**(184) 10.03.2025 06.10 ಎಸ್‌ವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಹೆಚ್.ಕೆ.ಪಾಟೀಲ್ (ಮುಂದು):-**

ನಾನು 2-3 ವಿಷಯ clear ಮಾಡುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಮಾನ್ಯ ಬಿ.ಕೆ. ಹರಿಪ್ರಸಾದ್ ಅವರು ಕೊನೆಯದಾಗಿ ಒಂದು ಮಾತನ್ನು ಹೇಳಿದರು. 28 ವರ್ಷದಿಂದ ಇದು ಕೋರ್ಟ್‌ನಲ್ಲಿ ಬಿದ್ದಿದೆ ಎಂದು ಹೇಳಿದರು. ಅದರ ಬಗ್ಗೆ ಇಂತಹ ಘನತೆವೆತ್ತ ಸದನವು ಚರ್ಚೆ ಮಾಡಬೇಕಾಗಿತ್ತು. I would like to make it very clear to you, Hon'ble Chairman sir, time and again, ಮೇಲಿಂದ ಮೇಲೆ, ಮೇಲಿಂದ ಮೇಲೆ ನಾವು ಸುಪ್ರೀಂ ಕೋರ್ಟ್‌ಗೆ main appeal ಅನ್ನು hear ಮಾಡಿ, take up our main appeal ಎಂದು ಹೇಳಿ ಒತ್ತಾಯ ಮಾಡಿದ್ದೇವೆ. ಮೊದಲು ownership ಅನ್ನು decide ಮಾಡಿ ಎಂದು ಒತ್ತಾಯಿಸಿದ್ದೇವೆ. . First ownership has to be decided amongst the family. The property vests with the Government upon the enactment of a law that, is not stayed by the Hon'ble Supreme Court or High Court. ಆಮೇಲೆ ನಾನು ನಿಮಗೆ ಒಂದು ಉದಾಹರಣೆಯನ್ನು ಹೇಳಿದೆನು. ಈ ಒಂದು ಆಸ್ತಿಯಲ್ಲಿ ಏನಾದರೂ ಕಾರ್ಯಕ್ರಮ ಮಾಡಬೇಕಾದರೂ DPAR (Department of Personnel & Administrative Reforms) ನವರು ವ್ಯವಸ್ಥೆ ಮಾಡಬೇಕು, ಅದು ಸರ್ಕಾರದ ಆಸ್ತಿ ಎನ್ನುವುದಕ್ಕೆ ನಾವು ಏನೂ ಪುರಾವೆಗಳನ್ನು ಕೊಡಲೇಬೇಕಾಗಿಲ್ಲ. ಈ ಒಂದು ಬಿಲ್‌ನಲ್ಲಿ ರೂ.3,000 ಕೋಟಿ ಹೆಚ್ಚಾಯಿತು ಎಂದು ನಾವು ಹೇಳುವುದು, ಅದರ ಬಗ್ಗೆ ವ್ಯಾಖ್ಯಾನ ಮಾಡುವುದು ಇದೆಲ್ಲಾ ಮಾಡುವಾಗ 1996ರಲ್ಲಿ ನಾವು ರೂ.11 ಕೋಟಿಗಳ ಬೆಲೆಯನ್ನು ನಿಗದಿ ಪಡಿಸಿದ್ದೆವು. ಇದನ್ನು ಬಿಟ್ಟು ಬೇರೆ ಯಾವುದನ್ನೂ ನಾವು ತೆಗೆದುಕೊಂಡಿಲ್ಲ ಎಂದಲ್ಲ. ದೇವಿಕಾರಾಣಿ ರೋರಿಚ್ ಎಸ್ಟೇಟ್ ತೆಗೆದುಕೊಂಡಿಲ್ಲವೆ? We have taken it under a similar Act. But no one has gone to court, that's why there is no dispute. There were enactments like this in Rajasthan and Madhya Pradesh, and in all of those cases, the State's power to make enactments is upheld. ನಾನು ಆ ವಿಷಯಕ್ಕೆ ಹೋಗುವುದಿಲ್ಲ. 472.16 ಗುಂಟೆಗೆ ಕೊಟ್ಟಿರುವ ರೂ.11 ಕೋಟಿಯನ್ನು ಗೊತ್ತು ಪಡಿಸಿದಾಗ ನಾವು ಈ ರೀತಿಯಾಗಿ ಮಾಡಬಹುದೇನೊ ಎಂದು ಬಹಳಷ್ಟು ಗಂಭೀರವಾಗಿ ಯೋಚನೆ ಮಾಡಿದ್ದೆವು. In 1996, when we fixed the land rate, was there a guidance value? ಅದಾದ ಮೇಲೆ ಈಗ, is there any guidance value for gardens and open land? ಇದನ್ನೆಲ್ಲಾ ನಾವು ತಾಂತ್ರಿಕವಾಗಿ ನೋಡಬೇಕಾಗುತ್ತದೆ. The Court has fixed the rate for this land considering the

guidance value. But, the ownership has not been decided. ಮಾನ್ಯ ನಾರಾಯಣಸ್ವಾಮಿಯವರು, ಮಾನ್ಯ ರವಿಕುಮಾರ್ ಅವರು TDR ಅನ್ನು ಕೊಡುವುದರಿಂದ ಏನು ಸಮಸ್ಯೆ ಎಂದು ಕೇಳಿದರು. If TDR is given, to whom should it be given? ನಾವು ಮಹಾರಾಜರ ಕುಟುಂಬ ಎಂದು ಭಾವನಾತ್ಮಕವಾಗಿ ಗೌರವದಿಂದ ಹೇಳಿದ್ದೀರಿ. ಅದರ ಬಗ್ಗೆ ಎರಡು ಅಭಿಪ್ರಾಯ ಇಲ್ಲ. ಅಲ್ಲಿಯೇ ನಮಗೆ ಕೊಡುವುದಕ್ಕೆ ಸಾಧ್ಯವಿಲ್ಲದೆ ಇರುವಂಥ ತಾಂತ್ರಿಕ ಪರಿಸ್ಥಿತಿ ಮತ್ತು ಕೋರ್ಟ್‌ಗಳಲ್ಲಿ ವ್ಯಾಜ್ಯವಿದೆ. ಆದ್ದರಿಂದ ಈಗ ಹೋಗಿ ಚರ್ಚೆ ಮಾಡಿ ಎಂದರೆ, to whom should we go and discuss? ಎಲ್ಲಾ ಮಾತುಗಳು ಬರುತ್ತವೆ. ಅದರ ಕಡೆ ನಾನು ಲಕ್ಷ್ಯ ಕೊಡುವುದಿಲ್ಲ. ಅದರ ಜೊತೆಗೆ ಈಗ Contempt Petition ಇದೆ. In 2021, the Contempt Petition was filed. ಆಗ ನಾವು ಇರಲಿಲ್ಲ. ತಮ್ಮ ಸರ್ಕಾರ ಇತ್ತು. ಮತ್ತೆ ನಮ್ಮ ಸರ್ಕಾರ ಬಂದಾಗಲೂ ಇದು ಬಂತು. On 10th December 2024, the Supreme Court has fixed the TDR value of Rs. 3011 crore for 15 acres and 17.5 guntas in a Contempt Petition. 15 ಎಕರೆ 17.5 ಗುಂಟೆಗೆ. ಈ ಒಂದು ordinance ಏಕೆ? Why did we bring this ordinance? Why this Bill is being brought to you now? ಮೊದಲನೆಯದಾಗಿ ಈ Ordinance ಮುಖಾಂತರ ಈ ಪ್ರಾಜೆಕ್ಟ್ ಅನ್ನು ಸರ್ಕಾರ ಮಾಡುವುದು, ಮಾಡದೆ ಇರುವುದು ಅಧಿಕಾರವನ್ನು, ಬಲವನ್ನು ಕೊಡಿ ಎಂದು ಈ ಸಂದರ್ಭದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಅದರ ಜೊತೆಗೆ ಇವತ್ತು ಈ valuation ಬಗ್ಗೆ, these are two important aspects in the Bill.

ನಾವು ಹೇಳುವಾಗ, ನೀವು ಕೇಳುವಾಗ ಮಾನ್ಯ ವಿಶ್ವನಾಥ್ ಅವರು ಹೇಳಿದರು. ಇತ್ತ ಒಂದು ಮಾತು, ಅತ್ತ ಒಂದು ಮಾತನ್ನಾಡುತ್ತೇವೆ. ಎಲ್ಲವೂ ಭಾಷಣದ ವಸ್ತುಗಳಾಗುತ್ತವೆ ಎಂದು ಹೇಳಿದರು. ಆಗಲೇ ಮಾನ್ಯ ಪ್ರಿಯಾಂಕ್ ಖರ್ಗೆಯವರು order ಅನ್ನು ಓದಿದರು. ದಿನಾಂಕ 18.12.2022ರಲ್ಲಿ, even the government had decided to, withdraw from going ahead with the project. ನಾನು ಅದನ್ನು ಓದುತ್ತೇನೆ.

> "ಬಿಬಿಎಂಪಿಯು ಈಗಾಗಲೇ ಕ್ರಮ ವಹಿಸಿರುವುದರಿಂದ ಪ್ರಶ್ನಿತ ಬೆಂಗಳೂರು ಅರಮನೆ ಮೈದಾನದ ಸ್ವತ್ತಿನ ಭಾಗಶಃ 15 ಎಕರೆ 39 ಗುಂಟೆ ಜಾಗವನ್ನು ಜಯಮಹಲ್ ರಸ್ತೆ, ಬಳ್ಳಾರಿ ರಸ್ತೆ ವಿಸ್ತೀರ್ಣ ಉದ್ದೇಶಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಶಕ್ಕೆ ಪಡೆಯುವ ಪ್ರಸ್ತಾವನೆಯನ್ನು ಕೈ ಬಿಟ್ಟು ಆದೇಶಿಸಿದೆ. ಮುಂದುವರೆದು, ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು

ಈ ಹಿಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಜಯಮಹಲ್ ರಸ್ತೆ ಮತ್ತು ಬಳ್ಳಾರಿ ರಸ್ತೆಯ ಅಗಲೀಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 30.03.2009ರಂದು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಹಿಂಪಡೆಯಲು ಉದ್ದೇಶಿಸಿರುವುದಾಗಿ ತಿಳಿಸಿ ಅದರಂತೆ ಪ್ರಸ್ತಾವನೆ ಹಿಂದಿರುಗಿಸಲು ಕೋರಿರುವುದನ್ನು ಮಾನ್ಯ ಮಾಡಿ ಪ್ರಸ್ತಾವನೆಯನ್ನು ಹಿಂದಿರುಗಿಸಿದೆ."

ಈ ಆದೇಶ ದಿನಾಂಕ 18.12.2022 ರದ್ದು.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಚಿವರೆ, ಅದು ಆದೇಶವೋ ಅಥವಾ ಕರಡೋ?

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ರವಿಯವರೆ, ಆದೇಶ.

**ಶ್ರೀ ಸಿ.ಟಿ.ರವಿ:–** ಮಾನ್ಯ ಪ್ರಿಯಾಂಕ್ ಖರ್ಗೆಯವರು ಮಾತನಾಡುತ್ತಾ ಕರಡು ಎಂದು ಹೇಳಿದರು. ಅದು ಆದೇಶ ಆಗಿದ್ದರೂ ಕೂಡ ಆದೇಶವನ್ನು ಯಾರಾದರೂ challenge ಮಾಡಿದ್ದಾರೆಯೇ? ಯಾರೂ challenge ಮಾಡಿಲ್ಲ ಎಂದರೆ ಆದೇಶವನ್ನು execute ಮಾಡಿ. ಬಿಲ್‌ನ ಅವಶ್ಯಕತೆ ಇಲ್ಲ.

**ಶ್ರೀ ಹೆಚ್.ಕೆ.ಪಾಟೀಲ್:–** ಇದು ಆದೇಶ. ಈ ಆದೇಶದ ಬಗ್ಗೆ ಅವರಿಗೆ ಏನಾದರೂ ಶಂಕೆಯಿದ್ದರೆ ಆದೇಶದ copy ಯನ್ನು ಕಳುಹಿಸಿಕೊಡುತ್ತೇನೆ.

ಮಾನ್ಯ ಸಭಾಪತಿಯವರೆ, ಈ ವಿಚಾರದಲ್ಲಿ, ಈ ವಿಷಯದಲ್ಲಿ contempt petition ಅನ್ನು purge ಮಾಡುವ ಸಂದರ್ಭದಲ್ಲಿ ನಾವು ಸುಪ್ರೀಂ ಕೋರ್ಟ್‌ಗೆ ಹೇಳಬೇಕಾಗುತ್ತದೆ. It will be the Government that decides, whether to go ahead with the project or not. ನಮ್ಮಿಂದ 2009-10, 2010-11 ಮತ್ತು 2019 ರಲ್ಲಿ ಪತ್ರ ಹೋಗಿದೆ. ಅಧಿಕಾರಿಗಳು ಹೇಳಿರುವುದು ಸತ್ಯ. ಆದರೆ ಆ ಸ್ಥಿತಿಯಿಂದ ಇವತ್ತು ನಾವು ಏನು ಸರ್ಕಾರದಲ್ಲಿ ನಿರ್ಣಯ ಮಾಡುತ್ತೇವೆ, ಆ ರಸ್ತೆಯನ್ನು ಮಾಡಬೇಕು ಅಥವಾ ಕೈಬಿಡಬೇಕು. ಇಷ್ಟು ಬೆಲೆ ಕೊಡಬೇಕೊ, ಕೊಡಬಾರದೊ ಇದನ್ನು ವಿಚಾರ ಮಾಡಿ ಕೊಡುವ ಅಧಿಕಾರ ಸರ್ಕಾರಕ್ಕಿದೆ ಎನ್ನುವುದನ್ನು ಮತ್ತೊಮ್ಮೆ empower ಮಾಡುವುದರ ಜೊತೆಗೆ ಈ ಒಂದು ಪ್ರಕರಣದಲ್ಲಿ ಯಾವ ಕಾರಣಕ್ಕೂ contempt ಗೂ ಅವಕಾಶ ಆಗಬಾರದು, ನಮ್ಮ ಕೆಲಸ ಯಾವ ರೀತಿಯಿಂದ ಮಾಡಬೇಕೊ ಆ ಕೆಲಸನೂ ಆಗಬೇಕು ಎನ್ನುವ ಉದ್ದೇಶದಿಂದ ಈ ವಿಚಾರದಲ್ಲಿ ಈ ವಿವರಗಳನ್ನು ಕೊಟ್ಟಿರುತ್ತೇನೆ.

ನಾನು ಒಂದು ಮಾತು ಹೇಳಬಯಸುತ್ತೇನೆ. ಇದು ಭಾವನಾತ್ಮಕ ವಿಚಾರವಾಗಿದೆ. ಒಡೆಯರ್ ರಾಜ ಮನೆತನದ ಬಗ್ಗೆ ನಿಮಗೆಷ್ಟು ಗೌರವ ಇದೆಯೋ ಅದಕ್ಕಿಂತ ಕಡಿಮೆ ನಮಗೆ ಯಾರಿಗೂ ಇಲ್ಲ. ನಾವು ಅವರ

ಆಡಳಿತಕ್ಕೆ ಒಳಪಟ್ಟಿಲ್ಲದೆ ಇರಬಹುದು. ಆದರೆ ನಿಮ್ಮ ಗಮನಕ್ಕೆ ತರುತ್ತೇನೆ. ನಾವೆಲ್ಲಾ ಒಂದು ರೀತಿಯಿಂದ ವಿಶೇಷವಾಗಿ ಒಡೆಯರ್ ಮನೆತನದ ಶಿಷ್ಯರು, ಅನುಯಾಯಿಗಳು, ಅವರನ್ನು ಬಹಳಷ್ಟು ಗೌರವಿಸುವಂಥ ಮನೆತನದವರು. ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ತಮ್ಮ ಕೊನೆಯ ಕೆಲವು ತಿಂಗಳುಗಳ ಮೊದಲು ನಮ್ಮ ಊರಾದ ಹುಲಕೋಟಿಯಲ್ಲಿ, he was there in my village for three days.

**(ಮುಂದು)**

**(185) 10-03-2025/6.20/ಎಂವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಹೆಚ್.ಕೆಪಾಟೀಲ್ (ಮುಂದು):-**

My father was attending him just like an assistant. ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರರವರು ನೋಡಿದ್ದಾರೆ. ಅವರು ನಮ್ಮ ಭಾಗದ ಹುಲಕೋಟಿಯಲ್ಲಿ ಒಂದು ಐ.ಬಿ.ಯನ್ನು ಕಟ್ಟಿಸಿದ್ದಾರೆ. That was built during his time. ಅಂದರೆ, ನಮ್ಮ ಮತ್ತು ಅವರ ಸಂಬಂಧಗಳಿಗೆ ಅಷ್ಟೇ ಗೌರವವಿದೆ. ಆದರೆ, ಇದು ಪ್ರಜಾರಾಜ್ಯ ನಾವು ನಾಗರಿಕರ ಹಿತ ಕಾಪಾಡಬೇಕಾಗುತ್ತದೆ. ಮತ್ತೆ ಸರ್ಕಾರದ ಹಿತ ಕೂಡ ಕಾಪಾಡಬೇಕಾಗುತ್ತದೆ. ಯಾವುದೇ ತಪ್ಪು ನಿರ್ಣಯವನ್ನು ಭಾವನಾತ್ಮಕವಾಗಿ ಮಾಡಿ, ಒಂದು ಎಕರೆಗೆ ಎರಡು ನೂರು ಕೋಟಿ ರೂಪಾಯಿಗಳನ್ನು ಕೊಟ್ಟುಬಿಟ್ಟರೆ, ಮುಂದೆ ಕರ್ನಾಟಕದಲ್ಲಿ ಎಲ್ಲೂ ಸಹ ಯಾವುದೇ ಯೋಜನೆಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಆಗ ಕೋರ್ಟ್‌ನವರು ಅಲ್ಲಿ ಕೊಟ್ಟಿದ್ದೀರಿ, ಇಲ್ಲೂ ಸಹ ನೀಡಿ ಎಂದು ಹೇಳುತ್ತಾರೆ. Is he not a citizen, is he not equal to him? How can one be more equal than the other? ಇವೆಲ್ಲವನ್ನೂ ಸಹ ನಾವು ಮತ್ತು ನೀವು ಕೂಡ ಎದುರಿಸಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ದಯಮಾಡಿ ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ಸದನವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಈಗ ನನಗೆ ಎರಡೂ ಪಕ್ಷದವರು ಸಹ 6.00 ಗಂಟೆಗೆ ಮೀಟಿಂಗ್ ಇದೆ ಎಂದು ಚೀಟಿ ಕಳುಹಿಸಿದ್ದಾರೆ. ನೀವೇ ಕಳುಹಿಸುವುದಾದರೆ ಮಾತನಾಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ತುಂಬಾ ಸಮಯ ತೆಗೆದುಕೊಳ್ಳುವುದಿಲ್ಲ.

**ಸಭಾಪತಿಯವರು:-** ಅದು ತಮ್ಮ ಮರ್ಜಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎರಡು-ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ಮಾನ್ಯ ಸದಸ್ಯರಾದ ಡಾ:ಯತೀಂದ್ರ. ಎಸ್ ರವರು ಇದುವರೆವಿಗೂ ಆ ಆಸ್ತಿ ಯಾರದ್ದು ಎಂದು ತೀರ್ಮಾನವಾಗಿಲ್ಲವೆಂದು ಹೇಳಿದರು.

**ಶ್ರೀ ಹೆಚ್.ಕೆ.ಪಾಟೀಲ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, Between them.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, Yes, yes. ಅದು ಯಾರದ್ದು ಎಂದರೆ? ಅದು ಮಹಾರಾಜರದ್ದು ಆಗಿರಲಿಲ್ಲವೇ? ಈಗ ಅದರ ಮೇಲೆಯೇ ತಾನೆ ಹೋಗಿರುವುದು. ಅಂದರೆ, ಮೊದಲು ಅವರದಾಗಿತ್ತು. ಅದಾದನಂತರ ಸರ್ಕಾರ ಅದು ನಮಗೆ ಬೇಕೆಂದು ಅದನ್ನು acquire ಮಾಡಿದ್ದಾರೆ. ಆಗ ಅದಕ್ಕೆ ಹನ್ನೊಂದು ಕೋಟಿ ರೂಪಾಯಿಗಳಷ್ಟೆ ಎಂದು ಅದನ್ನು ಇಟ್ಟಿದ್ದರು ಎಂದು ಅದೆಲ್ಲಾ ಬಂತು. ಆ ಆಸ್ತಿ ಅವರದಾಗಿತ್ತು. ಆದರೆ, ಸರ್ಕಾರ ಅದನ್ನು claim ಮಾಡಿದೆ. ನಾನು ಅದನ್ನು ಒಪ್ಪುತ್ತೇನೆ. ಅದಾದಮೇಲೆ ಈ ಆಸ್ತಿ ತೀರ್ಮಾನ ಆಗಿಲ್ಲ. ಅದು ಕೋರ್ಟ್‌ನಲ್ಲಿದೆ. ಅದು ಇರಬೇಕಾದರೆ, ಅದು ಒಬ್ಬರದು ಆಗಿರಲೇಬೇಕು. ಆದುದರಿಂದಲೇ ಈ ವಿಧೇಯಕ ಬಂದಿರುವಂಥದ್ದು. ಇದರಲ್ಲಿ ಏನಾಗುತ್ತದೆಂದರೆ, ownership claim ಇರತಕ್ಕಂಥದ್ದು ಎಂದು ನಾನು ಮೊದಲೇ ಹೇಳಿದ್ದೆ. ಈಗ ಕೋರ್ಟ್‌ನಲ್ಲಿ ಸರ್ಕಾರದ ಕಡೆ ಆದರೆ, ಅದು ಸರ್ಕಾರದ್ದು. ಅದು ಅವರ ಕಡೆಯಾದರೆ, ಅದು ಅವರ ಸ್ವಂತದ್ದು. ಆದರೆ, ಅದು ಇನ್ನು ತೀರ್ಮಾನವಾಗಿಲ್ಲ. ಈಗ ಅದು ಸಾರ್ವಜನಿಕ ಉದ್ದೇಶಕ್ಕೆ ಅವಶ್ಯಕತೆ ಇದೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರ ಕಡೆಯಿಂದಲೂ ಸಹ ತೀರ್ಮಾನವಾಗಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವರ ತೀರ್ಮಾನ ನಮಗೆ ಸಂಬಂಧವಿಲ್ಲ. ನಾವು ಅವರ ಮನೆತನದ ತೀರ್ಮಾನಕ್ಕೆ ಬದ್ಧರಲ್ಲ. ಅವರು ಏನೋ ತೀರ್ಮಾನ ಮಾಡಿಕೊಳ್ಳುತ್ತಾರೆ. ಅವರು ಏನಾದರೂ ಮಾಡಿಕೊಳ್ಳಲಿ. ಇವತ್ತು ನಾನು ಹೇಳತಕ್ಕಂಥದ್ದು ಏನೆಂದರೆ, dispute ಇಲ್ಲವೆನ್ನುವುದು ಅದು dispute ಯೇ. ಅವರಿಗೂ ನಮಗೂ dispute ಇದೆ. ಈ dispute ಇತ್ಯರ್ಥವಾಗಬೇಕು. ಕಳೆದ 28 ವರ್ಷಗಳಿಂದ ಆಗಿಲ್ಲವೆಂಬುದು ನಮಗೂ ಗೊತ್ತಿದೆ. ಅದನ್ನು ಯಾವುದೇ ಸರ್ಕಾರವಾಗಲಿ ಮಾಡಬೇಕಾಗಿತ್ತು. ಅದರೆ, ಅದು ಆಗಿಲ್ಲ. ನಾನು ಕೇಳುವಂಥದ್ದು ಏನೆಂದರೆ, ಈಗ ಟಿ.ಡಿ.ಆರ್. ಕೊಡಬೇಕೆಂದು ಕೇಳಿದವರು ಯಾರು? ಈಗ ಬಿ.ಬಿ.ಎಂ.ಪಿ.ಯವರು ತಾವಾಗಿಯೇ ಟಿ.ಡಿ.ಆರ್. ಕೊಡಬೇಕೆಂದು ಒಪ್ಪಿಕೊಂಡರು. ಅವರೇ ಆ ರೀತಿ ಒಪ್ಪಿಕೊಂಡ ಮೇಲೆ ಅವರು ನಮಗೆ ಇಷ್ಟು ಬೇಕೆಂದು ಕೇಳಿಕೊಂಡಿದ್ದಾರೆ. ಅದಾದನಂತರ ಇದು ಉದ್ಭವವಾಗಿರತಕ್ಕಂಥದ್ದು. ಈ 3,000/- ಕೋಟಿ ರೂಪಾಯಿಗಳ ವಿಷಯ ಬಂದಿರುವುದು. ಅದು guidance value ಅಥವಾ ಏನಾದರೂ ಇರಲಿ. ಈಗ ಅದು guidance value ಮೇಲೆಯೇ ಬಂತು ಎಂದು ಇಟ್ಟುಕೊಳ್ಳೋಣ. ನಾನು ಅದನ್ನು ನೋಡಿದ್ದೇನೆ. ಸದಾಶಿವನಗರದ ಆ ಪ್ರಾಂತ್ಯದಲ್ಲಿ guidance value ಎಷ್ಟು ಇದೆ ಎಂದರೆ, ಅಲ್ಲಿ ಸುಮಾರು 2,70,000/- guidance value ಇದೆ. ಈ ಜಾಗ ಆ ಪ್ರಾಂತ್ಯದಲ್ಲಿ ಇರುವುದರಿಂದ, ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್ ರವರು ಹೇಳಿದಂತೆ. ಈಗ ಮುನಿರೆಡ್ಡಿಪಾಳ್ಯದಲ್ಲಿ ಎಷ್ಟು ಇದೆ? ಹೌದು, ಅಲ್ಲಿ ಇರುವುದೇ ಬೇರೆ. ಇಲ್ಲಿ ಇರುವುದೇ ಬೇರೆ. ಅದು ಇಲ್ಲಿರುವ ಜಾಗಕ್ಕೆ ಮಾತ್ರ guidance value. ಅದು ಏನೇ ಇರಲಿ. ನಾನು ಹೇಳುವುದು ಅದನ್ನು ಏಕೆ ಕೊಡಬೇಕು ಎನ್ನುವುದು ಪ್ರಶ್ನೆಯಲ್ಲ. ಈಗ

ಕೋರ್ಟ್‌ನವರು ಟಿ.ಡಿ.ಆರ್. ಕೊಡಬೇಕೆಂದು ಹೇಳಿದ ಮೇಲೆ ಇವರು ಅವರಿಗೆ ಕೊಡಬೇಕೆಂದು ಇಲ್ಲ. ಅದನ್ನು ಕೋರ್ಟ್‌ನಲ್ಲಿ ಇಡಲಿ. ಈಗ ಏನಾದರೂ ownership ತೀರ್ಮಾನ ಯಾರ ಪರವಾಗಿ ಆಗುತ್ತದೆ? ಈಗ ಸರ್ಕಾರದ್ದು ಎಂದಾಗ ಅದನ್ನು ಮುಟ್ಟುಗೋಲು ಹಾಕಿಕೊಳ್ಳಲಿ. ಅದು ಅವರದು ಎಂದ ಮೇಲೆ ಅವರಿಗೆ ಕೊಡಬೇಕಾಗುತ್ತದೆ. ಅದಕ್ಕೆ ಇವರು ಡಿಪಾಸಿಟ್ ಇಡಬೇಕು ಅಷ್ಟೆ. ಇವರು ಏನು ಹಣ ಇಡುತ್ತಿಲ್ಲ. ಅದಕ್ಕೆ ಅವರು ಪ್ರಯತ್ನ ಮಾಡಲಿ. ಈಗ ಅವಶ್ಯಕತೆ ಇದೆ. ಇದಕ್ಕಾಗಿ ಅದನ್ನು ಇಡಲಿ. ಅವರು ಕೇಳುವುದಕ್ಕಿಂತ ಮುಂಚೆ ಬಿ.ಬಿ.ಎಂ.ಪಿ.ಯವರು ಟಿ.ಡಿ.ಆರ್. ಕೊಡುತ್ತೇವೆಂದು commit ಮಾಡಿಕೊಂಡಿದ್ದಾರೆ. ಈಗ ಅವರೇ commit ಮಾಡಿಕೊಂಡು, ಅವರೇ ಈ ವಿಚಾರದ ವಿರುದ್ಧ ಹೋಗುವುದು ಸರಿಯಲ್ಲ. ಎರಡನೆಯದು ಏನೆಂದರೆ, ಅದನ್ನು compromise nature ನಲ್ಲಿ ಅವರನ್ನು ಕರೆದು ಅವರ ಜೊತೆಯಲ್ಲಿ ಮಾತುಕತೆ ಮಾಡಲಿ. ಮಾನ್ಯ ಸಭಾಪತಿಯವರು ಹೇಳಿದಂತೆ, ಏನಾದರೂ ಮಹಾರಾಜರು ಇದ್ದಿದ್ದರೆ, ಅವರು ಇದನ್ನು ಕೊಟ್ಟು ಬಿಡುತ್ತಿದ್ದರು ಎಂದು. ಅದು ನಿಜ. ಏಕೆಂದರೆ, ಅವರು ಇದೇ ರೀತಿ ಎಲ್ಲವನ್ನು ಸಹ ಕೊಟ್ಟಿರುವುದು. ಈಗಲೂ ಸಹ ಅವರನ್ನು ಅದೇ ರೀತಿ approach ಮಾಡಿದರೆ, ಬಹುಶಃ ಅದೂ ಸಹ ಸಾಧ್ಯವಾಗಬಹುದೇನೋ, ಅವರು ಅದನ್ನು ಸಹ ಮಾಡಲಿ. ಆದುದರಿಂದ ನಾನು ಈ ತರಹ ಬೇಡವೆಂದು ಹೇಳುತ್ತಿದ್ದೇನೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ, ಅವರ ಭಾವನೆಯನ್ನೂ ಅರ್ಥ ಮಾಡಿಕೊಳ್ಳುತ್ತೇವೆ. ಅವರು ಹೇಳುವಂತಹ ಸಲಹೆಗಳಲ್ಲಿ ಯಾವುದಾದರೂ ತಾಂತ್ರಿಕವಾಗಿ ತೆಗೆದುಕೊಳ್ಳುವುದು ಇದ್ದರೆ, ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದು, ಈ ವಿಧೇಯಕವನ್ನು ತರುವುದು ಬೇಡ. ಮಾತುಕತೆಯಲ್ಲಿ ಬಗೆಹರಿಸಿ, ಇವರು ಅವರನ್ನು ಮೊದಲು approach ಮಾಡಲಿ. ಇಲ್ಲವಾದರೆ, we are against this Bill.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕಕ್ಕೆ ನಮ್ಮ ವಿರೋಧವಿದೆ.

**(ಗೊಂದಲ)**

**ಶ್ರೀ ಶರವಣ.ಟಿ.ಎ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಈ ವಿಧೇಯಕವನ್ನು withdraw ಮಾಡುತ್ತಾರೆಯೇ?

**(ಗೊಂದಲ)**

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷ ಮತ್ತು ಜೆಡಿ(ಎಸ್) ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರವನ್ನು ಕೂಗುತ್ತಾ ಸಭಾತ್ಯಾಗ ಮಾಡಿದರು)**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 8 ರವರೆಗೆ**

**ಸಭಾಪತಿಯವರು:– "ಖಂಡ 2 ರಿಂದ 8 ರವರೆಗೆ ಎರಡೂ ಸೇರಿದಂತೆ ಈ ವಿಧೇಕಯದ ಅಂಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 8 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ–1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ರ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಸಭಾಪತಿಯವರು:-** ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 27 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 11ನೇ ಮಾರ್ಚ್ ಮಾಹೆ 2025 ರಂದು ಮಂಗಳವಾರ ಬೆಳಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**